ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ

ಸೋಮವಾರ, 23 ಫೆಬ್ರವರಿ 2026

ಸಂಪುಟ 15, ಸಂಚಿಕೆ 336, ಪುಟಗಳು 12

■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ

₹5

RNI No.KARKAN/ 2011/64413

hosadigantha.com

epaper.hosadigantha.com

Hosadigantha Digital



ಅಯೋಧ್ಯೆಯಲ್ಲಿ ಶ್ರೀರಾಮಾರ್ಚನೆ | ೦೭

ಅಯೋಧ್ಯೆ: ರಾಮನಿಗಾಗಿ ಓಟ | ೦೭

ಅಸ್ಸಾಂ ಕಾಂಗ್ರೆಸ್ ನಾಯಕ ಬೋರಾ ಬಿಜೆಪಿಗೆ | ೦೭

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಭರಣಿ

ದಿನದ ಮಾತು

ಒಳ್ಳೆಯತನ ನೋಡಿದಾಗ ಅನುಕರಿಸು. ಕೆಟ್ಟದ್ದನ್ನು ಕಂಡಾಗ ಆತ್ಮಪರಿಶೀಲನೆ ಮಾಡಿಕೋ.

▲ ರಾಮಕೃಷ್ಣ ಪರಮಹಂಸ

ಅದ್ದೂರಿ ಮದುವೆಗಳಿಗೊಂದು ನಿಯಂತ್ರಣ ರೇಖೆ

ನೇರ ನೋಟ

• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಮೂವರು ಜೆಇಎಂ ಉಗ್ರರ ಎನ್‌ಕೌಂಟರ್

• **ಶ್ರೀನಗರ:** ಭದ್ರತಾ ಪಡೆಗಳ ಯಶಸ್ವಿ ಕಾರ್ಯಾಚರಣೆಯಲ್ಲಿ ಪಾಕಿಸ್ತಾನದ ಉಗ್ರ ಸಂಘಟನೆ ಜೈಶ್-ಎ-ಮೊಹಮ್ಮದ್(ಜೆಇಎಂ) ನಂಟು ಹೊಂದಿದ್ದ ಮೂವರು ಉಗ್ರರನ್ನು ಭದ್ರತಾ ಪಡೆಗಳು ಕಿಶ್ತ್ವಾರ್‌ನಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಹೊಡೆದುರುಳಿಸಿದ್ದಾರೆ.

• ಪುಟ ೭

5 ಕೋಟಿ ರೂ. ಮೌಲ್ಯದ ಸಿಗರೇಟ್, ನಾಲ್ವರ ವಶ

• **ಅಹಮದಾಬಾದ್:** ಗುಜರಾತಿನ ಅರಬ್ಬೀ ಸಮುದ್ರದಲ್ಲಿ ಭಾರತೀಯ ಕೋಸ್ಟ್ ಗಾರ್ಡ್ ವಿದೇಶಿ ದೋಣಿಯನ್ನು ತಡೆದು, ಸುಮಾರು 5 ಕೋಟಿ ರೂ. ಮೌಲ್ಯದ 200 ಬಾಕ್ಸ್ ವಿದೇಶಿ ಬ್ರಾಂಡ್ ಸಿಗರೇಟ್‌ಗಳನ್ನು ವಶಪಡಿಸಿಕೊಂಡು, ನಾಲ್ವರು ಇರಾನಿ ಪ್ರಜೆಗಳನ್ನು ಬಂಧಿಸಿದೆ ಎಂದು ಐಸಿಜಿ ಭಾನುವಾರ ತಿಳಿಸಿದೆ.

• ಪುಟ ೭

ಟ್ರಂಪ್ ಹತ್ಯೆಗೆ ಯತ್ನ?: ಯುವಕ ಗುಂಡೇಟಿಗೆ ಬಲಿ

• ಪುಟ ೭

ನಕ್ಸಲ್ ಹಿರಿಯ ನಾಯಕ ಥಿಪ್ಪಿ ತಿರುಪತಿ ಶರಣಾಗತಿ

• ಪುಟ ೭

70 ಬಂಡುಕೋರರನ್ನು ಕೊಂದಿದ್ದೇವೆ: ಪಾಕ್

• ಪುಟ ೭

ರಾಜ್ಯದಲ್ಲಿ ಶೇ.67 ಮ್ಯಾಪಿಂಗ್ ಕಾರ್ಯ ಪೂರ್ಣ

• ಪುಟ ೫



ಭಾರತದ ಮೊದಲ ಡಿಸ್ಪ್ಲೇ ಡ್ರೈವರ್ ಚಿಪ್ ಪ್ಲಾಂಟ್

• ಪುಟ ೭

ಸುದ್ದಿ ಸಮಗ್ರ

ಜಾಗತಿಕ ಭವಿಷ್ಯಕ್ಕೆ ಮಹತ್ವದ ತಿರುವು ನೀಡಿದ ಎಐ ಶೃಂಗ

ಭಾರತಕ್ಕೆ ವಿಶ್ವ ಮೆಚ್ಚುಗೆ

ಮನ್ ಕಿ ಬಾತ್‌ನಲ್ಲಿ ಮೋದಿ


• **ಹೊಸದಿಲ್ಲಿ:** ಭಾರತ ಎಐ ಇಂಪ್ಯಾಕ್ಟ್ ಶೃಂಗಸಭೆಯು ಭವಿಷ್ಯದಲ್ಲಿ ವಿಶ್ವವು ಕೃತಕ ಬುದ್ಧಿಮತ್ತೆಯ ಶಕ್ತಿಯನ್ನು ಹೇಗೆ ಬಳಸಿಕೊಳ್ಳಲಿದೆ ಎಂಬ ದಿಕ್ಕಿನಲ್ಲಿ ಮಹತ್ವದ ತಿರುವು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಈ ಕ್ಷೇತ್ರದಲ್ಲಿ ಭಾರತ ಸಾಧಿಸಿರುವ ಮಹತ್ವದ ಮುನ್ನಡೆಯಿಂದ ಜಾಗತಿಕ ನಾಯಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಅವರು ತಿಳಿಸಿದರು.

ಮನ್ ಕಿ ಬಾತ್‌ನಲ್ಲಿ ಮಾತನಾಡಿದ ಅವರು, ಆನ್‌ಲೈನ್ ಆರ್ಥಿಕ ವಂಚನೆಗಳು ಮತ್ತು ಡಿಜಿಟಲ್ ಬಂಧನ ಪ್ರಕರಣಗಳ ವಿರುದ್ಧ ಜನರು ಎಚ್ಚರಿಕೆಯಿಂದಿರಬೇಕು ಎಂದು ಮನವಿ ಮಾಡಿದರು. ಬ್ಯಾಂಕ್‌ಗಳು ಕೇಳುವ ಕೆವೈಸಿ ನವೀಕರಣವನ್ನು ಪಾಲಿಸುವುದು ಖಾತೆಯ ಸುರಕ್ಷತೆಗೆ ಅತ್ಯಂತ ಅಗತ್ಯವೆಂದರು.

ಭಾರತದ ಎಐ ಸಾಧನೆ: ಇತ್ತೀಚೆಗೆ ನಡೆದ ಎಐ ಶೃಂಗದಲ್ಲಿ ಅನೇಕ ದೇಶಗಳ ನಾಯಕರು, ಕೈಗಾರಿಕಾ ವಲಯದ ಪ್ರತಿನಿಧಿಗಳು, ನವೋದ್ಯಮಿಗಳು ಹಾಗೂ ಸ್ಟಾರ್ಟ್‌ಅಪ್ ಕ್ಷೇತ್ರದವರು ಭಾಗವಹಿಸಿದ್ದರು ಎಂದು ಮೋದಿ ಹೇಳಿದರು. ಈ ಸಮ್ಮೇಳನವು ಭವಿಷ್ಯದಲ್ಲಿ ವಿಶ್ವವು ಎಐ ಶಕ್ತಿಯನ್ನು ಹೇಗೆ ಬಳಸಿಕೊಳ್ಳಲಿದೆ ಎಂಬ ದಿಕ್ಕಿನಲ್ಲಿ ಮಹತ್ವದ ತಿರುವು ನೀಡಿದೆ ಎಂದರು.ಸಮ್ಮೇಳನದಲ್ಲಿ ಎರಡು ವಿಶೇಷ ಆವಿಷ್ಕಾರಗಳು ಜಾಗತಿಕ ನಾಯಕರನ್ನು ಹೆಚ್ಚು ಆಕರ್ಷಿಸಿದವು ಎಂದು ಅವರು ವಿವರಿಸಿದರು.

ಅಮುಲ್ ಸ್ಟಾಲ್‌ನಲ್ಲಿ ಎಐ ಬಳಕೆ: ಅಮುಲ್ ಸಂಸ್ಥೆಯ ಪ್ರದರ್ಶನದಲ್ಲಿ ಎಐ ತಂತ್ರಜ್ಞಾನವು ಪಶು ಚಿಕಿತ್ಸೆಯಲ್ಲಿ ಹೇಗೆ ಸಹಾಯ ಮಾಡುತ್ತಿದೆ ಹಾಗೂ ರೈತರು 24X7 ಎಐ ನೆರವಿನಿಂದ ತಮ್ಮ ಪಶುಸಂಪತ್ತಿನ ಮೇಲ್ವಿಚಾರಣೆ ನಡೆಸುತ್ತಿರುವುದನ್ನು ತೋರಿಸಲಾಯಿತು.

ಪುಟ ೪



ಪರೀಕ್ಷಾರ್ಥಿಗಳಿಗೆ ಮೋದಿ ಸಂದೇಶ

ಪರೀಕ್ಷೆಗಳನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳನ್ನು ಎಕ್ಸಾಂ ವಾರಿಯರ್ಸ್ ಎಂದು ಕರೆದು, ಅಂಕಪಟ್ಟಿಯೇ ನಿಮ್ಮ ಮೌಲ್ಯವನ್ನು ನಿರ್ಧರಿಸುವುದಿಲ್ಲ ಎಂದು ಹೇಳಿದರು.ಸಂದೇಹಗಳು ಸಹಜ. ಎಲ್ಲವೂ ನೆನಪಿರುತ್ತದೆಯೇ? ಸಮಯ ಸಾಲುತ್ತದೆಯೇ? ಎಂಬ ಆತಂಕ ಉಂಟಾಗುತ್ತದೆ. ಆದರೆ ನೀವು ಒಬ್ಬರಲ್ಲ. ನಿಮ್ಮ ಮೌಲ್ಯ ಅಂಕಪಟ್ಟಿಯಿಂದ ನಿರ್ಧಾರವಾಗುವುದಿಲ್ಲ. ಆತ್ಮವಿಶ್ವಾಸದಿಂದ ಬರೆಯಿರಿ ಎಂದು ಅವರು ಪ್ರೇರಣೆ ನೀಡಿದರು.

ಡಿಜಿಟಲ್ ವಂಚನೆ ಬಗ್ಗೆ ಎಚ್ಚರಿಕೆ

ಡಿಜಿಟಲ್ ಬಂಧನ ಮತ್ತು ಆನ್‌ಲೈನ್ ವಂಚನೆ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹಿರಿಯ ನಾಗರಿಕರು ಹಾಗೂ ನಿರಪರಾಧಿಗಳು ಹೆಚ್ಚು ಬಲಿಯಾಗುತ್ತಿದ್ದಾರೆ ಎಂದು ಪ್ರಧಾನಿ ಹೇಳಿದರು. ಬ್ಯಾಂಕ್‌ನಿಂದ ಕೆವೈಸಿ ಅಥವಾ ಕೆವೈಸಿ ನವೀಕರಣಕ್ಕಾಗಿ ಸಂದೇಶ ಬಂದಾಗ ಗಾಬರಿಯಾಗಬೇಡಿ. ಇದು ನಿಮ್ಮ ಹಣದ ಸುರಕ್ಷತೆಗಾಗಿ ಮಾತ್ರ, ಎಂದು ಅವರು ಸಲಹೆ ನೀಡಿದರು.

ಕರ್ನಾಟಕದ ಕೃಷಿ ಉತ್ಪನ್ನಗಳಿಗೆ ಪ್ರಶಂಸೆ

ಭಾರತದ ಕೃಷಿ ಉತ್ಪನ್ನಗಳ ರಫ್ತು ವೃದ್ಧಿ ಕುರಿತು ಮಾತನಾಡಿದ ಪ್ರಧಾನಿ ಮೋದಿಯವರು, ಕರ್ನಾಟಕದ ವಿಶೇಷ ಕೃಷಿ ಉತ್ಪನ್ನಗಳು ವಿದೇಶಗಳಿಗೆ ರಫ್ತಾಗುತ್ತಿರುವುದನ್ನು ಶ್ಲಾಘಿಸಿದ್ದಾರೆ.ಕರ್ನಾಟಕದ ನಂಜನಗೂಡಿನ ರಸಬಾಳೆ, ಮೈಸೂರಿನ ವೀಳ್ಯದೆಲೆ ಹಾಗೂ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಕಾಜಿ ನಿಂಬೆಹಣ್ಣು ಮಾಲ್ಡೀವ್ಸ್‌ಗೆ ರಫ್ತಾಗುತ್ತಿರುವುದು ಗಮನಾರ್ಹ ಸಾಧನೆ ಎಂದಿದ್ದಾರೆ. ಗುಣಮಟ್ಟ ಹಾಗೂ ವಿಶಿಷ್ಟತೆಯ ಕಾರಣದಿಂದ ಈ ಉತ್ಪನ್ನಗಳು ಜಾಗತಿಕ ಮಾರುಕಟ್ಟೆಯಲ್ಲಿ ಬೇಡಿಕೆ ಪಡೆಯುತ್ತಿವೆ. ಇಂದಿನ ರೈತರು ಉತ್ತಮ ಇಳುವರಿ ಜತೆಗೆ ಗುಣಮಟ್ಟಕ್ಕೂ ಒತ್ತು ನೀಡುತ್ತಿದ್ದು, ತಮ್ಮದೇ ಆದ ಗುರುತನ್ನು ನಿರ್ಮಿಸುತ್ತಿದ್ದಾರೆ ಎಂದರು.ನಂಜನಗೂಡು ರಸಬಾಳೆ ಮೈಸೂರು ಹಾಗೂ ಚಾಮರಾಜನಗರ ಭಾಗಗಳಲ್ಲಿ ಬೆಳೆಯುವ ಪ್ರಸಿದ್ಧ ಬಾಳೆಹಣ್ಣು. ವಿಶೇಷ ರುಚಿ, ಸುಗಂಧ ಮತ್ತು ದಪ್ಪ ತಿರುಳಿಗೆ ಹೆಸರಾದ ಈ ಹಣ್ಣು 2005ರಲ್ಲಿ ಜಿಐ ಮಾನ್ಯತೆ ಪಡೆದಿದೆ. ಕಪಿಲಾ ನದಿಯ ತೀರದ ಕಪ್ಪು ಮಣ್ಣಿನಲ್ಲಿ ಇದು ಹೆಚ್ಚಾಗಿ ಬೆಳೆಯುತ್ತದೆ. ಮೈಸೂರು ವೀಳ್ಯದೆಲೆ ತನ್ನ ಸುವಾಸನೆ, ವಿನ್ಯಾಸ ಮತ್ತು ಖಾರವಾದ ರುಚಿಗೆ ಪ್ರಸಿದ್ಧವಾಗಿದೆ.

ಪುಟ ೪

ಕಾಂಗ್ರೆಸ್‌ನ ಕೊಳಕು, ನಾಚಿಕೆಗೇಡಿನ ಕೃತ್ಯ

• **ಮೀರತ್(ಉ.ಪ್ರ.):** ದಿಲ್ಲಿಯ ಜಾಗತಿಕ ಕೃತಕ ಬುದ್ಧಿಮತ್ತೆ ಶೃಂಗಸಭೆಯಲ್ಲಿ ಶರ್ಟ್‌ರಹಿತವಾಗಿ ಪ್ರತಿಭಟನೆ ನಡೆಸಿದ ಕಾಂಗ್ರೆಸಿಗರನ್ನು ಕಟುವಾಗಿ ತರಾಟೆಗೆತ್ತಿಕೊಂಡಿರುವ ಪ್ರಧಾನಿ ಮೋದಿ, ಪಕ್ಷವು ತನ್ನ ಕೊಳಕು ಮತ್ತು ನಾಚಿಕೆಗೇಡಿನ ಕೃತ್ಯಕ್ಕಾಗಿ ಅಂತಾರಾಷ್ಟ್ರೀಯ ಕಾರ್ಯಕ್ರಮ ಜಾಗವನ್ನು ಬಳಸಿಕೊಂಡದ್ದು ತೀರಾ ಅಕ್ಷಮ್ಯವೆಂದು ತರಾಟೆಗೆತ್ತಿಕೊಂಡಿದ್ದಾರೆ. • ವಿವರ ಪುಟ ೭

ಗಂಗಾವಳಿ ಸೇತುವೆ ಉದ್ಘಾಟಿಸಿದ ಸಿದ್ದರಾಮಯ್ಯ

ಜೂನ್‌ನೊಳಗೆ ಸ್ಥಳೀಯ ಸಂಸ್ಥೆ ಚುನಾವಣೆ: ಸಿಎಂ



• **ಅಂಕೋಲಾ:** ಜೂನ್ ಒಳಗೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಭಾನುವಾರ ಅಂಕೋಲಾ-ಕುಮಟಾ ತಾಲೂಕಿನ ಮಧ್ಯೆ ಗಂಗಾವಳಿ ನದಿಗೆ 34.21 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಸೇತುವೆಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಗ್ರಾಮ ಪಂಚಾಯತ್ ಚುನಾವಣೆಗಳನ್ನು ಶೀಘ್ರ ನಡೆಸಲು ಸರ್ಕಾರ ಬದ್ಧವಾಗಿದೆ ಎಂದರು.

ಕುಮಟಾ ಶಾಸಕ ದಿನಕರ ಶೆಟ್ಟಿಯವರು ಗೋಕರ್ಣವನ್ನು ಗ್ರಾಪಂನಿಂದ ಪಟ್ಟಣ ಪಂಚಾಯತಿಗೆ ಬದಲಾಯಿಸಬೇಕು ಎಂದು ಮಾಡಿದ ಮನವಿಗೆ ಮುಖ್ಯಮಂತ್ರಿಗಳು ಪಂಚಾಯತ್ ಚುನಾವಣೆಯ ಪ್ರಕ್ರಿಯೆಗಳು ಆರಂಭವಾಗಲಿದ್ದು, ಇದೀಗ ಯಾವುದೇ ಪಟ್ಟಣ ಪಂಚಾಯತ್ ಮತ್ತು ನಗರ ಸಂಸ್ಥೆಗಳನ್ನು ಮೇಲ್ದರ್ಜೆಗೆ ಏರಿಸುವ ಕಾರ್ಯ ಸಾಧ್ಯವಿಲ್ಲ.

ಪುಟ ೪

> ಈ ನೆಲದ ಬುಡಕಟ್ಟು ಸಮುದಾಯದವರಾದ ಹಾಲಕ್ಕಿ ಒಕ್ಕಲಿಗರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕಾದುದು ಕೇಂದ್ರ ಸರ್ಕಾರದ ಕೆಲಸ. ಕೇಂದ್ರ ಒಮ್ಮೆ ಪ್ರಸ್ತಾವನೆ ತಿರಸ್ಕರಿಸಿದ್ದು ರಾಜ್ಯ ಸರ್ಕಾರದಿಂದ ಮತ್ತೊಮ್ಮೆ ಪ್ರಸ್ತಾವನೆ ಕಳಿಸಲಾಗುವುದು.
>
> ■ ಸಿದ್ದರಾಮಯ್ಯ, ಸಿಎಂ

ಪ್ರವಾಸೋದ್ಯಮ ಅಭಿವೃದ್ಧಿ: ಡಿಸಿಎಂ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಮಾತನಾಡಿ, ಉತ್ತರ ಕನ್ನಡಜಿಲ್ಲೆ ಮತ್ತು ಕರಾವಳಿ ಪ್ರದೇಶದ ಅಭಿವೃದ್ಧಿಗೆ ವಿಶೇಷ ಯೋಜನೆ ರೂಪಿಸಲಾಗುತ್ತಿದ್ದು, ಪ್ರವಾಸಿಗರನ್ನು ಸೆಳೆಯುವ ಹೂಡಿಕೆದಾರರನ್ನು ಆಕರ್ಷಿಸುವ ಮೂಲಕ ಪ್ರವಾಸೋದ್ಯಮದ ಅಭಿವೃದ್ಧಿ, ಉದ್ಯೋಗ ಸೃಷ್ಟಿಗೆ ಚಿಂತನೆ ನಡೆದಿದೆ ಎಂದರು.ಶಾಸಕ ಸತೀಶ ಸೈಲ್ ಪ್ರಾಸ್ತಾವಿಕ ಮಾತನಾಡಿದರು. ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಹಳಿಯಾಳ ಶಾಸಕ ಆರ್.ವಿ.ದೇಶಪಾಂಡೆ, ಶಿರಸಿ ಶಾಸಕ ಭೀಮಣ್ಣ ನಾಯ್ಕ, ಕುಮಟಾ ಶಾಸಕ ದಿನಕರ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಲಷ್ಕರ್ ಸಂಪರ್ಕಿತ ಉಗ್ರರ ಘಟಕ ಭೇದಿಸಿದ ದಿಲ್ಲಿ ಪೊಲೀಸರು

8 ಶಂಕಿತ ಭಯೋತ್ಪಾದಕರ ಸೆರೆ

• **ಹೊಸದಿಲ್ಲಿ:** ಪಾಕಿಸ್ತಾನ ಮೂಲದ ಲಷ್ಕರ್-ಎ-ತೊಯ್ಬಾ ಮತ್ತು ವಿದೇಶಿ ಹ್ಯಾಂಡ್ಲರ್‌ಗಳೊಂದಿಗೆ ಸಂಪರ್ಕ ಹೊಂದಿರುವ ಪ್ರಮುಖ ಭಯೋತ್ಪಾದಕ ಘಟಕವನ್ನು ದಿಲ್ಲಿ ಪೊಲೀಸ್ ವಿಶೇಷ ಘಟಕ ಭೇದಿಸಿದ್ದು, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಾದ್ಯಂತ ಸಂಘಟಿತ ದಾಳಿ ನಡೆಸಿ, ಎಂಟು ಶಂಕಿತ ಉಗ್ರರನ್ನು ಬಂಧಿಸಿದೆ.



ಎರಡು ರಾಜ್ಯಗಳಲ್ಲಿ ಬಂಧನ: ಮಿಝಾನೂರ್ ರೆಹಮಾನ್, ಮೊಹಮ್ಮದ್ ಶಬತ್, ಉರ್ಮ, ಮೊಹಮ್ಮದ್ ಲಿಟನ್, ಮೊಹಮ್ಮದ್ ಶಾಹಿದ್ ಮತ್ತು ಮೊಹಮ್ಮದ್ ಉಜಾಲ್ ಎಂದು ಗುರುತಿಸಲಾದ ಆರು ಆರೋಪಿಗಳನ್ನು ತಮಿಳುನಾಡಿನ ತಿರುಪ್ಪೂರ್ ಜಿಲ್ಲೆಯ ಗಾರ್ಮೆಂಟ್ ಘಟಕಗಳಿಂದ ಬಂಧಿಸಲಾಗಿದೆ. ಇತರ ಇಬ್ಬರನ್ನು ಪಶ್ಚಿಮ ಬಂಗಾಳದಲ್ಲಿ ಬಂಧಿಸಲಾಗಿದೆ. ಬಂಧಿತರಲ್ಲಿ ಕೆಲವರು ಬಾಂಗ್ಲಾ ಪ್ರಜೆಗಳಾಗಿದ್ದು, ತಮ್ಮ ಗುರುತನ್ನು ಮರೆಮಾಚಲು ನಕಲಿ ಆಧಾರ್ ಕಾರ್ಡ್‌ಗಳನ್ನು ಬಳಸುತ್ತಿದ್ದರು ಎಂದು ಶಂಕಿಸಲಾಗಿದೆ.

ಪುಟ ೪

ಬೃಹತ್ ಭಯೋತ್ಪಾದಕ ದಾಳಿಗೆ ಯೋಜನೆ?

ಪಾಕಿಸ್ತಾನದ ಐಎಸ್‌ಐ ಮತ್ತು ಬಾಂಗ್ಲಾದೇಶ ಮೂಲದ ಉಗ್ರಗಾಮಿ ಸಂಘಟನೆಗಳಿಗೆ ಸಂಬಂಧಿಸಿದ ಅಂಶಗಳಿಂದ ಮತ್ತು ವಿದೇಶಿ ಹ್ಯಾಂಡ್ಲರ್‌ಗಳ ನಿರ್ದೇಶನಗಳಿಂದ ಭಾರತದಲ್ಲಿ ದೊಡ್ಡ ಭಯೋತ್ಪಾದಕ ದಾಳಿಗೆ ಯೋಜಿಸಲಾಗುತ್ತಿದೆ ಎಂಬುದು ತಿಳಿದುಬಂದಿದೆ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ. ಕಾರ್ಯಾಚರಣೆ ಸಮಯದಲ್ಲಿ, ಎಂಟು ಮೊಬೈಲ್ ಫೋನ್‌ಗಳು ಮತ್ತು 16 ಸಿಮ್ ಕಾರ್ಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಸಾಧನಗಳನ್ನು ಡಿಜಿಟಲ್ ಪುರಾವೆ ಮತ್ತು ಇತರ ಭಯೋತ್ಪಾದಕರ ಪತ್ತೆಗಾಗಿ ಪರೀಕ್ಷಿಸಲಾಗುತ್ತಿದೆ ಎನ್ನಲಾಗಿದೆ.

ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯಲ್ಲಿ ಉಚಿತ ಶಿಕ್ಷಣ

20,146 ವಿದ್ಯಾರ್ಥಿಗಳಿಂದ ಪರೀಕ್ಷೆ



• **ಮೂಡುಬಿದಿರೆ:** ಖಾಸಗಿ ಶಿಕ್ಷಣ ಸಂಸ್ಥೆಗಳ ಪೈಕಿ ಮುಂಚೂಣಿಯಲ್ಲಿರುವ ಮೂಡುಬಿದಿರೆಯ ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯ 2026-27ನೇ ಸಾಲಿನ 6ರಿಂದ 9ನೇ ತರಗತಿಯ ಸಂಪೂರ್ಣ ಉಚಿತ ಶಿಕ್ಷಣ ಸೌಲಭ್ಯಕ್ಕೆ ನಡೆಸುವ ಪ್ರವೇಶ ಪರೀಕ್ಷೆಯಲ್ಲಿ 20,146 ವಿದ್ಯಾರ್ಥಿಗಳು ಮೂಡುಬಿದಿರೆಯ ವಿದ್ಯಾಗಿರಿ ಹಾಗೂ ಪುತ್ತಿಗೆ ಆವರಣದಲ್ಲಿ ಭಾನುವಾರ ಪರೀಕ್ಷೆ ಬರೆದಿದ್ದಾರೆ. ರಾಜ್ಯಾದ್ಯಂತ ಹಾಗೂ ಕರ್ನಾಟಕದ ಗಡಿ ಪ್ರದೇಶ ಕೇರಳದ ಕಾಸರಗೋಡು, ಮಹಾರಾಷ್ಟ್ರದ ಗಡಿ ಪ್ರದೇಶವೂ ಸೇರಿದಂತೆ 32 ಶೈಕ್ಷಣಿಕ ಜಿಲ್ಲೆಗಳ 23,141 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು, 20146 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರು. 6ನೇ ತರಗತಿಗೆ 16,014, 7ನೇ ತರಗತಿಗೆ 1,374, 8ನೇ ತರಗತಿಗೆ 1,983 ಹಾಗೂ 9ನೇ ತರಗತಿಗೆ 775 ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆ ಬರೆದರು.

ಪುಟ ೪

140 ಕೋಟಿ ರೂ. ಖರ್ಚು

ಕಳೆದ 14 ವರ್ಷಗಳಲ್ಲಿ ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯಲ್ಲಿ ಸಂಪೂರ್ಣ ಉಚಿತವಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣ ಕಲ್ಪಿಸಿಕೊಡಲಾಗುತ್ತಿದೆ. ಕೇವಲ ಶಿಕ್ಷಣ, ಕಲೆ, ಸಾಹಿತ್ಯ, ಸಂಸ್ಕೃತಿ, ಕ್ರೀಡೆ ಹೀಗೆ ಆಯ್ದ ವಿಚಾರಗಳ ಆಧಾರದಲ್ಲಿ ಪಾರದರ್ಶಕ ರೀತಿಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ನಡೆಸಿ, ಸಂಪೂರ್ಣ ಉಚಿತವಾಗಿ ವಸತಿಸಹಿತ ಶಿಕ್ಷಣ ನೀಡುತ್ತಾ ಬರಲಾಗುತ್ತಿದೆ. 140 ಕೋಟಿಗೂ ಮಿಕ್ಕಿ ಖರ್ಚನ್ನು ಈ ಸಂಸ್ಥೆಯ ಮೂಲಕ ಮಾಡಲಾಗಿದೆ. ಇದೆಲ್ಲವೂ ಕನ್ನಡದ ಬಗೆಗಿರುವ ಆಳವಾದ ಶ್ರದ್ಧೆ, ಹಾಗೂ ಬದ್ಧತೆಯ ಕಾರಣಕ್ಕಾಗಿ ನಡೆಯುತ್ತಿದೆ ಎಂದು ಸಂಸ್ಥೆಯ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಹೊಸ ದಿಗಂತಕ್ಕೆ ತಿಳಿಸಿದ್ದಾರೆ.

ಕೆಲ ಶಾಸಕರು ಬಾಯ್ಮುಚ್ಚಿದರೆ ಒಳಿತು: ಡಿ.ಕೆ.ಶಿವಕುಮಾರ್



• **ಕಾರವಾರ:** ನನಗೆ ಒಳಿತಾಗಬೇಕಾದರೆ ಇಕ್ಬಾಲ್ ಹುಸೇನ್ ಸೇರಿದಂತೆ ಕೆಲ ಶಾಸಕರು ಬಾಯಿ ಮುಚ್ಚಿಕೊಂಡಿರುವುದು ಒಳಿತು. ನಾಯಕತ್ವ ಬದಲಾವಣೆ ಬಗ್ಗೆ ಶಾಸಕರೂ ಸೇರಿ ಯಾರೂ ಮಾತನಾಡುವುದು ಬೇಡ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ವಿವಿಧ ಅಭಿವೃದ್ಧಿ ಕಾರ್ಯಗಳ ಉದ್ಘಾಟನೆಗೆ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಶಾಸಕರುಗಳಾದ ಇಕ್ಬಾಲ್ ಹುಸೇನ್, ರವಿ ಗಣಿಗ, ಶಿವಗಂಗಾ ಬಸವರಾಜ್ ಸ್ವಲ್ಪ ಮೌನ ಆಗಿದ್ದರೆ ಸಾಕು ಎಂದರು. ಶಾಸಕರ ವಿದೇಶ ಪ್ರವಾಸದ ಬಗ್ಗೆ ಪ್ರತಿಕ್ರಿಯಿಸಿದ ಅವರು, ವಿದೇಶಕ್ಕೆ ಹೋದವರೂ ನಮ್ಮವರೇ. ಅವರೆಲ್ಲ ಬಂದ ಮೇಲೆ ಏಕೆ ಹೋಗಿದ್ದು ಎಂದು ಕೇಳುತ್ತೇನೆ ಎಂದರು.

ಕಾಡಾನೆ ದಾಳಿಗೆ ಮಹಿಳೆ ಸಾವು; ಪ್ರತಿಭಟನೆ

• **ಬಾಳೆಹೊನ್ನೂರು:** ತಾಲೂಕಿನ ಹುಣಸೇಹಳ್ಳಿ ಸಮೀಪ ಪುರ ಗ್ರಾಮದ ಕಾಫಿ ತೋಟದಲ್ಲಿ ಭಾನುವಾರ ಕಾಡಾನೆ ದಾಳಿಗೆ ಬಳ್ಳಾರಿ ಮೂಲದ ಕಾರ್ಮಿಕ ಮಹಿಳೆಯೊಬ್ಬರು ಬಲಿಯಾಗಿದ್ದಾರೆ. ಒಂದು ವಾರದ ಅಂತರದಲ್ಲಿ ಇದು ಎರಡನೇ ಸಾವು. ಸ್ಥಳೀಯರ ಪ್ರತಿಭಟನೆಯಿಂದ ಪರಿಸ್ಥಿತಿ ಉದ್ರಿಕ್ತಗೊಂಡ ಹಿನ್ನೆಲೆಯಲ್ಲಿ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ.

ಮಹಿಳೆ ಕೊಂದ ಆನೆ ಸೆರೆ

• ವಿವರ ಪುಟ ೫



ಅಳ್ನಾವರ: ಭಾರತೀಯ ಅಂಚೆ ಇಲಾಖೆ ವತಿಯಿಂದ ತಮ್ಮ ಸಿಬ್ಬಂದಿ, ಕುಟುಂಬದವರಿಗೆ ಈಚೆಗೆ ಮೈಸೂರಿನಲ್ಲಿ ಹಮ್ಮಿಕೊಂಡ 2025-26 ರ ಸಾಲಿನ ರಾಷ್ಟ್ರೀಯ 38ನೇ ಸಾಂಸ್ಕೃತಿಕ ಮೇಳದ ಕಿರಿಯರ ವಿಭಾಗದ ಜಾನಪದ ಸಂಗೀತದಲ್ಲಿ ಅಳ್ನಾವರದ ನಿವಾಸಿ ಶಂಕರಯ್ಯ ದೇಗಾಂವಿಮಠ ಅವರ ಮೊಮ್ಮಗಳಾದ ಬಾಲ ಕಲಾವಿದೆ ಶಾಂಭವಿ ದೇಗಾವಿಮಠ ಪ್ರಥಮ (ತಬಲಾ ಸಾಥ್ ಪ್ರಣವ) ಸ್ಥಾನ ಹಾಗೂ ಲಘು ಶಾಸ್ತ್ರೀಯ ಸಂಗೀತದಲ್ಲಿ ತೃತೀಯ ಬಹುಮಾನವನ್ನು ಪಡೆದಿದ್ದು, ಸಂಗೀತ ದಿಗ್ಗಜ ಪಂಡಿತ ಎಂ.ವೆಂಕಟೇಶಕುಮಾರ ಅವರಿಂದ ಪ್ರಶಸ್ತಿ ಸ್ವೀಕರಿಸಿದ ಚಿತ್ರ.

ಶಿವಾಜಿ ಮಹಾರಾಜರ ಆದರ್ಶ ಪಾಲಿಸಿ

ಕುಂದಗೋಳ: ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತ್ಯುತ್ಸವ ಅಂಗವಾಗಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪೂಜೆ ಹಾಗೂ ಪುಷ್ಪನಮನವನ್ನು ಗಣ್ಯರು ಸಲ್ಲಿಸುವ ಮೂಲಕ ವಿಜೃಂಭಣೆಯಿಂದ ಆಚರಿಸಲಾಯಿತು.

ತಹಶೀಲ್ದಾರ್ ರಾಜು ಮಾವರಕರ ಮಾತನಾಡಿ, ಛತ್ರಪತಿ ಶಿವಾಜಿ ಮಹಾರಾಜರ ಧೈರ್ಯ ಮತ್ತು ನೀತಿವಂತ ಆಡಳಿತಕ್ಕೆ ಹೆಸರಾದವರು. ಅವರ ಶೌರ್ಯ, ಹೋರಾಟದ ಹಾದಿ ಹಾಗೂ ಅವರ ಜೀವನದ ಆದರ್ಶಗಳು ಇಂದಿನ ಸಮಾಜಕ್ಕೆ ಪ್ರೇರಣೆಯಾಗಿವೆ. ಪ್ರತಿಯೊಬ್ಬರೂ ಶಿವಾಜಿ ಮಹಾರಾಜರ ದೇಶಪ್ರೇಮವನ್ನು ಅಳವಡಿಸಿಕೊಳ್ಳಬೇಕು ಎಂದರು. ಕೃಷಿಕ ಸಮಾಜ ನವದೆಹಲಿ ರಾಜ್ಯಾಧ್ಯಕ್ಷರಾದ ಮಾಣಿಕ್ಯ ಚಿಲ್ಲೂರ ಮಾತನಾಡಿದರು. ಶಿಕ್ಷಕ ಎಸ್. ಸಿ. ಶ್ಯಾನವಾಡ ಉಪನ್ಯಾಸ ನೀಡಿದರು. ಎಸ್ಎಸ್ಎಲ್.ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿ ಸಮಾಜದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಇಒ ಜಗದೀಶ ಕಮ್ಮಾರ, ತಾಲೂಕು ಗ್ಯಾರಂಟಿ ಯೋಜನೆ ಅಧ್ಯಕ್ಷ ಸತೀಶ ಕೊಬ್ಬಯ್ಯನವರ, ಮುಖಂಡರಾದ ನಾಗರಾಜ ದೇಶಪಾಂಡೆ, ವಿಠ್ಠಲ ಚವ್ಹಾಣ, ಅಶೋಕ ಘೋರ್ಪಡೆ, ಕಲ್ಲಪ್ಪ ಹರಕುಣಿ, ವಿನೋದ ಮಾಣಿಕ್ಯನವರ, ಶಂಕರ ಪರಮೇಕರ, ಗಣೇಶ ಕೊಕಾಟೆ, ಜ್ಯೋತಿಬಾ ಶಿಂಧೆ, ವನಮಾಲ ಪವಾರ, ಸರಸ್ವತಿ ಪವಾರ. ತುಳಸವ್ವ ನಿಂಬೋಜಿ ಇತರರಿದ್ದರು. ಶಿಕ್ಷಕ ನಾಗರಾಜ ಗೌಳಿ ನಿರೂಪಿಸಿದರು. ಸಂಭಾಜಿ ತಡಸದ ಅವರು ಶಿವಾಜಿ ಮಹಾರಾಜರ ವೇಷಭೂಷಣ ತೊಟ್ಟು ಕಾರ್ಯಕ್ರಮಕ್ಕೆ ವಿಶೇಷ ಮೆರುಗು ತಂದರು.



ಕುಂದಗೋಳ: ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತ್ಯುತ್ಸವ ಅಂಗವಾಗಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪೂಜೆ ಹಾಗೂ ಪುಷ್ಪನಮನವನ್ನು ಗಣ್ಯರು ಸಲ್ಲಿಸುವ ಮೂಲಕ ವಿಜೃಂಭಣೆಯಿಂದ ಆಚರಿಸಲಾಯಿತು. ತಹಶೀಲ್ದಾರ್ ರಾಜು ಮಾವರಕರ, ಕೃಷಿಕ ಸಮಾಜ ನವದೆಹಲಿ ರಾಜ್ಯಾಧ್ಯಕ್ಷರಾದ ಮಾಣಿಕ್ಯ ಚಿಲ್ಲೂರ, ಶಿಕ್ಷಕ ಎಸ್. ಸಿ. ಶ್ಯಾನವಾಡ, ಇಒ ಜಗದೀಶ ಕಮ್ಮಾರ, ತಾಲೂಕು ಗ್ಯಾರಂಟಿ ಯೋಜನೆ ಅಧ್ಯಕ್ಷ ಸತೀಶ ಕೊಬ್ಬಯ್ಯನವರ ಮತ್ತಿತರರು ಇದ್ದರು.

ಕಿರುಸುದ್ದಿ

ಇಂದು ಉಪನ್ಯಾಸ, ಸಂವಾದ ಕಾರ್ಯಕ್ರಮ

ಅಳ್ನಾವರ: ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪದಿಂದ ಆಳ್ನಾವರದ ಸೇಂಟ್ ತೆರೇಜಾ ಶಿಕ್ಷಣ ಮಹಾವಿದ್ಯಾಲಯದಲ್ಲಿ ಫೆ.23ರಂದು ಬೆಳಿಗ್ಗೆ 11ಕ್ಕೆ ಬಿ.ಇಡಿ ವಿದ್ಯಾರ್ಥಿಗಳಿಗಾಗಿ ಉಪನ್ಯಾಸ ಹಾಗೂ ಸಂವಾದ ಕಾರ್ಯಕ್ರಮ ಏರ್ಪಡಿಸಿದೆ. ಅಳ್ನಾವರ ಸೇಂಟ್ ತೆರೇಜಾ ಕಾಲೇಜು ಸಂಚಾಲಕರಾದ ಫಾ.ಜೋಸೆಫ್ ಲೋಪೆಸ್ ಕಾರ್ಯಕ್ರಮ ಉದ್ಘಾಟಿಸುವರು. ಅಳ್ನಾವರ ಸೇಂಟ್ ತೆರೇಜಾ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾದ ಫಾ.ಡಾ. ಆಲ್ವಿನ್ ಸುಧೀರ ಅಧ್ಯಕ್ಷತೆ ವಹಿಸುವರು. ಧಾರವಾಡ ಮನೋ ಆರೋಗ್ಯ ವೈದ್ಯರಾದ ಡಾ.ಸುಜ್ಞಾನಿದೇವಿ ಪಾಟೀಲ ಅವರು ಹದಿ ಹರೆಯದ ಸಮಸ್ಯೆಗಳು, ಸವಾಲುಗಳು ಹಾಗೂ ಪರಿಹಾರ ವಿಷಯ ಕುರಿತು ಅತಿಥಿ ಉಪನ್ಯಾಸ ನೀಡುವರು. ಅಳ್ನಾವರ ತಾಲೂಕಕನ್ನಡ ಸಾಹಿತ್ಯ ಪರಿಷತ್ತುಅಧ್ಯಕ್ಷರಾದಗುರುರಾಜ ಸಬನೀಸ್ಮುಖ್ಯ ಅತಿಥಿಗಳಾಗಿ ಆಗಮಿಸುವರು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದಶಿವಾನಂದ ಭಾವಿಕಟ್ಟಿ ಮತ್ತು ಹಳಿಯಾಳ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದಪಿ. ಆರ್.ನಾಗರಾಳ ಗೌರವ ಉಪಸ್ಥಿತರಿರುವರು. ಅಳ್ನಾವರ ಸೇಂಟ್ ತೆರೇಜಾ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕಶಿವಾನಂದ ಹಡಪದ ಕಾರ್ಯಕ್ರಮ ಸಂಯೋಜಿಸುವರು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಹಾಗೂ ಶಿಕ್ಷಣ ಮಂಟಪದ ಸಂಚಾಲಕ ವೀರಣ್ಣಒಡ್ಡೀನ ಪ್ರಕಟಣೆಯಲ್ಲಿ ಕೋರಿದ್ದಾರೆ.

ಕಮೀಟಿಯ ಹಣ ದುರುಪಯೋಗ: ಆರೋಪ



ಕುಂದಗೋಳ: ತಾಲೂಕಿನ ಕಮಡೊಳ್ಳಿ ಗ್ರಾಮದ ಹಜರತ್ ರಾಜಬಿ ಮಾ ಸಾಹೇಬಾ ಉರಸ್ ಯಂಗ್ (ದರ್ಗಾ) ಕಮೀಟಿಯು 2013 ರಲ್ಲಿ ರಚನೆಗೊಂಡಿದ್ದು ಇಲ್ಲಿಯವರೆಗೂ ಕಮೀಟಿಯವರು ಲೆಕ್ಕಪತ್ರ ವಿವರ ನೀಡದೆ ಹಣವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂದು ಕಮಿಟಿಯ ಸಹ ಕಾರ್ಯದರ್ಶಿ ಖಾದರಬಾಶಾ ಬೂಬಜಿ ಆರೋಪಿಸಿದರು.

ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 2013 ರಲ್ಲಿ ಗ್ರಾಮದ ನಾಲ್ಕು ಜಮಾತುಗಳು ಸೇರಿ ಈ ಕಮೀಟಿಯನ್ನು ರಚಿಸಲಾಗಿದ್ದು ಪ್ರತಿ ವರ್ಷವೂ ರಾಜಬಿ ಮಾ ಸಾಹೇಬಾ ದರ್ಗಾ ಉರುಸ್‌ನ ಸಂದರ್ಭದಲ್ಲಿ ಭಕ್ತರಿಂದ ದೇಣಿಗೆ ಪಡೆದು ಕಾರ್ಯ ಮಾಡುತ್ತಾ, ಇದುವರೆಗೂ ಕಮೀಟಿಯವರು ಜಮಾ ಖರ್ಚು ವಿವರ ನೀಡದೆ ಸಮಾಜಕ್ಕೆ ಮೋಸ ಮಾಡುತ್ತಿದ್ದಾರೆ. ಲೆಕ್ಕ ಕೇಳಿದವರ ಮೇಲೆ ಹಲ್ಲೆ ಮಾಡುತ್ತಿದ್ದು ನಾನು ಸಹ ಕಮೀಟಿಯ ಸಹ ಕಾರ್ಯದರ್ಶಿ ಇದ್ದು ನನ್ನ ಮೇಲು ಸಹ ಹಲ್ಲೇ ಮಾಡಿದ್ದಾರೆ. ನಾಲ್ಕು ಜಮಾಯಿತಿನ ಹಿರಿಯರು ಎರಡು ಬಾರಿ ಜವಾಬ್ದಾರಿಂದ ಉರಸ್ಸನ್ನು ಮಾಡಿ 2 ಲಕ್ಷಕ್ಕೂ ಹೆಚ್ಚು ಉಳಿತಾಯ ಮಾಡಿದ್ದೇವೆ. ಆದರೆ ಕಮೀಟಿಯವರು ಲೆಕ್ಕ ನೀಡದೆ ಹಣವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂದು ಗಂಭೀರವಾಗಿ ಆರೋಪಿಸಿದರು. ನನಗೂ ಸಹ ಜೀವ ಬೆದರಿಕೆ ಇದ್ದು ನನಗೆ ಎನಾದರೂ ಆದರೆ, ಈ ಕಮೀಟಿಯವರೆ ಹೊಣೆ ಆಗುತ್ತಾರೆ, ಕೂಡಲೇ ವಕ್ಫ್ ಬೋರ್ಡ್‌ನವರು ಮಧ್ಯಪ್ರವೇಶಿಸಿ ಇಲ್ಲಿ ಆಗುತ್ತಿರುವ ಅನ್ಯಾಯವನ್ನು ತಡೆದು ಸಮಾಜಕ್ಕೆ ಒಳಿತು ಮಾಡಬೇಕೆಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಧಾದಪೀರ್ ಜಾಕಣಿ, ಕಾದರಾಭಾಷಾ ಬುಬುಜಿ, ಅಬ್ದುಲಗಣಿಸಾಬ್ ಅಲ್ಲಿ ಖಾನನವರ್ ಸೇರಿದಂತೆ ಅನೇಕರಿದ್ದರು.

ವೃದ್ಧ ಕಾಣೆ

ಧಾರವಾಡ: ತಾಲೂಕಿನ ಕೊಟಬಾಗಿ ಗ್ರಾಮದ ವೃದ್ಧನೋರ್ವ ನಾಪತ್ತೆಯಾದ ಘಟನೆ ನಡೆದಿದೆ. ಗ್ರಾಮದ ಅರುಣ ಸುಬ್ಬಣ್ಣ ಯಲಿಗಾರ (61) ಎಂಬ ವೃದ್ಧ ಫೆ.19ರಂದು ಮನೆಯಿಂದ ಹೊರಗೆ ಹೋಗಿ, ವಾಪಸ್ ಬರದೆ ಕಾಣೆಯಾಗಿದ್ದಾನೆ. ಆತನ ಪತ್ನಿ ಶಕುಂತಲಾ ಯಲಿಗಾರ ನೀಡಿದ ದೂರಿನ ಮೇರಿಗೆ ಗರಗ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಇತನ ಸುಳಿವು ಸಿಕ್ಕವರು ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ 0836-2233201, ಗರಗ ವೃತ್ತ ಸಿಪಿಐ 0836-2233213 ಅಥವಾ ಗರಗ ಪೊಲೀಸ್ ಠಾಣೆ 0836-2233217 ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.



ಹಿಂದೂ ಶಕ್ತಿ ಸಮ್ಮೇಳನ ಉದ್ಘಾಟನೆ | ರಘುನಂದನ್ ಸಲಹೆ

ಧರ್ಮ ರಕ್ಷಣೆಗೆ ಹಿಂದೂಗಳು ಒಗ್ಗೂಡಲಿ

ಧಾರವಾಡ: ಜಾತಿ, ಮತ-ಪಂಥಗಳ ಗೋಡೆಗಳನ್ನು ಕೆಡವಿ ನಾವೆಲ್ಲ 'ಹಿಂದೂ' ಎಂಬ ಭಾವನೆಯಡಿ ಸಂಘಟಿತರಾದರೆ, ನಮ್ಮ ಶಕ್ತಿ ಧರ್ಮಕ್ಕೆ ರಕ್ಷಣೆ ನೀಡಲಿದೆ ಎಂದರು ಅಖಿಲ ಭಾರತೀಯ ಪ್ರಜ್ಞಾ ಪ್ರವಾಹ ಸಂಯೋಜಕ ರಘುನಂದನ್ ಜೀ ಹೇಳಿದರು.

ಕೊಪ್ಪದಕೇರಿ ಹಿಂದೂ ಸಮ್ಮೇಳನ ಸಮಿತಿ, ಕೊಪ್ಪದಕೇರಿ ಶಿವಾಲಯ ದೇವಸ್ಥಾನ ಆವರಣದಲ್ಲಿ ಭಾನುವಾರ ಹಮ್ಮಿಕೊಂಡ ಹಿಂದೂ ಶಕ್ತಿ ಸಮ್ಮೇಳನ ಉದ್ಘಾಟಿಸಿದ ಅವರು, ಪ್ರಸ್ತುತ ಹಿಂದೂ ಸಮಾಜಕ್ಕೆ ಒಗ್ಗಟ್ಟಿನ ಕೊರತೆ ಎದ್ದು ಕಾಣುತ್ತದೆ ಎಂದು ಬೇಸರಿಸಿದರು.

ಮಾತೆಗೆ ಸವಾಲು: ಹಿಂದುಗಳಿಂದಲೇ ಭಾರತಮಾತೆಗೆ ದೊಡ್ಡ ಸವಾಲು ಎದುರಾಗಿದೆ. ಓರ್ವ ಹಿಂದೂ, ಮುಸ್ಲಿಂ ಅಥವಾ ಕ್ರೈಸ್ತ್ ಧರ್ಮಕ್ಕೆ ಮತಾಂತರಗೊಂಡ ವೇಳೆ ಹಿಂದೂ ಸಮಾಜಕ್ಕೆ ಒಬ್ಬ ಕಡಿಮೆ ಆದಂತೆ ಆಗಲ್ಲ, ಬದಲಿಗೆ ಒಬ್ಬ ಹಿತಶತ್ರು ಜಾಸ್ತಿಯಾದಂತೆ ಎಂದು ಎಚ್ಚರಿಸಿದರು.

ಎಚ್ಚರ ವಹಿಸಿ: ಪ್ರತಿವರ್ಷ ಆಗಸ್ಟ್15ಕ್ಕೆ ಬ್ರಿಟಿಷರನ್ನು ಓಡಿಸಿದ್ದಾಗಿ ಬೋಗಳೆ ಬಿಡುವ ನಾವುಗಳು ಎಲ್ಲಿ ಓಡಿಸಿದ್ದೇವೆ? ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕು. ಅವರೆಲ್ಲರೂ ಹಿತಶತ್ರುಗಳಂತೆ ನಮ್ಮ ಮಧ್ಯೆ ಇದ್ದಾರೆ. ಇವರ ಬಗ್ಗೆ ಬಹಳಷ್ಟು ಎಚ್ಚರ ವಹಿಸಲು ಹೇಳಿದರು.

ಸಂಸ್ಕೃತಿಗೆ ಉಳಿಗಾಲ: ಜಾತಿಯತೆ ಹಾಗೂ ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಅಂಟಿರುವ ದೊಡ್ಡ ಕಳಂಕ. ಹೀಗಾಗಿ ಈ ಜಾತಿಮತ ಸಂಕೋಲೆಯಿಂದ ಆಚೆಗೆ ಬಂದು, ನಮ್ಮ ಕುಟುಂಬ ಪರಿವಾರ ಗಟ್ಟಿಯಾದರೆ ಮಾತ್ರ ಹಿಂದು ಸಮಾಜ, ಸಂಸ್ಕೃತಿ ಉಳಿಗಾಲ ಎಂದು ತಿಳಿಸಿದರು.



ಶೋಭಾಯಾತ್ರೆ

ಸೈದಾಪೂರದ ಕಲ್ಮೇಶರ ದೇವಸ್ಥಾನದಿಂದ ಆರಂಭವಾದ ಭವ್ಯ ಶೋಭಾಯಾತ್ರೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಕೊಪ್ಪದಕೇರಿ ಶಿವಾಲಯದ ಆವರಣ ತಲುಪಿ ಮುಕ್ತಾಯಗೊಂಡಿತು. ಮುತ್ತೈದೆಯರ ಪೂರ್ಣಕುಂಭ, ಸಕಲ ವಾದ್ಯಮೇಳಗಳು ಹಾಗೂ ಯುವಕರ ಜೈಘೋಷ, ಕೇಸರಿ ಧ್ವಜಗಳ ಹಾರಾಟ ಮೆರವಣಿಗೆಗೆ ಮೆರಗು ತುಂಬಿದವು.

ಜಾಗೃತಿಯೇ ಶಕ್ತಿ: ಸನಾತನ ಸಂಸ್ಕೃತಿ ಜಾಗೃತಿಯೇ ರಾಷ್ಟ್ರದ ಶಕ್ತಿ. ಶಿವಾಲಯದಲ್ಲಿ ನಾವು ಸುಮ್ಮನೆ ಸೇರಿಲ್ಲ, ನಮ್ಮ ವೈಭವಯುತ ಪರಂಪರೆಯ ಪುನರುತ್ಥಾನಕ್ಕೆ ಒಂದಾಗಿದ್ದೇವೆ. ಭಾರತ ಕೇವಲ ಭೂ-ಭಾಗವಲ್ಲ, ಜಗತ್ತಿಗೆ ದಾರಿದೀಪವಾದ ಜೀವಂತ ಸಂಸ್ಕೃತಿ ಎಂದರು.

ಪ್ಲಾಸ್ಟಿಕ್ ನಿಷೇಧಿಸಿ: ಜಗತ್ತಿಗೆ ಜ್ಞಾನ, ಸಂಸ್ಕೃತಿ ಕೊಟ್ಟ ಭಾರತ ಪ್ಲಾಸ್ಟಿಕ್ ಮುಕ್ತವಾಗಿಲ್ಲ, ಮಳೆ, ಗಾಳಿ, ನೀರು ಹೀಗೆ ಪ್ರಕೃತಿ ಆರಾಧಕಾರದ ಹಿಂದುಗಳು, ಈ ಪರಿಸರವು ಕಲುಷಿತ ಆಗದಂತೆ ಬಹಳಷ್ಟು ಎಚ್ಚರ ವಹಿಸಬೇಕು. ಪ್ಲಾಸ್ಟಿಕ್ ಬಳಕೆ ನಿಷೇಧಿಸಲು ಸಲಹೆ ನೀಡಿದರು.

ಯುವಕರಿಗೆ ಕರೆ: ನಮ್ಮ ಹೊಸ ತಲೆಮಾರಿನ ಪೀಳಿಗೆಗೆ ಇತಿಹಾಸದ ಸತ್ಯವನ್ನು ತಿಳಿಸಿಕೊಡಬೇಕು. ನಮ್ಮ ಪೂರ್ವಜರು ಉಳಿಸಿಕೊಂಡು ಬಂದ ಸಂಸ್ಕೃತಿ, ಪರಂಪರೆಯನ್ನು ನಮ್ಮ ಭವಿಷ್ಯದ ಪೀಳಿಗೆಗೆ ಹಸ್ತಾಂತರದ ಜವಾಬ್ದಾರಿ ಪ್ರತಿಯೊಬ್ಬ ಹಿಂದುವಿನ ಮೇಲಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಪರಮಾತ್ಮ ಮಹಾರಾಜ್ ಮಾತನಾಡಿ, ಜಗತ್ತು ಶಾಂತಿಗಾಗಿ ಭಾರತದತ್ತ ತೀರುಗಿ ನೋಡುತ್ತಿದೆ. ಭಾರತವು ವಿಶ್ವ ಗುರುವಾಗಲು ನಮ್ಮ ಮೂಲ ಸಂಸ್ಕೃತಿಯಾದ ಸನಾತನ ಧರ್ಮದ ಮೌಲ್ಯಗಳು ಅಳವಡಿಸಿಕೊಳ್ಳುವಂತೆ ಕರೆ ನೀಡಿದರು.

ಸಮ್ಮೇಳನ ಸಮಿತಿ ಅಧ್ಯಕ್ಷ ಅಶೋಕ ಎತ್ತಿನಗುಡ್ಡ, ಕಾರ್ಯದರ್ಶಿ ನಾಗರಾಜ ರಾಯ್ಕರ, ಡಾ. ಎಸ್. ಆರ್.ರಾಮನಗೌಡರ, ಈರೇಶ ಅಂಚಟಗೇರಿ, ಶಂಕರ ಶೇಳಕೆ, ಸುರೇಶ ಬೇದರೆ, ಮೋಹನ ರಾಮದುರ್ಗ, ಮಂಜುನಾಥ ಮಕ್ಕಳಗೇರಿ ಇದ್ದರು.

ತಾಯಿ ಕುಟುಂಬದ ಆಧಾರ ಸ್ತಂಭ

ಧಾರವಾಡ: ಕುಟುಂಬ ನಿರ್ವಹಣೆ ಸಾಮಾನ್ಯವಲ್ಲ, ಕುಟುಂಬದ ಆಧಾರ ಸ್ತಂಭ ತಾಯಿ. ದೈಹಿಕ ನಿಸ್ವಾರ್ಥವಾಗಿ ದುಡಿಯುವ ತಾಯಿಯ ಶ್ರಮ ಅನನ್ಯ ಎಂದು ವಿಶ್ರಾಂತ ಪ್ರಾಧ್ಯಾಪಕ ಡಾ. ವೈ.ಎಂ.ಭಜಂತ್ರಿ ಹೇಳಿದರು.

ಇಲ್ಲಿನ ಕರ್ನಾಟಕ ವಿದ್ಯಾವರ್ಧಕ ಸಂಘದ ದೇಶಪಾಂಡೆ ಸಭಾಂಗಣದಲ್ಲಿ ನಡೆದ ಆದರ್ಶ ಶಿಕ್ಷಕ ಕಾರ್ಯಕ್ರಮದಲ್ಲಿ 'ಕೌಟುಂಬಿಕ ವಾತ್ಸಲ್ಯ; ಒಂದು ಅವಲೋಕನ ವಿಷಯದ ಕುರಿತು ಅವರು ಉಪನ್ಯಾಸ ನೀಡಿದರು.

ಕುಟುಂಬ ವ್ಯವಸ್ಥೆ ಮೂಲತಃ ಸಹನೆ, ಪ್ರೀತಿ, ತ್ಯಾಗ ತಳಹದಿ ಮೇಲೆ ನಿಂತಿದೆ. ವಾತ್ಸಲ್ಯ ತಾಯಿಯ ಹೃದಯದಲ್ಲಿ ಮಕ್ಕಳ ಮೇಲಿನ ಭಾವನೆ. ಇಂದಿನ ಜೀವನ ಶೈಲಿ ಇದೆಲ್ಲವನ್ನೂ ಬುಡಮೇಲು ಮಾಡಿದೆ ಎಂದು ಬೇಸರಿಸಿದರು.

ತಂದೆ-ತಾಯಿ ತ್ಯಾಗ, ಬಯಸುವ ಪ್ರೀತಿ ಮೊಬೈಲ್ ಮತ್ತು ಇಂಟರ್ನೆಟ್ ಜಾಲ ಕಿತ್ತುಕೊಂಡಿದೆ. ಪರಿಣಾಮ ಮಕ್ಕಳು, ತಂದೆ-ತಾಯಿಗಳನ್ನು ಅಲಕ್ಷಿಸುತ್ತಿರುವುದು ಬೇಸರದ ಸಂಗತಿ ಮತ್ತು ಒಳೆಯ ನಡೆಯೂ ಅಲ್ಲ ಎಂದರು.

ಕುಟುಂಬ ಅರ್ಥೈಯಿಸಲು ಶಾಲೆಯಲ್ಲಿ ಪಠ್ಯವೇ ಇಲ್ಲ, ಅದು ಲೋಕಾನುಭವದ ಪಾಠ. ದಿ. ಧರ್ಮಪ್ಪ ಹೊರಕೇರಿ ಶಿಕ್ಷಕ ವೃತ್ತಿಯ ಜೊತೆ ದತ್ತಿ ಮೂಲಕ ತಂದೆ-ತಾಯಿ ಜೀವಂತ ಇಟ್ಟಿದ್ದು ಕೂಡ ಬಳಷ್ಟು ಸ್ಮರಿಸಿದರು.

ಆದರ್ಶ ಶಿಕ್ಷಕ ಪ್ರಶಸ್ತಿ ಸ್ವೀಕರಿಸಿದ ಡಾ.ಲಿಂಗರಾಜ ರಾಮಾಪೂರ, ಶಿಕ್ಷಕ ವೃತ್ತಿ ಜನಮಾನಸದ ವೃತ್ತಿಯಾಗಿದೆ. ಈ ಸನ್ಮಾನ ಜವಾಬ್ದಾರಿ ಹೆಚ್ಚಿಸಿದೆ. ಇದು ಶಿಕ್ಷಣದಲ್ಲಿ ಇನ್ನಷ್ಟು ಪ್ರಯೋಗಶೀಲತೆ ಮಾಡಲು ಪ್ರೇರೆಪಿಸಿದೆ ಎಂದರು.

ಶಿಕ್ಷಕಿ ಸರೋಜಾ ಪಾಟೀಲ ಮತ್ತು ಡಾ.ಲಿಂಗರಾಜ ಹೊರಕೇರಿ ಮಾತನಾಡಿದರು. ಕವಿಸಂ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿದ್ದರು. ಡಾ.ಮೃತ್ಯುಂಜಯ ಶೆಟ್ಟರ್ ಮತ್ತು ಸಂಗಡಿಗರು ಸಂಗೀತ ಕಛೇರಿ ನಡೆಸಿಕೊಟ್ಟರು.

ಡಾ.ಮಹೇಶ ಹೊರಕೇರಿ, ಶಂಕರ ಹಲಗತ್ತಿ, ಬಸವಪ್ರಭು ಹೊಸಕೇರಿ, ಗುರು ಹಿರೇಮಠ, ಡಾ.ಶೈಲಜಾ ಅಮರಶೆಟ್ಟಿ, ಪ್ರೊ. ಎನ್.ಆರ್ .ಬಾಳಿಕಾಯಿ, ಶ್ರೀಶೈಲಗೌಡ ಕಮತರ, ಚಂದ್ರು ಬಳಿಗಾರ, ಡಾ.ರಾಮು ಮೂಲಗಿ ಇದ್ದರು.



ಆರೋಗ್ಯ ತಪಾಸಣೆ ಉಚಿತ ಶಿಬಿರಕ್ಕೆ ಚಾಲನೆ

ಬದುಕಿಗೆ ಆರೋಗ್ಯ ಸಂಪತ್ತು ಮುಖ್ಯ



ಧಾರವಾಡ: ಬದುಕಿನಲ್ಲಿ ಹಣ, ಬಂಗಾರದ ಸಂಪತ್ತಿಗಿಂತ ಆರೋಗ್ಯ ಸಂಪತ್ತು ಬಹಳ ಮುಖ್ಯ. ಆರೋಗ್ಯ ಚನ್ನಾಗಿದ್ದರೆ ಹಣ-ಬಂಗಾರ ಸಂಪಾದಿಸಬಹುದು ಎಂದು ಮರಾಠಾ ವಿದ್ಯಾಪ್ರಸಾರ ಮಂಡಳ ಅಧ್ಯಕ್ಷ ಮೋಹನ ಮೋರೆ ಅಭಿಮತ ವ್ಯಕ್ತಪಡಿಸಿದರು.

ಛತ್ರಪತಿ ಶಿವಾಜಿ ಮಹಾರಾಜರ 399ನೇ ಜಯಂತಿ ನಿಮಿತ್ಯ ನಗರದ ಗೋಲ್ಡ್ ಪಾರ್ಕ್ ಬಡಾವಣೆಯಲ್ಲಿ ಹಮ್ಮಿಕೊಂಡ ಆರೋಗ್ಯ ತಪಾಸಣೆ ಉಚಿತ ಶಿಬಿರಕ್ಕೆ ಚಾಲನೆ ನೀಡಿದ ಅವರು, ಆರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆಗೆ ಸಲಹೆ ನೀಡಿದರು.

ಆಧುನಿಕ ಜೀವನ ಶೈಲಿ ಪರಿಣಾಮ ಮನುಷ್ಯ ಹೆಚ್ಚು ಒತ್ತಡಕ್ಕೆ ಒಳಗಾಗುತ್ತಿದ್ದಾನೆ. ಹೀಗಾಗಿ ಸರ್ವರು ಆರೋಗ್ಯದ ಕಡೆಗೆ ಗಮನ ಹರಿಸಬೇಕು. ಉತ್ತಮ ಜೀವನ ಶೈಲಿಯ ಮೂಲಕ ಆರೋಗ್ಯವಂತ ಕುಟುಂಬ ಮತ್ತು ಸಮಾಜ ನಿರ್ಮಿಸುವಂತೆ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮಧುಸೂದನ್ ರಾವ್, ಗೋಲ್ಡನ್ ಪಾರ್ಕ್ ಬಡಾವಣೆಯ ಜನರು ಸಹ ಗೋಲ್ಡ್‌ನಷ್ಟೇ ಪರಿಶುದ್ಧ. ಬಡಾವಣೆ ಸದಸ್ಯರು ಹೊಂದಾಣಿಕೆಯ ಮೂಲಕ ಸಮಾಜಮುಖಿ ಸೇವೆಗೆ ಅಣಿಯಾಗಿರುವುದು ಶ್ಲಾಘನೀಯ ಕಾರ್ಯ ಎಂದರು.

ಕಾರ್ಯಕ್ರಮದಲ್ಲಿ ಮೋಹನ ಮೋರೆ, ಮಂಜುನಾಥ ಜಾಧವ ಅವರಿಗೆ ಸನ್ಮಾನಿಸಿ, ಗೌರವಿಸಲಾಯಿತು. ಇದಕ್ಕೂ ಮೊದಲು ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ರಾಜು ಬಿರೇಜನವರ ಹಾಗೂ ಸುನೀಲ ಮೋರೆ ಇದ್ದರು.

ಈ ಸಂದರ್ಭದಲ್ಲಿ ರಾಘವೇಂದ್ರ ಜಾಧವ, ಶ್ರೀನಿವಾಸ ಜಾಧವ, ಶಿಕ್ಷಕ ರಂಗನಾಥ ವಾಲ್ಮೀಕಿ, ಎಂ.ಎಸ್.ಮೇಟಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು. ಶಿಬಿರದಲ್ಲಿ ಬಡಾವಣೆಯ ನೂರಾರು ಮಹಿಳೆಯರು, ಮಕ್ಕಳು ಮತ್ತು ವೃದ್ಧರನ್ನು ತಪಾಸಣೆ ಮಾಡಲಾಯಿತು.

130 ನಿವಾಸಿಗಳಿಗೆ ಹಕ್ಕುಪತ್ರ ವಿತರಣೆ

ಹುಬ್ಬಳ್ಳಿ: ಸೂರು ಇಲ್ಲದೇ ಕಷ್ಟದ ಜೀವನ ಸಾಗಿಸುತ್ತಿದ್ದ ಜನರಿಗೆ ಆಶ್ರಯ ಕೊಡುವ ಮೂಲಕ ಕ್ಷೇತ್ರದ ಜನರ ಕನಸು ನನಸು ಮಾಡಿದ ತೃಪ್ತಿ ನನಗಿದೆ ಎಂದು ಶಾಸಕ ಪ್ರಸಾದ ಅಬ್ಬಯ್ಯ ಹೇಳಿದರು.

ಸಂತೋಷ ನಗರದ ಗೃಹ ಕಚೇರಿಯಲ್ಲಿ ಶನಿವಾರ ಟಿಪ್ಪು ನಗರ ಹಾಗೂ ಮಾರುತಿ ನಗರದ 130 ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು.

ನನ್ನನ್ನು ಮೂರು ಬಾರಿ ಆಯ್ಕೆ ಮಾಡಿರುವ ಕ್ಷೇತ್ರದ ಜನತೆಯ ಋಣ ತೀರಿಸುವ ಕೆಲಸವನ್ನು ಮನೆಯ ಮಗನಾಗಿ ಸದಾ ಮಾಡುತ್ತಾ ಬಂದಿದ್ದೇನೆ. ಕ್ಷೇತ್ರದಲ್ಲಿ ಬರುವ ಸ್ಲಂ ನಿವಾಸಿಗಳಿಗೆ ಮುಂದಿನ ದಿನಗಳಲ್ಲಿ ಎಲ್ಲರಿಗೂ ಮನೆಗಳನ್ನುಒದಗಿಸುವ ಕೆಲಸ ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದರು.

ಟಿಪ್ಪು ನಗರ ಹಾಗೂ ಮಾರುತಿ ನಗರದ ಹಿರಿಯರ ಒತ್ತಡದಿಂದ ಆ ಭಾಗದ ಜನತೆಗೆ ಸೂರು ಕಲ್ಪಿಸಿ ಹಕ್ಕುಪತ್ರ ನೀಡಿದ್ದೇನೆ. ಫಲಾನುಭವಿಗಳು ನೆರೆಹೊರೆಯವರ ಜೊತೆ ಸಹಬಾಳ್ವೆಯಿಂದ ಬದುಕು ಸಾಗಿಸಬೇಕು. ಮನೆ ಮತ್ತು ಆವರಣದಲ್ಲಿ ಸ್ವಚ್ಛತೆ ಕಾಪಾಡಬೇಕು. ಎಲ್ಲರೂ ಕೂಡಿ ಬಾಳಿದರೆ ಜೀವನ ಸಂಸಾರ ಸುಂದರ ಸುಖ ಎಂಬುದನ್ನು ಎಂದಿಗೂ ಮರೆಯಬಾರದು ಎಂದು ಕಿವಿಮಾತು ಹೇಳಿದರು. ಈ ವೇಳೆ ಟಿಪ್ಪು ನಗರ ಮತ್ತು ಮಾರುತಿ ನಗರದ ಹಿರಿಯರಾದ ಮಹ್ಮದ್ ಯೂಸೂಫ್ ಹಾವೇರಿ, ಪಂಪಾಪತಿ ಉಪ್ಪಾರ, ಇಬ್ರಾಹಿಂ ಯಲಿಗಾರ, ಅಶೋಕ ಬಳ್ಳಾರಿ, ನಾಸೀರ್ ಆಸುಂಡಿ ಇತರರಿದ್ದರು.



ಹಿಂದೂ ಸಮ್ಮೇಳನದಲ್ಲಿ ಬೈಕ್ ರ್‍ಯಾಲಿ



ಧಾರವಾಡ: ಕೊಪ್ಪದಕೇರಿ ಹಿಂದೂ ಸಮ್ಮೇಳನ ಸಮಿತಿ ವತಿಯಿಂದ ಶನಿವಾರ ನಡೆದ ಬೈಕ್ ರ್‍ಯಾಲಿಗೆ ಸಂಘದ ಹಿರಿಯರಾದ ಡಾ. ಎಸ್.ಆರ್.ರಾಮನಗೌಡರ ಚಾಲನೆ ನೀಡಿದರು. ಕೆ.ಇ.ಬೋರ್ಡ್ ಶಾಲೆಯಿಂದ ಆರಂಭವಾದ ರ್‍ಯಾಲಿ ಶಿವಾಜಿ ವೃತ್ತ, ಕೊಂಡವಾಡ ಓಣಿ, ಜಿಲ್ಲಾಸ್ಪತ್ರೆ, ದುರ್ಗಾದೇವಿ ಗುಡಿ, ಸೈದಾಪುರ ಹಾಗೂ ಮರಾಠ ಕಾಲೋನಿ ಮೂಲಕ ಪುನಃ ಕೆ.ಇ.ಬೋರ್ಡ್‌ನಲ್ಲಿ ಸಂಪನ್ನಗೊಂಡಿತು. ಮುಖಂಡರಾದ ಮೋಹನ ರಾಮದುರ್ಗ, ಅಶೋಕ ಎತ್ತಿನಗುಡ್ಡ, ಅಮರನಾಥ ಟೇಕಾರೆ, ಅಶೋಕ ಪಾಟೀಲ, ವೀರೇಶ ತೋಟದ, ನಿತೀನ ರಾಮದುರ್ಗ, ಗುರು ಸಾದರಗಿ, ಮಂಜುನಾಥ ಚೊಳಪ್ಪನವರ ಅನೇಕರು ಇದ್ದರು.



ನವಲಗುಂದ: ಶಾಸಕ ಎನ್.ಹೆಚ್. ಕೋನರಡ್ಡಿ ಅವರ 62ನೇ ಜನ್ಮದಿನದ ಅಂಗವಾಗಿ ನಗರದ ಕಿತ್ತೂರಾಣಿ ಚೆನ್ನಮ್ಮ ವಸತಿ ನಿಲಯದ ವಿದ್ಯಾರ್ಥಿನಿಯರಿಗೆ ನವಲಗುಂದ ಮಹಿಳಾ ಬ್ಲಾಕ್ ಕಾಂಗ್ರೆಸ್ ವತಿಯಿಂದ ಹಣ್ಣು-ಹಂಪಲು ವಿತರಿಸಲಾಯಿತು. ನವಲಗುಂದ ಮಹಿಳಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ನಂದಿನಿ ಹಾದಿಮನಿ, ಸಂಗಮೇಶ ದೊಡ್ಡಮನಿ, ಶಿವಪುತ್ರ ಚಲವಾದಿ, ಸುನಂದಾ ವಡ್ಡರ, ರೇಖಾ ಚಲವಾದಿ, ನಝೀರಾ ಬೇಗಂ, ಪಾರಮ್ಮ ಅಳಗವಾಡಿ,ಶೈಲಾ ನರಗುಂದ, ಚಂದ್ರಶೇಖರ ಹಾದಿಮನಿ, ವಸತಿ ಶಾಲೆಯ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.

ಇಷ್ಟಲಿಂಗ ದೀಕ್ಷೆಗೆ ವರ್ಣ-ವರ್ಗ ಭೇದವಿಲ್ಲ: ಶ್ರೀಗಳು

ಉಪ್ಪಿನಬೆಟಗೇರಿ: ಜೀವನ ವಿಧಾನದ ನಡೆನುಡಿಯಲ್ಲಿ ಶುದ್ಧತೆಯನ್ನು ಸಾಧಿಸಿದವರೆಲ್ಲರೂ ಇಷ್ಟಲಿಂಗ ದೀಕ್ಷೆಯನ್ನು ಪಡೆಯಬಹುದಾಗಿದ್ದು, ಇಷ್ಟಲಿಂಗ ದೀಕ್ಷೆಯನ್ನು ಪಡೆಯಲು ವರ್ಣ-ವರ್ಗಗಳ ಭೇದವಿರುವುದಿಲ್ಲ ಎಂದು ವೀರಶೈವ ಧರ್ಮದ ಪಂಚಪೀಠಗಳಲ್ಲಿ ಒಂದಾದ ಕಾಶಿ ಜ್ಞಾನ ಪೀಠದ ಹಿರಿಯ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಅವರು ಉತ್ತರಪ್ರದೇಶದ ವಾರಾಣಸಿಯ ಧರ್ಮಪೀಠದಲ್ಲಿ ಪಶ್ಚಿಮ ಬಂಗಾಲದ ನದಿಯಾ ಜಿಲ್ಲೆಯ ಬನಮಾಲಿಪಾರ ಗ್ರಾಮ ನಿವಾಸಿಗಳಾದ ಸನಾತನ ಹಿಂದೂ ಧರ್ಮದ ರುದ್ರೇಶ ಬಿಸ್ವಾಸ್ ಮತ್ತು ರಕ್ತಿಮ್ ಜೋರ್ದಾರ್ ಎಂಬ ಇಬ್ಬರು ವಿದ್ಯಾರ್ಥಿಗಳಿಗೆ ಇಷ್ಟಲಿಂಗ ದೀಕ್ಷೆಯನ್ನು ಅನುಗ್ರಹಿಸಿ ಆಶೀರ್ವಚನ ನೀಡಿದರು. ದೀಕ್ಷೆಯು ಬದುಕಿನ ಚಿತ್ಕಳೆಯಾಗಿದೆ. ಶ್ರೀಗುರುವು ಕರುಣಿಸುವ ಇಷ್ಟಲಿಂಗದ ಅನುಸಂಧಾನದಲ್ಲಿ ಅಂತರಂಗದ ಸಂಪರ್ಕ ಸಾಧ್ಯವಾಗಿ ಅಲ್ಲಿ ಕಾಣಸಿಗುವ ಬಯಲಬೆಳಗಿನ ಮಹಾಪ್ರಕಾಶದಲ್ಲಿ ಜೀವಾತ್ಮನು ಪರಮಾತ್ಮನ ಸಾನ್ನಿಧ್ಯದಲ್ಲಿ ಶಾಶ್ವತಆನಂದವನ್ನು ಅನುಭವಿಸುವುದೇ ಮೋಕ್ಷ ಮಾರ್ಗದ ತಿರುಳಾಗಿದೆ ಎಂದೂ ಅವರು ಹೇಳಿದರು.



ಇಷ್ಟಲಿಂಗ ಧಾರಣೆ: ಪಶ್ಚಿಮ ಬಂಗಾಲದ ಯುವಕರಲ್ಲಿಯ ಇಷ್ಟಲಿಂಗಾರ್ಚನೆಯ ಆಸಕ್ತಿ ಮತ್ತು ಭಕ್ತಿಯ ಬದ್ಧತೆಯನ್ನು ಪರೀಕ್ಷಿಸಿದ ಕಾಶಿ ಜಗದ್ಗುರುಗಳವರು, ಉಭಯತರಿಗೆ ವೀರಶೈವ ಧರ್ಮ ಸಿದ್ಧಾಂತದಂತೆ ದೀಕ್ಷೆ ನೀಡಿ ಇಷ್ಟಲಿಂಗ ಧಾರಣೆಮಾಡಿ ಶಿವಪಂಚಾಕ್ಷರಿ ಮಹಾಮಂತ್ರವನ್ನು ಉಪದೇಶಮಾಡಿ ನಂತರ ಪೂಜೆ ಹಾಗೂ ಮಂತ್ರದ ವಿಧಿ ವಿಧಾನಗಳನ್ನು ತಿಳಿಸಿಕೊಟ್ಟರು.

ಹೆಚ್ಚಿನ ಅಧ್ಯಯನಕ್ಕಾಗಿ ಇಬ್ಬರಿಗೂ ಹಿಂದಿ ಭಾಷೆಯ ಶ್ರೀಸಿದ್ಧಾಂತ ಶಿಖಾಮಣಿ ಹಾಗು ಅಷ್ಟಾವರಣಗಳ ಮಹತ್ವ ಸಾರುವ ಗ್ರಂಥಗಳನ್ನು ಅನುಗ್ರಹಿಸಿ ಆಶೀರ್ವದಿಸಿದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಪಶ್ಚಿಮ ಬಂಗಾಳದಲ್ಲಿ ವೀರಶೈವ ಧರ್ಮ ಜಾಗೃತಿ ಕೈಂಕರ್ಯಕ್ಕೆ ತೆರೆದುಕೊಂಡು ಅಪೇಕ್ಷಿತರನ್ನು ಕಾಶಿಗೆ ಕರೆದುಕೊಂಡು ಬಂದು ಇಷ್ಟಲಿಂಗ ದೀಕ್ಷೆಯನ್ನು ಪಡೆಯುವಂತೆ ಸೂಚಿಸಿದರು.

ರುದ್ರೇಶ ಬಿಸ್ವಾಸ್ ಮತ್ತು ರಕ್ತಿಮ್ ಜೋರ್ದಾರ್ ಅವರು ಮಾತನಾಡಿ, ತಾವು ಇಲ್ಲಿಯವರೆಗೆ ಖುದ್ದಾಗಿ ಒಂದೂ ಬಾರಿ ಕಾಶಿ ಜಗದ್ಗುರುಗಳವರನ್ನು ಭೇಟಿಮಾಡಿಲ್ಲ, ಕೇವಲ ಫೇಸ್ಬುಕ್, ಇನ್‌ಸ್ಟಾಗ್ರಾಂ ಮತ್ತು ಯೂಟ್ಯೂಬ್ ಮುಖಾಂತರ ಕಾಶಿ ಜಗದ್ಗುರುಗಳವರ ಆಶೀರ್ವಚನಗಳನ್ನು ನಿರಂತರ ಆಲಿಸಿ ಸನಾತನ ವೀರಶೈವ ಧರ್ಮದ ಮಹತ್ವವನ್ನು ಅರಿತುಕೊಂಡು ಪೂರ್ಣ ಪ್ರಭಾವಿತರಾಗಿ ಇಷ್ಟಲಿಂಗ ದೀಕ್ಷೆ ಪಡೆದುಕೊಳ್ಳಲು ತೀರ್ಮಾನಿಸಿ ಕಾಶಿ ಧರ್ಮಪೀಠಕ್ಕೆ ಆಗಮಿಸಿದೆವು. ಅತ್ಯಂತ ಪ್ರೀತಿಯಿಂದ ಸ್ಪಂದನೆ ಮಾಡಿದ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಇಷ್ಟಲಿಂಗ ದೀಕ್ಷೆ ಅನುಗ್ರಹಿಸಿದ್ದರಿಂದ ಒಂದು ವಿಶಿಷ್ಟ ಚೈತನ್ಯ ನಮ್ಮೊಳಗನ್ನು ತುಂಬಿಕೊಂಡಿದೆ ಎಂದು ಭಾವತುಂಬಿ ನುಡಿದರು.

ರಾಷ್ಟ್ರದ ಹಿತಕ್ಕೆ ಎಲ್ಲರೂ ಸಂಘಟಿತರಾಗಿ: ಕಿರಣ ರಾಮ್

ಧಾರವಾಡ: ಹಿಂದೂ ಸಮಾಜವು ಕೇವಲ ಜಾತಿ-ಪಂಥಗಳ ಆಧಾರದ ಮೇಲೆ ವಿಭಜನೆಯಾಗದೆ, ರಾಷ್ಟ್ರದ ಹಿತಕ್ಕೆ ಸಂಘಟಿತವಾಗುವುದು ತುರ್ತು ಅಗತ್ಯವಿದೆ ಎಂದು ಯುವ ಬ್ರಿಗೇಡ್ ರಾಜ್ಯ ಪ್ರಕಲ್ಪ ಪ್ರಮುಖ ಕಿರಣ ರಾಮ್ ಅಭಿಪ್ರಾಯ ವ್ಯಕ್ತಪಡಿಸಿದರು.

ಯಾಲಕ್ಕಿ ಶೆಟ್ಟರ್ ಕಾಲೋನಿ ಹಿಂದೂ ಸಮ್ಮೇಳನ ಸಮಿತಿ ಕಾಲೋನಿಯ ಸ್ವಾಮಿ ವಿವೇಕಾನಂದ ಶಾಖಾ ಸ್ಥಾನದಲ್ಲಿ ಶನಿವಾರ ಹಮ್ಮಿಕೊಂಡ ಬೃಹತ್ ಹಿಂದೂ ಸಮ್ಮೇಳನದಲ್ಲಿ ಮುಖ್ಯ ಭಾಷಣ ಮಾಡಿದ ಅವರು, ಹಿಂದೂ ಧರ್ಮಕ್ಕೆ ಅವಸಾನ ಇಲ್ಲ ಎಂದರು.

ರಾಷ್ಟ್ರಪ್ರೇಮವೇ ಶಕ್ತಿ: ಹಿಂದೂ ಧರ್ಮ ಜಾತಿ, ಮತ-ಪಂಥದ ಆಚರಣೆಯಲ್ಲ, ಅದೊಂದು ಜೀವನ ಪದ್ಧತಿ. ದೇಶದ ಪ್ರತಿಯೊಬ್ಬ ನಾಗರಿಕನೂ ರಾಷ್ಟ್ರ ಪ್ರೇಮ ಮೈಗೂಡಿಸಿಕೊಂಡಾಗ ಭಾರತವು ಜಗತ್ತಿಗೆ ದಾರಿದೀಪ ಆಗುವುದರಲ್ಲಿ ಯಾವುಶೇ ಸಂಶಯವಿಲ್ಲ ಎಂದು ಹೇಳಿದರು.

ಸಮಾಜದಲ್ಲಿರುವ ಮೇಲು-ಕೀಳು ಎಂಬ ಭಾವನೆಗಳು ತೊಡೆದುಹಾಕಿ, ನಾವೆಲ್ಲ ಒಂದೇ ಎಂಬ ಭಾವನೆ ಮೂಡಬೇಕು. ಅಸ್ಪೃಶ್ಯತೆ ಮತ್ತು ಭೇದ ಭಾವಗಳಿಗೆ ಹಿಂದೂ ಧರ್ಮದಲ್ಲಿ ಎಂದಿಗೂ ಸ್ಥಾನವಿಲ್ಲ ಎಂದು ಮಾರ್ಮಿಕವಾಗಿ ನುಡಿದರು.



» ಬೃಹತ್ ಹಿಂದೂ ಸಮ್ಮೇಳನ

ಭಾರತದಲ್ಲಿ ಸನಾತನ ಧರ್ಮ ಉಳಿದ ಪರಿಣಾಮ ಜಗತ್ತಿನ ಶ್ರೀಮಂತ ರಾಷ್ಟ್ರವಾಗಿ ಪುನಃ ಜಗತ್ತಿಗೆ ಮಾರ್ಗದರ್ಶನ ಮಾಡುವ ಹಂತಕ್ಕೆ ಬೆಳೆದಿದೆ. ನಾವು ಎಲ್ಲಿವರೆಗೂ ಒಗ್ಗಟ್ಟಿನಿಂದ ಇರಲ್ಲವೋ ಅಲ್ಲಿವರೆಗೆ ಒಡೆದಾಳುವ ಷಡ್ಯಂತ್ರ ನಿಲ್ಲುವುದಿಲ್ಲ ಎಂದು ಎಚ್ಚರಿಸಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘ ನೂರು ವರ್ಷ ಪೂರೈಸಿದ ಹಿನ್ನೆಲೆ ರಾಷ್ಟ್ರವ್ಯಾಪಿ 84 ಸಾವಿರ ಹಿಂದೂ ಸಮ್ಮೇಳನ ಮಾಡಲು ನಿರ್ಧರಿಸಿದೆ. ಈ ಸಮ್ಮೇಳನಗಳಲ್ಲಿ ಜಾತಿ, ಮತ, ಪಂಥ, ಭೇದ ಮರೆತು ಹಿಂದೂಗಳು ಒಗ್ಗೂಡಬೇಕು ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಸಮಿತಿ ಅಧ್ಯಕ್ಷ ವೀರೇಶ ಕೆಲಗೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಣೆಬೆನ್ನೂರು ರಾಮಕೃಷ್ಣಾಶ್ರಮದ ಸ್ವಾಮಿ ಪ್ರಕಾಶಾನಂದ ಸರಸ್ವತಿ ಮಹಾರಾಜ ಸಾನ್ನಿಧ್ಯ ವಹಿಸಿದ್ದರು. ಸಮಿತಿಯ ಉಪಾಧ್ಯಕ್ಷೆ ವೀಣಾ ಬಿರಾದಾರ ಸ್ವಾಗತಿಸಿದರು.

ಛತ್ರಪತಿ ಶಿವಾಜಿ ಮೆರವಣಿಗೆ ಮೇಲೆ ಕಲ್ಲು ತೂರಾಟ ಪ್ರಕರಣ

ಫೆ.26ರಂದು ಬೃಹತ್ ಹೋರಾಟಕ್ಕೆ ನಿರ್ಣಯ

ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜಯ ಜಯಂತಿ ಮೆರವಣಿಗೆ ಸಾಗುವ ಸಂದರ್ಭದಲ್ಲಿ ನಗರದ ಪಂಕಾ ಮಸೀದಿಯಿಂದ ಕಲ್ಲು,ಚಪ್ಪಲಿ ತೂರಿದ ಘಟನೆ ಖಂಡಿಸಿ ಹಾಗೂ ಘಟನೆ ನಡೆದ ಸಂದರ್ಭದಲ್ಲಿ ಇದ್ದ ಮಸೀದಿ ಮುಖ್ಯಸ್ಥರು, ಮಸೀದಿಯಲ್ಲಿದ್ದವರನ್ನು ಕೂಡಲೇ ಪೊಲೀಸ್ ಇಲಾಖೆ ಬಂಧನ ಮಾಡಬೇಕು ಎಂದು ಒತ್ತಾಯಿಸಿ ಸಕಲ ಹಿಂದೂ ಸಮಾಜದಿಂದ ಫೆ.26ರಂದು ಬೃಹತ್ ಹೋರಾಟಕ್ಕೆ ನಿರ್ಣಯ ಕೈಗೊಳ್ಳಲಾಯಿತು.

ನಗರದ ಚರಂತಿಮಠ ಶಿವಾನುಭವ ಮಂಟಪದಲ್ಲಿ ಭಾನುವಾರ ಸಂಜೆ ಸಕಲ ಹಿಂದೂ ಸಮಾಜದ ಸಭೆ ನಡೆಸಿ ಹಿಂದೂ ಧರ್ಮ, ಸಮಾಜದಲ್ಲಿ ಒಗ್ಗಟ್ಟು ಇರಬೇಕು. ಜಯಂತಿ ಅಂದ ಮಾತ್ರ ಕೇವಲ ಒಂದೇ ವರ್ಗದ ಜನ ಭಾಗವಹಿಸಬಾರದು. ಸಕಲ ಹಿಂದೂಗಳು ಪಾಲ್ಗೊಂಡು ಜಯಂತಿ ಆಚರಣೆ ಮಾಡಬೇಕು. ಇಲ್ಲವಾದಲ್ಲಿ ಹಿಂದೂ ಸಮಾಜದ ಮೇಲೆ ಈ ರೀತಿ ಘಟನೆಗಳು ನಡೆಯುತ್ತಲೆ ಇರುತ್ತೇವೆ.

ಛತ್ರಪತಿ ಶಿವಾಜಿ ಜಯಂತಿ ವೇಳೆ ಕಲ್ಲು ತೂರಾಟ ಮಾಡುವ ಮುನ್ನ ನಾವೆಲ್ಲ ಎಚ್ಚೆತ್ತುಕೊಳ್ಳಲಿಲ್ಲ, ನಗರದಲ್ಲಿ ಪ್ಯಾಲಿಸ್ತೇನ ಧ್ವಜ ಹಾರಾಟ ಮಾಡಿದಾಗಲು ಮೌನವಾಗಿ ಕುಳಿತಿದ್ದೇವೆ. ಈಗ ಇಂತಹ ಘಟನೆ ನಡೆಯುತ್ತಿವೆ ಎಂದು ಆಕ್ರೋಶ ಸಭೆಯಲ್ಲಿದ್ದವರು ಹಲವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಈಗ ಧರ್ಮದ ಪ್ರಶ್ನೆ ಬಂದಿದೆ. ತಾರ್ಕಿಕ್ ಅಂತ್ಯ ಹಾಡುವ ಕಾಲ ಸನ್ನಿಹಿತವಾಗಿದೆ. ಹೋರಾಟ ಮಾಡಿ ತಕ್ಕ ಉತ್ತರ ನೀಡಬೇಕಿದೆ. ಇಂತಹ ದೊಡ್ಡ ಘಟನೆ ನಡೆದರೂ ಮಸೀದಿ ಸಮಿತಿ ಅಧ್ಯಕ್ಷರು, ಸದಸ್ಯರ ಮೇಲೆ ಪ್ರಕರಣ ದಾಖಲಿಸಿಲ್ಲ, ಕಲ್ಲು, ಚಪ್ಪಲಿ ಒಗೆಯುವ ಸಂಸ್ಕೃತಿ ಎಲ್ಲಿಯದ್ದು? ಇದನ್ನು ಪ್ರಶ್ನಿಸಬಾರಾದಾ?, ಹೋರಾಟ ಮಾಡಬಾರದಾ?. ಹಿಂದೂ ಕಾರ್ಯಕರ್ತರನ್ನು ಟಾರ್ಗೆಟ್ ಮಾಡುವುದು ತರವಲ್ಲ. ನಾವು ಪ್ರತ್ಯುತ್ತರ ನೀಡಬೇಕು. ಅಂದಾಗ ಇದೆಲ್ಲದಕ್ಕೂ ಕಡಿವಾಣ ಬೀಳುತ್ತದೆ ಎಂದು ಅನೇಕ ಮುಖಂಡರು ಅಭಿಪ್ರಾಯ ವ್ಯಕ್ತಪಡಿಸಿದರು.

ಸಭೆಯ ಬಳಿಕ ಮಾಹಿತಿ ನೀಡಿದ ಹಿಂದೂ ಸಮಾಜದ ಮುಖಂಡ ಅಶೋಕ ಲಿಂಬಾವಳಿ, ಫೆ.26ರಂದು ಬಾಗಲಕೋಟೆ ನಗರದಲ್ಲಿ ಬೃಹತ್ ಹೋರಾಟವನ್ನು ಹಿಂದೂ ಸಮಾಜದಿಂದ ಹಮ್ಮಿಕೊಳ್ಳಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಮಸೀದಿಯಲಿದ್ದ ಅನವಶ್ಯಕ ಕಿಡಿಗೇಡಿಗಳ ಬಂಧನವಾಗಬೇಕು. ಸುಮಾರು 50 ವರ್ಷಗಳಿಂದ ಯಾವುದೇ ಹಿಂದೂ ಸಮಾಜದ ಮೆರವಣಿಗೆ ಹೊರಟರೆ ಪಂಕಾ ಮಸೀದಿಯಿಂದಲೇ ಸೋಡಾ ಬಾಟಲಿ, ಕಲ್ಲು,ಚಪ್ಪಲಿ ತೂರಿ ಬರುತ್ತವೆ. ಹೀಗಾಗಿ ಸರ್ಕಾರ ಈ ಮಸೀದಿ ನಿಷೇಧ ಮಾಡಬೇಕು. ಮಸೀದಿ ಮುಖ್ಯಸ್ಥರನ್ನು ಬಂಧಿಸಬೇಕು ಎಂದು ಆಗ್ರಹವಿದೆ ಎಂದರು.

ಫೆ.26ರಂದು ಬೆಳಗ್ಗೆ 10.30ಕ್ಕೆ ನಗರದ ಅಂಬಾಭವಾನಿ ದೇವಸ್ಥಾನದಿಂದ ದೊಡ್ಡ ಮಟ್ಟದ ಹೋರಾಟ ಆರಂಭವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಲಿದೆ ಎಂದು ಹೇಳಿದರು.

ಶಿವಾಜಿ ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆದ ಸ್ಥಳಕ್ಕೆ ಫೆ.27ರಂದು ಬಸನಗೌಡ ಪಾಟೀಲ ಯತ್ನಾಳ ಭೇಟಿ ನೀಡಲಿದ್ದಾರೆ ಎಂದು ಹೇಳಿದರು. ಸಂಸದರಾದ ಗೋವಿಂದ ಕಾರಜೋಳ, ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿ.ಪ ಸದಸ್ಯರಾದ ಪಿ.ಎಚ್.ಪೂಜಾರ, ಹನುಮಂತ ನಿರಾಣಿ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಮಹೇಶ ಅಥಣಿ, ಜಿ.ಎನ್.ಪಾಟೀಲ,ಕಿರಣ್ ಪವಾಡಶೆಟ್ಟರ, ಅಶೋಕ ಲಿಂಬಾವಳಿ, ಅಶೋಕ ಮುತ್ತಿನಮಠ, ಕುಮಾರಸ್ವಾಮಿ ಹಿರೇಮಠ, ಸುರೇಶ ಮಜ್ಜಗಿ, ಚಂದ್ರಶೇಖರ ಉಕ್ಕಲಿ,ಬಸವರಾಜ ಕಟಗೇರಿ, ಯಲ್ಲಪ್ಪ ಬೆಂಡಿಗೇರಿ, ಸುರೇಶ ಮಾಗಿ, ಶ್ರೀನಾಥ ಸಜ್ಜನ, ಸುಜಾತ ಶಿಂಧೆ, ಶಶಿಕಲಾ ಮಜ್ಜಗಿ ಸೇರಿದಂತೆ ಇತರರು ಇದ್ದರು.



> ಶಿವಾಜಿ ಮಹಾರಾಜರ ಪುತ್ಥಳಿ ಕೂಡಲೇ ಸ್ಥಾಪನೆ ಮಾಡಬೇಕು. ಈಗಾಗಲೇ ಮೂರ್ತಿ ಆಗಮಿಸಿ ವರ್ಷಗಳೇ ಗತಿಸಿವೆ. ಅಕ್ರಮ ಮಸೀದಿಗಳ ಬಗ್ಗೆ ಹೋರಾಟ ಮಾಡಬೇಕು. ಬಾಗಲಕೋಟೆ ನಗರದಲ್ಲಿರುವ ಕಲ್ಲು ತೂರಾಟ ಪ್ರಕರಣ ಖಂಡನೀಯ. ಫೆ.26 ರಂದು ಬೃಹತ್ ಪ್ರತಿಭಟನೆ, ಹೋರಾಟದಲ್ಲಿ ಎಲ್ಲರೂ ಭಾಗವಹಿಸಬೇಕು.
>
> ■ ನಾರಾಯಣಸಾ ಭಾಂಡಗೆ ರಾಜ್ಯಸಭಾ ಸದಸ್ಯ

> ಶಿವಾಜಿ ಮೆರವಣಿಗೆ ವೇಳೆ ಕಲ್ಲು ತೂರಾಟ, ಚಪ್ಪಲಿ ತೂರಿದ್ದು ದೇಶದಲ್ಲಿ ದೊಡ್ಡ ಸದ್ದು ಮಾಡಿದೆ. ಇಂತಹ ಘಟನೆಯಲಿ ಭಾಗಿಯಾದವರನ್ನು ಕೂಡಲೇ ಸರ್ಕಾರ ಬಂಧಿಸಿ ಕ್ರಮ ವಹಿಸಬೇಕು.
>
> ■ ಗೋವಿಂದ ಕಾರಜೋಳ, ಸಂಸದ ಚಿತ್ರದುರ್ಗ

ಸಭೆಯ ನಿರ್ಣಯಗಳು

- ಫೆ.26ರಂದು ಸಕಲ ಹಿಂದೂ ಸಮಾಜದಿಂದ ಹೋರಾಟಕ್ಕೆ ಕರೆ
- ಚಪ್ಪಲಿ ಕಲ್ಲು, ಎಸೆದವರ ಬಂಧನ ಆಗಬೇಕು
- ಪಂಕಾ ಮಸೀದಿ ನಿಷೇಧ ಮಾಡಬೇಕು
- ಘಟನೆ ನಡೆದ ಮಸೀದಿ ಮುಖ್ಯಸ್ಥರು, ಸಮಿತಿಯವರನ್ನು ಬಂಧನ ಮಾಡಿ ಕೇಸ್ ದಾಖಲಿಸಬೇಕು
- ಮತ್ತೊಮ್ಮೆ ಶಿವಾಜಿ ಜಯಂತಿ ಅದ್ದೂರಿಯಾಗಿ ಆಚರಣೆ

ಹಿಂದೂ ಕಾರ್ಯಕರ್ತರನ್ನು ಬಂಧಿಸಿದರೆ ರಾಜ್ಯಾದ್ಯಂತ ಹೋರಾಟ: ಶ್ರೀರಾಮುಲು

ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆಯ ಮೇಲೆ ಕಲ್ಲು ಎಸೆದಿರುವ ಕಿಡಿಗೇಡಿಗಳನ್ನು ಬಂಧನ ಮಾಡಿ ಕ್ರಮಕೈಗೊಳ್ಳಿ, ಹಿಂದೂ ಕಾರ್ಯಕರ್ತರನ್ನು ಬಂಧನ ಮಾಡಿದರೆ ರಾಜ್ಯಾದ್ಯಂತ ಹೋರಾಟ ಮಾಡಬೇಕಾಗುತ್ತದೆ ಎಂದು ಮಾಜಿ ಉಪಮುಖ್ಯಮಂತ್ರಿ ಬಿ.ಶ್ರೀರಾಮುಲು ಪೊಲೀಸ್ ಇಲಾಖೆಗೆ ಎಚ್ಚರಿಕೆ ನೀಡಿದರು.



ನವನಗರದಲ್ಲಿ ಖಾಸಗಿ ಕಾರ್ಯಕ್ರಮದಲ್ಲಿ ಭಾಗಹಿಸುವ ಮುನ್ನ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆಯ ಮೇಲೆ ಕಲ್ಲು ಎಸೆದಿರುವ ಕಿಡಿಗೇಡಿಗಳನ್ನು ಬಂಧನ ಮಾಡುವ ಮೂಲಕ ಅವರ ಮೇಲೆ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದಾಗ ಇಂತಹ ಘಟನೆಗಳು ಆಗುವುದಿಲ್ಲ, ಕಾಂಗ್ರೆಸ್ ಸರ್ಕಾರವಿದ್ದಾಗ ಇಂತಹ ಘಟನೆ ನಡೆಯುತ್ತವೆ. ಘಟನೆ ಬಗ್ಗೆ ಪೊಲೀಸರು ಕೈ ಕಟ್ಟಿ ಕೂತಿದ್ದಾರೆ. ಪೊಲೀಸರ ನಡೆ ಹಾಗೂ ಸರ್ಕಾರದ ವಿರುದ್ಧ ಹೋರಾಟ ಮಾಡಲು ಬಿಜೆಪಿ ರಾಜ್ಯಾಧ್ಯಕ್ಷರ ಗಮನಕ್ಕೆ ತರುವ ಜತೆಗೆ ಅಮಿತ್ ಶಾ ಅವರಿಗೂ ಕೂಡ ಪತ್ರ ಬರೆದು ತಿಳಿಸಲಾಗುವುದು ಎಂದು ಹೇಳಿದರು.

ಪ್ರಮೋದ ಮುತಾಲಿಕ್ ಹಾಗೂ ಪುನೀತ್ ಕೆರೆಹಳ್ಳಿ ಅವರಿಗೆ ಬಾಗಲಕೋಟೆ ಜಿಲ್ಲಾ ಪ್ರವೇಶ ನಿರ್ಬಂಧ ಹೇರಿರುವುದು, ಕನ್ನೇರಿ ಶ್ರೀಗಳನ್ನು ಕೂಡ ಜಿಲ್ಲೆಗೆ ಬರದಂತೆ ಬ್ಯಾನ್ ಮಾಡಿದ್ದರು. ಮುತಾಲಿಕ್ ಹಾಗೂ ಪುನೀತ್‌ಗೆ ನಿರ್ಬಂಧ ಹೇರಿದ್ದು ಸರಿಯಲ್ಲ, ಬ್ಯಾನ್ ಕೂಡಲೇ ತೆರವುಗೊಳಿಸಬೇಕು ಎಂದು ಒತ್ತಾಯಿಸಿದರು. ಸರ್ಕಾರ ಕತ್ತೆ ಕಾಯ್ತಿದೆಯಾ? ಲಾ ಆ್ಯಂಡ್ ಆರ್ಡರ್ ಫೇಲ್ ಆಗಿದೆ. ಗೃಹ ಮಂತ್ರಿಗಳು ಏನು ಗೊತ್ತಿಲ್ಲ ಅಂತಾರೆ. ಈ ಸರ್ಕಾರ ಬಂದ ಮೇಲೆ ರಾಜ್ಯದಲ್ಲಿ ಗಬ್ಬೆದ್ದು ಹೋಗಿದೆ. ವಿಜಯಪುರ ಹಾಗೂ ಬಾಗಲಕೋಟೆ ಜನರಿಗೆ ವಿಶೇಷವಾಗಿ ದೇಶ ಭಕ್ತಿ ಇದೆ. ಛತ್ರಪತಿ ಶಿವಾಜಿ ಮಹಾರಾಜರ ವಿಚಾರದಲ್ಲಿ ಬಹಳ ದಂಗೆ ಏಳ್ತಾರೆ. ಕಣಕಣದಲ್ಲೂ ಶಿವಾಜಿ ಅವರ ಕಿಚ್ಚಿದೆ. ಅವರ ಪರ ಘೋಷಣೆ ಹಾಕೋದನ್ನು ಬಿಡೋದಿಲ್ಲ, ಗೃಹಮಂತ್ರಿಗಳೇ ಏನು ಮಾಡುತ್ತಿದ್ದೀರಿ. ಗುಂಡಾಗಳು ರಾಜ್ಯವನ್ನು ಆಳುತ್ತಿದ್ದಾರೆ. ನಿಮ್ಮ ಹತ್ತಿರ ಅಧಿಕಾರ ಇರಬಹುದು ಅಧಿಕಾರ ಶಾಶ್ವತವಲ್ಲ, ನಾವು ಎಲ್ಲವನ್ನೂ ಎದುರಿಸುತ್ತೇವೆ. ದೇಶದ ಹಿಂದೂ ಕಾರ್ಯಕರ್ತರು ಒಗ್ಗಟ್ಟಾಗಿ ಹೋರಾಟ ಮಾಡುತ್ತೇವೆ ಎಂದರು.

ಕಲ್ಲು ತೂರಾಟದಲ್ಲಿ ಇನ್ನೂ ಸಾಕಷ್ಟು ಜನ ಬಂಧನವಾಗಬೇಕು. ಅದನ್ನು ಬಿಟ್ಟು ನಮ್ಮ ಹಿಂದೂ ಕಾರ್ಯಕರ್ತರನ್ನು ಬಂಧಿಸುತ್ತಿದ್ದಾರೆ. ಶಿವಾಜಿ ಮಹಾರಾಜರನ್ನು ಹೈದರಾಲಿಗೆ ಹೋಲಿಸಲು ಆಗುವುದಿಲ್ಲ, ಶಿವಾಜಿ ಮಹಾರಾಜರು ನಮ್ಮ ಕಿಂಗ್. ಯಾರಿಂದಲೂ ಹಿಂದುತ್ವ ಅಳಿಸಲು ಸಾಧ್ಯವಿಲ್ಲ,ಈ ಘಟನೆಯಲ್ಲಿ ಇಂಟಲಿಜೆನ್ಸಿ ಸಂಪೂರ್ಣ ಫೇಲ್ ಆಗಿದೆ ಎಂದು ಹೇಳಿದರು.

ಮೆರವಣಿಗೆಯಲ್ಲಿ ಕಲ್ಲು ತೂರಿಬರುವುದರ ಹಿಂದೆ ಮಸೀದಿ ಕಮಿಟಿಯಲ್ಲಿದ್ದವರು ಶಾಮೀಲಾಗಿದ್ದಾರೆ. ಇದೊಂದು ಪೂರ್ವ ನಿಯೋಜಿತ ಕೃತ್ಯವಾಗಿದೆ. ಇದರ ವಿರುದ್ಧ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡುತ್ತೇವೆ ಎಂದರು.

ಬಿಜೆಪಿ ಶಾಸಕ ಚಂದ್ರು ಲಮಾಣಿ ಲೋಕಾಯುಕ್ತ ಬಲೆಗೆ ಬಿದ್ದ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಐದು ಲಕ್ಷ ಪಡೆಯುವಂತಹ ಮನುಷ್ಯ ಅಲ್ಲ, ಐದು ಲಕ್ಷವನ್ನು ಯಾವ ಶಾಸಕರಾದರೂ ತೆಗೆದುಕೊಳ್ಳುತ್ತಾರಾ? ಅವರು ವೈದ್ಯರು. ಅವರಿಗೆ ಅವಶ್ಯಕತೆ ಇಲ್ಲ, ಇದು ವ್ಯವಸ್ಥಿತ ಪೂರ್ವನಿಯೋಜಿತವಾಗಿ ಮಾಡಿದ್ದು, ಅವರನ್ನು ಸಿಲುಕಿಸುವ ಕೆಲಸ ಮಾಡಿದಾರೆ ಎಂದು ಹೇಳಿದರು.

ಕಿರುಸುದ್ದಿ

ಕೃಷಿ ಹೊಂಡದಲ್ಲಿ ಕಾಲು ಜಾರಿ ಬಿದ್ದು ಬಾಲಕ ಸಾವು

ಕುಷ್ಟಗಿ: ತಾಲೂಕಿನ ಕಂದಕೂರು ಗ್ರಾಮದ ಕೃಷಿ ಹೊಂಡದಲ್ಲಿ ಕಾಲುಜಾರಿ ಬಿದ್ದು, ಬಾಲಕ ಮೃತಪಟ್ಟಿರುವ ಘಟನೆ ಭಾನುವಾರ ನಡೆದಿದೆ. ಮೃತ ಬಾಲಕ ಕಂದಕೂರು ಗ್ರಾಮದ ಸಮರ್ಥ ತಂದೆ ಶರಣಬಸವ ಪೊಲೀಸ್ ಪಾಟೀಲ್ (13) ಎಂದು ಗುರುತಿಸಲಾಗಿದೆ. ಭಾನುವಾರ ಶಾಲೆಗೆ ರಜೆ ಇರುವುದರಿಂದ ಸ್ನೇಹಿತರೊಂದಿಗೆ ಹೊರಗಡೆ ತಿರುಗಾಡಲು ಹೋಗಿದ್ದಾಗ. ಆಕಸ್ಮಿಕವಾಗಿ ಕೃಷಿ ಹೊಂಡದಲ್ಲಿ ಕಾಲು ಜಾರಿ ಬಿದ್ದಿದ್ದಾನೆ. ಸ್ನೇಹಿತರು ಕೂಗಾಡುತ್ತ ಅಕ್ಕಪಕ್ಕದವರಿಗೆ ಮಾಹಿತಿ ನೀಡಿದ್ದಾರೆ. ನಂತರ ಸಾರ್ವಜನಿಕರು ಬಂದು ನೋಡುವಷ್ಟರಲ್ಲಿ ಮೃತಪಟ್ಟಿದ್ದಾನೆ. ಶವವನ್ನು ಕುಷ್ಟಗಿ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಮರಣೋತ್ತರ ಪರಿಕ್ಷೆಗೆ ಒಳಪಡಿಸಿದ್ದಾರೆ. ಮೃತ ಬಾಲಕನು ತಳವಗೇರಾ ಗ್ರಾಮದ ಆದರ್ಶ ವಿದ್ಯಾಲಯದಲ್ಲಿ ಏಳನೇಯ ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದನು ಎಂದು ತಿಳಿದು ಬಂದಿದೆ.



ಕಾರು ಅಪಘಾತ: ಮಹಿಳೆ ಸಾವು

ಬಾಗಲಕೋಟೆ: ನವನಗರದ ತೋಟಗಾರಿಕೆ ವಿವಿ ಮುಂಭಾಗದ ಸಿಮಿಕೇರಿ ಬೈಪಾಸ್‌ಗೆ ಹೋಗುವ ರಸ್ತೆಯಲ್ಲಿ ಕಾರು ಪಲ್ಟಿಯಾಗಿ, ಬಿಟಿಡಿಎ ಸಹಾಯಕ ಕಾರ್ಯನಿರ್ವಾಹಕ ಅಭಿಂತರ ಸೋಮಲಿಂಗ ನೋಟಗಾರ ಅವರ ಪತ್ನಿ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಭಾನುವಾರ ಸಂಜೆ ಸಂಭವಿಸಿದೆ. ಮೃತಪಟ್ಟ ಮಹಿಳೆಯನ್ನು ದೀಪಿಕಾ ಸೋಮಲಿಂಗ ನೋಟಗಾರ (38) ಎಂದು ಗುರುತಿಸಲಾಗಿದೆ. ದೀಪಿಕಾ ಅವರು, ತಮ್ಮ ಪುತ್ರ, ಸಹೋದರನೊಂದಿಗೆ ಗದ್ದನಕೇರಿ ಕ್ರಾಸ್‌ಗೆ ತರಕಾರಿ ತರಲು ಕಾರಿನಲ್ಲಿ ಹೊರಟಿದ್ದರು. ಈ ವೇಳೆ ಚಾಲಕನ ನಿಯಂತ್ರಣ ತಪ್ಪಿ, ರಸ್ತೆ ವಿಭಜಕ್ಕೆ ಕಾರು ಡಿಕ್ಕಿ ಹೊಡೆದಿದ್ದು, ಇದರಿಂದ ಕಾರು ಪಲ್ಟಿಯಾಗಿದೆ. ತಲೆಗೆ ತೀವ್ರ ಪೆಟ್ಟು ಬಿದ್ದ ಹಿನ್ನೆಲೆಯಲ್ಲಿ ದೀಪಿಕಾ ಅವರು, ಸ್ಥಳದಲ್ಲಿಯೇ ಮೃತಪಟ್ಟಿದ್ದು, ಘಟನೆಯಲ್ಲಿ ಪುತ್ರ ಹಾಗೂ ಸಹೋದರ ಗಾಯಗೊಂಡಿದ್ದಾರೆ. ಅವರನ್ನು ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಎಇಇ ಸೋಮಲಿಂಗ ನೋಟಗಾರ ಅವರ ಪತ್ನಿ ದೀಪಿಕಾ ಅವರ ನಿಧನಕ್ಕೆ ಬಿಟಿಡಿಎ ಮುಖ್ಯ ಅಭಿಯಂತರರು, ಕಾರ್ಯನಿರ್ವಾಹಕ ಅಭಿನಂತರರು, ಸಹಾಯಕರ ಕಾರ್ಯ ನಿರ್ವಾಹಕ ಅಭಿಯಂತರರು, ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಇತರ ಎಲ್ಲ ಅಧಿಕಾರಿ-ಸಿಬ್ಬಂದಿಗಳು ಸಂತಾಪ ಸೂಚಿಸಿದ್ದಾರೆ. ಮೃತರ ಅಂತ್ಯಕ್ರಿಯೆ, ಸ್ವಗ್ರಾಮ ಬಾದಾಮಿ ತಾಲೂಕಿನ ಮುತ್ತಲಗೇರಿಯಲ್ಲಿ ಸೋಮವಾರ ಬೆಳಗ್ಗೆ 9 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಶಿವಾಜಿ ಜಯಂತಿ ಮೆರವಣಿಗೆಯಲ್ಲಿ ಕಲ್ಲು ತೂರಾಟ ಪ್ರಕರಣ

ತಪ್ಪಿತಸ್ಥರು ಯಾರೇ ಇದ್ದರೂ ಕ್ರಮ: ಜಾರಕಿಹೊಳಿ

ಬಾಗಲಕೋಟೆ: ನಗರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ನಡೆದ ಕಲ್ಲು ತೂರಾಟ, ಚಪ್ಪಲಿ ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದು ಖಚಿತ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.



ನವನಗರದಲ್ಲಿ ಖಾಸಗಿ ಕಾರ್ಯಕ್ರಮದಲ್ಲಿ ಭಾಗಹಿಸುವ ಮುನ್ನ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.


ಮುಸ್ಲಿಂ ಇರಲಿ ಹಿಂದೂ ಇರಲಿ ಯಾರೇ ತಪ್ಪು ಮಾಡಿದರೂ ಕಾನೂನು ಕ್ರಮ ಆಗಲಿದೆ. ಘಟನೆಗೆ ಸಂಬಂಧಿಸಿದ ವಿಡಿಯೋಗಳನ್ನು ಪೊಲೀಸರು ಕೂಲಂಕಷವಾಗಿ ಪರಿಶೀಲಿಸುತ್ತಿದ್ದು, ತಪ್ಪಿತಸ್ಥರನ್ನು ಗುರುತಿಸಿ ಸಮರ್ಪಕವಾಗಿ ಕ್ರಮ ಕೈಗೊಳ್ಳುತ್ತಾರೆ ಎಂದು ತಿಳಿಸಿದರು.

ರಾಜಕೀಯ ಬೆಳವಣಿಗೆಗಳ ಕುರಿತು ಮಾತನಾಡಿದ ಸಚಿವರು, ತಿಂಗಳಲ್ಲಿ ಎರಡು-ಮೂರು ಬಾರಿ ದೆಹಲಿಗೆ ಹೋಗುತ್ತೇವೆ. ಅಲ್ಲಿ ಇಲಾಖೆ ಕಾರ್ಯಕ್ರಮಗಳ ಜತೆಗೆ ಪಕ್ಷದ ಹೈಕಮಾಂಡ್‌ರನ್ನು ಭೇಟಿ ಮಾಡುತ್ತೇವೆ. ಪಕ್ಷದ ಬೆಳವಣಿಗೆ ಮತ್ತು ರಾಜ್ಯದಲ್ಲಿ ಉಂಟಾದ ರಾಜಕೀಯ ಗೊಂದಲ ಕುರಿತು ಚರ್ಚೆ ಮಾಡಿದ್ದೇವೆ. ಈ ಬಗ್ಗೆ ಶೀಘ್ರದಲ್ಲಿ ನಿರ್ಣಯ ಕೈಗೊಳ್ಳುತ್ತೇವೆ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ ಎಂದು ತಿಳಿಸಿದರು.

ರಾಜ್ಯದಲ್ಲಿ ನಡೆದಿರುವ ಗೊಂದಲ ನಿವಾರಣೆಯಾಗದಿದ್ದರೆ ಪಕ್ಷಕ್ಕೆ ಕಾರ್ಯಕರ್ತರಿಗೆ ತೊಂದರೆಯಾಗಲಿದೆ ಎಂದು ಎಐಸಿಸಿ ಅಧ್ಯಕ್ಷರಿಗೆ ತಿಳಿಸಿದ್ದೇವೆ. ಅದನ್ನು ನಿವಾರಿಸುವುದಾಗಿ ಭರವಸೆ ನೀಡಿದ್ದಾರೆ ಎಂದರು. ವಿದೇಶ ಪ್ರವಾಸಕ್ಕೆ ಶಾಸಕರು ಹೋಗುವುದು ನಿರಂತರ ಇರುತ್ತದೆ ಅದೊಂದು ವ್ಯವಸ್ಥೆ. ಫಾರಿನ್ ಟೂರ್ ರಾಜಕೀಯಕ್ಕೆ ಲಿಂಕ್ ಮಾಡುವ ಅಗತ್ಯವಿಲ್ಲ ಎಂದರು. ರಾಜ್ಯದ ಬಜೆಟ್ ನಂತರ ಮುಖ್ಯಮಂತ್ರಿ ಬದಲಾವಣೆ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಸಚಿವರು, ಬದಲಾವಣೆ ಗೊತ್ತಿಲ್ಲ. ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿ ಉಳಿಯುತ್ತಾರೆ ಎಂಬ ಲೆಕ್ಕಾಚಾರವಿದೆ. ಅಧಿಕಾರ ಹಂಚಿಕೆಯ ಬಗ್ಗೆ ಅರ್ಧಾ ಗಿರ್ಧಾ ಮಾತು ನಮಗೆ ಕೇಳಿಲ್ಲ, ಮಿಕ್ಕಿದ್ದೆಲ್ಲ ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದರು.

ಕಲ್ಲು ತೂರಿದವರನ್ನು ಗಡಿಪಾರು ಮಾಡಿ: ಮುತಾಲಿಕ್

ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆ ಸಮಯದಲ್ಲಿ ಕಲ್ಲು, ಚಪ್ಪಲಿ ಎಸೆದವರನ್ನು ಗಡಿಪಾರು ಮಾಡುವುದಿಲ್ಲ, ಯಾರು ದೇಶವನ್ನು ಒಗ್ಗೂಡಿಸುವುದು, ಜಾಗೃತಿ ಮೂಡಿಸುತ್ತಾರೆ ಅಂತಹವರನ್ನು ಗಡಿಪಾರು ಮಾಡಲು ಆದೇಶ ಮಾಡುವ ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೆ ನನ್ನ ಧಿಕ್ಕಾರವಿದೆ ಎಂದು ಶ್ರೀರಾಮ ಸೇನೆಯ ಮುಖಂಡ ಪ್ರಮೋದ್ ಮುತಾಲಿಕ್ ಹೇಳಿದರು.



ನವನಗರದಲ್ಲಿ ಖಾಸಗಿ ಕಾರ್ಯಕ್ರಮದಲ್ಲಿ ಭಾಗಹಿಸುವ ಮುನ್ನ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ನನಗೆ ಜಿಲ್ಲಾ ಪ್ರವೇಶಕ್ಕೆ ನಿರ್ಬಂಧ ಹೇರಿರುವುದು ಖಂಡನೀಯ. ನಿರ್ಬಂಧ ಹೇರಿರುವ ನಾಚಿಗೇಡಿತನ ಸರ್ಕಾರ, ನಮ್ಮ ಸ್ವಾತಂತ್ರ್ಯ ಹರಣ ಮಾಡುತ್ತಿದೆ ಎಂದು ಆಕ್ರೋಶ ಹೊರಹಾಕಿದರು.

ನಾನು ಮಾತನಾಡುವ ನಂತರ ಏನಾದರೂ ವಿರೋಧ ಹೇಳಿದರೆ ನನ್ನ ಮೇಲೆ ಕೇಸ್ ಹಾಕಲಿ. ಆದರೆ, ಮಾತನಾಡುವುದಕ್ಕೆ ಅವಕಾಶ ಕೂಡಲ್ಲ ಅಂದರೆ, ಕಾಂಗ್ರೆಸ್‌ನವರು ಸಂವಿಧಾನದ ವಿರೋಧಿಗಳು. ಡಾ.ಅಂಬೇಡ್ಕರ್ ಅವರು ನಮಗೆ ಸ್ವಾತಂತ್ರ್ಯ ಕೊಟ್ಟಿದ್ದಾರೆ. ಮಾತನಾಡಲು ಅವಕಾಶ ಕೊಟ್ಟಿದ್ದಾರೆ ಎಡದು ಹೇಳಿದರು.

ಇವತ್ತು ಕಲ್ಲು ಎಸೆಯುವರನ್ನು ತಡೆಯುವ ಪ್ರಕ್ರಿಯೆ ನಿಮ್ಮಲ್ಲಿ ಇಲ್ಲ, ದೇಶದ್ರೋಹಿ ಪಾಕಿಸ್ತಾನ ಜಿಂದಾಬಾಂದ್ ಎನ್ನುವವರು ತಡೆಯುವುದಕ್ಕೆ ಆಗುತ್ತಿಲ್ಲ, ಅಧಿಕಾರಕ್ಕಾಗಿ ಮತ ಬ್ಯಾಂಕ್ ಮಾಡಿ, ಈ ದೇಶ ಹಾಳು ಮಾಡುತ್ತಿದ್ದೀರಿ ಎಂದು ಕಾಂಗ್ರೆಸ್ ಸರ್ಕಾರ ವಿರುದ್ಧ ವಾಗ್ದಾಳಿ ನಡೆಸಿದರು.

ಬಾಗಲಕೋಟೆಯಲ್ಲಿ ನನಗೆ ನಿರ್ಬಂಧ ಹಾಕಲಾಗಿದೆ. ಆದರೆ, ಫೆ.24ರಂದು ನಡೆಯುವ ಹಿಂದೂ ಸಮ್ಮೇಳನದಲ್ಲಿ ಭಾಗವಹಿಸುತ್ತೇನೆ. ಬಂಧನ ಮಾಡಿದರೆ ಮಾಡಲಿ ಎಂದು ಜಿಲ್ಲಾ ಆಡಳಿತಕ್ಕೆ ಸವಾಲು ಹಾಕಿದರು.

ಸಾಧನೆಗೆ ಕಠಿಣ ಪರಿಶ್ರಮ ಅಗತ್ಯ: ಸುನೀಲಗೌಡ ಪಾಟೀಲ

ವಿಜಯಪುರ: ಸಾಧನೆಗೆ ಅಸಾಧ್ಯವಾದದು ಯಾವುದು ಇಲ್ಲ, ಸಾಧಿಸಬೇಕೆಂಬ ಛಲವಿದ್ದರೆ ಸಾಧನೆ ನಮ್ಮದಾಗುತ್ತದೆ. ಸಾಧನೆಗೆ ಕೇವಲ ಬುದ್ದಿವಂತಿಕೆ ಸಾಕಾಗುವುದಿಲ್ಲ, ಗೆದ್ದೆ ತಿರುತ್ತೇನೆಂಬ ದೃಢವಾದ ಛಲ ಮತ್ತು ಅಪಾರ ಕಠಿಣ ಪರಿಶ್ರಮ ಮತ್ತು ಸಹನೆ ಅಗತ್ಯವಾಗಿದೆ ಎಂದು ವಿಧಾನ ಪರಿಷತ್ತಿನ ಶಾಸಕ ಸುನೀಲಗೌಡ ಪಾಟೀಲ ಹೇಳಿದರು.



ತಾಲೂಕಿನ ಕಗ್ಗೋಡ ಗ್ರಾಮದ ಸರ್ಕಾರಿ ಆರ್.ಎಂ.ಎಸ್.ಎ. ಪ್ರೌಢಶಾಲೆಯ ವಿಜ್ಞಾನ ಪ್ರಯೋಗಾಲಯ ಮತ್ತು ವಾರ್ಷಿಕ ಸ್ನೇಹ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಲ್ಲಿ ಹೊಸತನ ಮೂಡಿಸುವುದೇ ಶಿಕ್ಷಣ. ಉತ್ತಮ ಅಂಕಗಳ ಪಡೆಯುವುದರ ಜೊತೆಗೆ ಬುದ್ದಿಶಕ್ತಿ ಬೆಳೆಸಿಕೊಂಡರೆ ಅವಕಾಶಗಳು ಹೆಚ್ಚು ದೊರೆಯುತ್ತವೆ. ಕೇವಲ ಕನಸು ಕಂಡರೆ ಸಾಲದು ಅದನ್ನು ನನಸಾಗಿಸಲು ಅವಿರಥವಾಗಿ ಶ್ರಮಿಸಬೇಕು. ದೃಢ ಸಂಕಲ್ಪ ಮತ್ತು ಆತ್ಮವಿಶ್ವಾಸದಿಂದ ಸೋಲುಗಳನ್ನು ಮೆಟ್ಟುನಿಂತು ಕಲಿಕೆಯನ್ನು ಮುಂದುವರಿಸುವುದೇ ಯಶಸ್ಸಿನ ಹಾದಿಯಾಗಿದೆ ಎಂದು ಹೇಳಿದರು.

ರಾಜ್ಯ ಪ್ರಶಸ್ತಿ ಪುರಸ್ಕೃತ ಶಾಂತವೀರ ಪ.ಪೂ. ಕಾಲೇಜಿನ ಉಪನ್ಯಾಸಕ ಮಲ್ಲಿಕಾರ್ಜುನ ಅವಟಿ ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ಸಾಧನೆಗೆ ಸಾಕಷ್ಟು ಅವಕಾಶಗಳಿಗೆ ಸೋಲನ್ನೇ ಗೆಲುವಿನ ಮೆಟ್ಟಿಲುಗಳನ್ನಾಗಿ ಮಾಡಿಕೊಳ್ಳುವುದೇ ನಿಜವಾದ ಸಾಧಕ. ವಿದ್ಯಾರ್ಥಿಗಳಿಗೆ ಆತ್ಮಬಲ ತುಂಬಿ ಅವರನ್ನು ಬೆಳೆಸಿದರೆ ಈ ದೇಶಕ್ಕೆ ಅವರು ಬಹುದೊಡ್ಡ ಕೊಡುಗೆ ಕೊಡಬಲ್ಲರು ಎಂದರು.

ಸಾನ್ನಿಧ್ಯ ವಹಿಸಿದ ಷ.ಬ್ರ. ಶಿವಪ್ರಕಾಶ ಶಿವಾಚಾರ್ಯರು ಬ.ಬಾಗೇವಾಡಿ, ಗ್ರಾಮೀಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ತಳವಾರ ಮಾತನಾಡಿದರು. ಅಧ್ಯಕ್ಷತೆಯನ್ನು ಮುಖ್ಯೋಪಾಧ್ಯಾಯ ಎಫ್.ಎಂ. ಹತ್ತರಕಿಹಾಳ ವಹಿಸಿದ್ದರು. ಕಾಸಯ್ಯ ಹಿರೇಮಠ, ಎಸ್‌ಡಿಎಂಸಿ ಅಧ್ಯಕ್ಷ ಕಾಂತು ಇಂಡಿ, ಉಪಾಧ್ಯಕ್ಷ ಜ್ಯೋತಿ ಬಿಸನಾಳ, ಬಸವರಾಜ ಕೊಂಡಗೂಳಿ,ಬಸವರಾಜ ತಳವಾರ, ರಮೇಶ ರೆಡ್ಡಿ, ಕುಮಾರ ರಾಠೋಡ, ಗ್ರಾಪಂ ಅಧ್ಯಕ್ಷ ರಮೇಶ ಸಜ್ಜನ, ಸದಸ್ಯರಾದ ಸಾಹೇಬಗೌಡ ಪಾಟೀಲ, ಶಿವಾನಂದ ಅವಟಿ, ಶಾಂತಪ್ಪ ದೇಸಾಯಿ, ಶಿವಾನಂದ ಬಾಗಲಕೋಟ, ಮುಖಂಡರಾದ ಅಶೋಕ ಉಕುಮನಾಳ, ಡಾ.ಬಿ.ಎಲ್.ಬಿರಾದಾರ, ಮಲ್ಲಿಕಾರ್ಜುನ ಮಂಗಾನವರ, ಗುರುಸಿದ್ದಪ್ಪ ಬಿಸನಾಳ ಮುಂತಾದವರು ಇದ್ದರು. ಸುರೇಶ ಕುಶಾಲಕರ ಸ್ವಾಗತಿಸಿದರು. ಎಸ್.ಬಿ. ಜ್ಯೋತಿ ನಿರೂಪಿಸಿದರು. ಸಂತೋಷ ಗಿಡ್ಡಿ ವಂದಿಸಿದರು.

ಸಿಎಂ, ಪಿಎಂ ನೀಡಿದ ಪಕ್ಷ ಜೆಡಿಎಸ್: ಎಂ.ಕೃಷ್ಣಾರೆಡ್ಡಿ

ಬೆಳಗಾವಿ: ಜೆಡಿಎಸ್ ಪಕ್ಷದ 25 ವರ್ಷಗಳ ಸುದೀರ್ಘ ಇತಿಹಾಸದಲ್ಲಿ ರಾಜ್ಯ ಮತ್ತು ದೇಶದ ಜನರಿಗೆ ಅಪಾರ ಕೊಡುಗೆ ನೀಡಿದೆ. ರಾಜ್ಯಕ್ಕೆ ಮುಖ್ಯಮಂತ್ರಿ ಮತ್ತು ದೇಶಕ್ಕೆ ಪ್ರಧಾನಿಗಳನ್ನು ನೀಡಿರುವ ರಾಜ್ಯದ ಏಕೈಕ ಪಕ್ಷ ಜೆಡಿಎಸ್ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಎಂ.ಕೃಷ್ಣಾರೆಡ್ಡಿ ಅವರು ಹೇಳಿದರು.



ಜಾತ್ಯತೀತ ಜನತಾದಳ (ಜೆಡಿಎಸ್) ವತಿಯಿಂದ ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಯುವ ಜನತಾದಳ ಬೃಹತ್ ಸಮಾವೇಶ ಉದ್ಘಾಟಿಸಿ, ಮಾತನಾಡಿದ ಅವರು, ರಾಜ್ಯದಲ್ಲಿ ಹಲವು ನಾಯಕರು ಪ್ರಾದೇಶಿಕ ಪಕ್ಷವನ್ನು ಕಟ್ಟಿದ್ದರು. ಯಾವ ಪಕ್ಷವೂ 5 ವರ್ಷಗಳವರೆಗೆ ಉಳಿಯಲಿಲ್ಲ, ಆದರೆ, ಜೆಡಿಎಸ್ ಪಕ್ಷ ಸುದೀರ್ಘ 25 ವರ್ಷ ಪೂರೈಸಿರುವುದು ಅವಿಸ್ಮರಣೀಯ. ಇದನ್ನು ಇನ್ನೂ 25 ವರ್ಷಗಳ ವರಗೆ ಕೊಂಡೊಯ್ಯಲು ಕಾರ್ಯಕರ್ತರು ಒಗ್ಗಟ್ಟಾಗಿ ಕೆಲಸ ಮಾಡಬೇಕು ಎಂದು ಹೇಳಿದರು.

ರಾಜ್ಯದಲ್ಲಿ ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ. ರಾಜ್ಯದಲ್ಲಿ ಯಾವ ಸರ್ಕಾರವು ಇದುವರೆಗೆ ಮಾಡದಷ್ಟು ಸಾಲ ಈ ಸರ್ಕಾರ ಮಾಡಿದೆ. ಹೀಗಾಗಿ ರಾಜ್ಯದ ಆಡಳಿತ ಸಂಪೂರ್ಣ ಕುಸಿದಿದೆ ಎಂದು ಆರೋಪಿಸಿದರು.

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಈಗಿನಿಂದಲೇ ಜೆಡಿಎಸ್ ಕಾರ್ಯಕರ್ತರು ಸನ್ನದ್ಧರಾಗಬೇಕು. ನಿಮ್ಮಲ್ಲಿರುವ ತಾರತಮ್ಯ ಮರೆತು ಪಕ್ಷ ಸಂಘಟನೆಗೆ ಮುಂದಾಗಬೇಕು. 2028ರ ರಾಜ್ಯಸಭೆ ಚುನಾವಣೆಲ್ಲಿ ಬಿಜೆಪಿ ಮತ್ತು ಜೆಡಿಎಸ್ ನೇತೃತ್ವದ ಎನ್.ಡಿ.ಎ ಮೈತ್ರಿಕೂಟ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಭವಿಷ್ಯ ನುಡಿದರು.

ಸಮಾವೇಶಕ್ಕೂ ಮೊದಲು ಜೆಡಿಎಸ್ ಯುವ ಕಾರ್ಯಕರ್ತರು ನಗರದ ಸಿಪಿಎಡ್ ಮೈದಾನದಿಂದ, ಗಾಂಧಿ ಭವನದವರೆಗೂ ಬೈಕ್ ರ್‍ಯಾಲಿ ನಡೆಸಿದರು.

ಮಾಜಿ ಸಚಿವ ಅಲ್ಕೋಡ ಹನುಮಂತ, ಮುಖಂಡ ಪಂಚನಗೌಡ ದ್ಯಾಮನಗೌಡರ, ಮಾಜಿ ಶಾಸಕ ವೀರಭದ್ರಪ್ಪ ಹಾಲಹರ, ಜಿಲ್ಲಾಧ್ಯಕ್ಷ ಶಂಕರ ಮಾಡಲಗಿ, ಸೌರಭ ಚೋಪ್ರಾ, ವಿಠ್ಠಲ ಗಡ್ಡಿ, ಪಂಚನಗೌಡ ದ್ಯಾಮನಗೌಡರ, ಅಶೋಕ ಪಾಟೀಲ, ಯುವ ಘಟಕ ಅಧ್ಯಕ್ಷ ಬಾಳಗೌಡ ಪಾಟೀಲ, ಕಾಡಗೌಡ ಪಾಟೀಲ, ಪ್ರಕಾಶ ಸೋನವಾಲ್ಕರ್, ಸುನೀಲ್ ವೇರನೇಕರ್, ಜಾಜು ರೊಟ್ಟಿ, ರಾಮು ರಜಪೂತ್, ನಗರದ ಅಧ್ಯಕ್ಷ ಪ್ರಮೋದ್ ಪಾಟೀಲ, ಸೇರಿದಂತೆ ಮುಖಂಡರುಗಳು ಸಾವಿರಾರೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಕಾಂಗ್ರೆಸ್ ಹೈಕಮಾಂಡ್ ಕ್ಷಮೆ ಕೇಳಲಿ: ಜೋಶಿ

ಧಾರವಾಡ: ಕಾಂಗ್ರೆಸ್ ಪಕ್ಷ ಎಐ ಕಮಿಟ್‌ನಲ್ಲಿ ಮಾಡಿದ ಗಲಾಟೆ ದೇಶವೇ ತಲೆ ತಗ್ಗಿಸುವಂತಾಗಿದೆ. ಸೋನಿಯಾ ಗಾಂಧಿ, ಪ್ರಿಯಾಂಕಾ ವಾದ್ರಾ, ಮಲ್ಲಿಕಾರ್ಜುನ ಖರ್ಗೆ ನಾಡಿನ ಜನರಲ್ಲಿ ಕ್ಷಮೆ ಕೇಳಲಿ ಎಂದು ಸಚಿವ ಪ್ರಹ್ಲಾದ ಜೋಶಿ ಆಗ್ರಹ ಮಾಡಿದರು.



ಭಾನುವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ರಾಹುಲ್ ಗಾಂಧಿ ಅವರ ಮಾರ್ಗದರ್ಶನದಲ್ಲಿ ಗುಂಡಾ ವರ್ತನೆ ತೋರಿದ್ದನ್ನು ಅಖಿಲೇಶ್ ಯಾದವ್ ಹಾಗೂ ಇಂಡಿ ಘಟಬಂಧನ್ ಕೂಡ ತೀವ್ರವಾಗಿ ಖಂಡಿಸಿದೆ ಎಂದು ಪ್ರಶ್ನೆಗೆ ಉತ್ತರಿಸಿದರು.

ಮುಖ್ಯಮಂತ್ರಿ ಟ್ವಿಟ್ ವಿಚಾರಕ್ಕೆ ಪ್ರತಿಕ್ರಿಯಿಸಿ, ಕಾಂಗ್ರೆಸ್ ಹೈಕಮಾಂಡ್ ಸಂಸ್ಕೃತಿ ಬಿಟ್ಟಿಲ್ಲ. ನಾನು ಸಿಎಂ ಮತ್ತು ಡಿಸಿಎಂ ಪರವಾಗಿ ಮಾತನಾಡುತ್ತಿಲ್ಲ. ಅವರಲ್ಲಿ ಏನು? ನಡೆದಿದೆಯೋ ಮುಖ್ಯಮಂತ್ರಿಗಳು ಅದನ್ನು ಟ್ವಿಟ್ ಮಾಡಿದ್ದಾರೆ ಎಂದು ಹೇಳಿದರು.

ಅಮೇಥಿಯಿಂದ ಸೋತರೂ, ಕೇರಳಕ್ಕೆ ಬಂದು ಗೆದ್ದರು. ಎಲ್ಲಿ ಮುಸ್ಲಿಂ ಮತಗಳು ಇರುತ್ತವೆಯೋ ಅಲ್ಲಿ ಮುಸ್ಲಿಂರ ದಾರಿ ತಪ್ಪಿಸಿ, ಮತ ಪಡೆಯುವ ಕಾರ್ಯ ಬಹು ಹಿಂದಿನಿಂದ ನಡೆದಿದೆ. ಸಿಎಂ ಮತ್ತು ಡಿಸಿಎಂ ಭೇಟಿಗೂ ಅವಕಾಶ ನೀಡುತ್ತಿಲ್ಲ ಎಂದರು.

ಸ್ಪಷ್ಟ ಮಾಹಿತಿ ಇಲ್ಲ

ಶಿರಹಟ್ಟಿ ಬಿಜೆಪಿ ಶಾಸಕ ಚಂದ್ರು ಲಮಾಣಿ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದ ಬಗ್ಗೆ ಪ್ರತಿಕ್ರಿಯಿಸಿದ ಜೋಶಿ, ಅದರ ಬಗ್ಗೆ ನನಗೆ ಪೂರ್ತಿ ಮಾಹಿತಿ ಇಲ್ಲ, ಅದರ ಸಂಪೂರ್ಣ ಮಾಹಿತಿ ಪಡೆಯುತ್ತೇನೆ. ಜನಪ್ರತಿನಿಧಿಗಳು ಬಹಳಷ್ಟು ಶುದ್ಧ ಹಸ್ತರಾಗಿರಬೇಕು. ಚಂದ್ರು ಲಮಾಣಿ ತಪ್ಪು ಮಾಡಿದ್ದಾರೋ ಇಲ್ಲವೋ ಎಂದು ಹೇಳಲು ಆಗುವುದಿಲ್ಲ. ನನಗೆ ಸ್ಪಷ್ಟ ಮಾಹಿತಿಯೇ ಇಲ್ಲ. ಇದರ ಸತ್ಯಾಸತ್ಯತೆ ತಿಳಿದು ಮಾತನಾಡುತ್ತೇನೆ. ಮಾಹಿತಿ ನೀಡಲು ಜಿಲ್ಲಾ ಅಧ್ಯಕ್ಷರಿಗೆ, ಸಿ.ಸಿ.ಪಾಟೀಲಗೆ ಹೇಳಿದ್ದಾಗಿಯೂ ಜೋಶಿ ತಿಳಿಸಿದರು.

ಗಂಗಾಬಾಯಿ ಪಾಟೀಲ ಪಂಚಭೂತಗಳಲ್ಲಿ ಲೀನ

ವಿಜಯಪುರ: ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ, ಕೃಷಿ ಮಾರುಕಟ್ಟೆ ಸಚಿವರ ತಾಯಿ ಶ್ರೀಮತಿ ಗಂಗಾಬಾಯಿ ಸಿದ್ದರಾಮಪ್ಪ ಪಾಟೀಲ (84) ಇವರು ಭಾನುವಾರ ನಸುಕಿನಲ್ಲಿ ನಿಧರಾಗಿದ್ದು, ಸಂಜೆ ಅಂತ್ಯಕ್ರಿಯೆ ನಡೆಯಿತು.



ಭಾನುವಾರ ಸೂರ್ಯೋದಯಕ್ಕೆ ಮುನ್ನವೇ ಗಂಗಾಬಾಯಿ ಅವರ ನಿಧನರಾಗಿದ್ದು, ಸಾರ್ವಜನಿಕರ ಅಂತಿಮ ದರ್ಶನಕ್ಕೆ ಸಚಿವ ಶಿವಾನಂದ ಪಾಟೀಲ ಅವರ ಜಮಖಂಡಿ ರಸ್ತೆಯಲ್ಲಿರುವ ತೋಟದ ಮನೆಯಲ್ಲಿ ವ್ಯವಸ್ಥೆ ಮಾಡಲಾಗಿತ್ತು.

ಸಂಜೆ 4-30ಕ್ಕೆ ಅಂತಿಮ ವಿಧಿವಿಧಾನಗಳ ಬಳಿಕ ಮೃತರ ಕೊನೆಯ ಪುತ್ರರಾದ ಕರ್ನಾಟಕ ರಾಜ್ಯ ಸಾವಯವ ಪ್ರಮಾಣನ ಸಂಸ್ಥೆಯ ಮಾಜಿ ಅಧ್ಯಕ್ಷ ವಿಜುಗೌಡ ಪಾಟೀಲ ಅವರ ತೋಟದ ಮನೆ ಆವರಣದಲ್ಲಿ ಅಂತ್ಯ ಸಂಸ್ಕಾರ ನೆರವೇರಿತು.

ನಿಧನದ ಸುದ್ದಿ ತಿಳಿದು ವಿವಿಧ ಮಠಾಧೀಶರು, ಮಾಜಿ-ಹಾಲಿ ವಿವಿಧ ಸಂಸದರು, ಶಾಸಕರು, ರಾಜಕೀಯ ನಾಯಕರು, ಗಣ್ಯರು ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದ ಸಾರ್ವಜನಿಕರು, ಹಿರಿಯರಾದ ಗಂಗಾಬಾಯಿ ಅವರ ಅಂತಿಮ ದರ್ಶನ ಪಡೆದರು. ಆಲಗೂರು ಪಂಚಮಸಾಲಿ ಪೀಠದ ಜಗದ್ಗುರುಗಳಾದ ಡಾ.ಮಹಾದೇವ ಶ್ರೀಗಳು, ಮುಗಳಖೋಡದ ಶ್ರೀಗಳು, ಮನಗೂಳಿ ಹಿರೇಮಠದ ಶ್ರೀಗಳು, ಚಿಮ್ಮಲಗಿ, ಮಸೂತಿ ಸೇರಿದಂತೆ ವಿವಿಧ ಮಠಗಳ ಪೀಠಾಧಿಪತಿಗಳು, ರೈತ ಪರ ಹೋರಾಟಗಾರ ಶಶಿಕಾಂತ ಗುರೂಜಿ ಹಾಗೂ ಇತರರು ಮೃತರ ಅಂತಿಮ ದರ್ಶನ ಪಡೆದು, ಮೃತರ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

ವಿಧಾನಸಭೆ ಉಪಾಧ್ಯಕ್ಷರಾದ ರುದ್ರಪ್ಪ ಲಮಾಣಿ, ಸಂಸದ ರಮೇಶ ಜಿಗಜಿಣಗಿ, ಕರ್ನಾಟಕ ರಾಜ್ಯ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷರಾದ ಶಾಸಕ (ಅಪ್ಪಾಜಿ) ಸಿ.ಎಸ್.ನಾಡಗೌಡ, ಶಾಸಕರಾದ ಜೆ.ಟಿ.ಪಾಟೀಲ, ಅಶೋಕ ಮನಗೂಳಿ, ರಾಜುಗೌಡ ಪಾಟೀಲ ಕುದರಿಸಾಲವಾಡಗಿ, ಸುನಿಲಗೌಡ ಪಾಟೀಲ, ಮಾಜಿ ಸಚಿವರಾದ ಎಸ್.ಆರ್.ಪಾಟೀಲ, ಎಸ್.ಕೆ. ಬೆಳ್ಳುಬ್ಬಿ, ಮುರುಗೇಶ ನಿರಾಣಿ, ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಜೆಡಿಎಸ್ ಮುಖಂಡರಾದ ಅಪ್ಪುಗೌಡ ಪಾಟೀಲ (ಮನಗೂಳಿ), ರೈತ ಮುಖಂಡರಾದ ಚುನ್ನಪ್ಪ ಪೂಜಾರಿ, ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಕಾಂಗ್ರೆಸ್ ಹಾವೇರಿ ಜಿಲ್ಲಾಧ್ಯಕ್ಷರಾದ ಸಂಜೀವ ನೀರಲಗಿ, ಗಡ್ಡದದೇವರಮಠ, ವಿಜಯಪುರ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಲೋಣಿ, ಬಿಜೆಪಿ ರಾಜ್ಯ ಮುಖಂಡ ಉಮೇಶ ಕಾರಜೋಳ ಸೇರಿದಂತೆ ಸಾವಿರಾರು ಗಣ್ಯರು ಹಾಗೂ ಅಪಾರ ಸಂಖ್ಯೆಯಲ್ಲಿ ಸಾರ್ವಜನಿಕರು ಅಂತಿಮ ದರ್ಶನ ಪಡೆದರು.

ಹೊನಲು-ಬೆಳಕಿನ ಅಂತಾರಾಷ್ಟ್ರೀಯ ಕುಸ್ತಿ ಪಂದ್ಯಾವಳಿ

ಮಹಿಳಾ ಕುಸ್ತಿಗೆ ಜನತೆ ಫಿದಾ

ರಬಕವಿ-ಬನಹಟ್ಟಿ: ಬನಹಟ್ಟಿಯ ಶ್ರೀ ಕಾಡಸಿದ್ದೇಶ್ವರ ದೇವಾಲಯ ಕುಸ್ತಿ ಮೈದಾನದಲ್ಲಿ ಭಾನುವಾರ ರಾತ್ರಿ ನಡೆದ ಅಂತಾರಾಷ್ಟ್ರೀಯ ಮಟ್ಟದ ಜಂಗಿ ನಿಕಾಲಿ ಕುಸ್ತಿ ಪಂದ್ಯಗಳು ಪ್ರೇಕ್ಷಕರ ಗಮನ ಸೆಳೆದವು. ಸಂಜೆ 4 ಗಂಟೆಗೆ ಪ್ರಾರಂಭಗೊಂಡ ಕುಸ್ತಿಗಳು ರಾತ್ರಿ 9 ರವರೆಗೆ ನಡೆದವು.



ಭಾರತೀಯ ಕುಸ್ತಿ ಕಮಿಟಿ ಜಂಟಿ ಕಾರ್ಯದರ್ಶಿ, ರಾಜ್ಯ ಕುಸ್ತಿ ಕಮಿಟಿ ಅಧ್ಯಕ್ಷ ಬೆಳ್ಳಿಪಾಡಿ ಗುಣರಂಜನ್ ಶೆಟ್ಟಿ ಮಾತನಾಡಿ, ಕುಸ್ತಿ ಪಂದ್ಯಗಳೂ ಇನ್ನೂ ಗ್ರಾಮೀಣ ಪ್ರದೇಶದಲ್ಲಿ ಜೀವಂತವಾಗಿವೆ. ದೇಸಿ ಕ್ರೀಡೆಯಾದ ಕುಸ್ತಿಗೆ ಮತ್ತು ಪೈಲ್ವಾನರಿಗೆ ಪ್ರೋತ್ಸಾಹ ನೀಡಬೇಕಾಗಿದೆ. ಸುಸಜ್ಜಿತವಾದ ಗರಡಿ ಮನೆಗಳ ನಿರ್ಮಾಣ ಕೂಡಾ ಅಗತ್ಯವಾಗಿದೆ. ಪ್ರತಿ ಮನೆಯಲ್ಲೊಬ್ಬ ಕ್ರೀಡಾಪಟು ತಯಾರಾಗಬೇಕು ಅಂದಾಗ ಮಾತ್ರ ಆರೋಗ್ಯವಂತ ದೇಶ ಭಾರತವಾಗುವದೆಂದರು.

ಕಾರ್ಯಕ್ರಮ ಆಯೋಜನೆ ಮಾಡಿದ ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದ ಅಧ್ಯಕ್ಷ ಕೀರ್ತಿ ಗಣೇಶ ಮಾತನಾಡಿ, ನೇಕಾರ ನಗರದಲ್ಲಿ ಅಷ್ಟೇ ಪ್ರಮಾಣದ ಕುಸ್ತಿ ಅಭಿಮಾನಿಗಳಿದ್ದು, ಇಲ್ಲಿ ಆಡುವ ಕುಸ್ತಿಗಳು ದಸರಾ ಕುಸ್ತಿಯಷ್ಟೇ ಮಹತ್ವ ಪಡೆಯುತ್ತಿರುವದು ಜಗಜ್ಜಾಹಿರವಾಗಿದೆ. ನಿರಂತರ ಇಂತಹ ಗ್ರಾಮೀಣ ಕ್ರೀಡೆಗಳನ್ನು ನಡೆಸುವ ಕಾರ್ಯವಾಗಬೇಕೆಂದರು.

10ಕ್ಕೂ ಅಧಿಕ ಮಹಿಳಾ ಕುಸ್ತಿಗಳು ಪ್ರೇಕ್ಷಕರ ಗಮನ ಸೆಳೆದವು. ಒಟ್ಟಾರೆ ನೆರೆದಿದ್ದ ಸಾವಿರಾರು ಕುಸ್ತಿ ಪ್ರೇಮಿಗಳಿಗೆ ವಿಶೇಷ ರಸದೌತನ ನೀಡುವಲ್ಲಿ ಕಾರ್ಯಕ್ರಮ ಕಾರಣವಾಯಿತು.

ರಾಹುಲ್ ಕಲೂತಿ, ರಾಹುಲ್ ನಾಡಗೌಡ, ಖ್ಯಾತ ಜ್ಯೋತಿಷಿ ಶಂಕರ ಗುರೂಜಿ, ರಾಜು ದೇಸಾಯಿ, ಚನವೀರಪ್ಪ ಹಾದಿಮನಿ, ಬ್ರಿಜ್‌ಮೋಹನ ಡಾಗಾ, ಡಾ. ಎಸ್.ಎಂ. ಮಟೋಳಿ, ಶಂಕರ ಕೆಸರಗೊಪ್ಪ, ರಾಜು ಭದ್ರನ್ನವರ, ಶ್ರೀಶೈಲ ದಭಾಡಿ, ಈರಪ್ಪ ಹಿಪ್ಪರಗಿ, ರವೀಂದ್ರ ಬಾಡಗಿ, ಕಿರಣ ಕರಲಟ್ಟಿ, ಬುಡಾನ್ ಜಮಾದಾರ ಸೇರಿದಂತೆ ರಬಕವಿ-ಬನಹಟ್ಟಿ ಸುತ್ತಲಿನ ಗ್ರಾಮೀಣ ಪ್ರದೇಶದ ಕುಸ್ತಿ ಪ್ರಿಯರಿದ್ದರು. 61 ಕುಸ್ತಿ ಜೋಡಿಗಳು ಇಲ್ಲಿ ತಮ್ಮ ಕಲೆಗಳನ್ನು ಪ್ರದರ್ಶನ ಮಾಡಿದವು.

ವರದಿ ನೀಡಲು ಹೈ ನಿರ್ದೇಶನ

ಬೆಂಗಳೂರು: ರಾಜ್ಯಾದ್ಯಂತ ಜೈಲುಗಳಲ್ಲಿರುವ ವಿಚಾರಣಾಧೀನ ಕೈದಿಗಳಲ್ಲಿ ಕಳೆದ ಆರು ತಿಂಗಳಿನಿಂದ ಈಚನಕ ಎಷ್ಟು ಮಂದಿಯನ್ನು ಅವರ ಪ್ರಕರಣದ ವಿಚಾರಣೆಯ ದಿನದಂದು ನಿಯಮಿತವಾಗಿ ಖುದ್ದು ಅಥವಾ ವಿಡಿಯೋ ಕಾನ್ಫರೆನ್ಸ್ ಮೂಲಕ ಸಕ್ಷಮ ನ್ಯಾಯಾಲಯ ವಿಚಾರಣೆಗೆ ಹಾಜರುಪಡಿಸಲಾಗಿದೆ ಎಂಬ ಬಗ್ಗೆ ಸಮಗ್ರ ವರದಿ ಸಲ್ಲಿಸುವಂತೆ ರಾಜ್ಯ ಕಾರಾಗೃಹಗಳ ಡಿಐಜಿಗೆ ಹೈಕೋರ್ಟ್ ನಿರ್ದೇಶಿಸಿದೆ.

ನಾಲ್ಕು ವರ್ಷಗಳಿಂದ ಜೈಲಿನಲ್ಲಿರುವ ಆರೋಪಿ ಇಮ್ರಾನ್ ಅಲಿಯಾಸ್ ಕುಳ್ಳನನ್ನು ಸಕ್ಷಮ ನ್ಯಾಯಾಲಯದ ವಿಚಾರಣೆಗೆ ಹಾಜರುಪಡಿಸದೆ ಕರ್ತವ್ಯ ಲೋಪ ಎಸಗಿರುವ ಆರೋಪದ ಹಿನ್ನೆಲೆಯ ಪ್ರಕರಣವನ್ನು ನ್ಯಾ. ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಅಡ್ವೋಕೇಟ್ ಜನರಲ್ ಕೆ ಶಶಿಕಿರಣ ಶೆಟ್ಟಿ ಪ್ರಕರಣಕ್ಕೆ ಸಂಬಂಧಿಸಿದಂತೆ ಆಗಿರುವ ಲೋಪಗಳನ್ನು ಪೀಠಕ್ಕೆ ವಿವರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಲಯವು ಒಬ್ಬ ವಿಚಾರಣಾ ಕೈದಿಗೆ ನಾಲ್ಕು ವರ್ಷಗಳಲ್ಲಿ 20 ಬಾರಿ ಸಮನ್ಸ್ ನೀಡಿದ್ದರೂ ಕೋರ್ಟ್‌ಗೆ ಹಾಜರುಪಡಿಸಿಲ್ಲ ಎಂದರೆ ಏನರ್ಥ? ಒಬ್ಬ ಸಾಮಾನ್ಯ ಕೈದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಎಂದು ಹೈಕೋರ್ಟ್ ಆದೇಶಿಸಬೇಕೆ? ಜೈಲಿನ ಈ ನಡೆಯಿಂದ ನ್ಯಾಯಾಂಗದ ಸಮಯ ವ್ಯರ್ಥವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿತು. ಒಂದೇ ಠಾಣೆಯಲ್ಲಿ ದಾಖಲಾಗಿರುವ ಮತ್ತೊಂದು ಪ್ರಕರಣದಲ್ಲಿ ಕೈದಿ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾನೆ ಎಂಬುದನ್ನು ವಿವೇಚಿಸದೆ ಬಾಡಿ ವಾರಂಟ್ ಪೆಂಡಿಂಗ್ ಇರುವಾಗ ಜಾಮೀನು ರಹಿತ ವಾರಂಟ್ ಜಾರಿಗೆ ಹೆಣಗಾಡಿರುವುಕ್ಕೆ ಏನು ಹೇಳಬೇಕು? ಆರೋಪಿ ಸಿಕ್ಕಿಲ್ಲ ಎಂದು ಬರೆದಿಟ್ಟಿರುವ ಮಹಾಶಯ ಎಚ್‌ಎಎಲ್ ಪೊಲೀಸ್ ಠಾಣೆಯ ಹೆಡ್ ಕಾನ್ಸ್‌ಟೆಬಲ್ ಮುತ್ತಣ್ಣ ವಿರುದ್ಧ ಇಲಾಖಾ ವಿಚಾರಣೆ ನಡೆಸಬೇಕು. ಅದರ ವರದಿಯನ್ನು ಸಲ್ಲಿಸಬೇಕು ಎಂದು ಆದೇಶಿಸಿತು.

ರಾಮ ಬಾಣ



ಕಲ್ಲು ತೂರಾಟ: ವಿಡಿಯೋ ವೈರಲ್

ಕಲಬುರಗಿ: ಜಿಲ್ಲೆಯ ಚಿತ್ತಾಪುರ ತಾಲೂಕಿನ ರಾವೂರ್ ಗ್ರಾಮದ ಗೋಕುಲ್ ನಗರದ ಕಟ್ಟೆಯ ಮೇಲೆ ಶಿವಾಜಿ ಮಹಾರಾಜರ ಜಯಂತಿ ಹಿನ್ನೆಲೆ ಎರಡು ಸಮುದಾಯಗಳ ನಡುವೆ ನಡೆದ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ಮತ್ತೊಂದು ವಿಡಿಯೋ ವೈರಲ್ ಆಗಿದೆ.



ಕಳೆದ ಫೆ.19ರಂದು ಶಿವಾಜಿ ಮಹಾರಾಜರ ಜಯಂತಿ ಹಿನ್ನೆಲೆ ಚಿತ್ತಾಪುರ ತಾಲೂಕಿನ ರಾವೂರ್ ಗ್ರಾಮದಲ್ಲಿ ಶಿವಾಜಿ ಭಾವಚಿತ್ರ ಇಟ್ಟು ಜಯಂತಿ ಆಚರಣೆ ಮಾಡುವ ವೇಳೆ ಸೌಂಡ್ ವಿಚಾರವಾಗಿ ಕಿರಿಕ್ ಆಗಿ ಎರಡು ಸಮುದಾಯಗಳ ನಡುವೆ ಗಲಾಟೆಯಾಗಿತ್ತು. ಇದೀಗ ಅದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಮನೆಯ ಮಾಳಿಗೆ ಮೇಲೆ ಬಾಲಕನೊಬ್ಬ ಕೈಯಲ್ಲಿ ಕಲ್ಲು ಹಿಡಿದು ನಿಂತಿದ್ದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಶಿವಾಜಿ ಮಹಾರಾಜರ ಜಯಂತಿ ಹಿನ್ನೆಲೆ 2 ಸಮುದಾಯಗಳ ನಡುವೆ ನಡೆದ ಗಲಾಟೆ ವೇಳೆ ಮಾಳಿಗೆ ಮೇಲಿಂದ ಕಲ್ಲಿನಿಂದ ಹಲ್ಲೆ ಮಾಡಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಎಂಟು ಜನರ ವಿರುದ್ಧ ಸುಮೋಟೋ

ಗಲಾಟೆ ವಿಚಾರಕ್ಕೆ ಸಂಬಂಧಿಸಿದಂತೆ ಇದೀಗ ವಾಡಿ ಪೊಲೀಸ್ ಠಾಣೆಯಲ್ಲಿ ಎಂಟು ಜನರ ವಿರುದ್ಧ ಬಿಎನ್‌ಎಸ್‌ಎಸ್ ಕಾಯ್ದೆ 126ರ ಅಡಿ ಸುಮೋಟೋ ಕೇಸ್ ದಾಖಲಾಗಿದೆ. ಗಲಾಟೆ ಬಳಿಕ ಎರಡು ಸಮುದಾಯದಿಂದ ಯಾರು ದೂರು ನೀಡದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಸೊಮೋಟೋ ಕೇಸ್ ದಾಖಲಾಗಿದ್ದು, ಒಂದು ಕೋಮಿನ ಐದು ಜನ ಹಾಗೂ ಇನ್ನೊಂದು ಕೋಮಿನ ಮೂವರು ಜನರ ಮೇಲೆ ಎಫ್‌ಐಆರ್ ದಾಖಲಾಗಿದ್ದು, ಎರಡು ಕೋಮಿನ ಜನರಿಂದ ಶಾಂತಿ ಭಂಗಕ್ಕೆ ಯತ್ನ ಆರೋಪದಡಿ ಎಫ್‌ಐಆರ್ ದಾಖಲಾಗಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೇಜಿ

ದೇಶವನ್ನು ವಿರೋಧಿಸುವವರು ನಮ್ಮ ವಿರೋಧಿಗಳು, ದೇಶವನ್ನು ಪ್ರೀತಿಸುವ ಎಲ್ಲ ಜಾತಿ, ಮತ, ಧರ್ಮಗಳ ಜನ ನಮ್ಮವರು
– ಅಶೋಕ್ ರೈ

-ಮಾತು ನೂರಕ್ಕೆ ನೂರು ಸರಿ ಎನ್ನಲೇಬೇಕು, ಆದರೆ ಇದು ಬರೀ ಬಾಯಿ ಮಾತಾಗದೆ ಕೃತಿಯಲ್ಲಿ ಮೂಡಿಬರಬೇಕು!

ದಿನ ಭವಿಷ್ಯ

ಮೇಷ
ನಿದ್ದೆ ಮತ್ತು ಆಹಾರ ಸೇವನೆ ಸರಿಯಾಗಿರಲಿ. ನಿಮ್ಮನ್ನು ಕಾಡುತ್ತಿರುವ ಒತ್ತಡ ನಿವಾರಣೆಗೆ ಇದು ಅಗತ್ಯ. ನೆಮ್ಮದಿ ದೂರ. ಧನವ್ಯಯ ಹೆಚ್ಚು.

ವೃಷಭ
ಕ್ಲಿಷ್ಟ ಬಿಕ್ಕಟ್ಟು, ಅದರ ನಿಭಾವಣೆ ಕಷ್ಟ ಎನಿಸಬಹುದು. ಸಂಜೆ ವೇಳೆಗೆ ಎಲ್ಲವೂ ಸುರಳೀತ ಆಗುವ ಸಂಕೇತ ತೋರಲಿದೆ. ನಿರಾಳತೆ.

ಮಿಥುನ
ಅಧಿಕ ಹೊಣೆ. ಆದರೆ ಸೂಕ್ತ ಸಹಕಾರ ಅಲಭ್ಯ. ಮಕ್ಕಳ ಏಳಿಗೆಯ ಚಿಂತೆ ಕಾಡಬಹುದು. ಹಿರಿಯರಿಗೆ ಆರೋಗ್ಯ ಸಮಸ್ಯೆ ಸಂಭವ.

ಕಟಕ
ಗುರಿಯಿಂದ ವಿಚಲಿತಗೊಳಿಸುವ ಕೆಲವು ವಿಚಾರಗಳು ಕಾಡಬಹುದು. ಅತ್ತ ಗಮನ ಹರಿಸದಿರಿ. ಕೆಲವು ಚಿಂತೆ ಅಕಾರಣ.

ಸಿಂಹ
ಸಮಸ್ಯೆ ತಾನಾಗಿ ಪರಿಹಾರ ಕಾಣಲು ಸಮಯ ಕೊಡಿ. ನಿಮ್ಮ ಪ್ರಯತ್ನ ಈಗಲೇ ಫಲ ನೀಡದು. ಹಣದ ವ್ಯವಹಾರ ನಿರಾಳ.

ಕನ್ಯಾ
ಖಾಸಗಿ ಬದುಕಲ್ಲಿ ನಿರೀಕ್ಷಿತ ಫಲ ಇಂದು ದೊರಕದು. ನಿರಾಶೆ. ಆರೋಗ್ಯದ ಬಗ್ಗೆ ಚಿಂತೆ ಇದ್ದರೆ ನಿರಾಳತೆ ಸಿಗಲಿದೆ. ಧನವ್ಯಯ ಹೆಚ್ಚು.

ತುಲಾ
ಹಲವಾರು ಹೊಣೆ ಒಮ್ಮೆಗೆ ಹೊತ್ತುಕೊಂಡು ಕಷ್ಟಪಡುವಿರಿ. ಕೆಲವರ ಜತೆ ಮುಸುಕಿನ ಗುದ್ದಾಟ. ತಾಳ್ಮೆಯಿಂದ ವರ್ತಿಸಿ, ಕಟು ಮಾತು ಆಡದಿರಿ.

ವೃಶ್ಚಿಕ
ಏಕಕಾಲದಲ್ಲಿ ಬಹಳ ಕೆಲಸ ಆಗಬೇಕೆಂದು ಬಯಸುವಿರಿ. ಅದರಿಂದ ಒತ್ತಡ ಹೆಚ್ಚು. ಅಹಿತ ಆಹಾರ ಸೇವನೆಯಿಂದ ಹೊಟ್ಟೆ ಕೆಡಬಹುದು.

ಧನು
ಬಾಕಿ ಇರುವ ಕೆಲಸ ಮೊದಲು ಮುಗಿಸಿ. ಅದುವೇ ನಿಮ್ಮ ಚಿಂತೆಗೆ ಕಾರಣವಾಗುತ್ತಿರುವುದು. ಅಜೀರ್ಣ ಸಮಸ್ಯೆಯಿಂದ ಮುಕ್ತಿ, ಆರೋಗ್ಯ ಸ್ಥಿರ.

ಮಕರ
ನಿಮ್ಮ ಮೃದು ಧೋರಣೆ ನಿಮ್ಮನ್ನು ಸಮಸ್ಯೆಗೆ ನೂಕಬಹುದು. ಕೆಲವೇಳೆ ಕಠಿಣವಾಗಿ ವರ್ತಿಸಬೇಕು. ದಂಪತಿ ಮಧ್ಯೆ ಭಿನ್ನಾಭಿಪ್ರಾಯ.

ಕುಂಭ
ಕಾಡುವ ಸಮಸ್ಯೆಗೆ ಪರಿಹಾರ ಹುಡುಕಿ. ಅದರಷ್ಟಕ್ಕೆ ಬಿಡಬೇಡಿ. ಆಪ್ತೇಷ್ಟರ ಕಾಳಜಿ ಇಂದು ಮುಖ್ಯವಾಗಲಿದೆ. ದೈಹಿಕ ನೋವು ಶಮನವಾಗಲಿದೆ.

ಮೀನ
ವೃತ್ತಿಯಲ್ಲಿ ಯಶಸ್ಸು. ಸಂಗಾತಿ ಜತೆ ಭಿನ್ನಮತ ಇದ್ದರೆ ಅದರ ಪರಿಹಾರಕ್ಕೆ ಆದ್ಯತೆ ಕೊಡಿ. ಅಲರ್ಜಿ ಸಂಬಂಧಿ ಅನಾರೋಗ್ಯ ಬಾಧಿಸಬಹುದು.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 1,4,6,2

ಪರೀಕ್ಷೆ ಬರೆದ 20,146 ವಿದ್ಯಾರ್ಥಿಗಳು | ಬೆಳಗಾವಿ ವಿದ್ಯಾರ್ಥಿಗಳೇ ಹೆಚ್ಚು

ಆಳ್ವಾಸ್ ಸೇರಲು ಉತ್ಸಾಹ

ಮೂಡುಬಿದಿರೆ: ಆಳ್ವಾಸ್ ಕನ್ನಡ ಮಾಧ್ಯಮ ಶಾಲೆ ಸೇರಲು ವಿದ್ಯಾರ್ಥಿಗಳು ಭಾರೀ ಪೈಪೋಟಿ ನಡೆಸಿದ್ದು, ಭಾನುವಾರ ಪ್ರವೇಶ ಪರೀಕ್ಷೆ ಸಾಂಗವಾಗಿ ನಡೆಯಿತು.

ಶಾಲೆ ಸೇರಲು ಬಯಸಿ 22 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದರು. ಈ ಪೈಕಿ ಭಾನುವಾರ 20,146 ವಿದ್ಯಾರ್ಥಿಗಳು ಪರೀಕ್ಷೆ ಬರೆದರು.

ಪ್ರವೇಶ ಪರೀಕ್ಷೆ ಬರೆದ ವಿದ್ಯಾರ್ಥಿಗಳಲ್ಲಿ ಬೆಳಗಾವಿ ಜಿಲ್ಲೆಯಿಂದಹೆಚ್ಚು ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಬೆಳಗಾವಿ ಜಿಲ್ಲೆಯ 7353 ವಿದ್ಯಾರ್ಥಿಗಳು ಪರೀಕ್ಷೆ ಬರೆದರು. ಬಾಗಲಕೋಟೆ ಜಿಲ್ಲೆಯಿಂದ 4080 ಹಾಗೂ ವಿಜಯಪುರದಿಂದ ಕ್ರಮವಾಗಿ 2961 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರು. ಪರೀಕ್ಷಾ ಅರ್ಜಿ ಸಲ್ಲಿಕಾ ವ್ಯವಸ್ಥೆಯು ಕಳೆದ 3 ವರ್ಷದಿಂದ ಪ್ರತಿಭಾನ್ವಿತ ಮಕ್ಕಳನ್ನು ತಲುಪುವ ನಿಟ್ಟಿನಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ನಮೂನೆಯನ್ನು ಕ್ಯುಆರ್ ಕೋಡ್ ಸಹಿತವಾಗಿ ವ್ಯವಸ್ಥೆಗೊಳಿಸಲಾಗಿತ್ತು.

ಮೂಡುಬಿದಿರೆಯಲ್ಲಿರುವ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಪ್ರಾಯೋಜಕತ್ವದ ಕನ್ನಡ ಮಾಧ್ಯಮ ಶಾಲೆಗೆ ರಾಜ್ಯದಾದ್ಯಂತದಿಂದ ವಿದ್ಯಾರ್ಥಿಗಳು ನಾ ಮುಂದು ತಾಮುಂದು ಎಂದು ಪೈಪೋಟಿ ನಡೆಸಿದ್ದಾರೆ.

ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಒಟ್ಟಾರೆ 22,874 ಅರ್ಜಿಗಳು ಸಲ್ಲಿಕೆಯಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಎರಡೂವರೆ ಸಾವಿರದಷ್ಟು ಹೆಚ್ಚುವರಿ ಅರ್ಜಿಗಳು ಸಲ್ಲಿಕೆಯಾಗಿದ್ದವು. ಆಳ್ವಾಸ್ ಸಮೂಹ ಸಂಸ್ಥೆಗಳ ಸಂಸ್ಥಾಪಕ, ಡಾ.ಎಂ.ಮೋಹನ ಆಳ್ವರ ಕನಸಿನ ಕೂಸು ಈ ಕನ್ನಡ ಮಾಧ್ಯಮ ಶಾಲೆ. ಇಡೀ ರಾಜ್ಯದಲ್ಲಿ ಒಂದು ಮಾದರೀ ಶಾಲೆಯನ್ನಾಗಿ ಇದನ್ನು ರೂಪಿಸುವ ದೃಷ್ಟಿಯಿಂದ ವಿಶೇಷ ಮುತುವರ್ಜಿ ವಹಿಸಿ ಕಾರ್ಯ ನಿರ್ವಹಿಸುತ್ತಿದ್ದಾರೆ. 'ಕನ್ನಡದ ಬಗೆಗಿರುವ ಪ್ರೀತಿ ಬಾಯಲ್ಲಿ ಇದ್ದರೆ ಸಾಲದು, ಬದಲಾಗಿ ಅದು ಕಾರ್ಯರೂಪದಲ್ಲಿರಬೇಕು' ಎಂಬ ಆಳ್ವರ ಅಭಿಪ್ರಾಯವೇ ಅವರಿಗೆ ಈ ಶಾಲೆಯ ಮೇಲಿರುವ, ಕನ್ನಡದ ಮೇಲಿರುವ ಪ್ರೀತಿಗೆ ಸಾಕ್ಷಿಯಾಗಿದೆ. ಶನಿವಾರವೇ ಮೂಡುಬಿದಿರೆಯತ್ತ ಕರ್ನಾಟಕ ದಾದ್ಯಂತದಿಂದ ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಆಗಮಿಸತೊಡಗಿದ್ದರು. ಇವರೆಲ್ಲರಿಗೂ ಸುಸಜ್ಜಿತ ವಸತಿ ವ್ಯವಸ್ಥೆಯನ್ನು ಆಳ್ವಾಸ್ ಸಂಸ್ಥೆ ಆಯೋಜಿಸಿತ್ತು.

ಭಾನುವಾರ ಬೆಳಗ್ಗೆ ಪ್ರವೇಶ ಪರೀಕ್ಷೆ ನಡೆಯಿತು. ವಿವಿಧ ಜಿಲ್ಲೆಗಳಿಂದ ಬರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅತ್ಯಂತ ಶಿಸ್ತಿನ ವ್ಯವಸ್ಥೆಗಳನ್ನು ಮಾಡಲಾಗಿತ್ತು.



ಏಕಕಾಲಕ್ಕೆ ಪರೀಕ್ಷೆ

ಭಾನುವಾರ ಆಳ್ವಾಸ್ ವಿದ್ಯಾಗಿರಿ ಮತ್ತು ಪುತ್ತಿಗೆ ಕ್ಯಾಂಪಸ್‌ನಲ್ಲಿ ಯಶೋಕಿರಣ ಬ್ಲಾಕ್, ಜಗನ್ಮೋಹನ, ಕಾಮರ್ಸ್‌ಬ್ಲಾಕ್, ಆಳ್ವಾಸ್ ಪದವಿ ಕಾಲೇಜು, ಆಳ್ವಾಸ್ ಆಂಗ್ಲ ಮಾಧ್ಯಮ ಶಾಲೆ ಹೀಗೆ 5 ಕೇಂದ್ರಗಳಲ್ಲಿ ಪರೀಕ್ಷಾ ಕೊಠಡಿ ವ್ಯವಸ್ಥೆ ಮಾಡಲಾಗಿತ್ತು. ಆಯ್ಕೆಯಾದ ವಿದ್ಯಾರ್ಥಿಗಳು 6ನೇ ತರಗತಿಯಿಂದ 10ನೇ ತರಗತಿವರೆಗೆ ಉಚಿತ ವಸತಿ ಊಟೋಪಚಾರ ಸಹಿತ ಶಿಕ್ಷಣವನ್ನು ಪಡೆಯುತ್ತಾರೆ.

ಪಾರದರ್ಶಕ ವ್ಯವಸ್ಥೆ: ಪ್ರವೇಶಾತಿ ಬಯಸುವ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶವನ್ನು ಸಂಸ್ಥೆ ಒದಗಿಸಿಕೊಟ್ಟಿತ್ತು. ಅಕ್ಟೋಬರ್‌ನಲ್ಲಿ ಈ ಬಗ್ಗೆ ಅಧಿಕೃತ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದ ಅರ್ಜಿಗಳು ಸಲ್ಲಿಕೆಯಾಗಿರುವುದು ವಿಶೇಷವೇ ಸರಿ. ಕಳೆದ 18 ವರುಷಗಳಿಂದ ಇದೇ ಮಾದರಿಯಲ್ಲಿ ಪರೀಕ್ಷೆಗಳು ನಡೆಯುತ್ತಿದ್ದು, ಸಂಪೂರ್ಣ ಪಾರದರ್ಶಕ ವ್ಯವಸ್ಥೆಯನ್ನು ಅಳವಡಿಸಿ ಪ್ರವೇಶ ಪ್ರಕ್ರಿಯೆ ನಡೆಸಲಾಗುತ್ತಿದೆ.

ಮೂರು ಹಂತದಲ್ಲಿ ಆಯ್ಕೆ: ಕನ್ನಡ ಮಾಧ್ಯಮ ಶಾಲೆಗಾಗಿ ಮೂರು ಹಂತಗಳಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗಿದ್ದು, ಪ್ರಾಥಮಿಕ ಹಂತ, ಮುಖ್ಯ ಹಂತ ಮತ್ತು ಸಂದರ್ಶನ ಹಂತ ಎಂದು ಗುರುತಿಸಲಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಒಎಂಆರ್ ಆಧಾರಿತ ಬಹು ಆಯ್ಕೆ ಮಾದರಿ ಪ್ರಶ್ನೆ ಪತ್ರಿಕೆ ಇದ್ದು ಉಳಿದ ಸ್ಪರ್ಧಾತ್ಮಕ ಪರೀಕ್ಷೆಯಂತೆ ವ್ಯವಸ್ಥೆ ಮಾಡಲಾಗಿದೆ. ಇಲ್ಲಿ ವಿದ್ಯಾರ್ಥಿಯ ಚಿಂತನಾ ಸಾಮರ್ಥ್ಯವನ್ನು ಗುರುತಿಸಲಾಗುತ್ತದೆ. ಇದರಲ್ಲಿ ಸಂಸ್ಥೆ ನಿಗದಿಪಡಿಸಿದ ಮಾನದಂಡ ಗಳಿಸಿದವರು ಮಾತ್ರವೇ ಮುಖ್ಯ ಹಂತಕ್ಕೆ ಆಯ್ಕೆಯಾಗುತ್ತಾರೆ.

ಮಾ. 2ರವರೆಗೆ ಚಂದ್ರು ನ್ಯಾಯಾಂಗ ಬಂಧನ

ಬೆಂಗಳೂರು: ಗುತ್ತಿಗೆದಾರನಿಂದ 5 ಲಕ್ಷ ರೂ. ಹಣ ಪಡೆಯುತ್ತಿದ್ದ ಆರೋಪ ಎದುರಿಸುತ್ತಿರುವ ಗದಗ ಜಿಲ್ಲೆಯ ಶಿರಹಟ್ಟಿ ಕ್ಷೇತ್ರದ ಬಿಜೆಪಿ ಶಾಸಕ ಡಾ.ಚಂದ್ರು ಲಮಾಣಿ ಸೇರಿದಂತೆ ಮೂವರನ್ನು ಮಾರ್ಚ್ 2ರವರೆಗೆ ನ್ಯಾಯಾಂಗ ಬಂಧನ ಕ್ಕೊಪ್ಪಿಸಿ, ನಗರದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರು ಆದೇಶಿಸಿದ್ದಾರೆ.

ಯಲಹಂಕದ ಜ್ಯುಡಿಷಿಯಲ್ ಲೇಔಟ್‌ನಲ್ಲಿರುವ ನ್ಯಾಯಾಧೀಶರ ನಿವಾಸದ ಮುಂದೆ ಚಂದ್ರು ಲಮಾಣಿ ಅವರನ್ನು ಭಾನುವಾರ ಲೋಕಾಯುಕ್ತ ಪೊಲೀಸರು ಹಾಜರುಪಡಿಸಿದ್ದರು. ಗುತ್ತಿಗೆದಾರನಿಂದ ಕಮಿಷನ್ ರೂಪದಲ್ಲಿ 5 ಲಕ್ಷ ರೂ. ಹಣ ಸ್ವೀಕರಿಸುತ್ತಿದ್ದ ಚಂದ್ರು ಲಮಾಣಿ, ಅವರ ಪಿಎಗಳು ಸೇರಿದಂತೆ ಮೂವರನ್ನು ಶನಿವಾರ ಲೋಕಾಯುಕ್ತ ಅಧಿಕಾರಿಗಳು ರೆಡ್ ಹ್ಯಾಂಡ್ ಆಗಿ ವಶಕ್ಕೆ ಪಡೆದಿದ್ದರು. ಗದಗ ಜಿಲ್ಲೆಯ ಲಕ್ಷ್ಮೇಶ್ವರ ಪಟ್ಟಣದಲ್ಲಿರುವ ಬಾಲಾಜಿ ಆಸ್ಪತ್ರೆಯ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದರು. ಬಾಲಾಜಿ ಆಸ್ಪತ್ರೆಯು ಸ್ವತಃ ವೈದ್ಯರು ಕೂಡ ಆಗಿರುವ ಚಂದ್ರು ಲಮಾಣಿ ಅವರ ಒಡೆತನದಲ್ಲಿದೆ. ಲೋಕಾಯುಕ್ತ ಅಧಿಕಾರಿಗಳ ದಾಳಿ ವೇಳೆ ಶಾಸಕ ಚಂದ್ರು ಲಮಾಣಿ ಹಾಗೂ ಅವರ ಇಬ್ಬರು ಪಿಎಗಳಾದ ಮಂಜುನಾಥ್ ಹಾಗೂ ಗುರುನಾಯಕ್ ಅವರನ್ನು ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ಪಡೆದಿದ್ದರು.

ಮಧ್ಯರಾತ್ರಿ ಶಾಸಕ ಲಮಾಣಿ ಸೆರೆ

ಲಕ್ಷ್ಮೇಶ್ವರ: ಗುತ್ತಿಗೆದಾರರಿಂದ ಲಂಚ ಪಡೆಯುತ್ತಿದ್ದ ವೇಳೆ ಸಿಕ್ಕಿ ಬಿದ್ದಿದ್ದ ಶಿರಹಟ್ಟಿ ಮತಕ್ಷೇತ್ರದ ಶಾಸಕ ಡಾ.ಚಂದ್ರು ಲಮಾಣಿ ಅವರನ್ನು ಲೋಕಾಯುಕ್ತ ಪೊಲೀಸರು ಶನಿವಾರ ಮಧ್ಯರಾತ್ರಿ ಬಂಧಿಸಿ ಕರೆದೊಯ್ದಿದ್ದಾರೆ. ಲಕ್ಷ್ಮೇಶ್ವರ ಪಟ್ಟಣದ ಬಾಲಾಜಿ ಆಸ್ಪತ್ರೆಯಲ್ಲಿ ಗುತ್ತಿಗೆದಾರರಿಂದ ಲಂಚದ ಹಣ ಪಡೆಯು ತ್ತಿದ್ದ ವೇಳೆ ಡಾ.ಚಂದ್ರು ಲಮಾಣಿ ಅವರು ಲೋಕಾಯುಕ್ತ ಪೊಲೀಸರು ಬಲೆಗೆ ಬಿದ್ದಿದ್ದರು. ಶನಿವಾರ



ಆಸ್ಪತ್ರೆಯಲ್ಲಿ ರೆಡ್ ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿದ್ದರಿಂದ ಶಾಸಕರು ಸರ್ಕಾರಿ ಪಿ.ಎ ಮಂಜುನಾಥ ವಾಲ್ಮೀಕಿ ಹಾಗೂ ಖಾಸಗಿ ಪಿಎ ಗುರು ಲಮಾಣಿ ಅವರನ್ನು 12ಗಂಟೆ ತೀವ್ರ ವಿಚಾರಣೆ ನಡೆಸಿದ ಲೋಕಾಯುಕ್ತ ಪೊಲೀಸರು, ಶನಿವಾರ ತಡರಾತ್ರಿ, ಶಾಸಕ ಡಾ.ಚಂದ್ರು ಲಮಾಣಿ ಹಾಗೂ ಸಹಾಯಕರನ್ನು ಬಂಧಿಸಿ ಗದಗಿನ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ಒಳಪಡಿಸಿ ಹೆಚ್ಚಿನ ವಿಚಾರಣೆಗಾಗಿ ಬೆಂಗಳೂರಿಗೆ ಕರೆದೊಯ್ದಿದ್ದಾರೆ. ಶನಿವಾರ ತಡರಾತ್ರಿ 1.35ರ ಸುಮಾರಿಗೆ ಶಾಸಕ ಡಾ. ಚಂದ್ರು ಲಮಾಣಿ ಅವರನ್ನು ಬಿಗಿ ಭದ್ರತೆಯಲ್ಲಿ ಪೊಲೀಸರು ಸರ್ಕಾರಿ ಕಾರಿನಲ್ಲಿ ಕರೆದುಕೊಂಡು ಹೋದ ಘಟನೆ ನಡೆಯಿತು. ಈ ವೇಳೆ ತಡರಾತ್ರಿಯಲ್ಲಿಯೂ ಅವರು ಅಭಿಮಾನಿಗಳು ಕಾಂಗ್ರೆಸ್ ಪಕ್ಷದ ವಿರುದ್ಧ ಘೋಷಣೆ ಕೂಗಿದ ಹೈಡ್ರಾಮಾ ನಡೆಸಿದ ಘಟನೆ ಕಂಡು ಬಂದಿತು. ಈ ವೇಳೆ ಮಾಧ್ಯಮಗಳೊಂದಿಗೆ ಶಾಸಕರು ಯಾವುದೇ ಪ್ರತಿಕ್ರಿಯೆ ನೀಡದೆ ಪೊಲೀಸ್ ಬಂದೋಬಸ್ತನಲ್ಲಿ ಕಾರು ಹತ್ತಿ ಹೋದರು.

ಜಾಗತಿಕ ಜ್ಞಾನ ಅಗತ್ಯ

ಬೆಂಗಳೂರು: ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು ಕೇವಲ ಅಂಕಗಳಿಕೆಗೆ ಸೀಮಿತವಾಗದೆ, ಪಠ್ಯಪುಸ್ತಕದ ಗಡಿಯಾಚೆಗಿನ ಜಾಗತಿಕ ಜ್ಞಾನವನ್ನು ಮೈಗೂಡಿಸಿಕೊಳ್ಳಬೇಕು ಎಂದು ಕರ್ನಾಟಕ ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖ್ ರಾಜೇಶ್ ಪದ್ಮಾರ್ ತಿಳಿಸಿದರು.

ನಗರದ ಮಿಥಿಕ್ ಸೊಸೈಟಿಯಲ್ಲಿ ಭಾನುವಾರ ನಡೆದ ಬಿ ಗುಡ್ ಡು ಗುಡ್ ಅಭಿಯಾನದ ಪ್ರಯುಕ್ತ ಕಾಲೇಜು ವಿದ್ಯಾರ್ಥಿಗಳಿಗಾಗಿ ಸಮರ್ಥ ಭಾರತ ಹಾಗೂ ಮಿಥಿಕ್ ಸೊಸೈಟಿ ಸಹಯೋಗದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಇಂದಿನ ಶಾಲಾ-ಕಾಲೇಜುಗಳಲ್ಲಿ ಬೋಧಿಸಲಾಗುತ್ತಿ ರುವ ಬಹುತೇಕ ಪಠ್ಯಕ್ರಮಗಳು ಸುಮಾರು 15 ವರ್ಷಗಳ ಹಿಂದೆ ರೂಪಿತವಾದವುಗಳಾಗಿವೆ. ಜೈವಿಕ ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿರುವ ಕ್ಷೇತ್ರದಲ್ಲಿ ಇಂದಿಗೂ 2006-07ನೇ ಸಾಲಿನ ಹಳೆಯ ಮಾಹಿತಿಗಳನ್ನೇ ಬೋಧಿಸಲಾಗುತ್ತಿದೆ. ಆಧುನಿಕ ಕೈಗಾರಿಕೆಗಳು ಬಳಸುತ್ತಿರುವ ತಂತ್ರಜ್ಞಾನಕ್ಕೂ ಮತ್ತು ತರಗತಿಯಲ್ಲಿ ಕಲಿಯುತ್ತಿರುವ ವಿಷಯಕ್ಕೂ ಬಹಳ ವ್ಯತ್ಯಾಸವಿದೆ ಎಂದರು.

> **ವಿದ್ಯಾರ್ಥಿಗಳು ತಮ್ಮ ಬಿಡುವಿನ ಸಮಯದಲ್ಲಿ, ಬೌದ್ಧಿಕ ಚರ್ಚೆಗಳು ನಡೆಯುವ ಕೇಂದ್ರಗಳಾದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಗೋಖಲೆ ಸಾರ್ವಜನಿಕ ವ್ಯವಹಾರಗಳ ಸಂಸ್ಥೆ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನಂತಹ ಸಂಸ್ಥೆಗಳಿಗೆ ಭೇಟಿ ನೀಡಿದರೆ ಇನ್ನು ಹೆಚ್ಚಿನ ಜ್ಞಾನ ಲಭಿಸುತ್ತದೆ.**
> ■ ರಾಜೇಶ್ ಪದ್ಮಾರ್, ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖ್

ಬರವಣಿಗೆ ಸ್ಪರ್ಧೆಯಲ್ಲ ಅದೊಂದು ಸಂಸ್ಕಾರ

ಪ್ರಸ್ತುತ ದಿನಗಳಲ್ಲಿ ನಾವು ಕಳುಹಿಸುವ ಒಂದು ಪುಟ್ಟ ಸಂದೇಶ ಕೂಡ ಸಾವಿರಾರು ಜನರಿಗೆ ತಲುಪುತ್ತದೆ. ಅಂತಹ ಸಂದರ್ಭದಲ್ಲಿ ಕನಿಷ್ಠ ಶಬ್ದಗಳನ್ನು ಬಳಸಿ ಗರಿಷ್ಠ ಸ್ಪಷ್ಟತೆಯನ್ನು ನೀಡುವುದು ಒಂದು ಕಲೆಯಾಗಿದೆ. ಪ್ರಬಂಧ ಸ್ಪರ್ಧೆಗಳು ಕೇವಲ ಬಹುಮಾನಕ್ಕಾಗಿ ಅಲ್ಲ, ಬದಲಾಗಿ ನಮ್ಮ ಆಲೋಚನೆಗಳನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸುವ ಒಂದು ವ್ಯಾಯಾಮ ವಾಗಬೇಕು ಎಂಬುದು ಈ ಅಭಿಯಾನದ ಆಶಯ ಎಂದರು. ಸಾಮಾನ್ಯವಾಗಿ ಇಂದಿನ ಯುವಜನತೆ ಕೇವಲ ವ್ಯಾಲೆಂಟೈನ್ಸ್ ಡೇ, ಐಸ್‌ಕ್ರೀಮ್, ಚಾಕೊಲೇಟ್ ಮತ್ತು ಸಾಮಾಜಿಕ ಜಾಲತಾಣಗಳ ರೀಲ್ಸ್‌ಗಳಲ್ಲಿ ಮುಳುಗಿದ್ದಾರೆ ಎಂಬ ನಕಾರಾತ್ಮಕ ಅಭಿಪ್ರಾಯ ಸಮಾಜದಲ್ಲಿದೆ. ಆದರೆ, ವಾಸ್ತವದಲ್ಲಿ ಅದಕ್ಕಿಂತ ಭಿನ್ನವಾದ ಒಂದು ದೊಡ್ಡ ಪ್ರಪಂಚವಿದೆ. ದೇಶದ ಬಗ್ಗೆ ಮಾತನಾಡುವ, ವಿವೇಕಾನಂದರ ತತ್ವಗಳನ್ನು ಅರಿಯುವ, ರಕ್ತದಾನ ಮಾಡುವ ಮತ್ತು ಗಿಡಗಳನ್ನು ನೆಡುವ ಮೂಲಕ ಸಮಾಜಮುಖಿ ಕೆಲಸಗಳಲ್ಲಿ ತೊಡಗಿ ರುವ ಸಾವಿರಾರು ಯುವಕರನ್ನು ನಾವು ಕಾಣುತ್ತಿದ್ದೇವೆ ಎಂದು ತಿಳಿಸಿದರು. ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಶರಣ್ಯ ಎಸ್, ದ್ವಿತೀಯ ಬಹುಮಾನ ಪಡೆದ ಭೂಮಿಕಾ ಎಚ್.ಕೆ., ತೃತೀಯ ಬಹುಮಾನ ಪಡೆದ ಅನುಷಾ ಜಿ.ಪಿ. ಹಾಗೂ ಸಮಾಧಾನಕರ ಬಹುಮಾನವನ್ನು ಗಳಿಸಿದ ಎಲ್ಲಾ ವಿಜೇತರಿಗೆ ಬಹುಮಾನವನ್ನು ನೀಡಿ ಅಭಿನಂದಿಸಲಾಯಿತು. ಈ ವೇಳೆ ಮಿಥಿಕ್ ಸೊಸೈಟಿಯ ಕೋಶಾಧಿಕಾರಿ ಕೆ.ಎನ್. ಹಿರಿಯಣ್ಣಯ್ಯ, ಚೇತನಾ ರಾಜೇಂದ್ರ ಇದ್ದರು.

ವಿಚಾರದ ಅಡಿಪಾಯವು ಬಹಳ ಮುಖ್ಯ

ತಂತ್ರಜ್ಞಾನ, ಯಾಂತ್ರಿಕತೆ, ಕೃತಕ ಬುದ್ಧಿಮತ್ತೆ ಮುಂತಾದ ಬೇರೆ ಬೇರೆ ಆಯಾಮಗಳಿಂದ ಬದಲಾಗುತ್ತಿರುವ ಈ ಕಾಲಘಟ್ಟದಲ್ಲಿ ನಮ್ಮ ಮಾತು ಹಾಗೂ ಬರೆವಣಿಗೆಯ ಶೈಲಿಗೆ ನಮ್ಮಲ್ಲಿನ ವಿಚಾರದ ಅಡಿಪಾಯವು ಬಹಳ ಮುಖ್ಯವಾಗಿರುತ್ತದೆ. ಈ ಕೌಶಲ್ಯವನ್ನು ನಾವು ಪ್ರಬಂಧದ ಮೂಲಕ ರೂಢಿಸಿಕೊಳ್ಳಲು ಸಹಕಾರಿಯಾಗುತ್ತದೆ. ಜತೆಗೆ ಸ್ವಾಮಿ ವಿವೇಕಾನಂದರ ಚಿಂತನೆಗಳು ಮಾತು ಮತ್ತು ಬರೆವಣಿಗೆಯ ಕೌಶಲ್ಯದ ಮೂಲವನ್ನು ನಮಗೆ ತಿಳಿಸುತ್ತದೆ ಎಂದು ಅಂಕಣಕಾರ ಚೈತನ್ಯ ಹೆಗಡೆ ತಿಳಿಸಿದರು.

8 ಶಂಕಿತ ಉಗ್ರರ ಬಂಧನ

ಪುಟ ೧➜ ಈ ಗುಂಪಿನ ಹ್ಯಾಂಡ್ಲರ್ ಪ್ರಸ್ತುತ ಬಾಂಗ್ಲಾದಲ್ಲಿ ನೆಲೆಸಿರುವ ಕಾಶ್ಮೀರಿ ಮೂಲದ ವ್ಯಕ್ತಿ ಎಂದು ನಂಬಲಾಗಿದೆ.

ತನಿಖೆಗೆ ಕಾರಣವಾದ ಪೋಸ್ಟರ್‌ಗಳು: ಮೆಟ್ರೋ ಜಾಲದ ಒಳಗೆ ಸೇರಿದಂತೆ ದಿಲ್ಲಿಯ 10ಕ್ಕೂ ಹೆಚ್ಚು ಸ್ಥಳಗಳಲ್ಲಿ ಫ್ರೀ ಕಾಶ್ಮೀರ ಪೋಸ್ಟರ್‌ಗಳು ಕಾಣಿಸಿಕೊಂಡ ನಂತರ ಈ ಮಾಡ್ಯೂಲ್ ಬಗ್ಗೆ ತನಿಖೆ ಆರಂಭಿಸಲಾಗಿತ್ತು. ವಿಸ್ತೃತವಾದ ತನಿಖೆಯಿಂ ದ ತಮಿಳುನಾಡಿಗೆ ಜಾಲ ಹರಡಿಕೊಂಡಿರುವುದು ತಿಳಿದುಬಂದಿತ್ತು, ಇದರಿಂದ ಹೆಚ್ಚಿನ ಭಯೋತ್ಪಾದಕರ ಬಂಧನ ಸಾಧ್ಯವಾಗಿದೆ. ಈ ಪ್ರಕರಣ, ಜಮ್ಮು ಮತ್ತು ಕಾಶ್ಮೀರದಲ್ಲಿದ್ದ ಗೋಡೆ ಬರಹಗಳ ಜಾಡು ಹಿಡಿದು ತನಿಖಾಧಿಕಾರಿಗಳು ಕೆಂಪುಕೋಟೆ ಸ್ಫೋಟಕ್ಕೆ ಸಂಬಂಧಿಸಿದ ಶಂಕಿತರ ಬಂಧಿಸಿದ ಪ್ರಕರಣವನ್ನು ಹೋಲುತ್ತದೆ. ಅಧಿಕಾರಿಗಳು ಈ ಕಾರ್ಯಾಚರಣೆಯನ್ನು ಮಹತ್ವದ ಪ್ರಗತಿ ಎಂದು ಬಣ್ಣಿಸಿದ್ದಾರೆ. ಉಳಿದ ಶಂಕಿತರು, ಹಣಕಾಸಿನ ಮಾರ್ಗಗಳು ಮತ್ತು ಗಡಿಯಾಚೆಗಿನ ಸಂಪರ್ಕಗಳನ್ನು ಗುರುತಿಸಲು ಹೆಚ್ಚಿನ ತನಿಖೆ ನಡೆಯುತ್ತಿದೆ.

ಜೂನ್‌ನೊಳಗೆ ಸ್ಥಳೀಯ ಸಂಸ್ಥೆ ಚುನಾವಣೆ: ಮುಖ್ಯಮಂತ್ರಿ

ಪುಟ ೧➜ ಪಂಚಾಯತಿ ಚುನಾವಣೆಗಳು ಮುಗಿದ ನಂತರ ಗೋಕರ್ಣವನ್ನು ಪಟ್ಟಣ ಪಂಚಾಯತ್ ಮಾಡುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುವುದು ಎಂದರು. ಗಂಗಾವಳಿ ಸೇತುವೆಯಿಂದ ಅಂಕೋಲಾ ಮತ್ತು ಗೋಕರ್ಣದ ಜನತೆಗೆ ಸಾಕಷ್ಟು ಅನುಕೂಲ ಆಗಲಿದೆ. ಹಿಂದಿನ ಬಿಜೆಪಿ ಸರ್ಕಾರ ಈ ಸೇತುವೆ ನಿರ್ಮಾಣ ಪೂರ್ಣಗೊಳಿಸಲು ಆಸಕ್ತಿ ತೋರದ ಕಾರಣ ವಿಳಂಬವಾಗಿದೆ ಎಂದರು. ನಮ್ಮ ಸರ್ಕಾರ ಈ ಕೆಲಸ ಮಾಡಿದ್ದು ಜನತೆಗೆ ಗಂಗಾವಳಿ ನದಿ ದಾಟುವ ಕಷ್ಟ ಅಂತ್ಯವಾಗಿದೆ. ಪುಣ್ಯಕ್ಷೇತ್ರ ಗೋಕರ್ಣಕ್ಕೆ ಆಗಮಿಸುವ ಪ್ರವಾಸಿಗರಿಗೆ ಸುಮಾರು 18 ಕಿಮೀ ಪ್ರಯಾಣದ ದೂರ ಕಡಿಮೆಯಾಗಲಿದೆ ಎಂದರು.

ಬಿಜೆಪಿ ನಾಯಕರು ಚಂದ್ರು ಲಂಚ ಪ್ರಕರಣದಲ್ಲಿ ಏನು ಮಾತನಾಡ್ತಾರೆ: ಖರ್ಗೆ

ಬೆಂಗಳೂರು: ಸರ್ಕಾರದ ವಿರುದ್ಧ ಮಾತನಾಡುವ ಬಿಜೆಪಿ ನಾಯಕರು, ಶಾಸಕ ಚಂದ್ರು ಲಮಾಣಿ ಲಂಚ ಪ್ರಕರಣದಲ್ಲಿ ಏನು ಮಾತನಾಡ್ತಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ವ್ಯಂಗ್ಯವಾಡಿದ್ದಾರೆ.



ತಮ್ಮ ನಿವಾಸದ ಬಳಿ ಮಾಧ್ಯಮಗಳ ಬಳಿ ಮಾತನಾಡಿದ ಅವರು, ದಿಲ್ಲಿಯಿಂದ ಮಾಹಿತಿ ಬಂತು ಅಂತಾ ಎಐ ಶೃಂಗಸಭೆ ಕಾರ್ಯಕರ್ತರ ಪ್ರತಿಭಟನೆ ಬಗ್ಗೆ ಸುದ್ದಿಗೋಷ್ಠಿ ಮಾಡಿದ್ದಾರಲ್ಲ, ಇವಾಗ ಶಿರಹಟ್ಟಿಯಿಂದ ಇನ್ನೂ ಮಾಹಿತಿ ಬಂದಿಲ್ಲವೇ ಎಂದು ಪ್ರಶ್ನಿಸಿದ್ದಾರೆ. ರಾಹುಲ್ ಗಾಂಧಿ ಟೀಕಿಸಲು ದಿಲ್ಲಿಯಿಂದ ಮಾಹಿತಿ ಬರುತ್ತದೆ. ಆದರೆ, ಅವರ ಶಾಸಕರ ಬಗ್ಗೆ ಯಾಕೇ ಇನ್ನೂ ಮಾಹಿತಿ ಬಂದಿಲ್ಲ, ಈ ಪ್ರಶ್ನೆಗೆ ವಿಜಯೇಂದ್ರ, ಅಶೋಕ್, ಛಲವಾದಿ ಉತ್ತರ ಕೊಡಲಿ, ಬಿಜೆಪಿ ನಾಯಕರ ಹೇಳಿಕೆ ಗಮನಿಸಿದ್ದೇನೆ. ಮಾಹಿತಿ ಇಲ್ಲ, ತರಿಸಿಕೊಂಡು ನೋಡುವೆ ಅಂದಿದ್ದಾರೆ, ಇವಾಗ ಮಾತಾಡಲಿ ಎಂದು ವಾಗ್ದಾಳಿ ನಡೆಸಿದರು. ದೊಡ್ಡದಾಗಿ ವಿಧಾನಸೌಧದಲ್ಲಿ ಅಹೋರಾತ್ರಿ ಧರಣಿ ಮಾಡಿದವರೆಲ್ಲ ಯಾವಾಗ ರಾಜೀನಾಮೆ ನೀಡುತ್ತಾರೆ, ಛಲವಾದಿ ನೀಡುತ್ತಾರಾ, ಅಶೋಕ್ ನೀಡುತ್ತಾರಾ, ವಿಜಯೇಂದ್ರ ನೀಡುತ್ತಾರಾ, ಇದು ಕಾಂಗ್ರೆಸ್ ಷಡ್ಯಂತ್ರ ಅಂತಾರೆ. ಸ್ವಲ್ಪನೂ ಜ್ಞಾನವಿಲ್ಲವೇ ಎಂದು ಕಿಡಿಕಾರಿದ್ದಾರೆ.

ಭಾರತಕ್ಕೆ ವಿಶ್ವ ಮೆಚ್ಚುಗೆ

ಪುಟ ೧➜ **ಸಾಂಸ್ಕೃತಿಕ ಪರಂಪರೆ ಸಂರಕ್ಷಣೆ:** ಎಐ ಸಹಾಯದಿಂದ ಭಾರತದ ಪುರಾತನ ಗ್ರಂಥ ಗಳು, ಜ್ಞಾನ ಸಂಪತ್ತು ಮತ್ತು ಹಸ್ತಪ್ರತಿಗಳನ್ನು ಸಂರಕ್ಷಿಸಿ, ಇಂದಿನ ಪೀಳಿಗೆಗೆ ಹೊಂದುವಂತೆ ರೂಪಾಂ ತರಿಸಲಾಗುತ್ತಿರುವುದು ಜಾಗತಿಕ ನಾಯಕರನ್ನು ಆಶ್ಚರ್ಯಗೊಳಿಸಿತು.

ಈ ಶೃಂಗಸಭೆಯು ಇದುವರೆಗೆ ನಡೆದ ಅತಿ ದೊಡ್ಡ ಎಐ ಸಮ್ಮೇಳನವಾಗಿದ್ದು, ಇದೇ ಸಂದರ್ಭದಲ್ಲಿ ಭಾರತವು ಮೇಡ್ ಇನ್ ಇಂಡಿಯಾ ಎಂಬ ಮೂರು ಎಐ ಮಾದರಿಗಳನ್ನು ಬಿಡುಗಡೆ ಮಾಡಿದೆ ಎಂದು ಅವರು ಹೇಳಿದರು.

ಟಿ-20 ವಿಶ್ವಕಪ್‌ನಲ್ಲಿ ಭಾರತೀಯ ಮೂಲದ ಆಟಗಾರರ ಸಾಧನೆ: ಟಿ-20 ವಿಶ್ವಕಪ್‌ನಲ್ಲಿ ಇತರ ರಾಷ್ಟ್ರಗಳ ಪರ ಆಡುತ್ತಿರುವ ಭಾರತೀಯ ಮೂಲದ ಆಟಗಾರರನ್ನು ಉಲ್ಲೇಖಿಸಿದ ಪ್ರಧಾನಿ, ಇದರಿಂದ ಭಾರತೀಯರಿಗೆ ಹೆಮ್ಮೆಯಾಗುತ್ತದೆ ಎಂದರು. ಕೆನಡಾ ತಂಡದಲ್ಲಿ ಅತಿ ಹೆಚ್ಚು ಭಾರತೀಯ ಮೂಲದ ಆಟಗಾರರು ಇದ್ದಾರೆ. ತಂಡದ ನಾಯಕ ದಿಲ್ಪ್ರೀತ್ ಬಜ್ವಾ ಪಂಜಾಬಿನ ಗುರುದಾಸ್ಪುರದಲ್ಲಿ ಜನಿಸಿದವರು. ನವ್ನೀತ್ ಧಾಲಿವಾಲ್ ಚಂಡೀಗಢ ಮೂಲದವರು. ಹರ್ಷ ಠಾಕರ್ ಮತ್ತು ಶ್ರೇಯಸ್ ಮುವಾ ಸೇರಿದಂತೆ ಹಲವರು ಕೆನಡಾವನ್ನಷ್ಟೇ ಅಲ್ಲ, ಭಾರತದ ಗೌರವವನ್ನೂ ಹೆಚ್ಚಿಸುತ್ತಿದ್ದಾರೆ ಎಂದರು. ಇದು ಭಾರತೀಯತ್ವದ ಲಕ್ಷಣವಾಗಿದ್ದು, ಭಾರತೀಯರು ಎಲ್ಲೇ ಇದ್ದರೂ ತಮ್ಮ ತಾಯ್ನಾಡಿನೊಂದಿಗೆ ಸಂಪರ್ಕ ಉಳಿಸಿಕೊಂಡೇ ತಮ್ಮ ಕರ್ಮಭೂಮಿಯ ಅಭಿವೃದ್ಧಿಗೆ ಸಹಕಾರ ನೀಡುತ್ತಾರೆ ಎಂದು ಹೇಳಿದರು.

ರಾಜಾಜಿ ಉತ್ಸವದಲ್ಲಿ ಪ್ರತಿಮೆ ಅನಾವರಣ: ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಗುಲಾಮಗಿರಿಯ ಮನೋಭಾವದಿಂದ ಮುಕ್ತಿ ಕುರಿತು ಮಾತನಾಡಿದ್ದೇನೆ ಎಂದು ಪ್ರಧಾನಿ ನೆನಪಿಸಿದರು. ದೇಶವು ಈಗ ಗುಲಾಮಗಿರಿಯ ಚಿಹ್ನೆಗಳನ್ನು ಬಿಟ್ಟು ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ಚಿಹ್ನೆಗಳಿಗೆ ಮಹತ್ವ ನೀಡುತ್ತಿದೆ ಎಂದರು. ರಾಷ್ಟ್ರಪತಿ ಭವನದಲ್ಲಿ ಸೋಮವಾರ ರಾಜಾಜಿ ಉತ್ಸವ ಆಚರಿಸಲಾಗುತ್ತಿದ್ದು, ಈ ಸಂದರ್ಭದಲ್ಲಿ ಕೇಂದ್ರ ಪ್ರಾಂಗಣದಲ್ಲಿ ಸಿ.ರಾಜಗೋಪಾಲಾಚಾರಿ ಅವರ ಪ್ರತಿಮೆಯನ್ನು ಅನಾವರಣ ಗೊಳಿಸಲಾಗುತ್ತದೆ. ಅವರು ಸ್ವತಂತ್ರ ಭಾರತದ ಮೊದಲ ಭಾರತೀಯ ಗವರ್ನರ್ ಜನರಲ್ ಆಗಿದ್ದರು.

ಜಯಲಲಿತಾಗೆ ಗೌರವ, ಮಮಂಗಂ ಉತ್ಸವ ಉಲ್ಲೇಖ: ಫೆ.24ರಂದು ಜನ್ಮ ದಿನಾಚರಣೆ ಹಿನ್ನೆಲೆಯಲ್ಲಿ ತಮಿಳುನಾಡಿನ ಮಾಜಿ ಮುಖ್ಯಮಂತ್ರಿಯಾಗಿದ್ದ ಜೆ.ಜಯಲಲಿತಾ ಅವರಿಗೆ ಪ್ರಧಾನಿ ಗೌರವ ಸಲ್ಲಿಸಿದರು. ಸುಮಾರು 250 ವರ್ಷಗಳ ನಂತರ ಮತ್ತೆ ಜೀವಂತಗೊಂಡಿರುವ ಕೇರಳದ ಶತಮಾನಗಳ ಹಳೆಯ ಮಮಂಗಂ ಪರಂಪರೆಯನ್ನು 'ಕೇರಳ ಕುಂಭ' ಎಂದೂ ಕರೆಯಲಾಗುವ ಈ ಉತ್ಸವವನ್ನು ಮೋದಿ ಉಲ್ಲೇಖಿಸಿದರು.

570ಕ್ಕೂ ಹೆಚ್ಚು ಭತ್ತದ ತಳಿ

ಕೇರಳದ ತ್ರಿಶ್ಶೂರ್ ಜಿಲ್ಲೆಯ ಒಂದು ಗ್ರಾಮದಲ್ಲಿ 570ಕ್ಕೂ ಹೆಚ್ಚು ಭತ್ತದ ತಳಿಗಳನ್ನು ಯಶಸ್ವಿಯಾಗಿ ಬೆಳೆಯುತ್ತಿರುವುದು ಮತ್ತೊಂದು ಉದಾಹರಣೆ ಎಂದು ಅವರು ಹೇಳಿದರು. ಭಾರತವು ಪ್ರತಿವರ್ಷ ಸುಮಾರು 150 ಮಿಲಿಯನ್ ಟನ್ ಭತ್ತ ಉತ್ಪಾದಿಸುವ ಮೂಲಕ ಜಗತ್ತಿನ ಅತಿದೊಡ್ಡ ಭತ್ತ ಉತ್ಪಾದಕ ರಾಷ್ಟ್ರವಾಗಿ ಹೊರಹೊಮ್ಮಿದೆ. ದೇಶೀಯ ಅವಶ್ಯಕತೆ ಪೂರೈಸುವುದರ ಜತೆಗೆ ಜಾಗತಿಕ ಮಾರುಕಟ್ಟೆಯಲ್ಲಿಯೂ ಭಾರತ ತನ್ನ ಸ್ಥಾನವನ್ನು ಬಲಪಡಿಸುತ್ತಿದೆ. ರೈತರ ಪರಿಶ್ರಮ ಮತ್ತು ತಂತ್ರಜ್ಞಾನ ಬಳಕೆಯೇ ಕೃಷಿ ರಫ್ತು ವೃದ್ಧಿಗೆ ಕಾರಣ ಎಂದು ಪ್ರಧಾನಿ ಹೇಳಿದ್ದಾರೆ. ರೈತರು ಮಣ್ಣಿನ ನಿಜವಾದ ಆರಾಧಕರು; ಅವರು ಮಣ್ಣನ್ನು ಚಿನ್ನವಾಗಿಸುವ ಶಕ್ತಿ ಹೊಂದಿದ್ದಾರೆ ಎಂದು ಪ್ರಶಂಸಿಸಿದರು.

ಒಡಿಶಾದ ಯುವಕನ ಕೃಷಿಗೆ ಮೆಚ್ಚುಗೆ

ಇದೇ ವೇಳೆ ಒಡಿಶಾದ ಯುವ ಕೃಷಿಕ ಹಿರೋಡ್ ಪಟೇಲ್ ಅವರ ಕೃಷಿ ಮಾದರಿಯನ್ನೂ ಪ್ರಧಾನಿ ಮೆಚ್ಚಿದರು. ಕೃಷಿ ಹೊಂಡದ ಸುತ್ತ ತರಕಾರಿ, ಬಾಳೆ ಮತ್ತು ತೆಂಗು ಬೆಳೆದು, ಹೊಂಡದಲ್ಲೇ ಮೀನು ಸಾಕಾಣಿಕೆ ಮಾಡುವ ಮೂಲಕ ಅವರು ಸಮಗ್ರ ಕೃಷಿ ಮಾದರಿಯನ್ನು ಅಳವಡಿಸಿಕೊಂಡಿದ್ದಾರೆ. ಇದನ್ನು ನೋಡಲು ವಿವಿಧ ಭಾಗಗಳಿಂದ ರೈತರು ಭೇಟಿ ನೀಡುತ್ತಿದ್ದಾರೆ.

ಕರ್ನಾಟಕದ ಕೃಷಿ ಉತ್ಪನ್ನಗಳಿಗೆ ಪ್ರಶಂಸೆ

ಪುಟ ೧➜ 2006ರಲ್ಲಿ ಜಿಐ ಟ್ಯಾಗ್ ಪಡೆದಿರುವ ಈ ಎಲೆ ಮೈಸೂರು ಭಾಗದ ಸಂಸ್ಕೃತಿ ಮತ್ತು ಪರಂಪರೆಯ ಪ್ರತೀಕವಾಗಿದೆ. ಮಾರುಕಟ್ಟೆಯಲ್ಲಿ ಇದಕ್ಕೆ ಸದಾ ಉತ್ತಮ ಬೇಡಿಕೆ ಇದೆ. ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಕಾಜಿ ನಿಂಬೆಹಣ್ಣು 2022ರಲ್ಲಿ ಜಿಐ ಮಾನ್ಯತೆ ಪಡೆದಿದೆ. ತೆಳುವಾದ ಸಿಪ್ಪೆ, ಹೆಚ್ಚಿನ ರಸ ಮತ್ತು ವಿಶಿಷ್ಟ ರುಚಿಯಿಂದ ಇದು ಖ್ಯಾತಿ ಪಡೆದಿದೆ.

ಪ್ರವೇಶ ಪರೀಕ್ಷೆ ಬರೆದ 20,146 ವಿದ್ಯಾರ್ಥಿಗಳು

ಪುಟ ೧➜ **ಬೆಳಗಾವಿ ಅಗ್ರಸ್ಥಾನ:** ಪರೀಕ್ಷೆ ಬರೆದ ವಿದ್ಯಾರ್ಥಿಗಳ ಪೈಕಿ ಬೆಳಗಾವಿ ಜಿಲ್ಲೆಯಿಂದ 7353 ವಿದ್ಯಾರ್ಥಿಗಳು ಅಗ್ರ ಸಂಖ್ಯೆಯಲ್ಲಿ ಹಾಜರಾಗಿದ್ದರು. ಉಳಿದಂತೆ ಬಾಗಲಕೋಟೆ ಜಿಲ್ಲೆಯಿಂದ 4080 ಹಾಗೂ ವಿಜಯಪುರದಿಂದ ಕ್ರಮವಾಗಿ 2961 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರು. ಪರೀಕ್ಷಾ ಅರ್ಜಿ ಸಲ್ಲಿಕಾ ವ್ಯವಸ್ಥೆಯು ಕಳೆದ 3 ವರ್ಷದಿಂದ ಪ್ರತಿಭಾನ್ವಿತ ಮಕ್ಕಳನ್ನು ತಲುಪುವ ನಿಟ್ಟಿನಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ನಮೂನೆಯನ್ನು ಕ್ಯೂ ಆರ್ ಕೋಡ್ ಸಹಿತವಾಗಿ ವ್ಯವಸ್ಥೆಗೊಳಿಸಲಾಗಿತ್ತು.

ಮಕ್ಕಳ ಹಕ್ಕು ಕಾಪಾಡುವ ಭರಾಟೆಯಲ್ಲಿ ಶಿಕ್ಷಕರಿಗೆ ಬರೆ

ಸಾಗರ: ಮಕ್ಕಳ ಹಕ್ಕುಗಳನ್ನು ಕಾಪಾಡುವ ಭರಾಟೆ ಯಲ್ಲಿ ಶಿಕ್ಷಕರಿಗೆ ಆಗುತ್ತಿರುವ ಅವಮಾನ, ಶಿಕ್ಷಕ ಸಮೂಹ ಜನಮಾಧ್ಯಮದ ಎದುರು ಅನುಭವಿಸುತ್ತಿರುವ ಅವ ಮಾನ ಯಾರಿಗೂ ಕಾಣುತ್ತಿಲ್ಲ ಎಂದು ಹೊಸ ದಿಗಂತ ಸಮೂಹ ಸಂಪಾದಕ ವಿನಾಯಕ ಭಟ್ ಮೂರೂರು ತಿಳಿಸಿದರು.

ಇಲ್ಲಿನ ರಾಘವೇಶ್ವರ ಸಭಾಭವನದಲ್ಲಿ ಶ್ರೀ ಅಖಿಲ ಹವ್ಯಕ ಮಹಾಸಭಾ ವತಿಯಿಂದ ಭಾನುವಾರ ಆಯೋಜಿಸಿದ್ದ ಶಿವಮೊಗ್ಗ ಜಿಲ್ಲಾ ಹವ್ಯಕ ಶಿಕ್ಷಕ ಸಮಾವೇಶ 'ಜ್ಞಾನಮ್' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಹಿಂದೆ ಶಿಷ್ಯರು ತಮ್ಮ ಗುರುಗಳನ್ನು ಶಾಲಾರಂಭಕ್ಕೆ ತಳಿರು ತೋರಣ ಹಾಕಿ ಬರಮಾಡಿ ಕೊಳ್ಳುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದ್ದು ಶಿಕ್ಷಕರೆ ತೋರಣ ಕಟ್ಟಿ ಶಾಲೆಯ ಬಾಗಿಲಿನಲ್ಲಿ ಮಕ್ಕಳಿಗೆ ಕೈಮುಗಿದು ಒಳಗೆ ಬನ್ನಿ ಎಂದು ಕರೆಯುವ ಸ್ಥಿತಿ ನಿರ್ಮಾಣವಾಗಿದೆ. ಮಕ್ಕಳ ಹಕ್ಕು ರಕ್ಷಣೆ ಬಗ್ಗೆ ಒತ್ತು ಕೊಡುವ ಭರಾಟೆಯಲ್ಲಿ ಶಿಕ್ಷಕ ಸಮೂಹದ ಹಕ್ಕು ಕಿತ್ತುಕೊಳ್ಳುವ ತನ್ಮೂಲಕ ಅವರನ್ನು ಅವಮಾನಿಸುವ ಕೆಲಸವಾಗುತ್ತಿರುವುದನ್ನು ಯಾರೂ ಗಮನಿಸದೆ ಇರುವುದು ವಿಪರ್ಯಾಸದ ಸಂಗತಿ. ರಸಹೀನ ಪಠ್ಯವನ್ನು ಒಲ್ಲದ ಮನಸ್ಸಿನಿಂದ ಬೋಧಿಸುವ ದುಸ್ಥಿತಿ ಶಿಕ್ಷಕ ಸಮೂಹದ್ದು. ಶಿಕ್ಷಣದ ಮೂಲಕ ಜ್ಞಾನಮ್ ಸಿಗಬೇಕಾಗಿತ್ತು. ಆದರೆ ಪಾಠಮ್ ಮಾತ್ರ ಮಕ್ಕಳಿಗೆ ಸಿಗುತ್ತಿದೆ. ಮಗು ಮೊದಲ ರ್‍ಯಾಂಕ್ ಬರುತ್ತಿದೆ. ಆದರೆ ಮಗುವಿನ ಜ್ಞಾನ ಬೆಳೆಯುತ್ತಿಲ್ಲ. ಅಂಕವನ್ನು ಮಾನದಂಡವಾಗಿ ಇರಿಸಿಕೊಂಡು ನೀಡುವ ಶಿಕ್ಷಣ, ಅದನ್ನು ಪಡೆಯುವ ಮಕ್ಕಳು ಯಾವತ್ತೂ ಜ್ಞಾನವಂತರಾಗಲು ಸಾಧ್ಯವಿಲ್ಲ ಎಂದು ಅಭಿಪ್ರಾಯಿಸಿದರು. ಶಿಕ್ಷಕರು ಮಕ್ಕಳಿಗೆ ನೈತಿಕ ಶಿಕ್ಷಣವನ್ನು ಕಡ್ಡಾಯವಾಗಿ ಕಲಿಸಿ ಕೊಡುವ ತುರ್ತು ಅಗತ್ಯ ಇದೆ. ಪಾಠದಲ್ಲಿ ಮಕ್ಕಳಿಗೆ ನೈತಿಕತೆ, ಮಾನವೀಯತೆ, ಮೌಲ್ಯ ಪರಿಪಾಲನೆ ಸಿಗುತ್ತಿಲ್ಲ. ನಲವತ್ತೈದು ನಿಮಿಷದ ಒಂದು ಪಿರಿಯಡ್‌ನಲ್ಲಿ ಸಣ್ಣಸಣ್ಣ ಕಥೆಯನ್ನು ಮಕ್ಕಳಿಗೆ ಹೇಳುವ ಮೂಲಕ ಅವರಲ್ಲಿ ಮೌಲ್ಯ ತುಂಬುವ ಕೆಲಸವಾಗಬೇಕು. ಇತಿಹಾಸದಲ್ಲಿ ಘಟಿಸಿದ್ದು ಶೇ.10ರಷ್ಟು ಮಾತ್ರ ಪಠ್ಯದಲ್ಲಿ ಸಿಗುತ್ತದೆ. ಶೇ.90ರಷ್ಟು ಊಹಾಪೋಹದ್ದು ಎನ್ನುವ ಮಾತು ಇದೆ. ಆದರೂ ನಮ್ಮ ಶಿಕ್ಷಕ ಸಮೂಹ ಮಕ್ಕಳ ಜ್ಞಾನದ ಜೊತೆ ಚೆಲ್ಲಾಟವಾಡುತ್ತಿಲ್ಲ. ಪಠ್ಯದ ಜೊತೆ ಮಕ್ಕಳ ಬೌದ್ಧಿಕ ಶಕ್ತಿ ವೃದ್ಧಿಸುವ ಪಾಠಪ್ರವಚನಗಳಿಗೆ ಹೆಚ್ಚಿನ ಒತ್ತು ನೀಡುತ್ತಿದ್ದಾರೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಹೊಸ ದಿಗಂತ ಸಮೂಹ ಸಂಪಾದಕ ವಿನಾಯಕ ಭಟ್ ಮೂರೂರು ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಹಾಸ್ಯ ಸಾಹಿತಿ ಭುವನೇಶ್ವರಿ ಹೆಗಡೆ, ಡಾ. ಗಿರಿಧರ ಕಜೆ, ಪ್ರಸನ್ನ ಕೆರೆಕೈ, ಆರ್.ಎಂ.ಹೆಗಡೆ ಬಾಳೆಸರ, ಶ್ರೀಧರ್ ಭಟ್ ಕೆಕ್ಕಾರು, ಪ್ರಧಾನ ಕಾರ್ಯದರ್ಶಿ ವೇಣು ವಿಘ್ನೇಶ ಸಂಪಾ ಉಪಸ್ಥಿತರಿದ್ದರು.



ಹೊಸ ದಿಗಂತ ಸಮೂಹ ಸಂಪಾದಕ ವಿನಾಯಕ ಭಟ್ ಮೂರೂರು ಕಳವಳ

ಉತ್ತಮ ಪ್ರಜೆಯಾಗಿ ಬೆಳೆಸಿ

ಮನೆಯಲ್ಲಿ ತಂದೆತಾಯಿ ಶಿಕ್ಷಕರನ್ನು ನಂಬಿ ಶಾಲೆಗೆ ಕಳಿಸಿರುತ್ತಾರೆ. ಅವರು ಜೀವನೋಪಾಯಕ್ಕಾಗಿ ಬೇರೆಬೇರೆ ಉದ್ಯೋಗಕ್ಕೆ ಹೋಗಿರುತ್ತಾರೆ. ಶಿಕ್ಷಕರು ಶಾಲೆಗೆ ಬರುವ ಮಕ್ಕಳ ಮನಸ್ಸನ್ನು ಅರಿತು ಅವರನ್ನು ಉತ್ತಮ ಪ್ರಜೆಯಾಗಿ ನೀವು ರೂಪಿಸಬೇಕು. ಈಗಿನ ಮಕ್ಕಳು ತುಂಬಾ ಬುದ್ದಿವಂತರಿರುತ್ತಾರೆ. ಅವರಿಗೆ ಜ್ಞಾನದ ಮಾರ್ಗವನ್ನು ತೋರಿಸಬೇಕಾಗಿದೆ. ಜನರು ಶಿಕ್ಷಕರನ್ನು ನೋಡುವ ಮನಸ್ಥಿತಿ ಸಹ ಬದಲಾಗಬೇಕು. ಇಂತಹ ಸಮಾವೇಶಗಳು ನಿಮ್ಮೊಳಗಿನ ಶಿಕ್ಷಕನನ್ನು ಇನ್ನಷ್ಟು ಜಾಗೃತಿಗೊಳಿಸಲು ಅವಕಾಶ ಕಲ್ಪಿಸುತ್ತದೆ ಎಂದು ವಿನಾಯಕ ಭಟ್ ಮೂರೂರು ಹೇಳಿದರು.



ಉದ್ಘಾಟನೆ...

ಅಂಕೋಲಾ ತಾಲೂಕಿನ ಮಂಜಗುಣಿ ಗ್ರಾಮದಿಂದ ಕುಮಟಾ ತಾಲೂಕಿನ ಗ್ರಾಮಗಳಿಗೆ ಸಂಪರ್ಕ ಕಲ್ಪಿಸಲು ಗಂಗಾವಳಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಯನ್ನು ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಡಿಸಿಎಂ ಡಿಕೆ ಶಿವಕುಮಾರ್, ಸಚಿವ ಮಂಕಾಳ ವೈದ್ಯ, ಶಾಸಕರಾದ ಆರ್.ವಿ.ದೇಶಪಾಂಡೆ, ಭೀಮಣ್ಣ ನಾಯ್ಕ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ಕಿರುಸುದ್ದಿ

ಮಾಜಿ ಶಾಸಕ ಕೆ. ಸುರೇಶ್ ಗೌಡ ಕಾರು ಪಲ್ಟಿ

ಮಂಡ್ಯ: ಚಾಲಕನ ನಿಯಂತ್ರಣ ತಪ್ಪಿದ ಕಾರು ಪಲ್ಟಿಯಾದ ಪರಿಣಾಮ ಮಾಜಿ ಶಾಸಕ ಕೆ. ಸುರೇಶ್‌ಗೌಡ ಗಾಯಗೊಂಡಿರುವ ಘಟನೆ ತಾಲೂಕಿನ ಕೊಪ್ಪ-ಬಸರಾಳು ಮಧ್ಯದ ಮಾಚಗೊಂಡನಹಳ್ಳಿ ಗೇಟ್ ಬಳಿ ನಡೆದಿದೆ. ಮದ್ದೂರು ತಾಲೂಕು ಹೊಸಗಾವಿ ಗ್ರಾಮದ ಮಹದೇಶ್ವರ ದೇವಾಲಯದಲ್ಲಿ ಸುರೇಶ್‌ಗೌಡ ಅವರ ಆತ್ಮೀಯ ಸ್ನೇಹಿತರ ಮದುವೆ ಕಾರ್ಯ ಮುಗಿಸಿಕೊಂಡು ನಾಗಮಂಗಲಕ್ಕೆ ವಾಪಸ್ಸು ಬರುವಾಗ ಚಾಲಕನ ನಿಯಂತ್ರಣ ತಪ್ಪಿದ ಕಾರು ಉರುಳಿಬಿದ್ದು ಈ ದುರ್ಘಟನೆ ಸಂಭವಿಸಿದೆ. ತಕ್ಷಣ ಸ್ಥಳಕ್ಕೆ ಧಾವಿಸಿದ ಪೊಲೀಸರು ಗಾಯಾಳು ಕೆ. ಸುರೇಶ್‌ಗೌಡ ಮತ್ತು ಅವರ ಕಾರು ಚಾಲಕನನ್ನು ಮಿಮ್ಸ್ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಸುರೇಶ್‌ಗೌಡ ಅವರ ಕೈಗೆ ಪೆಟ್ಟು ಬಿದ್ದಿದ್ದರೆ, ಚಾಲಕನಿಗೆ ಗಂಭೀರ ಗಾಯಗಳಾಗಿವೆ. ಅಪಘಾತದ ರಭಸಕ್ಕೆ ಕಾರು ಭಾಗಶಃ ಜಖಂಗೊಂಡಿದೆ. ಸುರೇಶ್ ಗೌಡ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವರ್ಗಾವಣೆ ಮಾಡುವಾಗ ಹುದ್ದೆ ತೋರಿಸಿ: ಹೈಕೋರ್ಟ್

ಬೆಂಗಳೂರು: ರಾಜ್ಯ ಸರ್ಕಾರಿ ಅಧಿಕಾರಿಗಳನ್ನು ವರ್ಗಾವಣೆ ಮಾಡುವಾಗ ಕಡ್ಡಾಯವಾಗಿ ಹುದ್ದೆಯನ್ನು ತೋರಿಸಬೇಕು. ಹುದ್ದೆ ತೋರಿಸದೆ ವರ್ಗಾವಣೆ ಮಾಡುವುದು ಸಾರ್ವಜನಿಕ ಹಣದ ದುರ್ವಿನಿಯೋಗ ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ಅಬಕಾರಿ ಉಪ ಆಯುಕ್ತ ಕೆ. ಅರುಣ್ ಕುಮಾರ್ ಅವರಿಗೆ ಹುದ್ದೆ ತೋರಿಸದೇ ವರ್ಗಾವಣೆ ಮಾಡಿದ್ದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಈ ತೀರ್ಪು ನೀಡಿದೆ. ಹುದ್ದೆ ತೋರಿಸದೆ ವರ್ಗಾವಣೆ ಮಾಡುವುದರಿಂದ ಕೆಲಸ ಮಾಡದ ಅಧಿಕಾರಿಗಳಿಗೆ ವೇತನ ನೀಡಬೇಕಾಗುತ್ತದೆ. ಇದು ತೆರಿಗೆದಾರರ ಹಣವನ್ನು ವ್ಯರ್ಥ ಮಾಡಿದಂತೆ. ಇಂತಹ ಕ್ರಮಗಳಿಂದ ಸರ್ಕಾರದ ಬೊಕ್ಕಸಕ್ಕೆ ಭಾರಿ ನಷ್ಟ ಉಂಟಾಗುತ್ತದೆ ಎಂದು ನ್ಯಾ. ಎಸ್.ಜಿ. ಪಂಡಿತ್ ಮತ್ತು ನ್ಯಾ. ಕೆ.ವಿ. ಅರವಿಂದ್ ಅವರಿದ್ದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿದೆ. ಹುದ್ದೆ ತೋರಿಸದೆ ವರ್ಗಾವಣೆ ಮಾಡುವ ಆದೇಶ ಹೊರಡಿಸಿದರೆ, ಅದಕ್ಕೆ ಇಲಾಖೆಯ ಮುಖ್ಯಸ್ಥರೇ ನೇರ ಹೊಣೆಗಾರರಾಗುತ್ತಾರೆ. ಅಂತಹ ಸಂದರ್ಭದಲ್ಲಿ ಅಧಿಕಾರಿಗಳು ಹುದ್ದೆಗಾಗಿ ಕಾಯುವ ಅವಧಿಯ ವೇತನವನ್ನು ಕಾರಣಕರ್ತರಾದ ಅಧಿಕಾರಿಯಿಂದಲೇ ವಸೂಲಿ ಮಾಡಬೇಕು ಎಂದು ನ್ಯಾಯಾಲಯ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಸಚಿವ ಶಿವಾನಂದ ಪಾಟೀಲರಿಗೆ ಮಾತೃ ವಿಯೋಗ

ಬೆಂಗಳೂರು: ಸಚಿವ ಶಿವಾನಂದ ಪಾಟೀಲ ಅವರ ತಾಯಿ ಗಂಗಾಬಾಯಿ ಸಿದ್ಧರಾಮಪ್ಪ ಪಾಟೀಲ (84) ಅವರು ವಯೋಸಹಜವಾಗಿ ಭಾನುವಾರ ಬೆಳಗ್ಗೆ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆ ಸಂಜೆ ವಿಜಯಪುರ ನಗರದ ಜಮಖಂಡಿ ರಸ್ತೆಯಲ್ಲಿರುವ ತೋಟದಲ್ಲಿ ನೆರವೇರಿತು. ವಿವಿಧ ಪಕ್ಷಗಳ ಹಲವು ಮುಖಂಡರು, ಅಪಾರ ಅಭಿಮಾನಿಗಳು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಸಚಿವರಿಗೆ ಸಾಂತ್ವನ ಹೇಳಿದರು. ಮೃತರಿಗೆ ಪುತ್ರರಾದ ಶಿವಶರಣಗೌಡ ಪಾಟೀಲ, ಶಿವಾನಂದ ಪಾಟೀಲ ಹಾಗೂ ವಿಜುಗೌಡ ಪಾಟೀಲ, ಪುತ್ರಿ ಮಹಾದೇವಿ ಪಾಟೀಲ ಇದ್ದಾರೆ.



ಕಾರವಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಂಪರ್ ಭರವಸೆ

ಜಿಲ್ಲೆಗಳಿಗೆ ಸ್ಪೆಷಾಲಿಟಿ ಆಸ್ಪತ್ರೆ

ಕಾರವಾರ: ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪ್ರಸಕ್ತ ಸರ್ಕಾರದ ಅವಧಿಯಲ್ಲಿಯೇ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಕ್ಯಾನ್ಸರ್ ಘಟಕವನ್ನು ಸ್ಥಾಪಿಸಲು ಯೋಚಿಸಲಾಗಿದೆ. ಅದರಂತೆ ಕಾರವಾರದಲ್ಲೂ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಗೆ ಈ ಸಲದ ಬಜೆಟ್‌ನಲ್ಲೇ ಮಂಜೂರು ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಅವರು ಭಾನುವಾರ ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ ನಿರ್ಮಿಸಿರುವ 450 ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಮತ್ತು ಮತ್ತು ಯಲ್ಲಾಪುರ ತಾಲೂಕಿನ ಖಾನಾಪುರ ತಾಳಗುಪ್ಪ ರಾಜ್ಯ ಹೆದ್ದಾರಿ 93ರ ಕಿ.ಮೀ 82.50 ರಲ್ಲಿ ಸೇತುವೆ ನಿರ್ಮಾಣ ಯಲ್ಲಾಪುರ ಪಟ್ಟಣದ ನಿರೀಕ್ಷಣ ಮಂದಿರದ ಹೊಸ ಕಟ್ಟಡ ನಿರ್ಮಾಣ ಹಾಗೂ ಮುಂಡಗೋಡ ತಾಲೂಕಿನ ಹೊಸ ಪ್ರವಾಸಿ ಮಂದಿರ ನಿರ್ಮಾಣ ಕಾಮಗಾರಿಗಳ ಉದ್ಘಾಟಿಸಿ ಮಾತನಾಡಿದರು.

ರಾಜ್ಯದ 22 ಜಿಲ್ಲೆಗಳಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜುಗಳಿವೆ. ಇದರ ಮುಖ್ಯ ಉದ್ದೇಶ ಸಾಮಾನ್ಯರು, ಬಡವರಿಗೆ ಅನುಕೂಲವಾಗಬೇಕು ಎನ್ನುವುದು. ಶ್ರೀಮಂತರು ಹಣ ಉಳ್ಳವರು ಖಾಸಗಿ ಆಸ್ಪತ್ರೆಗೆ ಹೋಗುತ್ತಾರೆ. ಎಲ್ಲ ಜಿಲ್ಲೆಗಳಲ್ಲಿ ಇನ್ನು ಮುಂದೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸ್ಥಾಪಿಸಬೇಕೆನ್ನುವದು ನಮ್ಮ ಸರ್ಕಾರದ ಯೋಚನೆಯಾಗಿದೆ. ಅದರಂತೆ ಕಾರ್ಯಶೀಲರಾಗುತ್ತೇವೆ. ಇದರ ಜೊತೆಗೆ ಕ್ಯಾನ್ಸರ್ ಘಟಕವು ಸೇರಲಿದೆ ಎಂದರು. 2016ರಲ್ಲಿ ನಾನು ಮುಖ್ಯಮಂತ್ರಿ ಮತ್ತು ದೇಶಪಾಂಡೆ ಸಚಿವರಿದ್ದಾಗ ಕಾರವಾರದಲ್ಲಿ ಮೆಡಿಕಲ್ ಕಾಲೇಜಿಗೆ ಶಂಕುಸ್ಥಾಪನೆ ಮಾಡಲಾಗಿತ್ತು. ಆದರೆ, ನಂತರದ ದಿನಗಳಲ್ಲಿ ಅದು ಅಲ್ಲಿಯೆ ನಿಂತು ಉಳಿಯಿತು. ಈಗ 198 ಕೋ ರೂ. ವೆಚ್ಚದಲ್ಲಿ ನಮ್ಮ ಸರಕಾರದಲ್ಲಿ 450 ಹಾಸಿಗೆಗಳ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಸಿದ್ಧ ಮಾಡಿದೆ. ಇಲ್ಲಿ ಮೊದಲು ಜನರು ಚಿಕಿತ್ಸೆಗಾಗಿ ಹುಬ್ಬಳ್ಳಿ ಮತ್ತು ಮಂಗಳೂರಿಗೆ ಹೋಗಬೇಕಿತ್ತು. ಆದರೆ, ಮುಂಬರುವ ದಿನಗಳಲ್ಲಿ ಇಲ್ಲಿಯೇ ಸೌಲಭ್ಯ ದೊರೆಯಲಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಮಾತನಾಡಿದರು. ವೇದಿಕೆಯಲ್ಲಿ ಆಡಳಿತ ಸುಧಾರಣ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ, ಶಾಸಕರುಗಳಾದ ಸತೀಶ ಸೈಲ್, ಶಿವರಾಮ ಹೆಬ್ಬಾರ, ಭೀಮಣ್ಣ ನಾಯ್ಕ, ಗಣಪತಿ ಉಳ್ವೇಕರ್ ಹಾಗೂ ಆರೋಗ್ಯ ಇಲಾಖೆಯ ಕಾರ್ಯದರ್ಶಿಗಳು ಹಾಜರಿದ್ದರು.



ಆರೋಗ್ಯ ಸೇವೆಗೆ ಒತ್ತು

ಮುಖ್ಯಮಂತ್ರಿಗಳು ರಾಜ್ಯದ ಎಲ್ಲ ಜನರಿಗೆ ಆರೋಗ್ಯ ಸೇವೆಗೆ ಹೆಚ್ಚಿನ ಮಹತ್ವವನ್ನು ನೀಡಿದ್ದು, ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ ನೀಡಲು ಮುಂದಾಗಿದ್ದಾರೆ. ಕಾರವಾರ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಘಟಕವೂ ಮಂಜೂರಾಗಿದೆ. ಅದೇ ರೀತಿ ಟ್ರಾಮಾ ಕೇಂದ್ರವೂ ಆಗಲಿದೆ. ಸುಮಾರು 20 ಕೋ.ರೂ ವಿವಿಧ ವೈದ್ಯಕೀಯ ಉಪಕರಣವನ್ನು ನೀಡಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪಾಟೀಲ್ ಹೇಳಿದರು.

ಎಲ್ಲೆಂದರಲ್ಲಿ ರಾಜಕೀಯ ಚರ್ಚೆ ಮಾಡಲ್ಲ: ಡಿಕೆಶಿ

ಬೆಂಗಳೂರು: ನಾನು ದೆಹಲಿಗೆ ಹೋಗುವುದು ಬರುವುದು ಇದ್ದೇ ಇರುತ್ತದೆ. ನಾನು ಹೋಗದೆ ಮತ್ಯಾರು ಹೋಗುತ್ತಾರೆ? ಅವರು ಯಾವಾಗ ಕರೆಯುತ್ತಾರೋ ಆಗೆಲ್ಲಾ ಹೋಗುತ್ತೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ ತಿಳಿಸಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾನು ರಾಜ್ಯ ರಾಜಕೀಯದ ಬಗ್ಗೆ ಎಲ್ಲೆಂದರಲ್ಲಿ ಚರ್ಚೆ ಮಾಡುವುದಿಲ್ಲ. ಅದು ಸಾರ್ವಜನಿಕವಾಗಿ ಚರ್ಚಿಸುವ ವಿಚಾರವೂ ಅಲ್ಲ ಎಂದರು. ಪ್ರಿಯಾಂಕಾ ಗಾಂಧಿ ಅವರ ಜತೆಗೆ ಮಾತನಾಡಿರುವ ವಿಚಾರ ಬಗ್ಗೆ ಬಹಿರಂಗವಾಗಿ ಚರ್ಚಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಪ್ರಧಾನಿ ಮೋದಿಯವರ ಬಗ್ಗೆ ರಾಹುಲ್ ಗಾಂಧಿ ಮಾಡಿರುವ ಟೀಕೆಗೆ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, ರಾಹುಲ್ ಗಾಂಧಿ ಅವರು ದೇಶದ ಹಿತಕ್ಕಾಗಿ ಏನು ಬೇಕೋ ಅದನ್ನು ಮಾಡುತ್ತಾರೆ, ಮಾತಾಡುತ್ತಾರೆ. ಅಮೆರಿಕದ ಜತೆಗಿನ ತೆರಿಗೆ ಒಪ್ಪಂದದಿಂದ ದೇಶದ ಪ್ರತಿ ರೈತನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ರಾಹುಲ್ ಗಾಂಧಿ ಅವರು ಲೋಕಸಭೆ ವಿರೋಧ ಪಕ್ಷದ ನಾಯಕರಾಗಿ ಚರ್ಚೆ ಮಾಡುತ್ತಾರೆ ಎಂದರು. ಸೋಮವಾರ (ಫೆ.23) ಕೋಲಾರ ಹಾಗೂ ಚಿಕ್ಕಬಳ್ಳಾಪುರ ಎರಡೂ ಸೇರಿಸಿ ಮನರೇಗಾ ಉಳಿಸಿ ಸಮಾವೇಶ ಹಮ್ಮಿಕೊಂಡಿದ್ದೇವೆ. ದೆಹಲಿಯಿಂದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಆಗಮಿಸುತ್ತಿದ್ದಾರೆ ಎಂದರು.



ರಸ್ತೆ ಕಾಮಗಾರಿ ಮುಗಿಸಲು ಏಪ್ರಿಲ್‌ಗಡುವು

ಶನಿವಾರ ಜಿಬಿಎ ಕಾಮಗಾರಿಗಳ ಪ್ರಗತಿ ಪರಿಶೀಲನೆ ಸಭೆ ಮಾಡಿದ್ದು, ಬೆಂಗಳೂರು ನಗರದಲ್ಲಿ 5065 ಕೋಟಿ ರೂ. ಮೊತ್ತದ ರಸ್ತೆ ಕಾಮಗಾರಿಗಳು ನಡೆಯುತ್ತಿವೆ. ಎಲ್ಲವನ್ನೂ ಏಪ್ರಿಲ್ ತಿಂಗಳಾಂತ್ಯದಲ್ಲಿ ಪೂರ್ಣಗೊಳಿಸಲು ಸೂಚಿಸಲಾಗಿದೆ. ಬೆಂಗಳೂರು ಸುತ್ತಮುತ್ತ 40 ಕಿ.ಮೀ ಒಳಗೆ ಗುಡ್ಡಗಳ ಅಕ್ಕಪಕ್ಕ ಜಾಗ ಕೊಟ್ಟರೆ ಸರ್ಕಾರ ಅದನ್ನು ಖರೀದಿ ಮಾಡಲಿದೆ. ಸುಮಾರು 100 ಎಕರೆಯಷ್ಟು ಖರೀದಿ ಮಾಡಲಾಗುವುದು ಎಂದು ಡಿ.ಕೆ.ಶಿವಕುಮಾರ್ ಮಾಹಿತಿ ನೀಡಿದರು. ಕುಮಾರಸ್ವಾಮಿ ಹಾಗೂ ಪರಮೇಶ್ವರ್ ಅವರ ಭೇಟಿ ಬಗ್ಗೆ ಪ್ರತಿಕ್ರಿಯಿಸಿದ ಅವರು, ಪರಮೇಶ್ವರ್ ಅವರು ತಮ್ಮ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಅಥವಾ ಕ್ಷೇತ್ರಕ್ಕೆ ಸಂಬಂಧಿಸಿದ ಇತರೆ ವಿಚಾರವಾಗಿ ಚರ್ಚೆ ಮಾಡಲು ಭೇಟಿಯಾಗಿರಬಹುದು. ರಾಜ್ಯ ಸಚಿವರು ಹಾಗೂ ಕೇಂದ್ರ ಸಚಿವರು ಭೇಟಿ ಮಾಡಿದ್ದಾರೆ ಎಂದು ತಿಳಿಸಿದರು.

ಬೆಳವಣಿಗೆ ಸಹಿಸದೆ ಟೀಕೆ: ಛಲವಾದಿ

ಬೆಂಗಳೂರು: ಸಚಿವ ಪ್ರಿಯಾಂಕ್ ಖರ್ಗೆ ಅವರದು ಪಿತ್ರಾರ್ಜಿತ ರಾಜಕಾರಣ, ನನ್ನದು ಸ್ವಯಾರ್ಜಿತ ರಾಜಕಾರಣ. ನಾನು ಬಿಜೆಪಿಯಲ್ಲಿ ಇಷ್ಟು ಮಟ್ಟಕ್ಕೆ ಬೆಳೆದಿರುವುದನ್ನು ಸಹಿಸದೇ ಪ್ರಿಯಾಂಕ್ ಟೀಕೆ ಮಾಡುತ್ತಿದ್ದಾರೆ ಎಂದು ವಿಧಾನ ಪರಿಷತ್‌ನ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಅಪ್ಪ ರಾಜಕಾರಣಿ ಅಲ್ಲ; ಓದು ಬರಹ ತಿಳಿದವರಲ್ಲ, ನಾನು ಹಳ್ಳಿಯಲ್ಲಿ ಹುಟ್ಟಿ ಇವತ್ತು ಸ್ವಯಾರ್ಜಿತವಾಗಿ ಈ ಮಟ್ಟಕ್ಕೆ ಬೆಳೆದಿದ್ದೇನೆ. ಇದು ಸ್ವಯಾರ್ಜಿತ ರಾಜಕಾರಣ. ಅವರದು ಪಿತ್ರಾರ್ಜಿತ ರಾಜಕಾರಣ. ಅವರ ಅಪ್ಪನ ಹೆಸರು ಜೊತೆಯಲ್ಲಿ ಇಲ್ಲದೇ ಇದ್ದರೆ ಅವರು ಗ್ರಾಮ ಪಂಚಾಯತ್ ಸದಸ್ಯರಾಗಲೂ ಅರ್ಹರಲ್ಲ. ಪ್ರಿಯಾಂಕ್ ಖರ್ಗೆ ರಾಜಕಾರಣಿಯೇ ಅಲ್ಲ. ಅಪ್ಪನ ನೆರಳಲ್ಲಿ ಅಧಿಕಾರ ಅನುಭವಿಸುತ್ತಿದ್ದಾರೆ. ಅವರಿಗೆ ಯಾವ ಬದ್ಧತೆಯೂ ಇಲ್ಲ ಎಂದರು.

ಇಂದು ಚಾಮರಾಜ ನಗರ, ಮೈಸೂರು, ರಾಯಚೂರು, ಕಲಬುರಗಿಯಲ್ಲಿ ಪ್ರಿಯಾಂಕ್ ಖರ್ಗೆ ಅವರ ಫೋಟೊ ಇಟ್ಟುಕೊಂಡು ಚಪ್ಪಲಿಯಲ್ಲಿ ಹೊಡೆಯುತ್ತಿದ್ದಾರೆ. ದಲಿತರ 39 ಸಾವಿರ ಕೋಟಿ ರೂ.ಗಳನ್ನು ನುಂಗಿದರೂ ಒಂದು ಮಾತನಾಡದ ಅವರು ಅದನ್ನು ಸಮರ್ಥಿಸಿಕೊಳ್ಳುತ್ತಾರೆ. ಜನಪರವಾಗಿ ಕೆಲಸ ಮಾಡಿದ್ದರೆ ಹೀಗೆ ಮಾಡುತ್ತಿರಲಿಲ್ಲ ಎಂದು ತಿಳಿಸಿದರು. ಪ್ರಿಯಾಂಕ್ ಖರ್ಗೆ ಅವರು ಒಳ ಮೀಸಲಾತಿ ಬಗ್ಗೆ ಒಂದು ಮಾತೂ ಆಡಲಿಲ್ಲ. ಒಳ ಮೀಸಲಾತಿ ನ್ಯೂನತೆಗಳ ಬಗ್ಗೆ ಬೆಳಗಾವಿ ಅಧಿವೇಶನದಲ್ಲಿ ಗಮನ ಸೆಳೆದಿದ್ದೆ. ಅನ್ಯಾಯವಾಗುತ್ತಿದೆ ಎಂದು ಮುಖ್ಯಮಂತ್ರಿಗಳಿಗೆ ಸದನದಲ್ಲಿ ಎಚ್ಚರಿಸಿದ್ದೆ. ಆದರೆ, ಅವರು ಗಮನ ಹರಿಸಲಿಲ್ಲ. ಇದನ್ನು ಸರಿ ಮಾಡಿ ಎಂದು ಸಚಿವ ಡಾ. ಎಚ್.ಸಿ. ಮಹದೇವಪ್ಪ ಅವರಿಗೆ ಹೇಳಿದ್ದೆ. ಅವರೂ ಗಮನ ಹರಿಸಲಿಲ್ಲ. ಒಳಮೀಸಲಾತಿಯಲ್ಲಿ ಜನಾಂಗಗಳ ಲೋಪ ಅಲ್ಲ, ಅದು ಸರ್ಕಾರದ ಲೋಪ. ಇದನ್ನು ಸರ್ಕಾರವೇ ಸರಿ ಮಾಡಬೇಕು ಎಂದು ಆಗ್ರಹಿಸಿದರು.

ಸಾಮಾಜಿಕ ನ್ಯಾಯ ಯಾರ ಅಪ್ಪನ ಮನೆ ಆಸ್ತಿ ಅಲ್ಲ. ನಾನು ಪ್ರತಿಪಕ್ಷದ ನಾಯಕ ಆಗಲು ಸಾಮಾಜಿಕ ನ್ಯಾಯ ಕಾರಣ. ಸ್ವಾತಂತ್ರ್ಯ ಬಂದು 80 ವರ್ಷ ಆಗುತ್ತಿದ್ದರೂ ಅಂದಿನಿಂದ ನೀವು ದಲಿತರನ್ನು ವಂಚನೆ ಮಾಡುತ್ತಾ ಬಂದಿದ್ದೀರಿ ಎಂದು ಟೀಕಿಸಿದರು.



ಶಾಸಕ ಚಂದ್ರು ಲಮಾಣಿ ಬಂಧನ: ವ್ಯವಸ್ಥಿತ ಸಂಚು

ಶಾಸಕ ಚಂದ್ರು ಲಮಾಣಿ ಅವರನ್ನು ಲೋಕಾಯುಕ್ತ ದಾಳಿಯಲ್ಲಿ ಸಿಲುಕಿಸಿರುವುದು ವ್ಯವಸ್ಥಿತ ಸಂಚು. ನಮ್ಮ ಪಕ್ಷ ಇಂತಹ ಯಾವುದೇ ವಿಚಾರಗಳನ್ನು ಸಹಿಸುವುದಿಲ್ಲ. ಕಾಂಗ್ರೆಸ್‌ನವರು ಎಲ್ಲರನ್ನು ಟಾರ್ಗೆಟ್ ಮಾಡಿದ್ದಾರೆ. ಬೈರತಿ ಬಸವರಾಜ್, ಆರ್. ಅಶೋಕ, ವಿಜಯೇಂದ್ರ, ರಾಮಮೂರ್ತಿ, ಮುನಿರತ್ನ ಅವರನ್ನು ಟಾರ್ಗೆಟ್ ಮಾಡಿದರು ಎಂದು ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಕಾಡಾನೆ ದಾಳಿಗೆ ಮಹಿಳೆ ಸಾವು; ಪ್ರತಿಭಟನೆ

ಬಾಳೆಹೊನ್ನೂರು: ತಾಲೂಕಿನ ಹುಣಸೇಹಳ್ಳಿ ಸಮೀಪ ಪುರ ಗ್ರಾಮದ ಕಾಫಿ ತೋಟದಲ್ಲಿ ಭಾನುವಾರ ಕಾಡಾನೆ ದಾಳಿಗೆ ಬಳ್ಳಾರಿ ಮೂಲದ ಕಾರ್ಮಿಕ ಮಹಿಳೆಯೊಬ್ಬರು ಮೃಪಟ್ಟಿದ್ದಾರೆ.

ಒಂದು ವಾರದ ಅಂತರದಲ್ಲಿ ಆನೆ ದಾಳಿಯಿಂದ ಸಂಭವಿಸಿದ ಎರಡನೇ ಸಾವು ಇದಾಗಿದ್ದು, ಘಟನೆಯಿಂದ ರೊಚ್ಚಿಗೆದ್ದ ಸ್ಥಳೀಯರು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದ್ದು, ಪರಿಸ್ಥಿತಿ ಉದ್ರಿಕ್ತಗೊಂಡ ಹಿನ್ನೆಲೆಯಲ್ಲಿ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ. ಬಳ್ಳಾರಿ ಜಿಲ್ಲೆ ಹೊಸಪೇಟೆ ಮೂಲದ ಬೋರಮ್ಮ (33) ಎಂಬಾಕೆಯನ್ನು ನಾಗೇಶಗೌಡ ಎಂಬುವವರ ತೋಟದ ಲೈನ್ ಮನೆ ಬಳಿಯೇ ಕಾಡಾನೆ ತುಳಿದು ಸಾಯಿಸಿದೆ. ವಿಚಾರ ತಿಳಿದು ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ನಂತರ ತರಾತುರಿಯಲ್ಲಿ ಬೋರಮ್ಮ ಅವರ ಶವವನ್ನು ಪ್ಲಾಸ್ಟಿಕ್‌ನಲ್ಲಿ ಸುತ್ತಿ ಗೂಡ್ಸ್ ವಾಹನವೊಂದರಲ್ಲಿ ಶಿವಮೊಗ್ಗಕ್ಕೆ ಸಾಗಿಸಲು ಯತ್ನಿಸಿದರು. ಇಲಾಖೆ ಸಿಬ್ಬಂದಿಗಳ ಈ ನಡೆಗೆ ಕುಪಿತಗೊಂಡ ಸಾರ್ವಜನಿಕರು ಬಡವರ ಸಾವಿಗೆ ಬೆಲೆ ಇಲ್ಲವೇ ಎಂದು ಆಕ್ರೋಶ ವ್ಯಕ್ತಪಡಿಸಿದ್ದಲ್ಲದೆ, ಒಂದೇ ವಾರದಲ್ಲಿ ಒಂದೇ ತೋಟದಲ್ಲಿ ಇಬ್ಬರನ್ನು ಆನೆ ಕೊಂದು ಹಾಕಿದೆ. ಜಿಲ್ಲಾಡಳಿತವಾಗಲಿ, ಅರಣ್ಯ ಇಲಾಖೆಯಾಗಲಿ ಗಂಭೀರವಾಗಿ ಪರಿಗಣಿಸುತ್ತಿಲ್ಲ, ಸ್ಥಳಕ್ಕೆ ಅರಣ್ಯ ಸಚಿವರು ಬರುವವರೆಗೆ ಶವ ಸಾಗಿಸಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದರು.

ಕಡಬಗೆರೆ ಬಳಿ ರಾಜ್ಯ ಹೆದ್ದಾರಿ ಮಧ್ಯದಲ್ಲೇ ಶವ ಇಟ್ಟು ಪ್ರತಿಭಟನೆ ಆರಂಭಿಸಿದರು. ರೈತ ಸಂಘ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಪ್ರಮುಖರು, ಸಾರ್ವಜನಿಕರು ಅರಣ್ಯ ಇಲಾಖೆ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ್ದಲ್ಲದೆ. ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಇತರರು ಸ್ಥಳಕ್ಕೆ ಬರಬೇಕು ಎಂದು ಪಟ್ಟು ಹಿಡಿದರು. ಶೃಂಗೇರಿ ಕ್ಷೇತ್ರದ ಶಾಸಕ ಟಿ.ಡಿ. ರಾಜೇಗೌಡ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮನವೊಲಿಸಲು ಪ್ರಯತ್ನಿಸಿದರೂ ಅರಣ್ಯ ಸಚಿವರು ಸ್ಥಳಕ್ಕೆ ಬರಲೇಬೇಕೆಂದು ಪ್ರತಿಭಟನಕಾರರು ಪಟ್ಟುಹಿಡಿದರು.

ಲಾಠಿ ಪ್ರಹಾರ: ಕಡಬಗೆರೆಯಲ್ಲಿ ಶವವಿಟ್ಟು ಪ್ರತಿಭಟಿಸಿದ ಹಿನ್ನಲೆಯಲ್ಲಿ ವಿರಾಜಪೇಟೆ ಬೈಂದೂರ್ ರಾಜ್ಯ ಹೆದ್ದಾರಿಯಲ್ಲಿ ಸುಮಾರು 2 ಕಿಲೋಮೀಟರ್ ನಷ್ಟು ಟ್ರಾಫಿಕ್ ಜಾಮ್ ಉಂಟಾಗಿತ್ತು. ಸಂಜೆ ವೇಳೆಗೆ ಪೊಲೀಸರು ಕೆಲವು ಪೊಲೀಸರನ್ನು ಬಂಧಿಸಿ ವಾಹನದಲ್ಲಿ ಕರೆದೊಯ್ಯಲು ಮುಂದಾದರು. ಇದರಿಂದ ರೊಚ್ಚಿಗೆದ್ದ ಉಳಿದವರು ಪೊಲೀಸ್ ವಾಹನಕ್ಕೆ ಮುತ್ತಿಗೆ ಹಾಕಿ ಅಲುಗಾಡಿಸಲಾರಂಭಿಸಿದರು.

ಮಹಿಳೆಕೊಂದ ಆನೆ ಸೆರೆ: ಕಾಡಾನೆಗಳ ಉಪಟಳದಿಂದ ಬೇಸತ್ತು ಒಂದೆಡೆ ಪ್ರತಿಭಟನೆ ನಡೆಯುತ್ತಿದ್ದರೆ, ಅತ್ತ ಅರಣ್ಯ ಸಿಬ್ಬಂದಿಗಳು ಸಾಕಾನೆಗಳ ನೆರವಿನೊಂದಿಗೆ ಬೋರಮ್ಮನನ್ನು ಕೊಂದ ಕಾಡಾನೆಯನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾದರು.



₹20 ಲಕ್ಷ ಪರಿಹಾರದ ಚೆಕ್ ವಿತರಣೆ

ಕಾಡಾನೆ ದಾಳಿಗೆ ಸಿಲುಕಿ ಮೃತಪಟ್ಟ ಬೋರಮ್ಮ ಕುಟುಂಬಕ್ಕೆ 20ಲಕ್ಷ ರೂ. ಪರಿಹಾರದ ಚೆಕ್ಕನ್ನು ಶಾಸಕ ಟಿ.ಡಿ. ರಾಜೇಗೌಡ ಸಂತ್ರಸ್ತ ಕುಟುಂಬಕ್ಕೆ ಹಸ್ತಾಂತರಿಸಿದರು.

ಎಸ್‌ಐಆರ್ ಪೂರ್ವ ಸಿದ್ಧತೆ ಜೋರು | ಮತದಾರರ ಗುರುತಿನ ಚೀಟಿ ವಿಶೇಷ ಪರಿಶೀಲನೆ

ರಾಜ್ಯದಲ್ಲಿ ಶೇ.67ರಷ್ಟು ಮ್ಯಾಪಿಂಗ್ ಕಾರ್ಯ ಪೂರ್ಣ

ವೀರಣ್ಣ ಬಳಿಗಾರ

ಬೆಂಗಳೂರು: ಕೇಂದ್ರ ಚುನಾವಣಾ ಆಯೋಗವು ಈಗಾಗಲೇ ದೇಶದ ಹಲವು ರಾಜ್ಯ ಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಸುತ್ತಿದೆ. ರಾಜ್ಯದಲ್ಲಿ ಎಸ್‌ಐಆರ್ ಪೂರ್ವ ಸಿದ್ಧತಾ ಪ್ರಕ್ರಿಯೆಗೆ ಚುನಾವಣಾ ಆಯೋಗ ಕಳೆದ ಡಿಸೆಂಬರ್ ತಿಂಗಳಿನಲ್ಲೇ ಚಾಲನೆ ನೀಡಿದೆ. ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಪೂರ್ವ ಸಿದ್ಧತೆ ಚುರುಕಾಗಿ ನಡೆದಿದ್ದು, ಈ ಹಿನ್ನೆಲೆಯಲ್ಲಿ ಬೂತ್ ಮಟ್ಟದ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದಾರೆ.

ರಾಜ್ಯದಲ್ಲಿ ಎಸ್‌ಐಆರ್ ಪೂರ್ವ ಸಿದ್ಧತೆಯ ಭಾಗವಾಗಿ 2002ರ ಮತದಾರರ ಪಟ್ಟಿಯನ್ನು 2025ರ ಹೋಲಿಕೆ (ಲಿಂಕ್) ಮಾಡಲಾಗುತ್ತಿದ್ದು, ರಾಜ್ಯದ 5.547 ಕೋಟಿ ಮತದಾರರ ಪೈಕಿ 3 ಕೋಟಿಗೂ ಅಧಿಕ ಮತದಾರರ ವಿವರಗಳು ತಾಳೆಯಾಗಿವೆ ಎಂದು ತಿಳಿದು ಬಂದಿದೆ. ಮೃತಪಟ್ಟವರು, ವಿಳಾಸ ಬದಲಾದವರು, ಒಂದಕ್ಕಿಂತ ಹೆಚ್ಚು ಕಡೆ ಮತದಾರರ ಪಟ್ಟಿಯಲ್ಲಿ ಇರುವವರ ವಿವರವನ್ನು ಅರ್ಹ ದಾಖಲೆಗಳನ್ನು ಕಲೆಹಾಕುಲಾಗುತ್ತಿದ್ದು, ದಾಖಲೆ ಒದಗಿಸಿದವರು ಮತದಾರರ ಪಟ್ಟಿಯಲ್ಲಿ ಉಳಿಯುತ್ತಾರೆ. ಇದರಿಂದ ಅರ್ಹ ಮತದಾರರ ಸಂಖ್ಯೆ ಅಂದಾಜು ಸಿಗಲಿದೆ. ಇದರಿಂದ ಕೇಂದ್ರ ಚುನಾವಣಾ ಆಯೋಗವು ಘೋಷಣೆ ಮಾಡಿದ ಸಂದರ್ಭದಲ್ಲಿ ಸಹಾಯವಾಗಲಿದೆ.

ಬಿಹಾರದಲ್ಲಿ ಕೈಗೊಂಡ ಎಸ್‌ಐಆರ್ ಯಶಸ್ವಿಯಾದ ನಂತರ ಕೇಂದ್ರ ಚುನಾವಣಾ ಆಯೋಗವು ಪಶ್ಚಿಮ ಬಂಗಾಳ, ತಮಿಳುನಾಡು, ಉತ್ತರ ಪ್ರದೇಶ ಸೇರಿದಂತೆ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಗುರುತಿನ ಚೀಟಿಯ ವಿಶೇಷ ಪರಿಶೀಲನೆ (ಎಸ್‌ಐಆರ್) 2ನೇ ಹಂತವನ್ನು ಮುಗಿಸಲಾಗಿದೆ. ಬರುವ ಏಪ್ರಿಲ್‌ನಲ್ಲಿ ರಾಜ್ಯದಲ್ಲೂ ಜಾರಿಯಾಗುವ ಸಾಧ್ಯತೆ ಇರುವುದರಿಂದ ಮುಖ್ಯ ಚುನಾವಣಾಧಿಕಾರಿ ಅವರ ಸೂಚನೆ ಮೇರೆಗೆ ಪೂರ್ವ ಸಿದ್ಧತೆ ಕೈಗೊಳ್ಳಲಾಗಿದೆ.



ವಿವಿಧ ಜಿಲ್ಲೆಗಳಲ್ಲಿ ಶೇ.100 ಪೂರ್ಣ

ರಾಜ್ಯದಲ್ಲಿ ಒಟ್ಟಾರೆ ಶೇ.67 ರಷ್ಟು ಮ್ಯಾಪಿಂಗ್ ಕಾರ್ಯ ಪೂರ್ಣಗೊಂಡಿದ್ದು, ವಿವಿಧ ಜಿಲ್ಲೆಗಳಲ್ಲಿ ಶೇ.100 ರಷ್ಟು ಪೂರ್ಣಗೊಂಡಿದೆ. ಇನ್ನೂ ಕೆಲವು ಜಿಲ್ಲೆಗಳಲ್ಲಿ ಪ್ರಗತಿಯಲ್ಲಿದೆ. 2002ರ ಮತಪಟ್ಟಿಯನ್ನು 2005ರ ಮತಪಟ್ಟಿಗೆ ಲಿಂಕ್ ಮಾಡಲಾ ಗುತ್ತಿದೆ, ಇದು ಎಸ್‌ಐಆರ್ ಪೂರ್ವ ಸಿದ್ಧತೆ ಕಾರ್ಯವಾಗಿದ್ದು, ಯಾವುದೇ ಡೆಡ್‌ಲೈನ್ ಇಲ್ಲ. ಕೇಂದ್ರ ಚುನಾವಣಾ ಆಯೋಗ ರಾಜ್ಯದಲ್ಲಿ ಎಸ್‌ಐಆರ್ ಘೋಷಣೆ ಮಾಡಿದರೆ, ಕೆಲಸದ ಒತ್ತಡ ಕಡಿಮೆ ಮಾಡುವ ಉದ್ದೇಶದಿಂದ ಈ ಕಾರ್ಯವನ್ನು ಕೈಗೊಳ್ಳಲಾಗಿದೆ ಎಂದು ಆಯೋಗದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸರ್ಕಾರದಿಂದ ಆಕ್ಷೇಪ ಇದೆ

ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ರಾಜ್ಯ ಸರ್ಕಾರದಿಂದ ಆಕ್ಷೇಪ ಇದೆ. ರಾಜ್ಯದಲ್ಲಿ ನಡೆಸಬೇಕೋ, ಬೇಡವೋ ಎಂಬ ಬಗ್ಗೆ ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಲಾಗಿದ್ದು, ಈ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡುವಂತೆ ಕಾನೂನು ಇಲಾಖೆಗೆ ಸಂಪುಟ ಸಭೆ ಸೂಚನೆ ನೀಡಿದೆ. ಎಸ್‌ಐಆರ್‌ಗೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್ ನೀಡಿದ ನಿರ್ದೇಶನ ಹಾಗೂ ರಾಜ್ಯ ಚುನಾವಣಾ ಆಯೋಗ ಈಗಾಗಲೇ ನಡೆಸುತ್ತಿರುವ ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಯನ್ನೂ ಆಧಾರವಾಗಿಟ್ಟುಕೊಂಡು ರಾಜ್ಯ ಸರ್ಕಾರ ತನ್ನ ಮುಂದಿನ ನಡೆಯನ್ನು ನಿರ್ಧರಿಸಲಿದೆ. ಈ ಬಗ್ಗೆ ಮುಂದಿನ 15 ದಿನಗಳೊಳಗಾಗಿ ಅಧ್ಯಯನ ನಡೆಸಿ ವರದಿಯನ್ನು ಸಂಪುಟಕ್ಕೆ ಸಲ್ಲಿಸಲು ಸೂಚನೆ ನೀಡಲಾಗಿದೆ. ಸರ್ಕಾರದ ನಿಲುವು ಏನೇ ಆಗಿದ್ದರೂ ಆಯೋಗವು ಎಸ್‌ಐಆರ್‌ಗೆ ತನ್ನ ಪೂರ್ವ ಸಿದ್ಧತೆಯನ್ನು ನಡೆಸುತ್ತಿದೆ.

ಫೆ.28ಕ್ಕೆ ರಾಜ್ಯಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ

ಬೆಂಗಳೂರು: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ 55ನೇ ಸುವರ್ಣ ಸಂಭ್ರಮ ಪ್ರಯುಕ್ತ ರಾಜ್ಯ ಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ ಹಾಗೂ ಸಂಘದ ಸುವರ್ಣೋತ್ಸವ ಸಮಾರಂಭ ಕಾರ್ಯಕ್ರಮವನ್ನು ಫೆ.28 ರಂದು ನಗರದ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಜರುಗಲಿದೆ.

ಸಮ್ಮೇಳನದ ಬಗ್ಗೆ ಮಾಹಿತಿ ನೀಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ, ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯ ಉದ್ಘಾಟಿಸ ಲಿದ್ದಾರೆ. ಸುವರ್ಣ ಸಂಭ್ರಮವನ್ನು ಡಿಸಿಎಂ ಡಿ.ಕೆ.ಶಿವಕುಮಾರ ಲೋಕಾರ್ಪಣೆ ಮಾಡಲಿದ್ದಾರೆ. ರಾಜ್ಯದ 1.80 ಲಕ್ಷ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಟ್ಯಾಕ್ಸ್ ಇ-ಫೈಲಿಂಗ್ ಹಾಗೂ ಬಾಲಾ ಸಂಜೀವಿನಿ ಯೋಜನೆಯನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವ ಮಧು ಬಂಗಾರಪ್ಪ ಲೋಕಾರ್ಪಣೆ ಮಾಡಲಿದ್ದಾರೆ ಎಂದರು. ಸಮ್ಮೇಳನದ ವಿಶೇಷ ಆಹ್ವಾನಿತರಾಗಿ ಸಚಿವರಾದ ರಾಮಲಿಂಗಾ ರೆಡ್ಡಿ, ಡಾ ಜಿ. ಪರಮೇಶ್ವರ, ಎಚ್.ಕೆ. ಪಾಟೀಲ್ ಸೇರಿದಂತೆ ಹಲವು ಗಣ್ಯರು ಆಗಮಿಸಲಿದ್ದಾರೆ ಎಂದು ಹೇಳಿದರು.

ಪ್ರಾಥಮಿಕ ಶಿಕ್ಷಣ ಹಾಗೂ ಸವಾಲುಗಳ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಶಿಕ್ಷಕರ ಜವಾಬ್ದಾರಿಗಳು ಹಾಗೂ ತಲ್ಲಣಗಳು ಕುರಿತು ಖ್ಯಾತ ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ ಉಪನ್ಯಾಸ ನೀಡಲಿದ್ದಾರೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಶ್ಮಿ ಮಹೇಶ್, ಆಗಮಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಂಪಾದಕೀಯ

ನಾಶವಾಗಬೇಕಾದ 'ವೋಕಿಸಂ' ಬೇರು

ಕೆಲ ವರ್ಷಗಳ ಹಿಂದೆ 'ವೋಕಿಸಂ' ಎಂಬ ಪದ ಕೇಳಿಬಂದಾಗ ಬಹುತೇಕರಿಗದು ಅಪರಿಚಿತವಾಗಿತ್ತು. ಮುಂಬರುವ ದಿನಗಳಲ್ಲಿ ಆಂತರಿಕ ದಂಗೆ–ಗಲಭೆ ಮತ್ತು ಅಶಾಂತಿಯ ವಾತಾವರಣವನ್ನು ಸೃಷ್ಟಿಸಲು ವಿದೇಶಿ ಶಕ್ತಿಗಳು ಅದರ ಮೂಲಕ ಪ್ರಯತ್ನಿಸುತ್ತಾರೆ ಎಂದು ಸಮಾಜ ಕಾಳಜಿಯ ಕೆಲವು ಸಂಘಟನೆಗಳು ಎಚ್ಚರಿಸಿದಾಗಲೂ ಜನರಿಗೆ ಅಪಾಯದ ಅರಿವಾಗಿರಲಿಲ್ಲ. ಸಿಎಎ ಗಲಭೆಗಳು ವೋಕಿಸಂನ ಒಂದು ಭಾಗ ಎಂದಾಗಲೂ ಅರ್ಥವಾಗಿರಲಿಲ್ಲ. ಇವೆಲ್ಲವೂ ಭಾರತದಲ್ಲಿ ನಡೆಯಲು ಸಾಧ್ಯವಿಲ್ಲ ಎಂದು ಅಂದುಕೊಂಡವರೇ ಹೆಚ್ಚು. ಆದರೆ ವೋಕಿಸಂ ಭಾರತದಲ್ಲಿ ತನ್ನ ಕೆಲಸವನ್ನು ತಾನು ಮಾಡುತ್ತಲೇ ಇತ್ತು. ಎರಡು ದಿನಗಳ ಹಿಂದೆ ಎಐ ಇಂಪಾಕ್ಟ್ ಶೃಂಗಸಭೆಯಲ್ಲಿ ಅರೆಬೆತ್ತಲೆಯಾಗಿ ಪ್ರತಿಭಟಿಸಿದ ಯುವ ಕಾಂಗ್ರೆಸ್ ಕಾರ್ಯಕರ್ತರು ಈ ಮಾದರಿಯ ವೋಕಿಸಂನಿಂದ ಪ್ರೇರಿತರಾಗಿದ್ದರು ಎನ್ನುವ ಅಂಶ ಅದರ ಅಪಾಯವನ್ನು ಎತ್ತಿ ತೋರಿಸಿದೆ. ನೇಪಾಳದಲ್ಲಿ ನಡೆದ ಜೆನ್ ಝಿ ರೀತಿಯ ಹೋರಾಟಕ್ಕೆ ಅವರು ಯತ್ನಿಸಿದ್ದರು ಎನ್ನುವುದು ತನಿಖೆಯಲ್ಲಿ ತಿಳಿದುಬಂದಿದೆ.

ಮಹಿಳಾ ಹಕ್ಕು, ಮಾನವಹಕ್ಕು, ಅಲ್ಪಸಂಖ್ಯಾತ ರಕ್ಷಣೆ, ಮಕ್ಕಳ ಹಕ್ಕು, ಸರ್ವಾಧಿಕಾರಿ ವಿರೋಧಿ ಧೋರಣೆ, ಪರಿಸರ ಕಾಳಜಿ, ಪ್ರಾಣಿದಯೆ...ಹೀಗೆ ಅನೇಕ ಕಾರಣಗಳಿಗಾಗಿ ನಡೆಯುವ ಹೋರಾಟಕ್ಕೆ ಸಮಾಜಿಕ ಜಾಗೃತಿಯ ಅವಶ್ಯಕತೆ ಇಲ್ಲ. ಸಮಾಜ ಮೇಲೇಳಲು ಅನೇಕ ಕಾರಣಗಳಿರುತ್ತವೆ. ಜೊತೆಗೆ ಎಲ್ಲಾ ಹೋರಾಟಗಳು ಕ್ರಾಂತಿಯಾಗಬೇಕೆಂದಿಲ್ಲ. ಸಮಾಜವೇ ಅದಕ್ಕೆ ಮದ್ದನ್ನು ಮಾಡಿಕೊಳ್ಳುತ್ತದೆ. ಆದರೆ ಭಾರತ ವಿರೋಧಿ ಶಕ್ತಿಗಳನ್ನು ಕ್ರಾಂತಿಗೆ ಪ್ರೇರೇಪಿಸುವ ಮಾರ್ಗವೇ ಈ ವೋಕಿಸಂ. ಜಗತ್ತಿನಲ್ಲಿನ್ನೂ ಅಪಸವ್ಯಗಳಿವೆ, ಅನ್ಯಾಯವನ್ನು ಪ್ರತಿಭಟಿಸಬೇಕಿದೆ, ಸಮಾಜದಲ್ಲಿ ಅದಕ್ಕೆ ಮದ್ದಿಲ್ಲ, ತಾನೇ ಅದಕ್ಕೆ ಪರಿಹಾರ ಎನ್ನುವ ಉಮೇದಿನ ಸ್ಥಿತಿಯನ್ನು ಹೆಚ್ಚಿಸುವುದು ವೋಕಿಸಂನ ಕಾರ್ಯ. ಅದರ ಗುರಿಸಾಧನೆಗಾಗಿ ಪಾಶ್ಚಾತ್ಯ ವಿಶ್ವವಿದ್ಯಾಲಯಗಳು, ಶತ್ರುದೇಶಗಳು, ರಿಲಿಜನ್ ಮಾರುವವರ ತಂಡ ಜೊತೆಯಾಗುತ್ತದೆ. ಸಮಾಜದ ಅಮಾಯಕ ಪೀಳಿಗೆಯನ್ನು ಗುರಿಯಾಗಿರಿಸಿ ತನ್ನ ಕಾರ್ಯವನ್ನು ಅದು ಸಾಧಿಸಿಕೊಳ್ಳುತ್ತದೆ. ಸಮಸ್ಯೆಗಳ ಗುಚ್ಛಗಳನ್ನು ಹಿಡಿದು ಸಮಾಜದ ಶಕ್ತಿಯನ್ನು ಮರೆಸುವುದೇ ವೋಕಿಸಂ ಪ್ರವೃತ್ತಕರ ಉದ್ದೇಶ. ಇಂಥ ವೋಕಿಸಂ ವಾರಿಸುದಾರರಿಗೆ ಸುಲಭವಾಗಿ ಸಿಗುವವರೇ ಜೆನ್ ಝಿ ಎಂಬ ಮಾಗದ ವಾರ್ಗ. ಹರೆಯದ ಬಿಸಿರಕ್ತ ಮತ್ತು ಅನ್ಯಾಯವನ್ನು ಏಕಕೋನದಿಂದ ನೋಡುವ ಈ ವರ್ಗ ವೋಕಿಸಂಗೆ ಸುಲಭದ ತುತ್ತಾಗುತ್ತಾರೆ. ಇಂಥವರ ಯಾವ ಕ್ರಾಂತಿಯೂ ಸಂಪೂರ್ಣವಾಗಿ ಯಶಸ್ವಿಯಾದ ಮತ್ತು ಉಳಿಸಿಕೊಳ್ಳುವ ಪ್ರಬುದ್ಧತೆ ಇಲ್ಲ.

ಅನ್ಯ ದೇಶಗಳಲ್ಲಿ ಇಂಥ ಹೋರಾಟಗಳು ನಡೆದಿರಬಹುದು. ಆದರೆ ಭಾರತದಲ್ಲಿ ಇದನ್ನು ಪ್ರಯೋಗಕ್ಕಿಳಿಸಿದ್ದು ಕಾಂಗ್ರೆಸ್. ತನ್ನ ಬೇಳೆ ಬೇಯಿಸಿಕೊಳ್ಳಲು ಜೆನ್ ಝಿಗಳನ್ನು ಎತ್ತಿಕಟ್ಟಲು ಸುಲಭದ ಉಪಾಯವಾಗಿ ಆಡಳಿತ ವಿರೋಧಿ ಧೋರಣೆಯನ್ನು ಅವರಲ್ಲಿ ಬಿತ್ತುವಲ್ಲಿ ಇವರು ಯಶಸ್ವಿಯಾಗಿದ್ದಾರೆ. ನಿಜವಾದ ಹೋರಾಟ ಮತ್ತು ಪರಿವರ್ತನೆಯ ಉದ್ದೇಶ ಅಡಗಿರುವ ಯಾವುದೇ ಹೋರಾಟದಲ್ಲಿ ದೇಶದ ಮಾನ ಕಳೆಯುವ ಮನೋಭಾವ ಇರುವುದಿಲ್ಲ. ಆದರೆ ಶೃಂಗಸಭೆಯಲ್ಲಿ ನಡೆದಿರುವುದು ಅರಾಷ್ಟ್ರೀಯ ಕೃತ್ಯ. ಇವೆಲ್ಲಕ್ಕೂ ವೋಕಿಸಂ ಬೇರಿದೆ ಎನ್ನುವುದನ್ನು ಸಮಾಜ ಮರೆಯಬಾರದು.

ಅದ್ದೂರಿ ಮದುವೆಗಳಿಗೊಂದು ನಿಯಂತ್ರಣ ರೇಖೆ

ಮದುವೆ ಸಮಾರಂಭಗಳನ್ನು ಅದ್ದೂರಿಯಾಗಿ ನಡೆಸಿದರೆ ಸಾಮಾಜಿಕ ಸ್ಥಾನಮಾನ ಹೆಚ್ಚುತ್ತದೆಂಬ ಭ್ರಮೆ ಹಲವರಲ್ಲಿದೆ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com




ಧನುರ್ಮಾಸ ಮುಗಿಯುತ್ತಿದ್ದಂತೆ ಮದುವೆ, ಮುಂಜಿ, ಉಪನಯನ, ನಾಮಕರಣಗಳ ಸಡಗರ ಶುರುವಿಟ್ಟು ಕೊಂಡಿದೆ. ಇನ್ನು ಮಾರ್ಚ್, ಏಪ್ರಿಲ್, ಮೇ, ಜೂನ್ ತಿಂಗಳ ಪೂರ್ತಿ ಮಂಗಳಕಾರ್ಯಗಳದ್ದೇ ಪಾರುಪತ್ಯ. ಕಲ್ಯಾಣ ಮಂದಿರ, ರೆಸಾರ್ಟ್‌ಗಳಿಗೆ ಎಲ್ಲಿಲ್ಲದ ಬೇಡಿಕೆ. ಮದುವೆಗೆ ಮುಹೂರ್ತ ನೋಡುವುದಕ್ಕೆ ಮೊದಲು ಯಾವ ಕಲ್ಯಾಣ ಮಂದಿರದಲ್ಲಿ ಲಭ್ಯತೆ ಇದೆ ಎಂಬುದನ್ನು ಖಾತ್ರಿಪಡಿಸಿಕೊಂಡು ಆ ದಿನವೇ ಮುಹೂರ್ತ ಹೊಂದಿಸಿಕೊಳ್ಳಬೇಕಾದ ಕಾಲವಿದು. ಏಕೆಂದರೆ ಹಿಂದಿನಂತೆ ಈಗ ಮದುವೆಗಳನ್ನು ಮನೆಗಳಲ್ಲಿ ಯಾರು ಮಾಡಲಾಗುತ್ತಿಲ್ಲ. ಬಂಧು ಬಳಗ, ಆಪ್ತೇಷ್ಟರು, ಪರಿಚಿತರನ್ನು ಗೂಡಿನಂತಹ ಮನೆಗೆ ಕರೆದು ಆದರಿಸಲು ಆಗುವುದಿಲ್ಲ. ಅವರವರ ಘನತೆ, ಆರ್ಥಿಕ ಸ್ಥಿತಿಗೆ ತಕ್ಕಂತೆ ಸುಸಜ್ಜಿತ ಕಲ್ಯಾಣ ಮಂಟಪಗಳನ್ನು ಮೊದಲೇ ಗೊತ್ತು ಪಡಿಸಿಕೊಳ್ಳಬೇಕಾಗುತ್ತದೆ.

ಕಾಲ ಬದಲಾದಂತೆ ಮದುವೆಗಳ ರೀತಿ ನೀತಿಗಳೂ ಬದಲಾಗುತ್ತಿರುವುದು ಗಮನಾರ್ಹ. ಮೊದಲೆಲ್ಲ ಮದುವೆಯೆಂದರೆ ಎರಡು ಕುಟುಂಬಗಳ ಬಂಧು ಬಾಂಧವರ ಸಮಕ್ಷಮದಲ್ಲಿ ಸಾಂಪ್ರದಾಯಿಕ ವಿಧಿ ವಿಧಾನಗಳ ಮೂಲಕ ನಡೆಯುತ್ತಿದ್ದ ಒಂದು ವಿಧಿಯಾಗಿತ್ತು. ಅಲ್ಲಿ ಮಾತುಕತೆ, ನಗು, ಸ್ನೇಹಮಿಲನ, ಬಾಂಧವ್ಯದ ಬೆಸುಗೆ ಎದ್ದು ಕಾಣುತ್ತಿತ್ತು. ಆಹ್ವಾನಿತ ಪ್ರತಿಯೊಬ್ಬರನ್ನೂ ಮದುವೆ ಮನೆಯಲ್ಲಿ ಪ್ರೀತಿಯಿಂದ ಮಾತನಾಡಿಸಿ, ಉಪಚರಿಸುವ ಆಪ್ತ ದೃಶ್ಯಗಳನ್ನು ಕಾಣಬಹುದಿತ್ತು. ಪರಿಚಿತರಿಗೆ, ಬಂಧುಗಳಿಗೆ ಮನೆಗೆ ತೆರಳಿ ಆಮಂತ್ರಣ ಪತ್ರ ನೀಡಿ ಗೌರವಪೂರ್ವಕವಾಗಿ ಆಹ್ವಾನಿಸುವ ಪರಿಪಾಠವಿತ್ತು.

ಈಗ ಮನೆ ಮನೆಗೆ ಹೋಗಿ ಆಮಂತ್ರಿಸುವ ದೃಶ್ಯ ಕಾಣಸುತ್ತಿಲ್ಲ (ಪೇಟೆ ಪಟ್ಟಣ ಪ್ರದೇಶಗಳಲ್ಲಿ ಈಗ ಅದು ಸಾಧ್ಯವೂ ಇಲ್ಲ). ಈಗೇನಿದ್ದರೂ ವಾಟ್ಸಾಪ್ ಮೂಲಕ ಮದುವೆ ಆಮಂತ್ರಣದ ಸಂದೇಶ. ಮದುವೆಯ ಎಲ್ಲ ವ್ಯವಸ್ಥೆಗಳನ್ನು ಇವೆಂಟ್ ಮ್ಯಾನೇಜ್‌ಮೆಂಟ್ ಸುಪರ್ದಿಗೆ ವಹಿಸಲಾಗಿರುತ್ತದೆ. ಹಾಗಾಗಿ ಅಲ್ಲಿ ನಿಮ್ಮನ್ನು ನಿಮಗೆ ಪರಿಚಯವಿರದ ಯಾರೋ ಸ್ವಾಗತಿಸುತ್ತಾರೆ. ಯಾರೋ ಊಟ ಬಡಿಸುತ್ತಾರೆ. ಇನ್ಯಾರೋ ಫಲ ತಾಂಬೂಲ ನೀಡುತ್ತಾರೆ. ಮದುವೆ ಮನೆಯ ಹಿರಿಯರು ನಿಮ್ಮನ್ನು ಕರೆದು ಮಾತನಾಡಿಸಿದರೆ ಅದೇ ನಿಮ್ಮ ಪುಣ್ಯ. ಅಂತಹ ಮದುವೆ ಸಮಾರಂಭದಲ್ಲಿ ಸಡಗರ ಸಂಭ್ರಮಕ್ಕೇನೂ ಕೊರತೆ ಇರುವುದಿಲ್ಲ. ಅದ್ದೂರಿ ವೇದಿಕೆ, ಹೂವಿನ ಅಲಂಕಾರ, ಮದುವೆಗೆ ಬಂದವರೆಲ್ಲರನ್ನೂ ಮೇಲಿನಿಂದಲೇ ಸೆರೆಹಿಡಿಯುವ ಡ್ರೋಣ್ ಕ್ಯಾಮರಾಗಳು, ಮದುವೆ ರಿಸೆಪ್ಷನ್ ಸಮಾರಂಭದಲ್ಲಿ ತಿನ್ನಲಾರದಷ್ಟು ವಿವಿಧ ಬಗೆಯ ಆಹಾರವ್ಯಂಜನಗಳು. ನಾನು ಭಾಗವಹಿಸಿದ ಸ್ನೇಹಿತರ ಮನೆಯ ರಿಸೆಪ್ಷನ್ ನಲ್ಲಿ 40ಕ್ಕೂ ಹೆಚ್ಚು ತಿಂಡಿ ತಿನಿಸುಗಳಿದ್ದವು. ಅಷ್ಟೊಂದು ಪದಾರ್ಥಗಳನ್ನು ತಿನ್ನಲು ಯಾರಿಗೆ ತಾನೇ ಸಾಧ್ಯ? ತಿನ್ನುವ ಆಸೆಯಿಂದ ತಟ್ಟೆಗೆ ಬಡಿಸಿಕೊಂಡ ಐಟಂಗಳನ್ನು ತಿನ್ನಲಾಗದೆ ಹಾಗೇ ಬಿಟ್ಟವರೇ ಹೆಚ್ಚು.

ಮದುವೆ ಸಮಾರಂಭಗಳನ್ನು ಅದ್ದೂರಿಯಾಗಿ ನಡೆಸಿದರೆ ತಮ್ಮ ಸಾಮಾಜಿಕ ಸ್ಥಾನಮಾನ ಹೆಚ್ಚುತ್ತದೆಂಬ ಭ್ರಮೆ ಹಲವರಲ್ಲಿದೆ. ಸೆಲೆಬ್ರಿಟಿಗಳ ವಿವಾಹ ಮಹೋತ್ಸವದ ವೈಭವ ಇಂಥವರನ್ನು ಪ್ರಚೋದಿಸಿ ಬಿಡುತ್ತದೆ. ಸಾಲ ಸೋಲ ಮಾಡಿಯಾದರೂ ಮದುವೆಯನ್ನು ಸಾಧ್ಯವಾದಷ್ಟು ವೈಭವೋಪೇತವಾಗಿ ಮಾಡಬೇಕೆಂಬ ಭ್ರಮೆಗೆ ಹಲವರು ಸಿಲುಕಿದ್ದಾರೆ. ಎರಡು ವರ್ಷಗಳ ಹಿಂದೆ ಮುಂಬೈ ಮಹಾನಗರಿಯಲ್ಲಿ ನಡೆದ ಉದ್ಯಮಪತಿ ಮುಖೇಶ್ ಅಂಬಾನಿಯ ಕಿರಿಯ ಪುತ್ರ ಅನಂತ್ ಅಂಬಾನಿ ಮತ್ತು ರಾಧಿಕಾ ಮರ್ಚೆಂಟ್ ಅವರ ಅದ್ದೂರಿ ಮದುವೆ ಎಲ್ಲೆಡೆ ಭಾರೀ ಸುದ್ದಿಯಾಗಿತ್ತು. ಆ ಮದುವೆಗೆ ಖರ್ಚು ಮಾಡಿದ ಒಟ್ಟು ಹಣ ಬರೋಬ್ಬರಿ 5 ಸಾವಿರ ಕೋಟಿ ರೂ. ಇಂಗ್ಲೆಂಡ್‌ನ ರಾಜಕುಮಾರಿ ಡಯಾನಾ, ಅರಬ್‌ನ ಯುವ ರಾಜಕುಮಾರನ ಮದುವೆಗೂ ಇಷ್ಟು ಹಣ ವೆಚ್ಚ ಮಾಡಿರಲಿಲ್ಲವಂತೆ. ಆದರೆ ಮುಖೇಶ್ ಅಂಬಾನಿ ತನ್ನ ಕಿರಿಯ ಪುತ್ರನ ಮದುವೆಗೆ ಖರ್ಚು ಮಾಡಿದ್ದು ತನ್ನ ಒಟ್ಟು ಆಸ್ತಿ ಮೌಲ್ಯದ ಕೇವಲ 0.5% ನಷ್ಟು ಮಾತ್ರ. 1% ನಷ್ಟು ಹಣವನ್ನೂ ಈ ಮದುವೆಗೆ ವೆಚ್ಚ ಮಾಡಿರಲಿಲ್ಲ. (ಮುಖೇಶ್ ಅಂಬಾನಿಯ ಒಟ್ಟು ಆಸ್ತಿ ಮೌಲ್ಯ 10 ಲಕ್ಷ ಕೋಟಿ ರೂ.)

ಆದರೆ ಮಧ್ಯಮ ವರ್ಗದವರು, ಸಾಮಾನ್ಯ ಜನರು ತಮ್ಮ ಮನೆಯಲ್ಲೊಂದು ಮದುವೆ ನಡೆದರೆ ತಮ್ಮ ಒಟ್ಟು ಆದಾಯದ ನಾಲ್ಕೈದು ಪರ್ಸೆಂಟ್ ಹಣವನ್ನು ಖರ್ಚು ಮಾಡುವುದು ಸರ್ವೇಸಾಮಾನ್ಯವಾಗಿ ಬಿಟ್ಟಿದೆ. ಕೆಲವರು ಇನ್ನೂ ಹೆಚ್ಚು ಖರ್ಚು ಮಾಡುತ್ತಾರೆ. ಸಾಲಸೋಲ ಮಾಡಿ ಆಮೇಲೆ ಸ್ವಂತದ ಬದುಕಿಗೆ ತೊಂದರೆ ತಂದುಕೊಳ್ಳುತ್ತಾರೆ ಎಂಬುದು ಪ್ರತಿದಿನದ ವಿದ್ಯಮಾನಗಳಿಂದ ಸ್ಪಷ್ಟವಾಗುವ ಸಂಗತಿ. ದುಬಾರಿ ಆಮಂತ್ರಣ ಪತ್ರ, ದುಬಾರಿ ಡೆಕೋರೇಷನ್, ಮದುಮಗಳಿಗೆ ದುಬಾರಿ ವೆಚ್ಚದಲ್ಲಿ ಶೃಂಗಾರ .....ಇವೆಲ್ಲ ನಿಜಕ್ಕೂ ಅಗತ್ಯವಿದೆಯೇ?



ಮೊದಮೊದಲು ಮದುವೆಯ ನಿಶ್ಚಿತಾರ್ಥ ಎನ್ನುವುದು ಗಂಡು ಹೆಣ್ಣಿನ ಕುಟುಂಬಗಳಿಗೆ ಸೀಮಿತವಾದ ಒಂದು ಪುಟ್ಟ ಕಾರ್ಯಕ್ರಮವಾಗಿತ್ತು. ಆದರೆ ಈಗ ಅದರ ಸ್ವರೂಪವೂ ಬದಲಾಗಿದೆ. ಮನೆಗಳಲ್ಲಿ ನಡೆಯುತ್ತಿದ್ದ ನಿಶ್ಚಿತಾರ್ಥ ಈಗ ಕಲ್ಯಾಣ ಮಂದಿರ, ರೆಸಾರ್ಟ್‌ಗಳಿಗೆ ಸ್ಥಳಾಂತರಗೊಂಡಿದೆ. ಬೆಂಗಳೂರಿನಲ್ಲಿ ನಿಶ್ಚಿತಾರ್ಥ ಅರಮನೆ ಮೈದಾನಕ್ಕೆ ಕಾಲಿಟ್ಟಿದೆ. ಕೆಲವು ಪ್ರತಿಷ್ಠಿತ ಕುಟುಂಬಗಳ ನಿಶ್ಚಿತಾರ್ಥ ಕಾರ್ಯಕ್ರಮಕ್ಕೆ ಖರ್ಚಾಗುವ ಹಣದಲ್ಲಿ ಮಧ್ಯಮ ವರ್ಗದವರ ಮೂರ್ನಾಲ್ಕು ಮದುವೆಗಳನ್ನು ಮಾಡಿ ಮುಗಿಸಬಹುದು!

ಇನ್ನು 'ಪ್ರಿ ವೆಡ್ಡಿಂಗ್ ಶೂಟ್' ಎಂಬ ಹೊಸತೊಂದು ಬಂದಳಿಕೆ ಮದುವೆಗೆ ಅಂಟಿಕೊಂಡಿರುವುದು ವಿಪರ್ಯಾಸ. ವಾಸ್ತವವಾಗಿ ಅದಾವುದೂ ಭಾರತೀಯ ಪರಂಪರೆಯ ಪದ್ಧತಿಯಲ್ಲ. ಆದರೆ ಅದರ ಅಗತ್ಯವಾದರೂ ಏನು ಎಂದು ಪ್ರಾಜ್ಞರು ಇದುವರೆಗೂ ಪ್ರಶ್ನಿಸಿಲ್ಲ. ಮನೆಯ ಹಿರಿಯರು ಅದರ ಔಚಿತ್ಯದ ಬಗ್ಗೆ ಚಕಾರವೆತ್ತುತ್ತಿಲ್ಲ. ವಧು–ವರರಿಬ್ಬರೂ ಅರೆನಗ್ನರಾಗಿ ಯಾವುದೋ ಬೆಟ್ಟ, ಯಾವುದೋ ಕೆರೆಯ ಬಳಿ ನಿಂತು ಅಥವಾ ಕೆರೆಯಲ್ಲಿ ಅರ್ಧ ಮುಳುಗಿ ಫೋಟೋ ಶೂಟ್ ಮಾಡಿಸಿಕೊಳ್ಳುವುದು ಯಾವ ಕರ್ಮಕ್ಕೆ? ಕೆಲವು ಬಾರಿ ಇಂತಹ ಫೋಟೋಶೂಟ್ ಸಂದರ್ಭದಲ್ಲಿ ಅವಘಡಗಳಾಗುವುದು ಉಂಟು.

ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ವಿಹಾರ, ಚಾಮರ ವಜ್ರ, ಪ್ರಿನ್ಸೆಸ್‌ಶ್ರೈನ್ ಮೊದಲಾದ ಮದುವೆ ಹಾಲ್‌ಗಳ ದಿನವೊಂದರ ಬಾಡಿಗೆಯೇ 4.5 ಲಕ್ಷ ರೂ.ಗಳಿಂದ 20 ಲಕ್ಷ ರೂ.ಗಳವರೆಗೆ. ಈ ಮೊತ್ತದಲ್ಲಿ ಅಡುಗೆ, ಉಪಚಾರ, ಹೂವಿನ ಅಲಂಕಾರ, ವಿದ್ಯುತ್ ಅಲಂಕಾರ, ಬ್ಯಾಂಡ್ ಸೆಟ್, ವಿಡಿಯೋ, ಡ್ರೋಣ್ ಕೆಮರಾ ಇತ್ಯಾದಿ ಇತರೆ ಖರ್ಚುಗಳು ಸೇರುವುದಿಲ್ಲವೆಂಬುದನ್ನು ನೆನಪಿಡಿ. ನೆಲದ ಬಾಡಿಗೆಯೇ ಅಷ್ಟು. ರಾಜಸ್ಥಾನದ ಜೈಪುರದಲ್ಲಿರುವ ವಿವಿಧ ಅರಮನೆಗಳಲ್ಲಿ ಮದುವೆಗೆ ದಿನವೊಂದರ ಬಾಡಿಗೆ ಬರೋಬ್ಬರಿ 25 ರಿಂದ 30 ಲಕ್ಷ ರೂಪಾಯಿ. ಅಲ್ಲಿ ಅತಿಥಿಗಳಿಗೆ ವಿತರಿಸಲಾಗುವ ಪ್ರತಿ ಊಟಕ್ಕೆ 2500 ರೂ. ಗಳಿಂದ 5000 ರೂ.ಗಳವರೆಗೆ. ಅಲ್ಲಿಗೆ ಹೋಗಿ ಮದುವೆ ಮಾಡಿಕೊಳ್ಳುವ ಸೆಲೆಬ್ರಿಟಿಗಳು, ಗಣ್ಯರು ಹಾಗಿದ್ದರೆ ಒಂದು ಮದುವೆ ಸಮಾರಂಭಕ್ಕೆ ಎಷ್ಟು ಖರ್ಚು ಮಾಡುತ್ತಾರೆಂಬುದನ್ನು ನೀವೇ ಲೆಕ್ಕ ಹಾಕಿಕೊಳ್ಳಿ (ಗಾಬರಿ ಮಾತ್ರ ಆಗಬೇಡಿ!). ಎರಡು ಜೀವಗಳನ್ನು ಪ್ರೀತಿಯಿಂದ ಬೆಸೆಯುವ ಒಂದು ಸಮಾರಂಭ ವ್ಯಾಪಾರೀಕರಣಕ್ಕೆ ಒಳಪಟ್ಟು ಈಗ ಅದೊಂದು ದಂಧೆಯೇ ಆಗಿಬಿಟ್ಟಿದೆ.

ಮದುವೆ ಸಮಾರಂಭಗಳು ದುಂದು ವೆಚ್ಚದ ವಿದ್ಯಮಾನಗಳಾಗಿ ಬಿಟ್ಟಿರುವುದು ಹಲವು ಪ್ರಾಜ್ಞರನ್ನು ಚಿಂತೆಗೀಡು ಮಾಡಿದೆ. ಹಬ್ಬ, ಮದುವೆ ಆಚರಣೆಗಳಲ್ಲಿ ಆಧುನಿಕತೆಯ ಗಾಳಿ ಬೀಸುತ್ತಿದೆ ಎಂಬ ಮಾತು ಒಂದೆಡೆಯಾದರೆ, ನಮ್ಮ ಪರಂಪರೆ, ಪದ್ಧತಿ, ಸಂಸ್ಕೃತಿ ನಾಶವಾಗುತ್ತಿದೆ, ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ ಅಧಿಕವಾಗುತ್ತಿದೆ , ನಮ್ಮತನ ಕಳೆದು ಹೋಗುತ್ತಿದೆ ಎಂಬ ಆತಂಕದ ಕೂಗು ಇನ್ನೊಂದೆಡೆ. ಈ ಹಿನ್ನೆಲೆಯಲ್ಲಿ ನಮ್ಮ ಪರಂಪರೆ, ಸಂಸ್ಕೃತಿ ಪೋಷಿಸುವ ದೃಷ್ಟಿಯಿಂದ ಒಂದಷ್ಟು ಸ್ವಾಗತಾರ್ಹ ಪ್ರಯತ್ನಗಳು ಪ್ರಾರಂಭವಾಗಿರುವುದು ಸಮಾಧಾನಕರ ಸಂಗತಿ. ಉತ್ತರಾಖಂಡ್‌ನ ಚಕ್ರಾತಾ ಪ್ರಾಂತ್ಯದ ಸುಮಾರು 25 ಹಳ್ಳಿಗಳಲ್ಲಿ ಸಂಪ್ರದಾಯ, ಪರಂಪರೆ, ನಮ್ಮತನದ ಉಳಿವಿನ ಹಿನ್ನೆಲೆಯಲ್ಲಿ ಮದುವೆ ಸಮಾರಂಭದ ಕುರಿತು ಕೈಗೊಳ್ಳಲಾದ ಸಾಮೂಹಿಕ ನಿರ್ಣಯ ವಿಶಿಷ್ಟ ಕಾರಣಕ್ಕಾಗಿ ಸುದ್ದಿಗೆ ಗ್ರಾಸವಾಗಿದೆ.

ಆ ನಿರ್ಣಯದ ಪ್ರಕಾರ ಈ ಪ್ರದೇಶದಲ್ಲಿ ಇನ್ನು ಮುಂದೆ ಐಷಾರಾಮಿ, ಅದ್ದೂರಿ, ವೈಭವೋಪೇತ, ದುಬಾರಿ ವೆಚ್ಚದ ಮದುವೆ ಸಮಾರಂಭ ನಡೆಸುವಂತಿಲ್ಲ. ದುಬಾರಿ ವೆಚ್ಚದ ಉಡುಗೊರೆಯನ್ನು ನೀಡುವಂತಿಲ್ಲ. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ಗಾದೆಯಂತೆ ಅವರವರ ಆರ್ಥಿಕ ಸ್ಥಿತಿಗೆ ತಕ್ಕಂತೆ ಸರಳವಾಗಿ ಮದುವೆ ಸಮಾರಂಭ ಏರ್ಪಡಿಸಬೇಕು. ಮದುವೆಗಳಲ್ಲಿ ಡಿಜೆ ಕುಣಿತ, ಸಂಗೀತ, ಕುಡಿತಗಳಿಗೆ ಅವಕಾಶವಿಲ್ಲ. ಆಧುನಿಕ ತಿಂಡಿ –ತೀರ್ಥಗಳಿಗೂ ಅವಕಾಶವಿಲ್ಲ. ಸ್ಥಳೀಯವಾದ ಊಟ –ತಿಂಡಿಗೇ ಆದ್ಯತೆ ಇರಬೇಕು. ಮದುವೆ ಖರ್ಚು ಹೊರೆಯಾಗಬಾರದು. ಡಿಜೆ ಕುಣಿತ, ಮದ್ಯಪಾನದ ಬದಲು ಸ್ಥಳೀಯ ಜಾನಪದ ಸಂಗೀತ ನೃತ್ಯಕ್ಕೆ ಆದ್ಯತೆ ನೀಡಿ ಸಂಭ್ರಮಿಸೋಣ ಎಂಬ ತೀರ್ಮಾನ ಕೈಗೊಳ್ಳಲಾಗಿದೆ. ಈ ತೀರ್ಮಾನ ಒಂದು ಒಳ್ಳೆಯ ಬೆಳವಣಿಗೆ ಎಂದು ಹಲವರು ಸ್ವಾಗತಿಸಿದ್ದಾರೆ. ಈ ನಿರ್ಧಾರವನ್ನು ಕೆಲವು ಪ್ರಮುಖರು ಸೇರಿ ಮಾಡಿರುವವರಾದರೂ ಇದೊಂದು ಸಮಾಜ ಹಿತಕ್ಕೆ ಪೂರಕವಾದ ನೀತಿ ಸಂಹಿತೆಯಾಗಿದೆ. ಈ ನೀತಿ ಸಂಹಿತೆಯನ್ನು ಉಲ್ಲಂಘಿಸಿದಲ್ಲಿ 10 ಲಕ್ಷದವರೆಗೂ ದಂಡ ಕಟ್ಟಬೇಕೆಂಬ ಎಚ್ಚರಿಕೆಯನ್ನು ನೀಡಲಾಗಿದೆ. ಈ ದಂಡದ ಮೊತ್ತವನ್ನು ನಿರ್ಧರಿಸುವ ಅಧಿಕಾರ ಊರ ಪ್ರಮುಖರದ್ದು. ಇದೇನಾದರೂ ಅಂದುಕೊಂಡಂತೆ ಕಾರ್ಯಗತವಾದರೆ ಒಂದು ದೊಡ್ಡ ಕ್ರಾಂತಿಯೇ ಆದಂತೆ ಎಂದು ಆ ನೀತಿಸಂಹಿತೆ ರೂಪಿಸಿದ ಸಮಿತಿಯ ಮುಖ್ಯಸ್ಥರು ಹೇಳಿಕೆ ನೀಡಿದ್ದಾರೆ.

ಮದುವೆ ಸಮಾರಂಭಗಳಲ್ಲಿ ಪೋಲು ಮಾಡುವ ಆಹಾರ ಪದಾರ್ಥಗಳದು ಇನ್ನೊಂದು ಸಮಸ್ಯೆ. ಊಟಕ್ಕೆ ಕುಳಿತಾಗ ನಮಗೆ ಅಗತ್ಯವಿದ್ದಷ್ಟೇ ಆಹಾರ ಪದಾರ್ಥಗಳನ್ನು ಕೇಳಿ ಪಡೆದುಕೊಂಡರೆ ಪೋಲಾಗುವ ಆಹಾರ ಪದಾರ್ಥದ ಪ್ರಮಾಣವನ್ನು ತಗ್ಗಿಸಬಹುದು. ಊಟವಾದ ಬಳಿಕ ಎಂಜಲೆಲೆಗಳನ್ನು ಸುಮ್ಮನೆ ಒಮ್ಮೆ ವೀಕ್ಷಿಸಿದರೆ ರಾಶಿ ರಾಶಿ ಆಹಾರ ಪದಾರ್ಥಗಳನ್ನು ಗುಡ್ಡೆ ಹಾಕಿರುವ ಎಲೆಗಳು ಹೆಚ್ಚಿರುತ್ತವೆ. ಪೋಲಾಗುವ ಆಹಾರ ಪದಾರ್ಥಗಳಿಂದ ಹಸಿದ ಅದೆಷ್ಟೋ ಹೊಟ್ಟೆಗಳನ್ನು ತಣಿಸಬಹುದು. ಹಸಿವಿನ ಆ ಮುಖಗಳಲ್ಲಿ ಮಂದಹಾಸ ಅರಳಿಸಬಹುದು ಎಂಬುದು ನಮಗೇಕೆ ಹೊಳೆಯುತ್ತಿಲ್ಲ?

ಸರಳ, ನಿರಾಡಂಬರ, ಅರ್ಥಪೂರ್ಣ ಮದುವೆ ಸಮಾರಂಭ ಆಚರಣೆಯ ಮೂಲಕ ಮದುವೆ ಎಂಬ ಪವಿತ್ರ ವಿಧಿಗೆ ಹೊಸ ಮುನ್ನುಡಿ ಬರೆಯುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಲಿ.

ತಾರುಣ್ಯದ ತಲ್ಲಣಗಳು

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



'ಹುಚ್ಚುಕೋಡಿ ಮನಸು ಅದು ಹದಿನಾರರ ವಯಸು!' ಎಂಬುದನ್ನು ಕೇಳಿದ್ದೇವಲ್ಲವೇ? ಹಾಗಂದ್ರೇನು? ನಮ್ಮ ಮಗ ಮೊದಲಿಗೆ ಎಷ್ಟು ಸಭ್ಯವಾಗಿದ್ದ. ಒಂದೂ ಎದುರು ಮಾತಾಡಿದವನಲ್ಲ. ಈಗ ಯಾಕೋ ಏನೋ ಒಂಥರಾ ಆಗಿದಾನೆ. ಏನು ಕೇಳಿದ್ರೂ, ಅದೆಲ್ಲ ನಂಗೊತ್ತಿಲ್ಲಮ್ಮಾ, ನೀ ಸುಮ್ನಿರಮ್ಮ ಅಂತ ರೇಗ್ತಾನೆ ಎಂಬುದು ತಾಯಿ ಗಂಗಮ್ಮನ ಅಳಲು. ನಮ್ಮ ಮಗಳು ಮೊದ ಮೊದಲು 'ನೋಡಮ್ಮಾ ನಿನಗೆ ಈ ಚೂಡಿದಾರ ಚೆನ್ನಾಗಿ ಕಾಣುತ್ತೆ ಕಣೆ. ಅದ್ನೇ ಹಾಕ್ಕೊಳಮ್ಮಾ' ಅಂದ್ರೆ ಮರು ಮಾತಿಲ್ಲದೇ ಹಾಕ್ಕೊಂಡು ಬರ್ತಿದ್ಲು. ಆದ್ರೆ ಈಗೀಗ ಯಾಕೋ, ನಾನೇನಾದ್ರೂ ಹೇಳಿದ್ರೆ ಅದಕ್ಕೆ ಒರಟು ಒರಟಾಗಿ ಉತ್ತರಕೊಡ್ತಾಳೆ. ಮೊನ್ನೆ ದಿನ ಒಂದು ಚೂಡಿದಾರ ಹಾಕ್ಕೊಂಡಿದ್ಲು. ಅಲ್ಲಮ್ಮಾ ಇದು ನಿನಗೆ ಚೆನ್ನಾಗಿ ಕಾಣ್ಸೋಲ್ಲ ಬೇರೆದನ್ನು ತೋರಿಸಿ ಅದನ್ನು ಹಾಕ್ಕೊಳೇ ಅಂತ ಸಮಾಧಾನದಿಂದ ಹೇಳ್ದೆ. ಅದಕ್ಕೆ ಅವಳು ಇಲ್ಲಮ್ಮಾ ಇದೇ ನನಗೆ ಚೆನ್ನಾಗಿ ಕಾಣುತ್ತೆ. ನನ್ನ ಫ್ರೆಂಡ್ಸ್ ಎಲ್ರೂ ಎಷ್ಟು ಒಳ್ಳೊಳ್ಳೆ ಚೂಡಿದಾರ ಹಾಕ್ಕೊಂಡು ಬರ್ತಾರೆ ಗೊತ್ತಾ. ನನಗೆ ಇದೇ ಚೆನ್ನಾಗಿ ಕಾಣುತ್ತೆ. ಅದೂ ಅಲ್ದೇ ಇದನ್ನು ನನ್ನ ಫ್ರೆಂಡ್ಸಿಗೆ ವಾಟ್ಸ್ ಆ್ಯಪ್‌ನಲ್ಲಿ ತೋರಿಸ್ದೆ. ಅದನ್ನು ನೋಡಿ ಅವರು ಹೈಕ್ಲಾಸ್ ಇದೆ ಕಣೇ. ನಿನಗೆ ತುಂಬಾ ಚೆನ್ನಾಗಿ ಕಾಣುತ್ತೆ ಅಂತ ಹೇಳಿದ್ರು. ಹಾಗಾಗಿ ಇದನ್ನೇ ಹಾಕ್ಕೋಳ್ತೀನಮ್ಮಾ ಅಂತ ಹಟ ಹಿಡಿದು, ನನ್ನ ಮಾತು ಕೇಳ್ದೇ ಕ್ಲಾಸಿಗೆ ಹೋದ್ಲು ಎಂಬುದು ತಾಯಿ ಮಮ್ತಾಳ ಅಳಲು.

ಹೀಗೆ ಒಬ್ಬೊಬ್ಬ ಪೋಷಕರದೂ ತಮ್ಮ ಮಕ್ಕಳ ಕುರಿತು ಒಂದೊಂದು ಹೇಳಿಕೆಗಳು. ಹಾಗಾದರೆ ಇದಕ್ಕೆಲ್ಲಾ ಕಾರಣ ಏನು? ಆ ಮಕ್ಕಳ ವಯಸ್ಸೆಷ್ಟು? ಅವರು ಯಾಕೆ ಹೀಗೆ ವರ್ತಿಸುತ್ತಾರೆ? ಎಂಬುದು ಅನೇಕ ಪೋಷಕರ ಪ್ರಶ್ನೆ. ಇದಕ್ಕೆ ಕಾರಣ ಮಕ್ಕಳು ಬಾಲ್ಯ ಕಳೆದು ತಾರುಣ್ಯವನ್ನು ತಲುಪಿದ್ದಾರೆ. ತಾರುಣ್ಯಕ್ಕೆ ಹರೆಯ ಅಥವಾ ಯೌವ್ವನ ಎಂದೂ ಕರೆಯುತ್ತಾರೆ. ಈ ಅವಧಿಯಲ್ಲಿ ಹಲವಾರು ಬದಲಾವಣೆಗಳು ಕಾಣುತ್ತವೆ. ಬದಲಾವಣೆಗಳಿಂದ ಅವರ ಮನಸ್ಸು ತಲ್ಲಣಕ್ಕೊಳಗಾಗುತ್ತದೆ ಎಂಬ ಅಂಶ ಪೋಷಕರ ಅರಿವಿಗೆ ಬರುವುದಿಲ್ಲ. ಅವರು ಹೇಳುವುದು, ಅಅಯ್ಯೋ ಈಗ ಕಾಲ ಕೆಟ್ಟು ಹೋಗಿದೇರಿ. ಈ ಮಕ್ಕಳನ್ನು ಹೇಗೆ ನಿಭಾಯಿಸೋದು ಎನ್ನೋದೇ ಒಂದು ದೊಡ್ಡ ಸಮಸ್ಯೆಆ ಎನ್ನುತ್ತಾರೆ. ತಮ್ಮ ಮಕ್ಕಳು ಈಗ ತಾರುಣ್ಯದ ಅಥವಾ ಹರೆಯದ ಹೊಸ್ತಿಲಲ್ಲಿದ್ದಾರೆ. ಈ ಅವಧಿಯಲ್ಲಿ ಸಮಗ್ರವಾಗಿ ಅಂದರೆ ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ಮತ್ತು ಲೈಂಗಿಕವಾಗಿ ಹಲವು ಬದಲಾವಣೆಗಳಾಗುತ್ತವೆ. ಈ ದಿಸೆಯಲ್ಲಿ ತಾರುಣ್ಯದ ಕುರಿತಾದ ಹಲವು ವಿಷಯಗಳನ್ನು ಪೋಷಕರು ತಿಳಿದುಕೊಳ್ಳುವುದು ಅವಶ್ಯ.

ಮಾನವನ ಜೀವಿತಾವಧಿಯಲ್ಲಿ ಅತ್ಯಂತ ಮಹತ್ವವಾದ ಮೆಟ್ಟಿಲು ತಾರುಣ್ಯ ಅಥವಾ ಹರೆಯ. ಈ ಅವಧಿಯು ಸುಮಾರು ಹನ್ನೆರಡನೇ ವಯಸ್ಸಿನಿಂದ ಇಪ್ಪತ್ತನೇ ವಯಸ್ಸಿನ ವರೆಗೆ ಎಂದು ಹೇಳಬಹುದು. ಇದಕ್ಕೆ ಇಂಗ್ಲೀಷಿನಲ್ಲಿ 'ಟೀನೇಜ್' ಎಂದು ಕರೆಯುತ್ತಾರೆ. ಮನೋ ವೈದ್ಯಕೀಯದಲ್ಲಿ ಇದಕ್ಕೆ 'ಅಡೋಲೆಸೆನ್ಸ್' (Adolesence) ಎಂದು ಕರೆಯುತ್ತಾರೆ. ಪರಾವಲಂಬಿತನದ ಬಾಲ್ಯಾವಸ್ಥೆಯನ್ನು ತೊರೆದು ಇನ್ನೂ ಪ್ರೌಢತ್ವದ ಸ್ವತಂತ್ರತೆಯನ್ನು ತಲುಪದೇ ಇರುವ ಅವಧಿಯೇ ಹರೆಯ. ಹರೆಯ ಒಂದು ಸಂಕ್ರಮಣದ ಕಾಲವೂ ಹೌದು. ಈ ಅವಧಿಯಲ್ಲಿ ಎಷ್ಟು ಮಹತ್ವದ್ದೆಂದರೆ, ಹರೆಯದಲ್ಲಿ ಸರಿಯಾದ ಪ್ರೋತ್ಸಾಹ, ಮಾರ್ಗದರ್ಶನ, ಹಿತವಾದ ಕೌಟುಂಬಿಕ ಪರಿಸರ ಮತ್ತು ಒಳ್ಳೆಯ ಸಾಮಾಜಿಕ ಬೆಂಬಲ ದೊರೆತಾಗ, ಅದರಿಂದ ಹರೆಯದ ಮನಸ್ಸು ಭವಿಷ್ಯದಲ್ಲಿ ಸಾಧನೆ ಮಾಡಲು ಸಜ್ಜಾಗುತ್ತದೆ. ಆತ್ಮವಿಶ್ವಾಸದಿಂದ ಮುನ್ನುಗ್ಗಿ ಯಶಸ್ಸನ್ನು ಸಾಧಿಸುವತ್ತ ಚಲಿಸುತ್ತದೆ. ನಕಾರಾತ್ಮಕ ಅಂಶಗಳಿಂದ ಕೂಡಿದ, ಕೌಟುಂಬಿಕ ಮತ್ತು ಸಾಮಾಜಿಕ ಪರಿಸರಗಳು, ಮಗುವನ್ನು ಅರ್ಥ ಮಾಡಿಕೊಳ್ಳದ ಪೋಷಕರು, ಪ್ರೀತಿ ಮತ್ತು ಆತ್ಮೀಯತೆಯ ಕೊರತೆ ಇವುಗಳಿಂದ ಹರೆಯದವರ ಭವಿಷ್ಯವೇ ಕುಂಠಿತಗೊಳ್ಳುವ ಸಂಭವ ಹೆಚ್ಚು. ಸಾಮಾಜಿಕ ಜಾಲತಾಣಗಳಾದ ವಾಟ್ಸ್ ಆ್ಯಪ್, ಫೇಸ್‌ಬುಕ್, ಯೂಟ್ಯೂಬ್, ಇನ್‌ಸ್ಟಾಗ್ರಾಂ ಮತ್ತು ವೀಡಿಯೋ ಚಿತ್ರಗಳು ಅಪಕ್ವವಾದ ಹರೆಯದ ಮನಸ್ಸನ್ನು ಇನ್ನಷ್ಟು ತಪ್ಪು ದಾರಿಗೆಳೆದು ಅವರ ಭವಿಷ್ಯವು ನರಕ ಸದೃಶವಾಗುತ್ತದೆ.

ಹೆಚ್ಚಿನ ಪೋಷಕರು ಈ ಕಾಲದ ಮಕ್ಕಳು ಕೆಟ್ಟು ಹೋಗಿದ್ದಾರೆ. ನಮ್ಮ ಕಾಲದಲ್ಲಿ ಮಕ್ಕಳು ಹೀಗಿರಲಿಲ್ಲ. ಈಗ ಕಾಲ ಕೆಟ್ಟಿದೆ ಎಂದು ಹೇಳುವುದನ್ನು ನಾವು ಕೇಳುತ್ತೇವೆ. ಆದರೆ ಕಾಲ ಯಾವಾಗಲೂ ತನ್ನಷ್ಟಕ್ಕೆ ತಾನು ಓಡುತ್ತಿರುತ್ತದೆ. ಅದು ಕೆಡಲು ಸಾಧ್ಯವಿಲ್ಲ. ಮಕ್ಕಳೂ ಎಂದಿನಂತೆಯೇ ಇದ್ದಾರೆ. ಆದರೆ ಅವರ ಸುತ್ತ ಇರುವ ಕುಟುಂಬ ಮತ್ತು ಪರಿಸರಗಳ ಬದಲಾವಣೆಗಳಿಂದ ಹರೆಯದ ಮನಸ್ಸು ದಾರಿ ತಪ್ಪುತ್ತದೆ. ಇದಕ್ಕೆ ಅವಶ್ಯವಿರುವುದು ಆತ್ಮೀಯ, ಪ್ರೀತಿಯ, ಸಕಾರಾತ್ಮಕ ಮಾರ್ಗದರ್ಶನ.

ಹರೆಯದ ಅವಧಿಯಲ್ಲಿ ದೈಹಿಕ, ಮಾನಸಿಕ, ಲೈಂಗಿಕ ಮತ್ತು ಸಾಮಾಜಿಕ ಬದಲಾವಣೆಗಳಾಗುತ್ತವೆ. ಮನೋವಿಕಾಸದಿಂದ ಹಲವಾರು ಸಂದೇಹಗಳು ಮತ್ತು ಪ್ರಶ್ನೆಗಳು ಪುಟಿದೇಳುತ್ತವೆ. ಇವುಗಳಿಂದ ಹರೆಯದ ಮನಸ್ಸು ಒತ್ತಡಗಳಿಗೆ ಸಿಲುಕುತ್ತದೆ. ಅದೇ ರೀತಿ ಹಲವಾರು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಬರುವ ಒತ್ತಡಗಳನ್ನು ನಿಭಾಯಿಸಿ, ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ ಮುನ್ನಡೆದರೆ ಹರೆಯದವರ ಭವಿಷ್ಯವು ಹಸನಾಗುತ್ತದೆ. ಇದಕ್ಕೆ ಪಾಲಕರ ಮುಕ್ತವಾದ ಪ್ರೀತಿಯ ಮಾತುಗಳು, ಪ್ರೋತ್ಸಾಹ, ಆತ್ಮೀಯತೆಯ ಸಂವಹನ, ಮಕ್ಕಳ ಅನಿಸಿಕೆಗಳನ್ನು ಆಲಿಸಿ, ಅರ್ಥ ಮಾಡಿಕೊಳ್ಳುವುದು ಮತ್ತು ಸಕಾರಾತ್ಮಕ ಮಾರ್ಗದರ್ಶನ ಅತ್ಯವಶ್ಯ.

ಸುಮಾರು ಶೇಕಡ ನಲವತ್ತು ಭಾಗದ ಮಾನಸಿಕ ಕಾಯಿಲೆಗಳು ಪ್ರಾರಂಭವಾಗುವುದು ಹರೆಯದಲ್ಲಿ ಎಂಬುದು ಅಧ್ಯಯನಗಳ ವರದಿ. ಸಮಾಜದಲ್ಲಿರುವ ತಪ್ಪು ಕಲ್ಪನೆಗಳಿಂದ ಪೋಷಕರು ಇವುಗಳ ಕುರಿತು ಗಮನ ನೀಡುವುದಿಲ್ಲ. ಒಮ್ಮೆ ಗಮನಕ್ಕೆ ಬಂದರೂ ಅದರ ಕುರಿತು ತಾತ್ಸಾರ ಅಥವಾ ತಮ್ಮ ಸಾಮಾಜಿಕ ಪ್ರತಿಷ್ಠೆಯಿಂದ ಎಲ್ಲಿ ತಮ್ಮ ಕುಟುಂಬಕ್ಕೆ ಅವಮಾನವಾಗುವುದೋ ಎಂಬ ಆತಂಕ. ಕೆಲವು ಪೋಷಕರು ಹರೆಯದವರಿಗೆ ಮಾನಸಿಕ ಕಾಯಿಲೆಗಳೆಲ್ಲಿ ಬರುತ್ತದೆ? ಅವರಿಗೇನೂ ಜವಾಬ್ದಾರಿಯಿಲ್ಲ. ಹಾಗಾಗಿ ಮನೋರೋಗಗಳು ಎಲ್ಲಿಂದ ಬರಬೇಕು ಎನ್ನುತ್ತಾರೆ. ಇದು ಮನೋರೋಗ ಕುರಿತು ಅವರಿಗಿರುವ ಅಜ್ಞಾನ. ಕೆಲವು ಪೋಷಕರು ಮನೋವೈದ್ಯರ ಹತ್ತಿರ ಹೋಗಲು ಹಿಂಜರಿಯುತ್ತಾರೆ. ಮನೋವೈದ್ಯರು ನಿದ್ದೆ ಮಾತ್ರೆಗಳನ್ನು ಕೊಟ್ಟು ಮಗುವಿನ ಆರೋಗ್ಯವನ್ನು ಹಾಳು ಮಾಡುತ್ತಾರೆ ಎಂಬ ಭಯ. ಈ ಕಾರಣಗಳಿಂದ ದೆವ್ವ, ಭೂತ, ಪಿಶಾಚಿ, ದೇವಸ್ಥಾನ, ತಾಯತ, ಜ್ಯೋತಿಷ್ಯ, ಹೋಮ, ಹವನ ಇತ್ಯಾದಿಗಳಿಗೆ ಮೊರೆಹೋಗುತ್ತಾರೆ. ಇದರ ಅಂತಿಮ ಪರಿಣಾಮ ಹರೆಯದ ಮಗು ಕಲಿಕೆಯಲ್ಲಿ ಹಿಂದುಳಿಯುತ್ತದೆ. ಅದಕ್ಕೆ ಪೋಷಕರಿಂದ ಕಟು ಶಬ್ದಗಳ ಬೈಗುಳ. ಇದರ ಅಂತಿಮ ಫಲ ಹರೆಯದವರ ಭವಿಷ್ಯ ಹಾಳಾಗುತ್ತದೆ. ಹರೆಯದವರ ಒತ್ತಡಗಳನ್ನು ನೀಗುವಲ್ಲಿ ಮತ್ತು ಸವಾಲುಗಳನ್ನು ಎದುರಿಸುವಲ್ಲಿ ಪೋಷಕರ ಪಾತ್ರವೇನು? ಸಮಾಜದ ಪಾತ್ರ ಏನು? ಎಂಬ ಹಲವಾರು ಪ್ರಶ್ನೆಗಳ ಕುರಿತು ಮಾಹಿತಿ ನೀಡಲು ಈ ಲೇಖನಗಳ ಸರಮಾಲೆಯೇ ತಾರುಣ್ಯದ ತಲ್ಲಣಗಳು.


(ಲೇಖಕರು ಖ್ಯಾತ ಮನೋರೋಗ ತಜ್ಞರು, ಶಿವಮೊಗ್ಗ)

'ಹಿಡನ್ ಚಾರ್ಜ್'ಗಳ ಹುಡುಕಾಟದಲ್ಲಿ...

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ನಿಂಗೇಶಿ ಈಗೀಗ ಆನ್‌ಲೈನ್ ಶಾಪಿಂಗ್‌ನ ಮೋಹಕ್ಕೆ ಬಿದ್ದಿದ್ದಾನೆ. ಹಿಂದೆ ತನ್ನ ಅಜ್ಜ, ಅಪ್ಪನ ಜೊತೆಗೆ ಜಾತ್ರೆ ಹಾಗೂ ಸಂತೆಗಳಲ್ಲಿ ತಿರುಗಾಡುವಾಗ ಬೇಕಾದ ವಸ್ತುವನ್ನು ಖರೀದಿಸಲೆಂದು ಹತ್ತಾರು ಅಂಗಡಿಗಳನ್ನು ಹತ್ತಿಳಿದು ಆತನಿಗೆ ಅಭ್ಯಾಸವಿತ್ತು. ನಿಂಗೇಶಿಗೆ ಸರಿಯಾಗಿ ನೆನಪಿದೆ, ಅಲ್ಲೆಲ್ಲ ಅಂಗಡಿಗಳು ಒಂದು ನಿಗದಿತ ಲೈನ್‌ನಲ್ಲಿ ಇರುತ್ತಿದ್ದವು. ಆದರೆ ಈಗ ಹಾಗಲ್ಲ. ಅವನು ಹೊಕ್ಕಿ ಹೊರಬರುವ, ಮಿನಿಮೈಸ್ ಮಾಡಿ ಬದಿಗಿಟ್ಟು ಮತ್ತೊಂದರ ಒಳಗೆ ಪ್ರವೇಶಿಸುವ ಈ ಅಂಗಡಿಗಳು ಆನ್‌ಲೈನ್ ಸ್ವರೂಪದವು. ಈಗಲೂ ಈತ ಈ ಆನ್‌ಲೈನ್ ಅಂಗಡಿಗಳನ್ನು ಮಿನಿಮೈಸ್ ಮಾಡಿಟ್ಟಾಗ ಒಂದು ರೀತಿ ಲೈನ್‌ನಲ್ಲೇ ಇರುವಂತೆಯೇ ಗೋಚರಿಸುತ್ತವೆ. ಸ್ಕ್ರಾಲ್ ಬ್ಯಾಕ್ ಮಾಡುತ್ತಾ ಬೇಕೆನಿಸಿದ ಕಡೆಗೆ ಮತ್ತೆ ಹೋಗಿ ಆರ್ಡರ್ ಮಾಡಿಕೊಳ್ಳುವುದು ರೂಢಿ ಯಾಗಿದೆ. ಆದರೆ ಇಲ್ಲೊಂದು ಬಹುಮುಖ್ಯವಾದ ವ್ಯತ್ಯಾಸವಿದೆ. ಆ ಕಾಲದಲ್ಲಿ 150 ರುಪಾಯಿಯ ಚಪ್ಪಲಿ ಎಂದರೆ ಕೊನೆಗೆ ಅಪಾರ ಚೌಕಾಸಿಯ ಚತುರತೆ ಮೆರೆದು ಅದನ್ನು 70 ಇಲ್ಲವೇ 90 ರೂಪಾಯಿಗೇ ಖರೀದಿಸಲಾಗುತ್ತಿತ್ತು. ಆದರೆ ಈಗ ಹಾಗಲ್ಲ. 750 ಅಂತ ಕಂಡಿದ್ದು, ಅದೇನೇನೋ ಆಫರ್‌ಗಳೆಲ್ಲವೂ ಸೇರಿಯೂ ಕೊನೆಗೆ ಕೊಳ್ಳುವಾಗ ಅದರ ಬೆಲೆ 900– 950 ಹತ್ತಿರ ಹೋಗಿರುತ್ತದೆ. 35% ಆಫ್ ಎಂಬ ಲೇಬಲ್ ನಮ್ಮನ್ನು ಅಣಕಿಸುವಂತಿರುತ್ತದೆ. ಇದ್ಯಾಕೆ ಹೀಗಾಗುತ್ತದೆ ಎನ್ನುವುದನ್ನು ಪತ್ತೆ ಮಾಡಲು ಇಳಿದರೆ, ಅಷ್ಟು ಸುಲಭಕ್ಕೆ ನೇರಾನೇರ ಕಣ್ಣಿಗೆ ಬೀಳದ 'ಹಿಡನ್ ಚಾರ್ಜಸ್' ಗಳ ಹೈಡ್&ಸೀಕ್ ಆಟ ಗಮನಕ್ಕೆ ಬರುತ್ತದೆ. ಅವು ಕದ್ದುಮುಚ್ಚಿ ಅಸಲಿ ಬೆಲೆಯ ಜೊತೆಗೆ 'ನೀನೆಲ್ಲೋ ನಾನಲ್ಲೇ' ಎನ್ನುತ್ತಾ ಸೇರಿಕೊಳ್ಳುತ್ತವೆ.



'ಕಣ್ಣಿಗೆ ಕಾಣದ ಆದರೆ ಜೇಬಿಗೆ ಖೋತಾ' ಆಗಿ ಪರಿಣಮಿಸುವ ಈ ಅಡಗಿರುವ ಶುಲ್ಕಗಳು ವಿವಿಧ ಹೆಸರುಗಳೊಂದಿಗೆ ನಮ್ಮ ಖರೀದಿಯ ಜೊತೆಗೆ ಸೇರಿಕೊಳ್ಳುತ್ತವೆ. ಆದ್ದರಿಂದ ಹಿಡನ್ ಚಾರ್ಜಸ್ ಎಂಬ ಕಂಪೆನಿಗಳ ಹಿಡನ್ ಅಜೆಂಡಾದ ಬಗ್ಗೆ ಸೂಕ್ತ ಎಚ್ಚರಿಕೆ ಇರಬೇಕಾಗುತ್ತದೆ. ಕೆಲವೊಮ್ಮೆ ಆ ಪರಿ ಹೇಗಿರುತ್ತದೆ ಎಂದರೆ, ಹಿರಣ್ಯಕಶಿಪು ಪ್ರಹ್ಲಾದನಲ್ಲಿ ಕಂಬ ಕಂಬವನ್ನೂ ತೋರಿಸಿ ಇಲ್ಲಿ ಅಡಗಿರುವನೇ ನಿನ್ನ ಹರಿ, ಇಲ್ಲಿ ಅಡಗಿರುವನೇ ನಿನ್ನ ಹರಿ ಎಂದು ಕೇಳಿದಂತೆ, ಪ್ರತೀ ಆರ್ಡರ್ ಮಾಡುವ ಮುನ್ನವೂ, ಪ್ರತೀ ಖರೀದಿಗೆ ಮುಂದಾಗುವ ಮೊದಲು ಇದರಲ್ಲಿ ಅಡಗಿದೆಯೇ ಆ ಹೆಚ್ಚುವರಿ ಶುಲ್ಕ, ಅಲ್ಲಿ ಏನೇನೂ ಹೆಚ್ಚುವರಿ ಶುಲ್ಕ ಇದ್ದಾವು, ಇದರಲ್ಲೇನಾದರೂ ಬೇರೆ ಹಿಡನ್ ಚಾರ್ಜಸ್ ಇದೆಯೇ ಎಂದು ಪರಿ ಪರಿಯಾಗಿ ಕೇಳಿ, ಅದು ಇದೆಯೋ ಇಲ್ಲವೋ ಎನ್ನುವುದನ್ನು ಖಾತ್ರಿಪಡಿಸಿಕೊಂಡೇ ಮುಂದೆ ಸಾಗಬೇಕಾಗುತ್ತದೆ. ಹಾಗೆ ನೋಡಿದರೆ, ಗ್ರಾಹಕರಿಂದ ಸಾಧ್ಯವಾದಷ್ಟೂ ಹೆಚ್ಚು ಹಣ ಪೀಕಿಸಲೇಬೇಕು ಎಂಬ ಮಾರಾಟಗಾರರ ತಂತ್ರ–ಕುತಂತ್ರಗಳ ಸಾಫ್ಟ್ ಆವೃತ್ತಿಯೇ ಈ ಅಡಗಿರುವ ಶುಲ್ಕಗಳ ಶೂಲ. ಅವುಗಳಿಗೂ ಬಗೆ ಬಗೆಯ ಉತ್ಪನ್ನ ಹಾಗೂ ಸರಕು–ಸೇವೆಗಳೇ ಅತ್ಯಂತ ಸುರಕ್ಷಿತ ಅಡಗುತಾಣ. ತಿಗಣೆ, ಜಿರಳೆ ಕಾಟ ಹೆಚ್ಚಿರುವ ಮನೆ ಅಥವಾ ಅಂಗಡಿಯಿಂದ ಯಾವುದಾದರೂ ವಸ್ತುವನ್ನು ನಮ್ಮ ಮನೆಗೆ ತಂದರೆ ಕೆಲವೊಮ್ಮೆ ಅವುಗಳ ಜೊತೆಗೆ ಯಾರಿಗೂ ಗೊತ್ತಾಗದಂತೆ ಒಂದೆರಡು ಜಿರಳೆ, ತಿಗಣೆಗಳೂ ಬಂದು ನಮ್ಮ ಮನೆಯನ್ನು ಸೇರುತ್ತವಲ್ಲ ಹಾಗೆಯೇ ಈ ಅಡಗಿ ಕುಳಿತ ಶುಲ್ಕಗಳ ಅಟಾಟೋಪ!

ನಮ್ಮ ನಿಂಗೇಶಿಗೆ ಒಂದು ಜೊತೆ ಶೂ ಕೊಳ್ಳಬೇಕಿತ್ತು. ತನಗೆ ಬೇಕಾದ ಬಣ್ಣ, ಗಾತ್ರ, ವಿನ್ಯಾಸ ಹಾಗೂ ಗುಣಮಟ್ಟಕ್ಕಾಗಿ ಹತ್ತಾರು ಆನ್‌ಲೈನ್ ಅಂಗಡಿಗಳನ್ನು ಎಡತಾಕಿದ. ಕೊನೆಗೂ ಒಂದೆಡೆ ಕಾಣಿಸಿದ 850/– ಬೆಲೆಯ ಶೂ ಮೆಚ್ಚುಗೆಯಾಯಿತು. ಬೇರೆಡೆ ಆದರೆ, ಆಫ್‌ಲೈನ್‌ನಲ್ಲಾದರೆ ಏನಿಲ್ಲವೆಂದರೂ 1000–1200 ರ ಕಡಿಮೆ ಇದು ಸಿಕ್ಕಲಿಕ್ಕೆ ಸಾಧ್ಯವೇ ಇಲ್ಲ. ಸದ್ಯ ನನಗೆ ಅತ್ಯುತ್ತಮ ಡೀಲ್ ಸಿಕ್ಕಿದೆ ಅಂತ ಖುಷಿಯಲ್ಲಿ ಹಿರಿ ಹಿರಿ ಹಿಗ್ಗುತ್ತಾ ಆರ್ಡರ್ ಪ್ಲೇಸ್ ಮಾಡಲು ಮುಂದಾದ, ಯಾವುದಕ್ಕೂ ಇರಲಿ ಎಂದು, ಕೊನೆಯದಾಗಿ ಇನ್ನೊಮ್ಮೆ ಬೆಲೆಯ ಕಾಲಮ್‌ನ್ನು ಪರೀಕ್ಷಿಸಿದ. ಅಲ್ಲಿ 1130/– ಎಂದು ತೋರಿಸಿದ್ದು ನೋಡಿ ಬೆಚ್ಚಿ ಕುಳಿತ. ಮತ್ತೊಮ್ಮೆ ಕಣ್ಣುಜ್ಜಿಕೊಂಡು, ತನ್ನ ಆರ್ಡರ್‌ನ್ನೆಲ್ಲಾ ಆದ್ಯಂತ ಪರಿಶೀಲಿಸಿ, ಒಳಗೆ ಹುದುಗಿಸಿಟ್ಟಿದ್ದ ಬೆಲೆಯ ವಿವರವನ್ನು ತೆರೆದು ನೋಡಿದರೆ ನಿಂಗೇಶಿಗೆ ನಿಂತಲ್ಲೇ ಸಣ್ಣಗೆ ಶಾಕ್ ಹೊಡೆದಂತಾಯಿತು. ಅದರ ಬೆಲೆಯೇನೋ ಜಸ್ಟ್ 850/– ಹೌದು. ಆದರೆ ಅದರೊಂದಿಗೆ ಅವರು ಬಂದರೆ ನಾವೂ ಬರುತ್ತೇವೆ ಎಂದು ಸಾಲುಗಟ್ಟಿ ನಿಂತಿರುವ ಪ್ಲಾಟ್‌ಫಾರ್ಮ್ ಶುಲ್ಕ, ಹ್ಯಾಂಡಲಿಂಗ್ ಶುಲ್ಕ, ಜಿಎಸ್‌ಟಿ, ಕನ್ವೀನಿಯನ್ಸ್ ಶುಲ್ಕ, ಡೆಲಿವರಿ ಶುಲ್ಕ, ಪ್ಯಾಕಿಂಗ್ ಶುಲ್ಕ ಇನ್ನೊಂದು ಮತ್ತೊಂದು ಎಲ್ಲವೂ ಸೇರಿ ದೊಡ್ಡ ದಿಬ್ಬಣದಂತೆ ನೆರೆದಿದ್ದವು. ಅದರ ಮುಂದೆ ನಿಂಗೇಶಿಯ ಶೂ ಖರೀದಿಯ ಆಸಕ್ತಿಯೇ ಬತ್ತಿ ಬರಡಾಯಿತು. ಈ ಹಿಡನ್ ಚಾರ್ಜ್‌ಗಳ ಹಿಂಡಿನ ದಾಳಿಯಿಂದ ತಪ್ಪಿಸಿಕೊಳ್ಳುವುದು ಎಂಥೋ ಏನೋ ಎನ್ನುತ್ತಾ ಆತ ಆ್ಯಪ್‌ನ್ನು ಮುಚ್ಚಿಟ್ಟು, ನಿಟ್ಟುಸಿರು ಹೊರಚೆಲ್ಲಿ ತಣ್ಣಗೆ ಕುಳಿತ.

'ಬರಿಗಣ್ಣಿಗೆ ಕಾಣದ ಅದೆಷ್ಟೋ ಸಂಗತಿಗಳು ಈ ಲೋಕದಲ್ಲಿವೆ' ಎಂಬ ಮಾತನ್ನು ನಾವು ಲೌಕಿಕ, ಅಲೌಕಿಕ ಅಂತೆಲ್ಲಾ ಆಲೋಚಿಸಿ, ತತ್ವ ಸಿದ್ಧಾಂತಗಳ ಹಿನ್ನೆಲೆಯಲ್ಲೆಲ್ಲಾ ಗ್ರಹಿಸಲು ಯತ್ನಿಸುತ್ತೇವೆ. ಆದರೆ ಬರಿಗಣ್ಣಿಗೆ, ಅಷ್ಟು ಸುಲಭಕ್ಕೆ ಮೇಲ್ನೋಟಕ್ಕೆ ಕಾಣಿಸದ ಆ ಸಂಗತಿಗಳಲ್ಲಿ ಇಂಥ ಹಿಡನ್ ಚಾರ್ಜಸ್‌ಗಳೂ ಇರುತ್ತವೆ ಎನ್ನುವುದು ಮಾತ್ರ ಅಷ್ಟು ಸುಲಭಕ್ಕೆ ಅರ್ಥಮಾಡಿಕೊಳ್ಳಲಾಗದು. ಹೇಗೆ ಮನುಷ್ಯರ ಒಳಗೆ ವಿವಿಧ ಪ್ರತಿಭೆಗಳು ಅಡಗಿರುತ್ತವೆಯೋ, ಬಟ್ಟೆಗಳಲ್ಲಿ ಕಲೆ–ವಾಸನೆ ಅಡಗಿರುತ್ತದೆಯೋ, ಹಲ್ಲಿನ ಸಂಧಿಗಳಲ್ಲಿ ಕೀಟಾಣುಗಳು ಅಡಗಿರುವವೋ ಹಾಗೆಯೇ ಬೆಲೆಯ ಆಳದಲ್ಲಿ ಈ ಹೆಚ್ಚುವರಿ ಶುಲ್ಕಗಳೂ ಸಹ ಅಡಗಿರುತ್ತವೆ ಎನ್ನುವುದನ್ನು ನಾವೆಲ್ಲರೂ ಮನಗಾಣಲೇಬೇಕು. ಹೇಗೆ ಸುಪ್ತ ಪ್ರತಿಭೆಯೊಂದನ್ನು ಹೊರಗೆಳೆದು ನಾಲ್ಕು ಜನರ ಕಣ್ಣಿಗೆ ಬೀಳುವಂತೆ ಮಾಡುವುದು ಕಷ್ಟವೋ ಹಾಗೆಯೇ ಈ ಗುಪ್ತ ಶುಲ್ಕಗಳನ್ನೂ ಬಟಾಬಯಲು ಮಾಡಿ, ಎಲ್ಲರಿಗೂ ಥಟ್ಟನೇ ಅರ್ಥೈಸುವುದೂ ಸಹ ಅಷ್ಟೇ ಕಷ್ಟದ ಕೆಲಸ. ಅದಕ್ಕೆ ನಮ್ಮಲ್ಲಿ ವಿಶೇಷವಾದ ಒಳನೋಟ ಅಂದರೆ ಒಳಗೆ ಅಡಕವಾಗಿರುವ ದರ ವಿವರ ತೆರೆದು ನೋಡುವುದು, ಲೆಕ್ಕಾಚಾರದ ಚಾಕಚಕ್ಯತೆ ಅರ್ಥಾತ್ ಅದಕ್ಕೆ ಅಷ್ಟಾದರೆ ಬಿಲ್ ಏಕೆ ಇಷ್ಟಾಯಿತು ಎನ್ನುವುದನ್ನೆಲ್ಲಾ ಮೌಖಿಕವಾಗಿಯೇ ಲೆಕ್ಕಹಾಕಿ ಕೂಡಿ ಕಳೆದು ಬಾಗಿಸಿ ಕಂಡುಕೊಳ್ಳುವ ಲೆಕ್ಕದ ಚತುರಮತಿ ಇರಬೇಕಾದುದು ಅವಶ್ಯಕವಾಗಿದೆ. ಇವುಗಳ ಬೆನ್ನು ಹತ್ತಿ ಹೋದಾಗ ಒಂದಂತೂ ಅರ್ಥವಾಗುತ್ತದೆ ಅದೇನೆಂದರೆ, ನಾವು ಖರೀದಿಸುವ ವಸ್ತುಗಳೇನೋ ಸಸ್ತಾ. ಆದರೆ ಅವುಗಳ ಜೊತೆಗೆ ಬರುವ ಹೆಚ್ಚುವರಿ ಶುಲ್ಕಗಳೇ ನಮಗೆ ಸುಸ್ತು ತರಿಸುವುದು.

ನಿಂಗೇಶಿ ಇದನ್ನೆಲ್ಲಾ ತಿಳಿದುಕೊಂಡ ಮೇಲೆ ಇವುಗಳ ಬಗ್ಗೆ ಇನ್ನೂ ಹೆಚ್ಚೇ ಜಾಗೃತನಾಗಲಾರಂಭಿಸಿದ. ಆಗಲೇ ಆತನಿಗೆ ಈ ಹಿಡನ್ ಚಾರ್ಜಸ್‌ಗಳ ಹತ್ತು ಹಲವು ಅವತಾರಗಳು ಅನುಭವಕ್ಕೆ ಬರಲಾರಂಭಿಸಿದ್ದು. ರೆಸ್ಟೋರೆಂಟ್‌ಲಿ ಬರ್ಗರ್ ಆರ್ಡರ್ ಮಾಡಿದರೆ ಅದರೊಂದಿಗೆ ಸರ್ವೀಸ್ ಚಾರ್ಜ್ ಕೂಡಾ ಬಿಲ್ಲಲ್ಲಿ ಬಿಳಿನಗೆ ಬೀರುತ್ತಿತ್ತು. ಅವತ್ತೊಂದಿನ ಕ್ಯಾಬ್ ಬುಕ್ ಮಾಡಿದ್ದ ನಿಂಗೇಶಿ ಅದರೊಂದಿಗೆ ಠಳಾಯಿಸಿದ ಪೀಕ್–ಅವರ್–ಚಾರ್ಜ್ ನೋಡಿ ಅಕ್ಷರಶಃ ಪೆಕರನಂತಾಗಿ ಹೋಗಿದ್ದ. ಆತನ ಅಂದಿನ ಪ್ರಯಾಣದಲ್ಲಿ, ಆತನಿಗಿಂತಲೂ ಆತನ ಬಿಲ್ ಆತನನ್ನು ಬಿಟ್ಟು ಇನ್ನೂ ಬಹಳ ದೂರ ಚಲಿಸಿದ್ದಂತೂ ಸುಳ್ಳಲ್ಲ. ಐಷರಾಮಿ ಲಾಡ್ಜ್‌ಲ್ಲಿ ರೂಮ್ ಮಾಡಿಕೊಂಡು ಉಳಿದಿದ್ದ ಆತನಿಗೆ ಅಲ್ಲಿನ ಲಾಂಡ್ರಿ ಶುಲ್ಕ, ರೆಸಾರ್ಟ್ ಶುಲ್ಕ, ವೈ–ಫೈ ಶುಲ್ಕ ಇತ್ಯಾದಿಯನ್ನೆಲ್ಲಾ ನೋಡಿ, 'ಸದ್ಯ ಇಲ್ಲಿ ಉಸಿರಾಡಿದ ತಣ್ಣನೆಯ ಪ್ರಶಾಂತವಾದ ಗಾಳಿಗೆ ಯಾವುದೇ ಶುಲ್ಕ ವಿಧಿಸಲ್ಲವಲ್ಲ, ಅಬ್ಬಾ ಬಚಾವ್!' ಎಂದುಕೊಂಡು ಅಲ್ಲಿಂದ ಹೊರಟ.

ಹೀಗೆ ಬದುಕಲ್ಲಿ ಎದುರಾಗುವ ವ್ಯಕ್ತಿ, ವಿಷಯ, ವಸ್ತುಗಳಲ್ಲೂ ಕೆಲವೊಮ್ಮೆ ಇಂಥದ್ದೇ ಹಿಡನ್ ಚಾರ್ಜಸ್‌ನಂಥ ಅಂಶಗಳು ಕಂಡು ಬರುವುದಿದೆ. ಆತ್ಮೀಯತೆಯೊಂದಿಗೆ ಆರಂಭವಾದದ್ದು ಬರು ಬರುತ್ತಾ ಆಕ್ರೋಶ, ಅಪಾದನೆಗೆ ತಿರುಗುವುದು, ನಲಿವಿನಲ್ಲಿ ಜೊತೆಯಾದದ್ದು ಅಷ್ಟೇ ಸಹಜವಾಗಿ ನೋವಿಗೆ ತಿರುಗುವುದು, ಬಹಳ ಉಪಯುಕ್ತ ಅನಿಸಿಕೊಂಡಿದ್ದು ಯಾವುದೋ ಹೆಚ್ಚುವರಿ ಖರ್ಚಿಗೆ ದಾರಿಯಾಗುವುದು, ಅದಾವುದೋ ಸರಾಗವಾಗಿ ಆಗುವುದು ಎಂದು ಕೈ ಹಾಕಿದ್ದು ಇನ್ನಾವುದೋ ವ್ಯತಿರಿಕ್ತ ತಿರುವು ಪಡೆದುಕೊಂಡು ಬೆಚ್ಚಿ ಬೀಳಿಸುವಂತೆ ಮಾಡುವುದಿದೆ. ಅದರಲ್ಲಿ ಅಡಗಿರುವ ಈ ಯಾವ ಪರಿಣಾಮಗಳೂ ಒಮ್ಮಿಂದೊಮ್ಮೆಗೇ ನೇರಾನೇರ, ಸುಸ್ಪಷ್ಟವಾಗಿ ಕಾಣಿಸುವಂಥವಲ್ಲ. ಹಾಗಂತ ಅವುಗಳು ಇರುವ ಮಾತ್ರಕ್ಕೆ ಎಲ್ಲವನ್ನೂ ಬಿಟ್ಟು ಎಲ್ಲೋ ದೂರ ಸರಿದು ಬಿಡಲಾ ದೀತೇ? ಇಲ್ಲ. ಆದರೆ ಎಲ್ಲೇ ಆಗಲಿ, ಇಂಥ ಹಿಡನ್ ಚಾರ್ಜಸ್‌ಗಳ ಭಾರವನ್ನು ಸಾಧ್ಯವಾದಷ್ಟೂ ಕಡಿಮೆ ಮಾಡಿಕೊಳ್ಳುವೆಡೆಗಿನ ಪ್ರಯತ್ನ ಒಳ್ಳೆಯದೇ!

ಓವರ್‌ಡೋಸ್: ಮಾರುವ ಬೆಲೆ ಮೇಲೆ ಈ ಹೆಚ್ಚುವರಿ ಶುಲ್ಕಗಳೆಲ್ಲ ಸೇರಿ, ಬಿಲ್ ಕಾಣಿಸುವ ಒಟ್ಟು ಮೊತ್ತವನ್ನು 'ಯಾಮಾರುವ' ಬೆಲೆ ಎನ್ನಬಹುದು!

ಎಐ ಶೃಂಗದಲ್ಲಿ ಪ್ರತಿಭಟನೆಗೆ ಮೋದಿ ತರಾಟೆ

ಕಾಂಗ್ರೆಸ್‌ನ ಕೊಳಕು, ನಾಚಿಕೆಗೇಡಿನ ಕೃತ್ಯ

ಮೀರತ್(ಉ.ಪ್ರ.): ದಿಲ್ಲಿಯ ಜಾಗತಿಕ ಕೃತಕ ಬುದ್ಧಿಮತ್ತೆ ಶೃಂಗಸಭೆಯಲ್ಲಿ ಶರ್ಟ್‌ರಹಿತವಾಗಿ ಪ್ರತಿಭಟನೆ ನಡೆಸಿದ ಕಾಂಗ್ರೆಸಿಗರನ್ನು ಕಟುವಾಗಿ ತರಾಟೆಗೆತ್ತಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ, ಪಕ್ಷವು ತನ್ನ ಕೊಳಕು ಮತ್ತು ನಾಚಿಕೆಗೇಡಿನ ಕೃತ್ಯಕ್ಕಾಗಿ ಅಂತಾರಾಷ್ಟ್ರೀಯ ಕಾರ್ಯಕ್ರಮ ಜಾಗವನ್ನು ಬಳಸಿಕೊಂಡದ್ದು ತೀರಾ ಅಕ್ಷಮ್ಯವೆಂದು ತರಾಟೆಗೆತ್ತಿಕೊಂಡಿದ್ದಾರೆ.

ಕಾಂಗ್ರೆಸ್ ಸೈದ್ಧಾಂತಿಕವಾಗಿ ದಿವಾಳಿಯಾಗಿದೆ ಮತ್ತು ದರಿದ್ರ ಸ್ಥಿತಿಯಲ್ಲಿದೆ ಎಂಬುದು ಕಾಂಗ್ರೆಸಿಗರ ನಡೆಯಿಂದ ಸಾಬೀತಾಗಿದೆ. ಎಲ್ಲಾ ಮಿತಿಗಳ ಮೀರಿರುವ ಕಾಂಗ್ರೆಸ್ ದುರ್ವರ್ತನೆಗೆ ದೇಶಾದ್ಯಂತ ವ್ಯಾಪಕ ಟೀಕೆಗಳು ವ್ಯಕ್ತವಾಗಿವೆ ಎಂದು ಹೇಳಿದ ಪ್ರಧಾನಿ ಮೋದಿ, ಕಾಂಗ್ರೆಸಿಗರ ನಾಚಿಕೆಗೇಡಿನ ಪ್ರತಿಭಟನೆಯನ್ನು ಖಂಡಿಸಿರುವ ವಿಪಕ್ಷಗಳಿಗೆ ಕೃತಜ್ಞತೆ ಸಲ್ಲಿಸಿದರು. ತನ್ಮೂಲಕ ವಿಪಕ್ಷಗಳು ಸತ್ಯ ಹಾಗೂ ರಾಷ್ಟ್ರೀಯ ಘನತೆಯನ್ನು ಎತ್ತಿಹಿಡಿದಿವೆ ಎಂದು ಪ್ರಶಂಸಿಸಿದರು. ಮೀರತ್‌ನಲ್ಲಿ ನಮೋ ಭಾರತ್ ರೈಲು ಮತ್ತು ಮೀರತ್ ಮೆಟ್ರೋ ರೈಲು ವಿಸ್ತರಣೆ ಸೌಲಭ್ಯ ಸಹಿತ ಹಲವು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದ ಬಳಿಕ ಸಾರ್ವಜನಿಕ ಸಮಾವೇಶ ಉದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿದರು.

ಜನರು ಭಾರತವನ್ನು ಸಂಪನ್ನ ರಾಷ್ಟ್ರವಾಗಿಸಲು ಅಹೋರಾತ್ರಿ ದುಡಿಯುತ್ತಿದ್ದರೆ, ಕೆಲವು ರಾಜಕೀಯ ಪಕ್ಷಗಳಿಗೆ ಮಾತ್ರ ರಾಷ್ಟ್ರದ ಪ್ರಗತಿಯನ್ನು ಅರಗಿಸಲಾಗುತ್ತಿಲ್ಲ. ಸುಮಾರು 80 ರಾಷ್ಟ್ರಗಳ ಪ್ರತಿನಿಧಿಗಳು ಹಾಗೂ 20ರಾಷ್ಟ್ರಗಳ ಪ್ರಮುಖ ನಾಯಕರು ಎಐ ಶೃಂಗಸಭೆಯಲ್ಲಿ ಪಾಲ್ಗೊಂಡದ್ದು ಭಾರತದ ಪಾಲಿಗೆ ಹೆಮ್ಮೆಯ ವಿಚಾರ ಎಂದು ಪ್ರಧಾನಿ ಮೋದಿ ಹೇಳಿದರು. ಆದರೆ ಕಾಂಗ್ರೆಸ್ ಮತ್ತವರ ಹಿಂಬಾಲಕರು ಮಾಡಿದ್ದೇನು? ಅವರು ಭಾರತದ ಜಾಗತಿಕ ಸಮಾವೇಶ ಜಾಗವನ್ನು ಕೊಳಕು ಮತ್ತು ನಾಚಿಕೆಗೇಡಿನ ಕೃತ್ಯಕ್ಕೆ ದುರ್ಬಳಸಿದರು.

ವಿದೇಶಿ ಅತಿಥಿಗಳ ಸಮಕ್ಷಮಕ್ಕೆ ಕಾಂಗ್ರೆಸಿಗರು ಬಟ್ಟೆ ಕಳಚಿಕೊಂಡು ಬಂದದ್ದು ತೀರಾ ಹೇಯ. ನನ್ನ ಪ್ರಶ್ನೆ ಇಷ್ಟೆ, ನೀವು ಈಗಾಗಲೆ ಬೆತ್ತಲಾಗಿದ್ದೀರೆಂದು ಇಡೀ ದೇಶಕ್ಕೆ ಗೊತ್ತು. ವಾಸ್ತವ ಇದಾಗಿರುವಾಗ ಮತ್ತೆ ಬಟ್ಟೆ ಕಳಚುವ ಅಗತ್ಯವೇನಿತ್ತು ಎಂದು ಪ್ರಧಾನಿ ಮೋದಿ ಪ್ರಶ್ನಿಸಿದರು. ಕಾಂಗ್ರೆಸ್ ನಾಯಕರು ಮೋದಿಯನ್ನು ದ್ವೇಷಿಸುತ್ತಾರೆ. ಅವರು ನನ್ನ ಗೋರಿ ತೋಡಲು ಬಯಸಿದ್ದಾರೆ. ನನ್ನ ತಾಯಿಯನ್ನು ನಿಂದಿಸಲೂ ಹೇಸುವುದಿಲ್ಲ. ಅವರು ಬಿಜೆಪಿಯನ್ನು ವಿರೋಧಿಸುತ್ತಾರೆ, ಎನ್‌ಡಿಎ ವಿರೋಧಿಗಳು. ಆದರೆ, ಕೃತಕಬುದ್ಧಿಮತ್ತೆ ಜಾಗತಿಕ ಶೃಂಗಸಭೆ ಬಿಜೆಪಿ ಕಾರ್ಯಕ್ರಮವಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಪ್ರಧಾನಿಯಾಗಲು ಜನರ ಮನಸ್ಸು ಗೆಲ್ಲಿ

ನಿಮಗೆ ಪ್ರಧಾನಿ ಸೀಟಲ್ಲಿ ಕೂರುವ ಆಸೆಯಿದ್ದರೆ ಮೊದಲು ನೀವು ಜನರ ಮನಸ್ಸನ್ನು ಗೆಲ್ಲಿ, ಸೀಟುಗಳ ವಶಪಡಿಸಲು ಮಹಿಳಾ ಸಂಸದರ ಛೂಬಿಟ್ಟ ಮಾತ್ರಕ್ಕೆ ನೀವು ಪ್ರಧಾನಿಯಾಗಲಾರಿರಿ. ಅಷ್ಟಕ್ಕೂ ಮಾತೆಯರು, ಸೋದರಿಯರ ಈ ರೀತಿ ಮುಂದಕ್ಕೆ ದೂಡೋ ಅನಿವಾರ್ಯತೆ ಅಥವಾ ಒತ್ತಡವಾದರು ಏನು? ತಾವು ಅಷ್ಟೂ ನಿಷ್ಪ್ರಯೋಜಕರೇ ಎಂದು ಪ್ರಧಾನಿ ಮೋದಿ ಯಾರ ಹೆಸರನ್ನೂ ಉಲ್ಲೇಖಿಸದೆ ಛೀಮಾರಿ ಹಾಕಿದರು.

ಭಾರತೀಯ ತಂತ್ರಜ್ಞಾನ ದೈತ್ಯ ಎಚ್‌ಸಿಎಲ್ ಗ್ರೂಪ್ ಮತ್ತು ಥೈವಾನೀಸ್ ಎಲೆಕ್ಟ್ರಾನಿಕ್ಸ್ ತಯಾರಕ ಫಾಕ್ಸ್‌ಕಾನ್ ನಡುವಿನ ಹೆಗ್ಗುರುತು ಜಂಟಿ ಉದ್ಯಮವಾದ ಇಂಡಿಯಾ ಚಿಪ್ ಪ್ರೈವೇಟ್ ಲಿಮಿಟೆಡ್‌ಗೆ ಪ್ರಧಾನಿ ನರೇಂದ್ರ ಮೋದಿ ಶನಿವಾರ ಚಾಲನೆ ನೀಡಿದ್ದಾರೆ. ಇದು ದೇಶೀಯ ಸೆಮಿಕಂಡಕ್ಟರ್ ಉದ್ಯಮವನ್ನು ಕಟ್ಟುವ ಭಾರತದ ಮಹತ್ವಾಕಾಂಕ್ಷೆಗೆ ಮಹತ್ವದ ಮುನ್ನುಡಿ ಎನಿಸಿದೆ. ಯಮುನಾ ಎಕ್ಸ್‌ಪ್ರೆಸ್ ವೇ ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರ ಪ್ರದೇಶದ, ತಲೆಯೆತ್ತಲಿರುವ ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪವಿರುವ ಉತ್ತರ ಪ್ರದೇಶದ ಗ್ರೇಟರ್ ನೋಯ್ಡಾದ ಜೆವಾರ್‌ನಲ್ಲಿ ಸ್ಥಾವರವನ್ನು ಸ್ಥಾಪಿಸುವುದರೊಂದಿಗೆ ಈ ಸೌಲಭ್ಯಕ್ಕೆ ಮೋದಿ ವರ್ಚುವಲ್ ಮೋಡ್‌ನಲ್ಲಿ ಶಂಕುಸ್ಥಾಪನೆ ನೆರವೇರಿಸಿದರು.



ಭಾರತದ ಮೊದಲ ಡಿಸ್ಪ್ಲೇ ಡ್ರೈವರ್ ಚಿಪ್ ಪ್ಲಾಂಟ್

ಉತ್ತರ ಪ್ರದೇಶಕ್ಕೆ ಹೊಸ ಹೆಗ್ಗುರುತು, ವ್ಯಾಪಕ ಉದ್ಯೋಗ ಸೃಷ್ಟಿ ಸಾಧ್ಯತೆ



ಆ ಸ್ಥಾವರ ಏಕೆ ವಿಶೇಷ?

ಈ ಸೌಲಭ್ಯ, ಭಾರತದ ಮೊದಲ ಡಿಸ್ಪ್ಲೇ ಡ್ರೈವರ್ ಇಂಟಿಗ್ರೇಟೆಡ್ ಸರ್ಕ್ಯೂಟ್(ಡಿಡಿಐಸಿ) ಹೊರಗುತ್ತಿಗೆ ಸೆಮಿಕಂಡಕ್ಟರ್ ಅಸೆಂಬ್ಲಿ ಮತ್ತು ಟೆಸ್ಟ್ (ಒಎಸ್‌ಎಟಿ) ಸ್ಥಾವರ ಎನಿಸಿದೆ. ಅಂದರೆ, ಚಿಪ್‌ಗಳನ್ನು ಆರಂಭದಿಂದ ತಯಾರಿಸುವ ಬದಲು ಜೋಡಿಸುವ, ಪರೀಕ್ಷಿಸುವ ಮತ್ತು ಪ್ಯಾಕೇಜ್ ಮಾಡುವ ಕಾರ್ಖಾನೆ. ಇದು ಸ್ಮಾರ್ಟ್‌ಫೋನ್‌ಗಳು, ಲ್ಯಾಪ್‌ಟಾಪ್‌ಗಳು, ಆಟೋಮೊಬೈಲ್‌ಗಳು ಮತ್ತು ಕೈಗಾರಿಕಾ ಉಪಕರಣಗಳಲ್ಲಿ ಬಳಸುವ ಡಿಸ್ಪ್ಲೇ ಡ್ರೈವರ್ ಚಿಪ್‌ಗಳನ್ನು ಉತ್ಪಾದಿಸುತ್ತದೆ. ಸಂಪೂರ್ಣ ಕಾರ್ಯನಿರ್ವಹಣೆ ಆರಂಭವಾದ ಬಳಿಕ ಇಲ್ಲಿ ಪ್ರತಿ ತಿಂಗಳು 3.6 ಕೋಟಿ ಚಿಪ್‌ಗಳನ್ನು ಉತ್ಪಾದಿಸಲು ಯೋಜಿಸಲಾಗಿದೆ.

48 ಎಕರೆಯಲ್ಲಿ ವಿಶಾಲ ಸ್ಥಾವರ

ಸುಮಾರು 48 ಎಕರೆ ಪ್ರದೇಶದಲ್ಲಿ ಹರಡಿರುವ ಈ ಸ್ಥಾವರ, ಒಟ್ಟು 3,700 ಕೋಟಿ ರೂ.ಗಳ ಹೂಡಿಕೆಯಲ್ಲಿ ಆರಂಭವಾಗುತ್ತಿದೆ. ಇದು 60:40 ಜಂಟಿ ಉದ್ಯಮವಾಗಿ ರಚನೆಯಾಗಿದ್ದು, ಎಚ್‌ಸಿಎಲ್ ಹೆಚ್ಚಿನ ಪಾಲು ಹೊಂದಿದೆ ಮತ್ತು ಫಾಕ್ಸ್‌ಕಾನ್ ಶೇ.40ರಷ್ಟು ಕೊಡುಗೆ ನೀಡುತ್ತದೆ. ಈ ಸೌಲಭ್ಯ, 2028ರ ವೇಳೆಗೆ ಕಾರ್ಯಾರಂಭ ಮಾಡುವ ನಿರೀಕ್ಷೆಯಿದ್ದು, ತಿಂಗಳಿಗೆ 20,000 ವೇಫರ್‌ಗಳ ಉತ್ಪಾದನೆಯ ಸಾಮರ್ಥ್ಯ ಹೊಂದಿರುತ್ತದೆ.

ಚಿಪ್ ಸ್ವಾವಲಂಬನೆಗೆ ಭಾರತದ ದೃಷ್ಟಿಕೋನ

ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ದೇಶೀಯ ಚಿಪ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ತುರ್ತು ಅಗತ್ಯವನ್ನು ಒತ್ತಿ ಹೇಳಿದರು. ಕೋವಿಡ್ 19 ಸಾಂಕ್ರಾಮಿಕ, ಜಾಗತಿಕ ಚಿಪ್ ಪೂರೈಕೆ ಸರಪಳಿಗಳ ಸೂಕ್ಷ್ಮತೆಯನ್ನು ಹೇಗೆ ಬಹಿರಂಗಪಡಿಸಿದೆ ಎಂಬುದನ್ನು ಅವರು ನೆನಪಿಸಿಕೊಂಡರು. ಇದರಿಂದಾಗಿ ದೇಶಗಳು ಕಾರುಗಳಿಂದ ಹಿಡಿದು ವೈದ್ಯಕೀಯ ಉಪಕರಣಗಳವರೆಗೆ ಎಲ್ಲದರಲ್ಲೂ ಅಗತ್ಯವಿರುವ ಸೆಮಿಕಂಡಕ್ಟರ್‌ಗಳ ಕೊರತೆ ಎದುರಿಸುತ್ತಿವೆ ಎಂದರು.

ಉತ್ತರ ಪ್ರದೇಶಕ್ಕೆ ತಂತ್ರಜ್ಞಾನದ ಗುರುತು

ರಾಷ್ಟ್ರೀಯ ಗುರಿಗಳನ್ನು ಮೀರಿ, ಈ ಯೋಜನೆ ಉತ್ತರ ಪ್ರದೇಶದ ಆರ್ಥಿಕ ವರ್ಚಸ್ಸಿಗೆ ಮಹತ್ವದ ತಿರುವು ನೀಡಿದೆ. ಮೋದಿ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಇಬ್ಬರೂ, ಈ ಸ್ಥಾವರ, ಗೃಹ ವಿನ್ಯಾಸ, ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು ಮತ್ತು ನವೋದ್ಯಮಗಳನ್ನು ಈ ಪ್ರದೇಶಕ್ಕೆ ಹೇಗೆ ಸೆಳೆಯುತ್ತದೆ, ವಿಶಾಲವಾದ ಸೆಮಿಕಂಡಕ್ಟರ್ ನಿರ್ಮಾಣ ವ್ಯವಸ್ಥೆಯನ್ನು ಹೇಗೆ ಸೃಷ್ಟಿಸುತ್ತದೆ. ವೈಇಐಡಿಎ ನ ಅಧಿಕಾರಿಗಳು, ಸೆಮಿಕಂಡಕ್ಟರ್ ಮತ್ತು ಎಲೆಕ್ಟ್ರಾನಿಕ್ಸ್ ಉತ್ಪಾದನೆಗಾಗಿ ಇತರ ಹತ್ತು ಕಂಪನಿಗಳು ಈಗಾಗಲೇ ಹತ್ತಿರದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಿವೆ. ಈ ಸ್ಥಾವರ, ಜೆವಾರ್ ಬೆಲ್ಟ್ ವೇಗವಾಗಿ, ಅಷ್ಟೇ ಸ್ಥಿರವಾಗಿ ತಂತ್ರಜ್ಞಾನ ಕಾರಿಡಾರ್ ಆಗಿ ಹೊರಹೊಮ್ಮುತ್ತಿದೆ ಎಂದು ಸೂಚಿಸುತ್ತದೆ.

ಸಾಫ್ಟ್‌ವೇರ್ ಜತೆಗೇ ಹಾರ್ಡ್‌ವೇರ್‌ಗೂ ಯೋಜನೆ

ಚಿಪ್ ತಯಾರಿಕೆಯಲ್ಲಿ ಭಾರತ ಸ್ವಾವಲಂಬಿಯಾಗಬೇಕು ಎಂದು ಹೇಳಿದ ಮೋದಿ, ದೇಶ ಈಗ ತಂತ್ರಜ್ಞಾನದ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಎರಡರ ನಿಟ್ಟಿನಲ್ಲೂ ಏಕಕಾಲದಲ್ಲಿ ಕಾರ್ಯೋನ್ಮುಖವಾಗಿದೆ ಎಂದು ಹೇಳಿದರು. ಭಾರತ ಈಗಾಗಲೇ ಹತ್ತು ಸೆಮಿಕಂಡಕ್ಟರ್ ಫ್ಯಾಬ್ರಿಕೇಶನ್ ಮತ್ತು ಪ್ಯಾಕೇಜಿಂಗ್ ಯೋಜನೆಗಳಿಗೆ ಅನುಮೋದನೆ ನೀಡಿದ್ದು, ಅವುಗಳಲ್ಲಿ ನಾಲ್ಕು ಶೀಘ್ರದಲ್ಲೇ ಉತ್ಪಾದನೆ ಪ್ರಾರಂಭಿಸಲಿವೆ ಎಂದು ಅವರು ಹೇಳಿದರು. ಜೆವಾರ್ ಸ್ಥಾವರ, ಭಾರತದ ಆರನೇ ಅನುಮೋದಿತ ಸೆಮಿಕಂಡಕ್ಟರ್ ಯೋಜನೆ ಮತ್ತು ಉತ್ತರ ಪ್ರದೇಶದ ಮೊದಲ ಒಎಸ್‌ಎಟಿ ಸೌಲಭ್ಯವಾಗಿದ್ದು, ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತದಂತಹ ಸರ್ಕಾರಿ ಯೋಜನೆಗಳನ್ನು ಒಳಗೊಂಡ ವಿಶಾಲ ರಾಷ್ಟ್ರೀಯ ದೃಷ್ಟಿಕೋನಕ್ಕೆ ಹೊಂದಿಕೊಳ್ಳುತ್ತದೆ ಎಂಬುದನ್ನು ಪ್ರಧಾನಿ ಮನದಟ್ಟು ಮಾಡಿದರು.



ಉದ್ಯೋಗ ಸೃಷ್ಟಿ

ಈ ಸ್ಥಾವರ, ಎಂಜಿನಿಯರ್‌ಗಳು, ತಂತ್ರಜ್ಞರು ಮತ್ತು ನುರಿತ ಕಾರ್ಮಿಕರು ಸೇರಿದಂತೆ 3,500ಕ್ಕೂ ಹೆಚ್ಚು ನೇರ ಮತ್ತು ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ. ಫಾಕ್ಸ್‌ಕಾನ್‌ನ ಭಾಗವಹಿಸುವಿಕೆ, ಸಾಂಕೇತಿಕವಾಗಿ ಇದರ ಮೌಲ್ಯವನ್ನು ಹೆಚ್ಚಿಸಿದೆ. ಥೈವಾನ್ ಸಂಸ್ಥೆಯ ಹೂಡಿಕೆ, ಭಾರತ ಉನ್ನತ ಮಟ್ಟದ ಉತ್ಪಾದನೆಯಲ್ಲಿ ವಿಶ್ವಾಸಾರ್ಹ ಪಾಲುದಾರ ಎಂಬ ಸಂದೇಶವನ್ನು ಜಗತ್ತಿಗೆ ರವಾನಿಸಿದೆ ಎಂದು ನಾಯಕರು ಅಭಿಪ್ರಾಯಪಟ್ಟಿದ್ದಾರೆ. ಈ ಸೌಲಭ್ಯದ ಸುತ್ತಲೂ, ಪೂರಕ ಕೈಗಾರಿಕೆಗಳು, ವಿನ್ಯಾಸ ಕೇಂದ್ರಗಳು ಮತ್ತು ಸಂಶೋಧನಾ ಕೇಂದ್ರಗಳೂ ತಲೆ ಎತ್ತುವ ಸಾಧ್ಯತೆಯಿದೆ ಎನ್ನಲಾಗಿದೆ.



- ಗ್ರೇಟರ್ ನೋಯ್ಡಾದ ಜೆವಾರ್‌ನಲ್ಲಿ 3,700 ಕೋಟಿ ರೂ. ವೆಚ್ಚದಲ್ಲಿ ಒಎಸ್‌ಎಟಿ ಸೌಲಭ್ಯ
- ಎಚ್‌ಸಿಎಲ್(60%) ಮತ್ತು ಫಾಕ್ಸ್‌ಕಾನ್(40%) ನಡುವಿನ ಜಂಟಿ ಉದ್ಯಮ
- ತಿಂಗಳಿಗೆ 20,000 ವೇಫರ್‌ಗಳು ಮತ್ತು 3.6 ಕೋಟಿ ಚಿಪ್ ಉತ್ಪಾದನಾ ಸಾಮರ್ಥ್ಯ
- 3,500ಕ್ಕೂ ಹೆಚ್ಚು ನೇರ ಮತ್ತು ಪರೋಕ್ಷ ಉದ್ಯೋಗಗಳ ಸೃಷ್ಟಿ
- 2028ರ ವೇಳೆಗೆ ಕಾರ್ಯಾಚರಣೆ ಪ್ರಾರಂಭಿಸುವ ಗುರಿ



ಆರ್‌ಎಸ್‌ಎಸ್ ಶತಮಾನೋತ್ಸವ ಅಂಗವಾಗಿ ಕಾರ್ಯಕ್ರಮ

ಅಯೋಧ್ಯೆಯಲ್ಲಿ ಶ್ರೀರಾಮಾರ್ಚನೆ

ಅಯೋಧ್ಯೆ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ಕಾರ್ಯಕ್ರಮಗಳನ್ನು ದೇಶದ ವಿವಿಧ ಕಡೆಗಳಲ್ಲಿ ಹಮ್ಮಿಕೊಳ್ಳುತ್ತಿದ್ದು, ಅದೇರೀತಿ ಭಾನುವಾರ ಅಯೋಧ್ಯೆಯಲ್ಲಿ ದಿಲ್ಲಿ ಸ್ವಯಂ ಸೇವಕರಿಂದ ಘೋಷ ವಾದನದ ಮೂಲಕ ಶ್ರೀ ರಾಮಾರ್ಚನಂ ಕಾರ್ಯಕ್ರಮ ಜರುಗಿತು. ಮಧ್ಯಾಹ್ನ 3:30ಕ್ಕೆ ಅಯೋಧ್ಯೆ ಸರಿಯೂ ನದಿಯ ತಟದಿಂದ ಆರಂಭವಾದ ಘೋಷ ವಾದ್ಯ ಸಂಚಲನ ಲತಾ ಮಂಗೇಶ್ಕರ್ ವೃತ್ತದಲ್ಲಿ ರಾಮ ಜನ್ಮಭೂಮಿ ಆಂದೋಲನದಲ್ಲಿ ಹುತಾತ್ಮರಾದ ಕರಸೇವಕರಿಗೆ ಶ್ರದ್ಧಾಂಜಲಿ ಸಲ್ಲಿಸಿದ ನಂತರ ಹನುಮಾನ್ ಗಡಿ ಮಂದಿರ ಹಾಗೂ ಶ್ರೀ ರಾಮ ಜನ್ಮಭೂಮಿಯ ಶ್ರೀ ರಾಮಾನಂದಾಚಾರ್ಯ ಮುಖ್ಯ ದ್ವಾರದಲ್ಲಿಯೂ ಘೋಷ ವಾದ್ಯ ಮೊಳಗಿತು.

ಸಂಜೆ 5:30ಕ್ಕೆ ಶ್ರೀರಾಮ ಜನ್ಮಭೂಮಿ ಮಂದಿರದ ಆವರಣದಲ್ಲಿ ಧ್ವಜಾರೋಹಣ ಪ್ರಾರ್ಥನೆ ಹಾಗೂ ಘೋಷ ವಾದನ ಮಾಡುವುದರ ಮೂಲಕ ಶ್ರೀ ರಾಮಾರ್ಚನೆ ಕಾರ್ಯಕ್ರಮ ಮುಕ್ತಾಯವಾಯಿತು. ಈ ಸಂದರ್ಭದಲ್ಲಿ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್, ವಿಶ್ವ ಹಿಂದೂ ಪರಿಷತ್ತಿನ ಕೇಂದ್ರಿಯ ಕಾರ್ಯ ದರ್ಶಿ ಗೋಪಾಲ ಜಿ, ಶ್ರೀ ರಾಮ ಜನ್ಮಭೂಮಿಯ ಟ್ರಸ್ಟಿಗಳಾದ ಕೃಷ್ಣಮೋಹನ್, ಅನಿಲ ಮಿಶ್ರಾ, ಸಂಘ ಪರಿವಾರದ ಪದಾಧಿಕಾರಿಗಳು ಇದ್ದರು.



ಕಿರುಸುದ್ದಿ

ನಕ್ಸಲ್ ಹಿರಿಯ ನಾಯಕ ಥಿಪ್ರಿ ತಿರುಪತಿ ಶರಣಾಗತಿ

ಹೈದರಾಬಾದ್: ಮಾವೋವಾದಿಗಳ ಉನ್ನತ ನಾಯಕ ಥಿಪ್ರಿ ತಿರುಪತಿ ಅಲಿಯಾಸ್ ದೇವ್ಜಿ ಪೊಲೀಸರ ಮುಂದೆ ಭಾನುವಾರ ಶರಣಾಗಿದ್ದಾನೆ. ಈತ ಮೂಲತಃ ತೆಲಂಗಾಣದ ಜಗ್ತಿಯಾಲ್ ಜಿಲ್ಲೆಯವನಾಗಿದ್ದು, ಈತನ ಶರಣಾಗತಿ ಮೂಲಕ ಆ ಪ್ರದೇಶದಲ್ಲಿನ ನಕ್ಸಲ್ ತಲೆನೋವು ಕಡಿಮೆಯಾಗಿದೆ. ದೇವ್ಜಿ ಜತೆಗೆ ಇನ್ನೋರ್ವ ಹಿರಿಯ ನಾಯಕ ಮಲ್ಲ ರೆಡ್ಡಿ ಮತ್ತು ಇತರ ಹಲವು ಸಿಪಿಐ ಕೆಡರ್‌ಗಳು ಕೂಡ ಭಾನುವಾರ ಶರಣಾಗಿದ್ದಾರೆ.

ಪೊಲೀಸ್ ಮೂಲಗಳ ಪ್ರಕಾರ ದೇವ್ಜಿ ತಲೆಗೆ ಒಟ್ಟು 1 ಕೋಟಿ ರೂ.ಗಳ ಬಹುಮಾನವಿತ್ತು. ಈತ ಹಲವು ನಕ್ಸಲ್ ಸಂಘಟನೆಗಳನ್ನು ಕಟ್ಟಿಕೊಂಡು ದೇಶ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ.

ಟ್ರಂಪ್ ಹತ್ಯೆಗೆ ಯತ್ನ: ಯುವಕ ಗುಂಡೇಟಿಗೆ ಬಲಿ

ವಾಷಿಂಗ್ಟನ್: ಫ್ಲೋರಿಡಾದ ವೆಸ್ಟ್ ಪಾಮ್ ಬೀಚ್‌ನಲ್ಲಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಾರ್-ಎ-ಲಾಗೋ ರೆಸಾರ್ಟ್‌ನಲ್ಲಿ ಕಾನೂನುಬಾಹಿರವಾಗಿ ಸುರಕ್ಷಿತ ಪರಿಧಿಯನ್ನು ಪ್ರವೇಶಿಸಲು ಪ್ರಯತ್ನಿಸಿದ ಯುವಕನೊಬ್ಬನನ್ನು ಅಮೆರಿಕ ಸೀಕ್ರೆಟ್ ಸರ್ವಿಸ್ ಏಜೆಂಟ್‌ಗಳು ಗುಂಡಿಕ್ಕಿ ಕೊಂದಿದ್ದಾರೆ. ಟ್ರಂಪ್ ಪ್ರಸ್ತುತ ವಾಷಿಂಗ್ಟನ್‌ನಲ್ಲಿದ್ದಾರೆ. ಆ ವ್ಯಕ್ತಿಯು ಶಾಟ್‌ಗನ್ ಮತ್ತು ಇಂಧನ ಬಾಕ್ಸ್ ಅನ್ನು ಹೊತ್ತೊಯ್ಯುತ್ತಿದ್ದನು ಎಂದು ಏಜೆನ್ಸಿ ಹೇಳಿದೆ. ಈತ ರೆಸಾರ್ಟ್ ಒಳಕ್ಕೆ ನುಗ್ಗಲು ಏಕೆ ಪ್ರಯತ್ನಿಸಿದ ಎಂಬುದು ಇನ್ನೂ ಬಹಿರಂಗಗೊಂಡಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



70 ಬಂಡುಕೋರರನ್ನು ಕೊಂದಿದ್ದೇವೆ: ಪಾಕ್

ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ಇತ್ತೀಚೆಗೆ ನಡೆದ ಬಂಡುಕೋರರ ದಾಳಿಗೆ ಪ್ರತೀಕಾರವಾಗಿ ಅಫ್ಘಾನಿಸ್ತಾನದಲ್ಲಿ ಕನಿಷ್ಠ ಏಳು ಭಯೋತ್ಪಾದಕ ಅಡಗುತಾಣಗಳನ್ನು ಗುರಿಯಾಗಿಸಿಕೊಂಡು ಮಿಲಿಟರಿ ನಡೆಸಿ 70 ಬಂಡುಕೋರರನ್ನು ಕೊಂದಿದ್ದೇವೆ ಎಂದು ಪಾಕಿಸ್ತಾನ ಭಾನುವಾರ ಹೇಳಿಕೊಂಡಿದೆ. ಅಫ್ಘಾನಿಸ್ತಾನವು ಬಹಳ ಹಿಂದಿನಿಂದಲೂ ಭಯೋತ್ಪಾದನೆಯನ್ನು ರಫ್ತು ಮಾಡುತ್ತಿದೆ. ಪಾಕಿಸ್ತಾನವು ತನ್ನ ನಾಗರಿಕರ ಜೀವ ಮತ್ತು ಆಸ್ತಿಯನ್ನು ಭದ್ರಪಡಿಸಿಕೊಳ್ಳಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಪಾಕಿಸ್ತಾನದ ಆಂತರಿಕ ಖಾತೆ ರಾಜ್ಯ ಸಚಿವ ತಲಾಲ್ ಚೌಧರಿ ಹೇಳಿದ್ದಾರೆ.



ಅಯೋಧ್ಯೆ: 'ರಾಮನಿಗಾಗಿ ಓಟ' ಕ್ರೀಡಾಕೂಟಕ್ಕೆ ಚಾಲನೆ



ಅಯೋಧ್ಯೆ: ಕ್ರೀಡಾ ಭಾರತಿ ವತಿಯಿಂದ ಆಯೋಜಿಸಲಾಗಿದ್ದ ರಾಮನಿಗಾಗಿ ಓಟ ಕ್ರೀಡಾಕೂಟದಲ್ಲಿ ನೂರಾರು ಜನ ವಿದ್ಯಾರ್ಥಿಗಳು ಹಾಗೂ ಸ್ಥಳೀಯರು ಭಾಗವಹಿಸಿದ್ದರು.

ಮೊದಲನೆಯ ಹಂತ 42 ಕಿಮೀ, ಎರಡನೆಯ ಹಂತ 21 ಕಿಮೀ ಹಾಗೂ ಮೂರನೆಯ ಹಂತ 10 ಕಿಮೀ ಓಟದ ಸ್ಪರ್ಧೆಯಾಗಿತ್ತು. 2022ರಲ್ಲಿ ಈ ಕ್ರೀಡಾಕೂಟವನ್ನು ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ವತಿಯಿಂದ ಆಯೋಜಿಸಲಾಗಿದ್ದು, ಈಗ ಕ್ರೀಡಾ ಭಾರತಿ ಅದನ್ನು ನಿರಂತರವಾಗಿ ನಡೆಸಿಕೊಂಡು ಹೋಗುತ್ತಿದೆ. ಭಾನುವಾರ ಬೆಳಗ್ಗೆ 4:30ಕ್ಕೆ ವಿಶ್ವ ಹಿಂದೂ ಪರಿಷತ್ತಿನ ಕೇಂದ್ರಿಯ ಕಾರ್ಯದರ್ಶಿ ಗೋಪಾಲ ಜಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು, ಕ್ರೀಡಾ ಭಾರತಿಯ ಪದಾಧಿಕಾರಿಗಳು ಹಾಗೂ ವಿವಿಧ ಸಂಘ ಸಂಸ್ಥೆಗಳ ಕಾರ್ಯಕರ್ತರು ಉಪಸ್ಥಿತರಿದ್ದರು.

ಮೋದಿ ನನ್ನ ಉತ್ತಮ ಸ್ನೇಹಿತ: ನೆತನ್ಯಾಹು

ಹೊಸದಿಲ್ಲಿ: ನನ್ನ ಸ್ನೇಹಿತ ಭಾರತದ ಪ್ರಧಾನಿ ನರೇಂದ್ರ ಮೋದಿಯವರ ಮುಂಬರುವ ಇಸ್ರೇಲ್ ಭೇಟಿಯು ಆರ್ಥಿಕ ಸಹಕಾರ, ರಾಜತಾಂತ್ರಿಕ ಸಹಕಾರ ಮತ್ತು ಭದ್ರತಾ ಸಹಕಾರವನ್ನು ಹೆಚ್ಚಿಸುತ್ತದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಹೇಳಿದ್ದಾರೆ. ಈ ಭೇಟಿಯು ಮಧ್ಯಪ್ರಾಚ್ಯದಲ್ಲಿ ಉಗ್ರ ಸಂಘಟನೆಗಳ ವಿರುದ್ಧ ಮೈತ್ರಿ ರಚಿಸುವ ಭಾಗವಾಗಿದೆ ಎಂದು ಹೇಳಿದರು.

ಬುಧವಾರ, ಭಾರತದ ಪ್ರಧಾನಿ, ನನ್ನ ಸ್ನೇಹಿತ ನರೇಂದ್ರ ಮೋದಿ ಅವರು ಇಸ್ರೇಲ್‌ಗೆ ಆಗಮಿಸಲಿದ್ದಾರೆ. ನಾವು ಮಧ್ಯಪ್ರಾಚ್ಯದ ಸುತ್ತ ಸಂಪೂರ್ಣ ಮೈತ್ರಿ ವ್ಯವಸ್ಥೆಯನ್ನು ರಚಿಸುತ್ತೇವೆ. ವಾಸ್ತವ, ಸವಾಲುಗಳು ಮತ್ತು ಗುರಿಗಳನ್ನು ಒಂದೇ ತೆರನಾಗಿ ನೋಡುವ ದೇಶಗಳ ಅಕ್ಷವು ಆಮೂಲಾಗ್ರ ಅಕ್ಷಗಳನ್ನು ಎದುರಿಸುತ್ತಿದೆ ಎಂದು ಸರ್ಕಾರದ ಸಭೆಯ ಪ್ರಾರಂಭದಲ್ಲಿ ನೆತನ್ಯಾಹು ಹೇಳಿದರು.

ಇತ್ತೀಚಿನ ವರ್ಷಗಳಲ್ಲಿ ಇಸ್ರೇಲ್ ಮತ್ತು ಭಾರತದ ನಡುವೆ ಅಭಿವೃದ್ಧಿ ಹೊಂದಿದ ವಿಶೇಷ ಸಂಬಂಧವನ್ನು ನೆತನ್ಯಾಹು ಹೇಳಿದರು. ಪ್ರಧಾನಿ ಮೋದಿಯವರನ್ನು ವೈಯಕ್ತಿಕ ಸ್ನೇಹಿತ. ನಾನು ಭಾರತಕ್ಕೆ ಭೇಟಿ ನೀಡಿದ್ದೇನೆ. ಮೋದಿ ಇಲ್ಲಿಗೆ ಭೇಟಿ ನೀಡಿದ್ದಾರೆ. ಮೋದಿಯವರ ಭೇಟಿಯು ಹೈಟೆಕ್, ಕೃತಕ ಬುದ್ಧಿಮತ್ತೆ ಮತ್ತು ಕ್ವಾಂಟಮ್ ಪ್ರಕ್ರಿಯೆಗಳ ಜತೆಗೆ ನಿಕಟ ಆರ್ಥಿಕ, ರಾಜತಾಂತ್ರಿಕ ಮತ್ತು ಭದ್ರತಾ ಸಹಕಾರಕ್ಕೆ ಕಾರಣವಾಗುತ್ತದೆ ಎಂದು ಇಸ್ರೇಲ್ ಪ್ರಧಾನಿ ಹೇಳಿದರು.

ಮೂಲಭೂತವಾದ ಅಕ್ಷಗಳಿಗೆ ವ್ಯತಿರಿಕ್ತವಾಗಿ, ವಾಸ್ತವ, ಸವಾಲುಗಳು ಮತ್ತು ಗುರಿಗಳನ್ನು ಅದೇ ರೀತಿಯಲ್ಲಿ ನೋಡುವ ದೇಶಗಳ ಅಕ್ಷವನ್ನು ರಚಿಸುವುದು ಇಲ್ಲಿನ ಉದ್ದೇಶವಾಗಿದೆ ಎಂದು ಅವರು ಹೇಳಿದರು.

5 ಕೋಟಿ ರೂ. ಮೌಲ್ಯದ ಸಿಗರೇಟ್, ನಾಲ್ವರ ವಶ

ಅಹಮದಾಬಾದ್: ಗುಜರಾತಿನ ಅರಬ್ಬೀ ಸಮುದ್ರದಲ್ಲಿ ಭಾರತೀಯ ಕೋಸ್ಟ್ ಗಾರ್ಡ್ ವಿದೇಶಿ ದೋಣಿಯನ್ನು ತಡೆದು, ಸುಮಾರು 5 ಕೋಟಿ ರೂ. ಮೌಲ್ಯದ 200 ಬಾಕ್ಸ್ ವಿದೇಶಿ ಬ್ರ್ಯಾಂಡ್ ಸಿಗರೇಟ್‌ಗಳನ್ನು ವಶಪಡಿಸಿಕೊಂಡು, ನಾಲ್ವರು ಇರಾನಿ ಪ್ರಜೆಗಳನ್ನು ಬಂಧಿಸಿದೆ ಎಂದು ಐಸಿಜಿ ಭಾನುವಾರ ತಿಳಿಸಿದೆ.



ಕಾರ್ಯಾಚರಣೆಯನ್ನು ಶನಿವಾರ ದ್ವಾರಕಾ ಕರಾವಳಿಯಲ್ಲಿ ನಡೆಸಲಾಯಿತು. ಅಲ್ಲಿ ಅಲ್ ಮುಖ್ತಾರ್ ಎಂಬ ನಾಲ್ವರು ಇರಾನಿ ಸಿಬ್ಬಂದಿಗಳಿದ್ದ ಹಡಗಿನಲ್ಲಿ ಸುಮಾರು ಒಂದು ಲಕ್ಷ ಪ್ಯಾಕೆಟ್ ವಿದೇಶಿ ಬ್ರ್ಯಾಂಡ್ ಸಿಗರೇಟ್‌ಗಳಿದ್ದ 200 ಪೆಟ್ಟಿಗೆಗಳನ್ನು ಅಡಗಿಸಿಟ್ಟಿರುವುದು ಕಂಡುಬಂದಿದೆ. ಈ ಸರಕುಗಳ ಅಂತಾರಾಷ್ಟ್ರೀಯ ಮಾರುಕಟ್ಟೆ ಮೌಲ್ಯ 2.5 ಕೋಟಿ ರೂಪಾಯಿಗಳಿಂದ 5 ಕೋಟಿ ರೂಪಾಯಿಗಳಷ್ಟಿದೆ ಎಂದು ಐಸಿಜಿ ತನ್ನ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದೆ. ಹೆಚ್ಚಿನ ತನಿಖೆ ಮತ್ತು ಸಿಬ್ಬಂದಿಯ ವಿಚಾರಣೆಗಾಗಿ ದೋಣಿಯನ್ನು ಗುಜರಾತಿನ ಪೋರಬಂದರ್‌ಗೆ ಕರೆದೊಯ್ಯಲಾಗಿದೆ. ಇದಕ್ಕೂ ಮೊದಲು, ಐಸಿಜಿ ಮತ್ತು ಗುಜರಾತ್ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಫೆ.16ರಂದು ಜಂಟಿ ಕಾರ್ಯಾಚರಣೆಯಲ್ಲಿ ಗುಜರಾತ್ ಕರಾವಳಿಯಲ್ಲಿ 200 ಕೆಜಿಗೂ ಹೆಚ್ಚು ಅನುಮಾನಾಸ್ಪದ ಮಾದಕ ದ್ರವ್ಯಗಳೊಂದಿಗೆ ಇಬ್ಬರು ಇರಾನಿನ ಪ್ರಜೆಗಳನ್ನು ಬಂಧಿಸಿದ್ದವು.

ಅಸ್ಸಾಂ ಕಾಂಗ್ರೆಸ್‌ನ ಮಾಜಿ ರಾಜ್ಯಾಧ್ಯಕ್ಷ ಬಿಜೆಪಿಗೆ ಸೇರ್ಪಡೆ

ಗುವಾಹಟಿ: ಅಸ್ಸಾಂ ಕಾಂಗ್ರೆಸ್‌ನ ಮಾಜಿ ರಾಜ್ಯಾಧ್ಯಕ್ಷ ಭೂಪೇನ್ ಬೋರಾ ಭಾನುವಾರ ಅಧಿಕೃತವಾಗಿ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಬಿಜೆಪಿ ಸೇರಿದ ಕೆಲವೇ ಗಂಟೆಗಳಲ್ಲಿ, ಆಡಳಿತ ಪಕ್ಷವು ಬೋರಾ ಅವರನ್ನು ರಾಜ್ಯ ಕಾರ್ಯಕಾರಿ ಸಮಿತಿಗೆ ಸೇರಿಸಿದೆ. ಅಸ್ಸಾಂ ಬಿಜೆಪಿ ಪ್ರಧಾನ ಕಚೇರಿ ವಾಜಪೇಯಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಬೋರಾ ಬಿಜೆಪಿ ಸದಸ್ಯರಾದರು. ಅವರ ಜತೆಗೆ, ಕಾಂಗ್ರೆಸ್ ಮಾಜಿ ನಾಯಕರಾದ ಸಂಜು ಬೋರಾ, ರಾಜೇಶ್ ಕುಮಾರ್ ಜೋಶಿ, ಕಂಗ್ಕನ್ ದಾಸ್, ಗಗನ್ ಚಂದ್ರ ಬೋರಾ ಮತ್ತು ವಿರೋಧ ಪಕ್ಷದ ಹನ್ನೆರ ಡಕ್ಕೂ ಹೆಚ್ಚು ಕಾರ್ಯಕರ್ತರು ಬಿಜೆಪಿ ಸೇರಿದ್ದಾರೆ. ಫೆ.16ರಂದು ಬೋರಾ ರಾಜೀನಾಮೆ ನೀಡಿದ್ದರು, ಕಾಂಗ್ರೆಸ್ ಹೈಕಮಾಂಡ್ ಅದನ್ನು ಸ್ವೀಕರಿಸಲಿಲ್ಲ ಮತ್ತು ಹಿರಿಯ ನಾಯಕರು ಅವರ ಅವರ ಮನವೊಲಿಸಿದ್ದರು. ರಾಹುಲ್ ಗಾಂಧಿ ಕೂಡ ಅವರೊಂದಿಗೆ ಮಾತನಾಡಿದ್ದರು. ಈ ಬೆನ್ನಲ್ಲೇ ಸಿಎಂ ಹಿಮಂತಾ ಬಿಸ್ವ ಶರ್ಮಾ ಅವರು ಬೋರಾ ನಿವಾಸಕ್ಕೆ ತೆರಳಿದ್ದರು. ಅಂತಿಮವಾಗಿ ಬೋರಾ ಬಿಜೆಪಿ ಸೇರಿದ್ದಾರೆ.

ಬ್ರೆಜಿಲ್ ಏರೋಸ್ಪೇಸ್ ಸಂಸ್ಥೆಯಿಂದ ಐಎಎಫ್‌ಗೆ 80 ಸಾರಿಗೆ ವಿಮಾನ?

ಜಾಗತಿಕ ಉತ್ಪಾದನಾ ನೆಲೆಯಾಗಿ ಭಾರತ

ಹೊಸದಿಲ್ಲಿ: ಬ್ರೆಜಿಲ್‌ನ ಏರೋಸ್ಪೇಸ್ ಸಂಸ್ಥೆ ಎಂಬ್ರೇರ್, ಭಾರತೀಯ ವಾಯುಪಡೆಗೆ 80 ಸಾರಿಗೆ ವಿಮಾನಗಳ ಒಪ್ಪಂದವನ್ನು ಪಡೆದರೆ, ಏಷ್ಯಾ-ಪೆಸಿಫಿಕ್ ಮಾರುಕಟ್ಟೆಯಲ್ಲಿ ಸೇವೆ ಸಲ್ಲಿಸುತ್ತಿರುವ ತನ್ನ ಕೆಸಿ-390 ಮಿಲೇನಿಯಮ್ ವಿಮಾನಗಳಿಗೆ ಭಾರತವನ್ನು ಪ್ರಾಥಮಿಕ ಉತ್ಪಾದನಾ ನೆಲೆಯನ್ನಾಗಿಸಲು ಸಿದ್ಧವಾಗಿದೆ ಎಂದು ಸೂಚಿಸಿದೆ.

ಸಂದರ್ಶನವೊಂದರಲ್ಲಿ, ಎಂಬ್ರೇರ್ ಅಧ್ಯಕ್ಷ ಮತ್ತು ಸಿಇಒ ಫ್ರಾನ್ಸಿಸ್ಕೊ ಗೋಮ್ಸ್ ನೆಟೊ, ಕೆಸಿ-390 ಅನ್ನು ಐಎಎಫ್‌ಗೆ ಅತ್ಯಂತ ತಾಂತ್ರಿಕವಾಗಿ ಉತ್ತಮ ಆಯ್ಕೆ ಎಂದು ಪ್ರತಿಪಾದಿಸಿದರು. ಅದರ 26-ಟನ್ ಪೇಲೋಡ್ ಸಾಮರ್ಥ್ಯ, ಜೆಟ್-ಚಾಲಿತ ಎಂಜಿನ್‌ಗಳು, 470-ನಾಟ್ ಕ್ರೂಸ್ ವೇಗ ಮತ್ತು ಸುಸಜ್ಜಿತ ರನ್‌ವೇಗಳಿಲ್ಲದೆಯೇ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಉಲ್ಲೇಖಿಸಿ, ಕೆಸಿ-390 ಪ್ರತಿಸ್ಪರ್ಧಿ ವಿಮಾನಗಳಿಗಿಂತ(ಟರ್ಬೊಪ್ರಾಪ್ ಸಿ-130 ಜೆ ಸೂಪರ್ ಹರ್ಕ್ಯುಲಸ್), ಶೇ.25-30ರಷ್ಟು ವೇಗವಾಗಿದೆ ಮತ್ತು ಕಾರ್ಯನಿರ್ವಹಣೆ ಅಗ್ಗ ಎಂದರು.

ಒಪ್ಪಂದ ಮತ್ತಷ್ಟು ಸನಿಹ: ಐಎಎಫ್ ತನ್ನ ಹಳೆಯ ಎಎನ್-32 ಮತ್ತು ಐಎಲ್-76 ನೌಕಾಪಡೆ ವಿಮಾನಗಳನ್ನು ಬದಲಿಸಲು 2022ರಲ್ಲಿ ಮನವಿ ಸಲ್ಲಿಸಿತ್ತು. ಸುಮಾರು 80 ಮಧ್ಯಮ ಸಾರಿಗೆ ವಿಮಾನಗಳನ್ನು ಖರೀದಿಸಲು ನಿರ್ಧರಿಸಲಾಗಿದ್ದು, ರಕ್ಷಣಾ ಸ್ವಾಧೀನ ಮಂಡಳಿಯ ನಿರ್ಧಾರವನ್ನು ಕೆಲವೇ ತಿಂಗಳುಗಳಲ್ಲಿ ನಿರೀಕ್ಷಿಸಲಾಗಿದೆ. ಏರ್‌ಬಸ್‌ನ ಎ-400ಎಂ ಮತ್ತು ಲಾಕ್ಹೀಡ್ ಮಾರ್ಟಿನ್‌ನ ಸಿ-130ಜೆ ಕೂಡ ಸ್ಪರ್ಧೆಯಲ್ಲಿವೆ. ಬಿಡ್‌ಗಾಗಿ ಮಹೀಂದ್ರಾದೊಂದಿಗೆ ಎಂಬ್ರೇರ್ ಪಾಲುದಾರಿಕೆ ಹೊಂದಿದೆ. ಒಂಬತ್ತು ಯುರೋಪಿಯನ್ ನ್ಯಾಟೋ ರಾಷ್ಟ್ರಗಳು ಈಗಾಗಲೇ ಕೆಸಿ-390 ಅನ್ನು ಆಯ್ಕೆ ಮಾಡಿವೆ.

ವಿಶಾಲ ಮಹತ್ವಾಕಾಂಕ್ಷೆಗಳು: ಭಾರತದಲ್ಲಿ ಕೆಸಿ-390 ನಿರ್ವಾಹಕರಿಗೆ ವಿಶೇಷ ಪ್ರಾದೇಶಿಕ ಎಂಆರ್‌ಒ ಕೇಂದ್ರವನ್ನೂ ಪ್ರಸ್ತಾಪಿಸಲಾಗಿದೆ. ಅಲ್ಲದೆ, ಭಾರತದ ಪ್ರಾದೇಶಿಕ ಸಾರಿಗೆ ವಿಮಾನ ಯೋಜನೆಯಲ್ಲಿ ಇ175 ಪ್ರಾದೇಶಿಕ ಜೆಟ್‌ಗಾಗಿ ಅಂತಿಮ ಜೋಡಣೆ ಸ್ಥಾವರ ಸ್ಥಾಪಿಸಲು ಎಂಬ್ರೇರ್ ಮತ್ತು ಅದಾನಿ ಡಿಫೆನ್ಸ್ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.



ಟ್ರಾಶಿ-1 ಹೆಸರಲ್ಲಿ ಭಯೋತ್ಪಾದಕ ವಿರೋಧಿ ಕಾರ್ಯಾಚರಣೆ

ಮೂವರು ಜೆಇಎಂ ಉಗ್ರರ ವಧೆ

ಶ್ರೀನಗರ: ಭದ್ರತಾ ಪಡೆಗಳ ಯಶಸ್ವಿ ಕಾರ್ಯಾಚರಣೆಯಲ್ಲಿ ಪಾಕಿಸ್ತಾನದ ಉಗ್ರ ಸಂಘಟನೆ ಜೈಶ್-ಎ-ಮೊಹಮ್ಮದ್(ಜೆಇಎಂ) ನಂಟು ಹೊಂದಿದ್ದ ಮೂವರು ಉಗ್ರರನ್ನು ಭದ್ರತಾ ಪಡೆಗಳು ಕಿಶ್ತ್ವಾರ್‌ನಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಹೊಡೆದುರುಳಿಸಿದ್ದಾರೆ. ಚತ್ರೂ ಬೆಲ್ಟ್‌ನ ಪಾಸರ್ಕುಟ್‌ನ ಸಾಮಾನ್ಯ ಪ್ರದೇಶದಲ್ಲಿ ಟ್ರಾಶಿ-1 ಕಾರ್ಯಾಚರಣೆಯ ವೇಳೆ ಭಯೋತ್ಪಾದಕರನ್ನು ಸದೆಬಡಿಯಲಾಗಿದೆ. ಗುಂಡಿನ ಚಕಮಕಿ ವೇಳೆ, ವಧೆಯಾದ ಭಯೋತ್ಪಾದಕರ ಶವಗಳು ಗುರುತಿಸಲಾಗದಷ್ಟು ಸುಟ್ಟುಹೋಗಿವೆ.

ಸಕ್ರಿಯ ಭಯೋತ್ಪಾದಕ ಸೈಫುಲ್ಲಾ: ಭದ್ರತಾ ಸಂಸ್ಥೆಗಳ ಪ್ರಾಥಮಿಕ ವರದಿ ಪ್ರಕಾರ, ವಧೆಯಾದ ಉಗ್ರರಲ್ಲಿ ಓರ್ವ ಕುಖ್ಯಾತ ಜೆಇಎಂ ಕಮಾಂಡರ್ ಸೈಫುಲ್ಲಾ ಎಂಬುದು ಬಹಿರಂಗಗೊಂಡಿದೆ. ಆತ ಸುಮಾರು ಐದು ವರ್ಷಗಳ ಹಿಂದೆ ಜಮ್ಮು -ಕಾಶ್ಮೀರಕ್ಕೆ ನುಸುಳಿದ್ದು, ಅಂದಿನಿಂದ ಈ ಪ್ರದೇಶದಲ್ಲಿ ಸಕ್ರಿಯನಾಗಿದ್ದನು, ಭದ್ರತಾ ಪಡೆಗಳ ಮೇಲೆ ಹಲವಾರು ಮಾರಣಾಂತಿಕ ದಾಳಿಯ ಮಾಸ್ಟರ್ ಮೈಂಡ್ ಎಂದು ಹಲವು ತನಿಖೆಯಲ್ಲಿ ಬಹಿರಂಗಗೊಂಡಿದೆ. ಈ ಪೈಕಿ 2024 ಜುಲೈನಲ್ಲಿ ನಡೆದ ಒಂದು ದಾಳಿಯು ನಾಲ್ಕು ಸೈನಿಕರ ವೀರಗತಿಗೆ ಕಾರಣವಾಗಿತ್ತು.

ಅಪಾರ ಶಸ್ತ್ರಾಸ್ತ್ರಗಳ ವಶ

ಮೃತ ಉಗ್ರರಿಂದ ಎರಡು ಎಕೆ-47 ಬಂದೂಕುಗಳು ಸೇರಿದಂತೆ ಅಪಾರ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸೇನೆ ತಿಳಿಸಿದೆ.



ಸೇನಾ ಶ್ವಾನಕ್ಕೆ ಗಾಯ

ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಯಲ್ಲಿ ಭಾರತೀಯ ಸೇನೆಯ 2 ಪ್ಯಾರಾ ವಿಶೇಷ ಪಡೆಗಳ ಉತ್ತಮ ತರಬೇತಿ ಪಡೆದ ಶ್ವಾನವೊಂದು ಗಾಯಗೊಂಡಿದೆ. ಜರ್ಮನ್ ಶೆಫರ್ಡ್ ಟೈಸನ್, ಕಾರ್ಯಾಚರಣೆಯ ವೇಳೆ ಮುನ್ನಡೆಯ ನೇತೃತ್ವ ವಹಿಸಿತ್ತು.

ಕಿರುಸುದ್ದಿ

ವಿವಿಧೆಡೆ ಪಾರ್ಕಿಂಗ್ ವ್ಯವಸ್ಥೆ

ಬಳ್ಳಾರಿ: ನಗರದ ಅಧಿದೇವತೆ ಶ್ರೀಕನಕ ದುರ್ಗಮ್ಮ ದೇವಿ ಸಿಡಿಬಂಡಿ ರಥೋತ್ಸವ ಫೆ.24ರಂದು ಜರುಗಲಿದ್ದು, ರಥೋತ್ಸವ ವೀಕ್ಷಿಸಲು ಆಗಮಿಸುವ ಸಾರ್ವಜನಿಕರಿಗೆ ನಗರದ ವಿವಿಧೆಡೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದು ಎಸ್ಪಿ ಡಾ.ಸುಮನ್ ಡಿ.ಪನ್ನೇಕರ್ ತಿಳಿಸಿದ್ದಾರೆ. ಮೋಕ ಭಾಗದಿಂದ ರಥೋತ್ಸವಕ್ಕೆ ಆಗಮಿಸುವ



ಸಾರ್ವಜನಿಕ ವಾಹನಗಳಿಗೆ ಗಾಂಧಿನಗರ 1ನೇ ಕ್ರಾಸ್ ಹತ್ತಿರವಿರುವ ಅಲ್ಲಂ ಸುಮಂಗಳಮ್ಮ ಕಾಲೇಜು ಆವರಣದಲ್ಲಿ, ಕಪ್ಪಗಲ್ ಕಡೆಯಿಂದ ರಥೋತ್ಸವಕ್ಕೆ ಆಗಮಿಸುವ ಸಾರ್ವಜನಿಕ ವಾಹನಗಳಿಗೆ ಕಪ್ಪಗಲ್ ರಸ್ತೆಯಲ್ಲಿರುವ ಕಿತ್ತೂರುರಾಣಿ ಚೆನ್ನಮ್ಮ ಶಾಲೆಯ ಆವರಣದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

ಸಿರುಗುಪ್ಪ ಹಾಗೂ ಹೊಸಪೇಟೆ ಭಾಗದಿಂದ ರಥೋತ್ಸವಕ್ಕೆ ಆಗಮಿಸುವ ಸಾರ್ವಜನಿಕ ವಾಹನಗಳಿಗೆ ಬಸವ ಭವನ ಹಾಗೂ ಜಿಲ್ಲಾ ಕೇಂದ್ರ ಕಾರಾಗೃಹದ ಮುಂದಿನ ಖಾಲಿ ಜಾಗದಲ್ಲಿ, ಬೆಂಗಳೂರು ರಸ್ತೆ ಹಾಗೂ ಅನಂತಪುರ ಕಡೆಯಿಂದ ರಥೋತ್ಸವಕ್ಕೆ ಆಗಮಿಸುವ ಸಾರ್ವಜನಿಕ ವಾಹನಗಳಿಗೆ ಕಮ್ಮಾ ಭವನದ ಮುಂದಿನ ಖಾಲಿ ಜಾಗ ಹಾಗೂ ಮುನಿಸಿಪಲ್ ಕಾಲೇಜು ಆವರಣದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

ಬಳ್ಳಾರಿ ನಗರದ ಯು.ಬಿ ಸರ್ಕಲ್, ಜಿಲ್ಲಾ ಕೇಂದ್ರ ಕಾರಾಗೃಹದ ಗೇಟ್, ಜಿಮ್ ಖಾನ ಕ್ರಾಸ್, ತಾಳೂರು ರಸ್ತೆಯ ಬಾಲಾಜಿ ನರ್ಸಿಂಗ್ ಹೋಂ ಕ್ರಾಸ್, ಕಪ್ಪಗಲ್ ರಸ್ತೆಯ ಸಂಜೀವಿನಿ ಆಸ್ಪತ್ರೆಯ ಕ್ರಾಸ್ ಹಾಗೂ ಮೋಕಾ ರಸ್ತೆಯ ಗಾಂಧಿನಗರ 1ನೇ ಕ್ರಾಸ್ ಗಳ ಮೂಲಕ ದುರ್ಗಮ್ಮ ಗುಡಿ ಸರ್ಕಲ್‌ಗೆ ಬರುವ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ವದಂತಿಗೆ ಕಿವಿಗೊಡದಿರಿ

ಹನುಮಸಾಗರ: ಸಮೀಪದ ಹನಮನಾಳ ಸುತ್ತಮುತ್ತಲಿನ ಹಲವೆಡೆ ಗೃಹಲಕ್ಷ್ಮೀ ಯೋಜನೆಯ ಹಣ ಖಾತೆಗೆ ಜಮಾ ಆಗಲು ಜೀವಿತಾವಧಿ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಹಾಗೂ ಆಹಾರ ಪಡಿತರ ಚೀಟಿ ಸಲ್ಲಿಸಿ ಖಾತೆ ಚಾಲ್ತಿಗೊಳಿಸಬೇಕು ಎಂಬ ವದಂತಿ ಮಾಹಿತಿ ಹರಡಿದ ಹಿನ್ನೆಲೆ ಆತಂಕಗೊಂಡ ಫಲಾನುಭವಿಗಳು ದಾಖಲೆಗಳೊಂದಿಗೆ ಆನ್‌ಲೈನ್ ಕೇಂದ್ರಗಳಿಗೆ ಭೇಟಿ ನೀಡುತ್ತಿರುವುದು ಕಂಡು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ಫಾರೂಕ್ ಡಾಲಾಯಿತ್ ಹಾಗೂ ಸಮಿತಿ ಸದಸ್ಯರಾದ ಮಂಜುನಾಥ ತೆವರನ್ನವರ್ ಮತ್ತು ಯಮನೂರಪ್ಪ ವಾಲ್ಮೀಕಿ ಅವರು ವಿವಿಧ ಆನ್‌ಲೈನ್ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸ್ಥಳೀಯ ಹಲವು ಕೇಂದ್ರಗಳು ಸಾರ್ವಜನಿಕರಿಗೆ ಸರಿಯಾದ ಮಾಹಿತಿ ನೀಡಿರುವುದು ಕಂಡುಬಂದರೆ, ಇನ್ನೂ ಕೆಲವು ಕೇಂದ್ರಗಳು ವದಂತಿಯನ್ನು ದುರುಪಯೋಗಪಡಿಸಿಕೊಂಡು ತಲಾ 2100 ಹಣ ವಸೂಲಿ ಮಾಡಿರುವುದು ಬೆಳಕಿಗೆ ಬಂದಿದೆ. ಸಂಬಂಧಪಟ್ಟವರಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ಇಂತಹ ಕೃತ್ಯಗಳು ಕಂಡುಬಂದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಹಾಗೂ ಗೃಹಲಕ್ಷ್ಮಿ ಯೋಜನೆಯ ಹಣ ಜಮಾ ಆಗಲು ಯಾವುದೇ ಜೀವಿತಾವಧಿ ಪ್ರಮಾಣ ಪತ್ರ ಬಗ್ಗೆ ಸರ್ಕಾರ ದಿಂದ ಅಧಿಕೃತ ಆದೇಶ ಹೊರಡಿಸುವವರಗೆ ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡದೆ ಜಾಗರೂಕರಾಗಿರಬೇಕು ಎಂದು ತಿಳಿಸಿದರು.

ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿ

ರಾಯಚೂರು: ದಿಶಾ ಸಭೆ ಏಳೆಂಟು ತಿಂಗಳಿಗೊಮ್ಮೆ ಜರುಗುತ್ತಿದೆ. ಈ ಸಭೆ ಎಲ್ಲ ಇಲಾಖೆಯ ಅಧಿಕಾರಿಗಳು ಹಾಜರಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಬೇಕೆಂದು ನಾಮ ನಿರ್ದೇಶಿತ ಸದಸ್ಯರಾದ ರಾಘವೇಂದ್ರ ಹಾಗೂ ತಿಪ್ಪಣ್ಣ ಜಿಪಂ ಸಿಇಒಗೆ ಆಗ್ರಹಿಸಿದರು. ಶನಿವಾರ ಜಿಪಂ ಸಭಾಂಗಣದಲ್ಲಿ ಸಂಸದ ಜಿ.ಕುಮಾರನಾಯಕ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಗೆ ಅನೇಕ ಅಧಿಕಾರಿಗಳು ಗೈರಾಗಿದ್ದರು. ಸಂಬಂಧಿಸಿದ ಇಲಾಖೆಯ ಬೇರೆ ಅಧಿಕಾರಿಗಳು ಬಂದರೂ ಸಮರ್ಪಕವಾದ ಮಾಹಿತಿ ನೀಡುವಲ್ಲಿ ವಿಫಲರಾಗುತ್ತಾರೆ ಇದರಿಂದ ಸಭೆ ನಡೆಸುವುದು ವ್ಯರ್ಥವಾಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಹಿಂದೆ 2024ರ ಅ.25ರಂದು ಹಾಗೂ 20255 ಜೂ.16ರಂದು ದಿಶಾ ಸಭೆ ನಡೆಸಲಾಗಿತ್ತು. ಈಗ ಫೆ.21ರಂದು ಸಭೆ ಜರಗುತ್ತಿದೆ. ಪ್ರತಿ ಬಾರಿಯೂ ಎಂಟು ತಿಂಗಳಿಗೆ ಒಮ್ಮೆ ಸಭೆ ಜರಗುತ್ತಿದೆ. ಹೀಗಿದ್ದರೂ ಎಲ್ಲ ಇಲಾಖೆಯ ಅಧಿಕಾರಿಗಳು ಸಭೆಗೆ ಬಾರದಿದ್ದರೆ ಮಾಹಿತಿಯನ್ನು ಯಾರಿಂದ ತಿಳಿದುಕೊಳ್ಳಬೇಕು ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ಕುರಿತಂತೆ ಸಂಸದ ಜಿ.ಕುಮಾರ ನಾಯಕ ಮಾತನಾಡಿ, ಸಭೆಗೆ ಬಾರದ ಅಧಿಕಾರಿಗಳಿಗೆ ನೊಟೀಸ್ ನೀಡಿ ಸ್ಪಷ್ಟನೆ ಕೇಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿರಾಟ ಹಿಂದೂ ಸಮ್ಮೇಳನ | ವಿನಾಯಕ ತಳಗೇರಿ ಅಭಿಮತ

ಹಿಂದೂಗಳು ಜಾಗೃತರಾದರೆ ಮಾತ್ರ ಹಿಂದುತ್ವ, ಭಾರತ ಉಳಿಯಲು ಸಾಧ್ಯ

ಗಂಗಾವತಿ: ಹಿಂದೂಗಳು ಜಾಗೃತರಾದರೆ ಮಾತ್ರ ಹಿಂದುತ್ವ, ಭಾರತ ಉಳಿಯಲು ಸಾಧ್ಯ ಎಂದು ವಿಶ್ವ ಹಿಂದು ಪರಿಷತ್ತಿನ ಉತ್ತರ ಕರ್ನಾಟಕ ಪ್ರಾಂತ ಸಹ ಕಾರ್ಯದರ್ಶಿ ವಿನಾಯಕ ತಳಗೇರಿ ಅಭಿಪ್ರಾಯ ವ್ಯಕ್ತಪಡಿಸಿದರು.

ಜಯನಗರದ ಶಾರದಾಂಬ ದೇಗುಲದ ಆವರಣದಲ್ಲಿ ನಗರದ 1ರಿಂದ 6 ವಾರ್ಡ್‌ನ ನಾಗರಿಕರನ್ನೊಳಗೊಂಡಂತೆ ಶನಿವಾರ ಆಯೋಜಿಸಿದ್ದ 'ವಿರಾಟ ಹಿಂದೂ ಸಮ್ಮೇಳನದಲ್ಲಿ ಭಾಗಿಯಾಗಿ ದಿಕ್ಸೂಚಿ ಭಾಷಣ ಮಾಡಿದರು.

ಈ ಭರತ ಭೂಮಿಯ ಮೇಲೆ ಸಾವಿರಾರು ವರ್ಷಗಳಿಂದ ದಾಳಿಕೋರರಿಂದ ಅತಿಕ್ರಮಣ ನಡೆಯುತ್ತಲೆ ಬಂದಿದೆ. ಆದರೆ ಭಾರತ ಎಂದಿಗೂ ತಲೆ ತಗ್ಗಿಸಿಲ್ಲ. ಮತ್ತೆ ಮತ್ತೆ ಪುಟಿದೆದ್ದು ನಿಂತಿದೆ. ಸನಾತನ ಹಿಂದು ಧರ್ಮಕ್ಕೆ ಅಂತಹ ಶಕ್ತಿ ಇದೆ. ಆದರೆ ಇಂದು ಹಿಂದು ಧರ್ಮಕ್ಕೆ ಸಾಕಷ್ಟು ಆತಂಕ ಎದುರಾಗಿದೆ. ಶತ್ರುಗಳು ಹೊರಗಿನವರಾದರೆ ಹೇಗೊ ಎದುರಿಸಬಹುದು. ಆಕ್ರಮಣಕಾರಿಂದ ಜಾಆಗೃತರಾದರೆ ಮಾತ್ರ ಭಾರತ ಉಳಿಯಲು ಮತ್ತು ಧರ್ಮ ರಕ್ಷಣೆ ಸಾಧ್ಯವಾಗಲಿದೆ. ವಿಶ್ವದ ಎಲ್ಲಾ ದೇಶಗಳಿಗೆ ಹುಟ್ಟಿನ ದಿನಾಂಕವಿದೆ. ಆದರೆ ಭಾರತ ಎಂಬ ಸನಾತನ ದೇಶಕ್ಕೆ ಹುಟ್ಟೂ ಇಲ್ಲ, ಸಾವೂ ಇಲ್ಲ. ಯಾವಾಗ ಹುಟ್ಟಿದೆ ಎಂಬುವುದು ಯಾರಿಗೂ ಗೊತ್ತಿಲ್ಲ ಎಂದರು.

ಹಿಂದುಗಳಲ್ಲಿ ಜಾಗೃತಿ ಮೂಡಿಸುವ ಉದ್ದೇಶಕ್ಕೆ ಇಂತಹ ಸಮ್ಮೇಳನಗಳನ್ನು ಆಯೋಜಿಸಲಾಗುತ್ತಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘ ಇಂತಹ ಸಮ್ಮೇಳನನ್ನು ಆಯೋಜಿಸತ್ತಿದೆ ಎಂಬ ತಪ್ಪು ಕಲ್ಪನೆ ಬಹುತೇಕರಲ್ಲಿದೆ. ಆದರೆ ಸಮಾಜದ ಎಲ್ಲಾ ಸ್ತರದ ಯುವಕರು ಸೇರಿ ಮಾಡುತ್ತಿರುವ ಸಮ್ಮೇಳನಗಳು ಇವು.

ಸಂಘಕ್ಕೆ ನೂರು ವರ್ಷದ ತುಂಬಿದೆ. ಸಂಘವು ಸಮಾಜದಲ್ಲಿ ಲೀನವಾಗಬೇಕು ಎಂಬ ಉದ್ದೇಶವಿದೆ. ಇದಕ್ಕಾಗಿ ಧರ್ಮ ರಕ್ಷಣೆ, ಮತ ಸಾಮರಸ್ಯ,



> ನಮ್ಮ ಹಿಂದುಗಳಲ್ಲಿ ಈ ಹಿಂದೆ ಸಂಸಾರದಲ್ಲಿ ಸಾಮರಸ್ಯ ಇತ್ತು. ಹಿರಿಯರ ಮಾರ್ಗದಲ್ಲಿ ಕುಟುಂಬಗಳು ನಡೆಯುತ್ತಿದ್ದವು. ಆದರೆ ಇಂದು ಸಣ್ಣ ಕುಟುಂಬಗಳಾಗಿ ಬದಲಾಗುತ್ತಿದ್ದು, ಸಂಸಾರದಲ್ಲಿ ಸಾರವೇ ಇಲ್ಲದಂತಾಗಿದೆ. ಇದು ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣ. ಸಮಸ್ಯೆಗೆ ಪರಿಹಾರ ನಮ್ಮಲ್ಲಿಯೇ ಇದೆ. ಹಿಂದುಗಳು ಐಕ್ಯಮತದಿಂದ ಇದ್ದರೆ ಎಲ್ಲವೂ ಸರಿಯಾಗುತ್ತದೆ.
> ■ ಡಾ.ಅಮರೇಶ ಪಾಟೀಲ, ಹಿಂದೂ ಸಮ್ಮೇಳನದ ನಗರ ಸಂಚಾಲಕ

ಭಾತೃತ್ವವನ್ನು ನಮ್ಮ ಕುಟುಂಬಗಳಲ್ಲಿ ಮೂಡಿಸಲು ಸಂಘ ಯತ್ನಿಸುತ್ತಿದೆ ಎಂದರು. ಸುಮಾರು 40 ನಿಮಿಷಕ್ಕೂ ಹೆಚ್ಚು ಕಾಲ ಭಾಷಣ ಮಾಡಿದರು.

ಸಾನಿಧ್ಯ ವಹಿಸಿದ್ದ ಸೋಮನಾಳದ ವೇದಮೂರ್ತಿ ರುದ್ರಸ್ವಾಮಿ ಆಶೀರ್ವಚನ ನೀಡಿದರು. ಪಶ್ಚಿಮ ಭಾಗದ ಸಮ್ಮೇಳನದ ಸಂಚಾಲಕಿ ಕಾಂಚಿಕಾ ರಾಣಿ ವೇದಿಕೆಯಲ್ಲಿದ್ದರು. ಇದಕ್ಕೂ ಮುನ್ನ ಇರಕಲ್ಗಡಾದ ವಿದ್ಯಾ ವಿನಾಯಕ ಶಾಲೆಯ ವೀರಸಾರ್ವಕರ್ ಎಕ್ರೋಬಿಟೀಕ್ಸ್ ತಂಡದ ವಿದ್ಯಾರ್ಥಿಗಳು ನಡೆಸಿಕೊಟ್ಟ ಪಿರಾಮಿಡ್ ಪ್ರದರ್ಶನ ಜನರನ್ನು ಮಂತ್ರಮುಗ್ಧರನ್ನಾಗಿಸಿತು.

ರಾಘವೇಂದ್ರ ಕಟ್ಟಿಮನಿ, ವೆಂಕಟೇಶ್ ಕುಲಕರ್ಣಿ, ದಿಲೀಪ್ ಪವಾರ್, ರಾಜು ಎಂ., ಕಾಶಿನಾಥ್, ರಾಘವೇಂದ್ರ ಪತ್ತಾರ್, ಸುನಿಲ್ ಕುಮಾರ್ ಪತ್ತಾರ, ಮಂಜುನಾಥ ಪತ್ತಾರ್, ಸಂತೋಷ್ ಮ್ಯಾಗೇರಿ, ಡಿಪೋ ಮಲ್ಲಿಕಾರ್ಜುನ್, ಶ್ರೀನಿವಾಸ ಎಂ.ಜೆ., ರಾಮಮೂರ್ತಿ ನವಲಿ, ಸುರೇಶ ಸಮಗಂಡಿ, ನಾಗರಾಜ್ ಗುತ್ತೇದಾರ್, ಅಶೋಕ್ ರಾಯ್ಕರ್ ಅರ್ಜುನ್ ರಾಯ್ಕರ್ ಶ್ರವಣಕುಮಾರ ರಾಯ್ಕರ್ ಇತರರಿದ್ದರು.

ಮಹಿಳಾ ಪ್ರಮುಖರಾದ ಗಾಯತ್ರಿ ಅಳವಂಡಿಕರ್, ಅನಿತಾ ಪಂಡಿತ್, ಗೀತಾ ಪಾಟೀಲ್, ಲಕ್ಷ್ಮಿ ಕುಲಕಣರ್, ವಾಣಿ ಧರ್ಮಾವರ, ಶ್ರೀದೇವಿ ತಿರುಮಲರಾವ್, ಸುನಂದಾ, ಜಯಾ ಜಮಾಪುರ, ತೇಜಸ್ವಿನಿ ಪಾಟೀಲ್, ಶಾರದಾ ಕಾಮಗಂಡಿ, ಸೌಭಾಗ್ಯ ಎನ್., ರೇಣುಕಾ ಜೋಶಿ, ಕ್ಷಮಾ ಜೋಶಿ, ರಮಾ ದರೋಜಿ, ಅಕ್ಕಮ್ಮ ಮಾಳಗಿ, ಬಾಳಮ್ಮ, ಪ್ರತೀಮಾ ನವಲಿ, ಲತಾ ಜನಾರ್ದನ ಇದ್ದರು.

ಹೆಣ್ಣು ಮಕ್ಕಳು ಕಣ್ಣೀರು ಹಾಕಬಾರದು: ಕಾಗಿನೆಲೆ ಶ್ರೀ

ಕೊಪ್ಪಳ: ಹೆಣ್ಣು ಮಕ್ಕಳು ಗಂಡನ ಮನೆಗೆ ಹೋಗುವಾಗ ಅಳುವುದು ಸಹಜ. ಆದರೆ ಮರುದಿನದಿಂದ ಅವರು ಜೀವನ ಪರ್ಯಂತ ನಗುತ್ತಿರಬೇಕು ಎಂದು ಕಾಗಿನೆಲೆ ಕನಕ ಗುರು ಪೀಠ ಹೊಸದುರ್ಗ ಶಾಖಾ ಮಠದ ಪೀಠಾಧಿಪತಿ ಶ್ರೀಈಶ್ವರಾನಂದ ಪುರಿ ಸ್ವಾಮೀಜಿ ಹೇಳಿದರು.

ತಾಲೂಕಿನ ಹಾಲವರ್ತಿ ಗ್ರಾಮದ ಕನಕ ಗುರು ಪೀಠದ ಶಾಖ ಮಠದ ಶ್ರೀಜಡೇಶ್ವರ ಜಾತ್ರೆ ನಿಮಿತ್ತ ಹಮ್ಮಿಕೊಂಡಿದ್ದ 14 ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಮದುವೆ ದಿನ ಹೆಣ್ಣಿನ ಕಡೆಯಿಂದ ವರೋಪಚಾರವಾಗಿ ಏನನ್ನು ಪಡೆದಿದ್ದೀರೋ ಅದು ಇವತ್ತಿಗೆ ಕೊನೆ ಆಗಬೇಕು. ಹೆಂಡತಿಯನ್ನು ಪ್ರೀತಿಯಿಂದ ತವರು ಮನೆಗೆ ಕಳಿಸಿ. ಆದರೆ ವರದಕ್ಷಿಣೆಗಾಗಿ ಹೆಂಡತಿಯನ್ನು ಯಾವತ್ತೂ ತವರು ಮನೆಗೆ ಕಳಿಸಬೇಡಿ. ಯಾವ ಮನೆಯಲ್ಲಿ ಹೆಣ್ಣಿಗೆ ಗೌರವ ಇರುತ್ತದೋ ಆ ಮನೆಯಲ್ಲಿ ದೇವತೆಗಳು ವಾಸಿಸುತ್ತಾರೆ. ಹೆಣ್ಣುಮಗಳು ತನ್ನ ತಾಯಿ, ತಂದೆ ಸೇರಿದಂತೆ ಇಡೀ ಕುಟುಂಬವನ್ನು ಬಿಟ್ಟು ಗಂಡನನ್ನೇ ನಂಬಿ ನಿಮ್ಮ ಮನೆಗೆ ಬಂದಿರುತ್ತಾಳೆ. ಅವಳನ್ನು ಅಷ್ಟೇ ಗೌರವದಿಂದ ಹಾಗೂ ಪ್ರೀತಿಯಿಂದ ಕಾಣುವುದು ನಿಮ್ಮ ಕರ್ತವ್ಯ ಎಂದು ಮಾರ್ಮಿಕವಾಗಿ ನುಡಿದರು.

ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ ಮಾತನಾಡಿ, ಸಾಮಂತ ವಿವಾಹಗಳು ಹೆಚ್ಚು ಹೆಚ್ಚು ನಡೆಯಬೇಕು. ಇದರಿಂದ ಒಂದು ವೆಚ್ಚಕ್ಕೆ ಕಡಿವಾಣ ಬೀಳುತ್ತದೆ. ಬಡವರಿಗೆ ಸಾಲದ ಹೊರೆ ತಪ್ಪುತ್ತದೆ. ಗ್ರಾಮಗಳಲ್ಲಿ ಇಂತಹ ವಿವಾಹಗಳು ನಡೆಯುವುದರಿಂದ ಗ್ರಾಮಸ್ಥರಲ್ಲಿ ಒಗ್ಗಟ್ಟು ಹಾಗೂ ಬಾಂಧವ್ಯ ವೃದ್ಧಿಯಾಗುತ್ತದೆ ಎಂದು ಹೇಳಿದರು. ಕನಕ ಗುರು ಪೀಠ ಕೆಆರ್ ನಗರ ಸಂಸ್ಥಾನ ಮಠದ ಶ್ರೀಶಿವಾನಂದ ಪುರಿ ಸ್ವಾಮೀಜಿ, ಬಾದಿಮನಾಳ ಹಾಗೂ ಹಾಲವರ್ತಿ ಪೀಠದ ಶ್ರೀಶಿವಸಿದ್ದೇಶ್ವರ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಮಾಜಿ ಶಾಸಕ ಕೆ.ಬಸವರಾಜ ಹಿಟ್ನಾಳ್, ಹಿಂದುಳಿದ ಜಾತಿಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಎಂ.ರಾಮಚಂದ್ರಪ್ಪ, ಎಂಎಸ್ಪಿಎಲ್ ಕಂಪನಿ ಇಡಿ ಪ್ರಭು, ಎಸ್.ಕೆ.ಸ್ಟೀಲ್ ಕಂಪನಿ ವ್ಯವಸ್ಥಾಪಕ ಪ್ರಭು, ಮುಖಂಡರಾದ ಭರಮಪ್ಪ ನಗರ, ಗೂಳಪ್ಪ ಹಲಗೇರಿ ವೆಂಕಟೇಶ್ ಬಾರಕೇರ, ಹನುಮಂತಪ್ಪ ಅರಸನಕೇರಿ, ಬಸವರಾಜ ಬಂಗಾಳಿ, ದೇವು ನಾಗನೂರ, ಕುಬೇರ ಮಜ್ಜಿಗಿ, ಹನುಮೇಶ ಹೊಸಳ್ಳಿ, ಹನುಮಂತಪ್ಪ ಕೌದಿ, ಭರಮಪ್ಪ ಗೊರವರ, ಆನಂದ ಕಿನ್ನಾಳ, ಮಹೇಂದ್ರ ಹಾಲವರ್ತಿ, ಗವಿಸಿದ್ದಯ್ಯ ಹಿರೇಮಠ, ಮುದಿಯಪ್ಪ ಆದೋನಿ, ಮಾರ್ಕಂಡೇಯ ಹಿರೇಮಠ, ಮಂಜುನಾಥ ಬಂಗಾಳಿ ಸೇರಿದಂತೆ ಇತರರು ಇದ್ದರು.



ವರದಿಗೆ ಸ್ಪಂದಿಸಿದ ಅಧಿಕಾರಿಗಳು

ಮಸ್ಕಿ: ಇಂದಿರಾ ಕ್ಯಾಂಟೀನ್ ಪಟ್ಟಣದ ಹೃದಯಭಾಗದಲ್ಲೇ ಇದ್ದರೂ ಸಾರ್ವಜನಿಕರಿಗೆ ಕಾಣದಂತಾಗಿದೆ! ಎಂದು ಮೂರು ದಿನಗಳ ಹಿಂದೆ ಹಸಿದವರಿಗೆ ಇಂದಿರಾ ಕ್ಯಾಂಟೀನ್ ಹುಡುಕುವ ಸವಾಲು ಎಂದು ಹೊಸದಿಂಗತ ಪತ್ರಿಕೆ ಯಲ್ಲಿ ವಿಶೇಷ ಸುದ್ದಿ ಪ್ರಸಾರ ಬಿತ್ತರಿಸಲಾಯಿತ್ತು.

ಹೊಸದಿಂಗತ ವಿಶೇಷ ವರದಿಗೆ ಸ್ಪಂದಿಸಿಪುರಸಭೆ ಅಧಿಕಾರಿಗಳು ಇಂದು ನೂತನ ಇಂದಿರಾ ಕ್ಯಾಂಟೀನ್ ಬೋರ್ಡ್



ಅಳವಡಿಸಲಾಗಿದ್ದು, ಇದರಿಂದಾಗಿ ಸಾರ್ವಜನಿಕ ಅಧಿಕಾರಿಗಳಿಗೆ ಹಾಗೂ ಹೊಸದಿಂಗತ ದಿನ ಪತ್ರಿಕೆಗೆ ಹಾಗೂ ವರದಿಗಾರರಿಗೆ ಧನ್ಯವಾದಗಳು ತಿಳಿಸಿದರು.

ಶರಣರ ದೃಷ್ಟಿಯಲ್ಲಿ ಎಲ್ಲರೂ ಸರಿ ಸಮಾನರು



ಯಲಬುರ್ಗಾ: 12ನೇ ಶತಮಾನದ ಶಿವ ಶರಣರ ದೃಷ್ಟಿಯಲ್ಲಿ ಯಾವುದೇ ಜಾತಿ, ಧರ್ಮ ಇರಲಿಲ್ಲ ಇಡೀ ಮಾನವ ಕುಲವೇ ಒಂದು ಎಂಬ ಭಾವನೆಯಿಂದ ಎಲ್ಲರೂ ಸರಿ ಸಮಾನರಾಗಿದ್ದರು ಎಂದು ಜಿಪಂ ಮಾಜಿ ಸದಸ್ಯ ಸಿ.ಎಚ್.ಪಾಟೀಲ ಹೇಳಿದರು.

ಪಟ್ಟಣದ ಸಾಯಿ ಪ್ಯಾಲೇಸ್‌ನಲ್ಲಿ ಆಯೋಜಿಸಿದ ಬಸವ ಶಿವಯೋಗ ಸಮಿತಿ ವತಿಯಿಂದ ಮಾಸಿಕ ಬಸವಾನುಭವ ಶಿವಶರಣರ ಚಿಂತನಾ ಗೋಷ್ಠಿಯಲ್ಲಿ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು ನಾವೆಲ್ಲರೂ ಶಿವಶರಣರ ಹಾದಿಯಲ್ಲಿ ಭಕ್ತಿ, ಭಾವದಿಂದ ನಡೆದಾಗ ಮುಕ್ತಿ ಕಾಣಲು ಸಾಧ್ಯ ಎಂದರು.

ಸಂಗಣ್ಣನವರು ಸಾಮಾಜಿಕ ಕಳಕಳಿ ಇಟ್ಟುಕೊಂಡು ಪ್ರತಿ ತಿಂಗಳು ಶಿವಾನುಭವ ಗೋಷ್ಠಿಯನ್ನು ಏರ್ಪಡಿಸುವ ಮೂಲಕ ಶರಣರ ತತ್ವ ಆದರ್ಶಗಳನ್ನು ಸುಪಸ್ಮೂಲ ವ್ಯಕ್ತಿಗಳಿಂದ ಅನುಭಾವದ ನುಡಿಗಳನ್ನು ಕೇಳಿಸುವ ಮೂಲಕ ಸುಮಧುರ ಜೀವನವನ್ನು ಕಟ್ಟಿಕೊಳ್ಳಲು ಪ್ರೇರಿಪಿಸುವ ಈ ಕಾರ್ಯಕ್ರಮದ ಸದುಪಯೋಗವನ್ನು ಜನತೆ ಪಡೆದುಕೊಳ್ಳಬೇಕು ಎಂದು ಹೇಳಿದರು. ಬಸವ ಶಿವಯೋಗ ಸಮಿತಿಯ ಅಧ್ಯಕ್ಷ ಸಂಗಣ್ಣ ಟೆಂಗಿನಕಾಯಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಡೋಹರ ಕಕ್ಕಯ್ಯನವರ ಬಗ್ಗೆ ಕರಮುಡಿಯ ಶಾಂತಮ್ಮ ಕಂಪಗೌಡರ ಸರ್ಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾದ ಬಸವರಾಜ ಕರಾಟೆ ಉಪನ್ಯಾಸ ನೀಡಿದರು. ಮರುಳ ಶಂಕರದೇವ ಹಾಗೂ ಕಿನ್ನರಿ ಬೊಮ್ಮಯ್ಯನವರ ಜಯಂತಿಯನ್ನು ಆಚರಿಸಲಾಯಿತು. ವಕೀಲರ ಸಂಘದ ಮಾಜಿ ಅಧ್ಯಕ್ಷ ಎಸ್.ಎನ್. ಶ್ಯಾಗೋಟಿ, ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಶೇಖರಗೌಡ ಉಳ್ಳಾಗಡ್ಡಿ ಮಾತನಾಡಿದರು.

ಪರಿವರ್ತನೆಯ ಪರಿಕಲ್ಪನೆಯ ಕೃತಿಕಾರರಾದ ದಾದೇಸಾಬ ಮುದಗಲ್ಲರವರನ್ನು ಸನ್ಮಾನಿಸಲಾಯಿತು. ಡೋಹರ ಸಮಾಜದ ಅಧ್ಯಕ್ಷ ನಾರಯಣಪ್ಪ, ರಾಜಶೇಖರನಿಂಗೋಜಿ, ಬಸವರಾಜ ಗುಳಗುಳಿ, ಶರಣೇಶ ಉಳ್ಳಾಗಡ್ಡಿ, ವೀರುಪಾಕ್ಷಪ್ಪ ಹನುಮಶೆಟ್ಟಿ, ಡಾ.ಶಿವನಗೌಡ ದಾನರಡ್ಡಿ, ಸಿದ್ಧಲಿಂಗಪ್ಪ ಶ್ಯಾಗೋಟಿ, ವೀರೇಶ ಟೆಂಗಿನಕಾಯಿ ಮತ್ತಿತರರು ಇದ್ದರು.

ಫಲಪುಷ್ಪ ಪ್ರದರ್ಶನ ರೈತರಿಗೆ ಅನುಕೂಲ

ಕಲಬುರಗಿ: ತೋಟಗಾರಿಕೆಯ ಇಲಾಖೆ ತುಂಬಾ ಪರಿಶ್ರಮ ಹಾಕಿ ಒಳ್ಳೆಯ ಫಲಪುಷ್ಪ ಪ್ರದರ್ಶನ ಏರ್ಪಡಿಸಿದೆ. ಇದು ರೈತಾಪಿ ವರ್ಗದವರಿಗೆ ತುಂಬಾ ಅನುಕೂಲವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಜಗದೇವ್ ಗುತ್ತೇದಾರ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶ್ರೀಶರಣಬಸವೇಶ್ವರ ಕೆರೆ ಅಭಿವೃದ್ಧಿ ಪ್ರಾಧಿಕಾರ ಹಾಗೂ ತೋಟಗಾರಿಕೆ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ಎರಡು ದಿನಗಳ ಫಲಪುಷ್ಪ ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ತರಕಾರಿ, ಹಣ್ಣು ಬೆಳೆಯಲು ಹೊಸ ತಳಿ, ಪ್ರಯೋಗ ಕುರಿತು ಅವರಿಗೆ ಜಾಗೃತಿ ಮೂಡಿಸಲು ಸ್ಟಾಲ್ ಸಹ ಹಾಕಿದ್ದಾರೆ. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಇದರ ಲಾಭ ಪಡೆಯಬೇಕು. ಬೆಂಗಳೂರು,



ಮೈಸೂರಿನಲ್ಲಿ ಇಂತಹ ಪ್ರದರ್ಶನ ಕಾಣಲು ಸಿಗುತ್ತಿತು. ಇದೀಗ ಕಲಬುರಗಿಯಲ್ಲಿಯೆ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿದ್ದು ಒಳ್ಳೆಯದು ಎಂದರು.

ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್ ಮಾತನಾಡಿ, ಎರಡು ದಿನ ಫಲಪುಷ್ಪ ಪ್ರದರ್ಶನ ಸರ್ವರಿಗೂ ಉಚಿತವಾಗಿದೆ. ವಿಶೇಷವಾಗಿ ನಗರದ ನಿವಾಸಿಗಳು ಶಾಲಾ ಮಕ್ಕಳು ಭೇಟಿ ನೀಡಿ ತರಕಾರಿ-ಹಣ್ಣುಗಳಲ್ಲಿ ಮೂಡಿಬಂದ ಕಲಾಕೃತಿಗಳನ್ನು ಕಣ್ತುಂಬಿಕೊಳ್ಳಬಹುದು ಎಂದರು.

ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಮಾತನಾಡಿ, ಮೂರು ವರ್ಷಗಳ ನಂತರ ಸಂವಿಧಾನ ವಿಷಯಾಧಾರಿತ ಕೇಂದ್ರಿತವಾಗಿ ಎರಡು ದಿನಗಳ ಕಾಲ ಫಲ-ಪುಷ್ಪ ಪ್ರದರ್ಶನ ಏರ್ಪಡಿಸಲಾಗಿದೆ. ಸ್ವಾತಂತ್ರ್ಯ ಹೋರಾಟಗಾರರು, ಪ್ರವಾಸಿ ತಾಣಗಳು, ಧಾರ್ಮಿಕ ಕ್ಷೇತ್ರಗಳು ಎಲ್ಲವು ಕಲಾವಿದನ ಕೆತ್ತನೆಯಲ್ಲಿ ಮೂಡಿಬಂದಿವೆ. ಅದ್ಭುತ ಪ್ರದರ್ಶನ ಇದಾಗಿದೆ. ಶಾಲಾ ಮಕ್ಕಳು, ಯುವಕರು ಬಂದು ನೋಡಬೇಕು ಎಂದರು.

ಜಿಪಂ ಸಿಇಒ ಭಂವರ್ ಸಿಂಗ್ ಮೀನಾ, ಜಿಲ್ಲಾ ಕೃಷಿ ಸಮಾಜದ ಅಧ್ಯಕ್ಷ ಸಿದ್ರಾಮಪ್ಪಾ ಪಾಟೀಲ ಧಂಗಾಪೂರ, ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಮಲ್ಲಿಕಾರ್ಜುನ ಭೂಶೆಟ್ಟಿ, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕಸಂತೋಷಇನಾಮದಾರ್, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರುಗಳಾದ ಬಾಬುರಾವ ಪಾಟೀಲ, ಸುರೇಂದ್ರನಾಥ, ಶಂಕರಗೌಡ, ಸಂತೋಷ ತಾಂಡುರ, ರಾಜಕುಮಾರ, ಎಂ.ಡಿ ಸಮಿಯೋದ್ದಿನ್, ಅಜಿಮೋದ್ದಿನ್, ಶಂಕರ ಪಟವಾರಿ, ವೆಂಕಟ ಸಜ್ಜನ ಸೇರಿದಂತೆ ತೋಟಗಾರಿಕೆ ಇಲಾಖೆಯ ಇನ್ನಿತರ ಅಧಿಕಾರಿ-ಸಿಬ್ಬಂದಿಗಳು ಹಾಜರಿದ್ದರು.

ಕಠಿಣ ಪರಿಶ್ರಮದಿಂದ ಸಾಧನೆ ಕಟ್ಟಿಟ್ಟ ಬುತ್ತಿ: ನ್ಯಾ.ರಾಜೇಶ್

ಬಳ್ಳಾರಿ: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶೇ.99ರಷ್ಟು ಕಠಿಣ ಪರಿಶ್ರಮ, ಕೇವಲ ಶೇ.1 ರಷ್ಟು ಅದೃಷ್ಟದಿಂದ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಧೀಶ ರಾಜೇಶ್ ಎನ್.ಹೊಸಮನೆ ಹೇಳಿದರು.

ನಗರದ ಜಿಪಂ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಶ್ರಯದಲ್ಲಿ ಬಳ್ಳಾರಿ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿಲಯಾರ್ಥಿಗಳಿಗೆ ಶನಿವಾರ ಹಮ್ಮಿಕೊಂಡಿದ್ದ ಸ್ಪರ್ಧಾತ್ಮಕ ಪರೀಕ್ಷೆ ಹಾಗೂ ವೃತ್ತಿ ಮಾರ್ಗದರ್ಶನ ಕುರಿತು ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು. ಜಿಪಂ ಉಪಕಾರ್ಯದರ್ಶಿ ಶಶಿಕಾಂತ್ ಶಿವಪುರೆ ಮಾತನಾಡಿ, ಜೀವನವೇ



ಒಂದು ಸ್ಪರ್ಧೆ. ಆ ಸ್ಪರ್ಧೆಯಲ್ಲಿ ನಾವೆಲ್ಲಾ ಸ್ಪರ್ಧಾ ಆಕಾಂಕ್ಷಿಗಳು. ಜೀವನದಲ್ಲಿ ನಾವು ಏನಾಗಬೇಕು ಎಂಬುದನ್ನು ನಮ್ಮ ಸಾಮರ್ಥ್ಯದ ಮೂಲಕ ದೃಢ ನಿರ್ಧಾರದೊಂದಿಗೆ ಶ್ರದ್ಧೆಯಿಂದ ಅಭ್ಯಾಸ ಮಾಡಿದಾಗ ಮಾತ್ರ ಏನಾದರೂ ಸಾಧನೆ ಮಾಡಲು ಸಾಧ್ಯ ಎಂದು ಹೇಳಿದರು.

ಶ್ರೀಮೇಧಾ ಡಿಗ್ರಿ ಕಾಲೇಜಿನ ಬಿಸಿಎ ವಿಭಾಗದ ಮುಖ್ಯಸ್ಥ ಹಾಗೂ ಜೆಸಿಐ ಇಂಡಿಯಾದ ರಾಷ್ಟ್ರೀಯ ತರಬೇತುದಾರ, ಮಕ್ಕಳಸಲಹೆಗಾರಜೆ.ಸಿ.ಮಂಜುನಾಥ ಬಳ್ಳೊಳ್ಳಿ, ಬಳ್ಳಾರಿಯ ಭೀಮರಾವ್ ಐ.ಎ.ಎಸ್ ಮತ್ತು ಕೆ.ಎ.ಎಸ್ ಸ್ಟಡಿ ಸರ್ಕಲ್ ನ ನಿರ್ದೇಶಕ ಶೇಖರಪ್ಪ ಮತ್ತು ಸಂಡೂರು ಎಸ್.ಇ.ಎಸ್ ಶಿಕ್ಷಣ ಸಂಸ್ಥೆಯ ಡಾ.ಜಗದೀಶ್ ಬಸಾಪುರ ಅವರು ಸ್ಪರ್ಧಾತ್ಮಕ ಪರೀಕ್ಷೆ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಜಿಪಂ ಮುಖ್ಯ ಲೆಕ್ಕಾಧಿಕಾರಿ ವಿನೋದ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಜಲಾಲಪ್ಪ ಎ.ಕೆ. ಸೇರಿದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ, ನಿಲಯ ವಿದ್ಯಾರ್ಥಿಗಳು, ಇತರರು ಉಪಸ್ಥಿತರಿದ್ದರು.

ಮಾ.1ರಂದು ನಿಖಿಲ್ ಕುಮಾರ್‌ಸ್ವಾಮಿ ಹಗರಿಬೊಮ್ಮನಹಳ್ಳಿಗೆ

ಹ'ಗ'ರಿಬೊಮ್ಮ'ನ'ಹ'ಳ್ಳಿ: ಮಾ.1ರಂದು ಜೆಡಿಎಸ್ ಪಕ್ಷದ ಯುವ ನಾಯಕ ನಿಖಿಲ್ ಕುಮಾರ್ ಸ್ವಾಮಿ ಹಗರಿಬೊಮ್ಮನಹಳ್ಳಿ ಆಗಮಿಸುತ್ತಿದ್ದಾರೆ ಎಂದು ಕ್ಷೇತ್ರದ ಶಾಸಕರಾದ ಕೆ ನೇಮಿ ರಾಜ್ ನಾಯ್ಕ್ ತಿಳಿಸಿದರು.

ಪಟ್ಟಣದ ಶಾಸಕರ ಕಛೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಜೆಡಿಎಸ್ ಪಕ್ಷದ 25 ನೇ ವರ್ಷದ ಬೆಳ್ಳಿ ಹಬ್ಬದ ಆಚರಣೆ ಹಾಗೂ ಜೆಡಿಎಸ್ ಪಕ್ಷದ ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾಗಿರುವ ಬಾದಾಮಿ ಮೃತ್ಯುಂಜಯ ಅವರ ಪದಗ್ರಹಣ ಸಮಾರಂಭದ ಜೊತೆಗೆ ರಾಜ್ಯ ಸರ್ಕಾರದ ಜನ ವಿರೋಧಿ ನಿಲುವುಗಳ ರಾಜ್ಯ ಸರ್ಕಾರದ ನ್ಯೂನತೆಗಳ ಬಗ್ಗೆ ಜನತೆಗೆ ತಿಳಿಸುವ ಉದ್ದೇಶದಿಂದ ಕಾರ್ಯಕ್ರಮವನ್ನು ಯು. ಕೆ ಕೊಟ್ರಬಸಪ್ಪ ಜಾಗದಲ್ಲಿ



ಆಯೋಜಿಸಲಾಗಿದೆ.

ಈ ಕಾರ್ಯಕ್ರಮಕ್ಕೆ ಜೆಡಿಎಸ್ ಪಕ್ಷದ ಶಾಸಕಾಂಗ ನಾಯಕರಾದ ಸುರೇಶ್ ಬಾಬು, ಕೋರ್ ಕಮಿಟಿ ಅಧ್ಯಕ್ಷ ಬಂಡೆಪ್ಪ ಕಾಶಂಪುರ, ಪ್ರದಾನ ಕಾರ್ಯದರ್ಶಿ ವೆಂಕಟರಾವ್ ನಾಡಗೌಡ, ಹಾಗೂ ಜೆಡಿಎಸ್ ಶಾಸಕರು ಮಾಜಿ ಶಾಸಕರು ಪಕ್ಷದ ಹಿರಿಯ ಮು ಖಂಡರು ಪಾಲ್ಗೊಳ್ಳಲಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರುವರ್ಷ ಕಳೆಯುತ್ತಾ ಬಂದರು ಬಡವರಿಗೆ ಮನೆ ಕೊಡಲಿಕ್ಕೆ ಆಗುತ್ತಿಲ್ಲ. ಬಡ ರೈತರಿಗೆ ಗಂಗಾ ಕಲ್ಯಾಣ ಯೋಜನೆ ಸಿಗುತ್ತಿಲ್ಲ, ಸ್ವಯಂ ಉದ್ಯೋಗಕ್ಕೆ ಸಾಲ ಸೌಲಭ್ಯ ಸಿಗುತ್ತಿಲ್ಲ, ಬಡವರಿಗೆ ಸಬ್ಸಿಡಿ ಲೋನ್ ಗಳು ಸಿಗುತ್ತಿಲ್ಲ ಎಸ್ ಸಿ ಎಸ್ ಟಿ ಸಮುದಾಯಗಳಿಗೆ ಮೀಸಲಿಟ್ಟಿದ್ದ

12 ಸಾವಿರ ಕೋಟಿ ಹಣವನ್ನು ಬೇರೆ ಯೋಜನೆಗಳಿಗೆ ಬಳಸಿದ್ದಾರೆ. ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್ ಸಿಗುತ್ತಿಲ್ಲ ವೃದ್ಯಾಪ್ಯ ಮಾಶಾಸನ, ಮಹಿಳೆಯರಿಗೆ ಗೃಹಲಕ್ಷ್ಮಿ ಹಣ ಸರಿಯಾಗಿ ಬರುತ್ತಿಲ್ಲ. ಉಚಿತ ಕರೆಂಟ್ ಎಂದು ಘೋಷಿಸಿ ವಿದ್ಯುತ್ ಬಿಲ್ ಧರ ಏರಿಕೆ ಬಸ್ ಧರ ಏರಿಕೆ ಮಾಡುವುದಲ್ಲದೆ ಬಿ ಖಾತಾ ಕೊಡುತ್ತಿವಿ ಒಮ್ಮೆ ದುಡ್ಡು ಕಟ್ಟಿಸಿಕೊಳ್ಳುತ್ತಾರೆ. ಎ ಖಾತಾ ಮಾಡುತಿವಿ ಎಂದು ಮತ್ತೊಂದು ಬಾರಿ ದುಡ್ಡು ಕಟ್ಟಿಸಿಕೊಳ್ಳುತ್ತಾರೆ. ಜನರ ಹತ್ತಿರ ಎರಡೂರೆಡು ಬಾರಿ ದುಡ್ಡು ಕಟ್ಟಿಸಿಕೊಳ್ಳುವ ಮೂಲಕ ಹಗಲು ದರುಡೆ ಮಾಡುತ್ತಿದೆ ಎಂದು ಆರೋಪಿಸಿದರು.

ಶಾಲೆಯ ವಿದ್ಯಾರ್ಥಿಗಳಿಗೆ ಪ್ರವಾಸಕ್ಕೆ ಕಳುಹಿಸುವಾಗ ಯಾವುದೇ ರೀತಿಯ ತಾರತಮ್ಯ ಇಲ್ಲದೇ ಎಲ್ಲಾ ವರ್ಗದ ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಕಳುಹಿಸುವ ವ್ಯವಸ್ಥೆ ಆಗಬೇಕು ಎಂದು ಆಗ್ರಹಿಸಿದರು.

ಜಿಲ್ಲಾಧ್ಯಕ್ಷ ಬಾದಾಮಿ ಮೃತ್ಯುಂಜಯ, ಉಪಾಧ್ಯಕ್ಷ ಕೃಷ್ಣಮೂರ್ತಿ ಮೂರ್ತಿ ಶೆಟ್ರು ತಾಲೂಕು ಅಧ್ಯಕ್ಷ ವೈ. ಮಲ್ಲಿಕಾರ್ಜುನ, ಕಾರ್ಯದರ್ಶಿ ಪಾಂಡು ರಂಗ ನಾಯ್ಕ್ ಮುಖಂಡ ಕನ್ನಿಹಳ್ಳಿ ಚಂದ್ರಶೇಖರ್ ಬ್ಯಾಟಿ ನಾಗರಾಜ ಸಿದ್ದರಾಜು ಇತರರು ಇದ್ದರು.

13ನೇ ಚಿತ್ರಸಂತೆ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಅದ್ದೂರಿ ಚಾಲನೆ

ಕಲೆಯಿಂದ ಮಾನವನ ಸೃಜನಶೀಲತೆ ವೃದ್ಧಿ

ಕಲಬುರಗಿ: ಕಲೆ ಮಾನವ ಜೀವನದ ಅವಿಭಾಜ್ಯ ಅಂಗ, ಸಮಾಜದ ಸಂಸ್ಕೃತಿ ಮತ್ತು ಭಾವನೆಗಳನ್ನು ವ್ಯಕ್ತಪಡಿಸುವ ಶಕ್ತಿಯುತ ಮಾಧ್ಯಮವಾಗಿದೆ. ಚಿತ್ರಕಲೆ, ಸಂಗೀತ, ನೃತ್ಯ, ನಾಟಕ ಸೇರಿದಂತೆ ವಿವಿಧ ರೂಪಗಳಲ್ಲಿ ಕಲೆ ವ್ಯಕ್ತವಾಗುತ್ತಿದ್ದು, ಕಲೆಮಾನವನಸೃಜನ ಶೀಲತೆಯನ್ನು ಬೆಳೆಸುವುದಲ್ಲದೆ, ಸಮಾಜದಲ್ಲಿ ಸೌಹಾರ್ದತೆ ಮತ್ತು ಸಾಂಸ್ಕೃತಿಕ ಏಕತೆಯನ್ನು ಬಲಪಡಿಸುವ ಪ್ರಮುಖ ಸಾಧನವಾಗಿದೆ ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅಭಿಮತ ವ್ಯಕ್ತಪಡಿಸಿದರು.

ನಗರದ ಕನ್ನಡ ಭವನದ ಆವರಣದ ಬಾಪೂಗೌಡ ದರ್ಶನಾಪುರ ರಂಗಮಂದಿರದಲ್ಲಿ ದೃಶ್ಯ ಬೆಳಕು ಸಾಂಸ್ಕೃತಿಕ ಸಂಸ್ಥೆಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಸಹಯೋಗದೊಂದಿಗೆ ಆಯೋಜಿಸಿದ್ದ 13ನೇ ಕಲಬುರಗಿ ಚಿತ್ರ ಸಂತೆ



> ಜಿಲ್ಲೆಯ ಸಾಕಷ್ಟು ಗೃಹಿಣಿಯರು, ಶಿಕ್ಷಕರು ಹಾಗೂ ಮಕ್ಕಳು ತಮ್ಮ ಪ್ರತಿಭೆಯನ್ನು ಚಿತ್ರದ ಮೂಲಕ ಅನಾವರಣ ಮಾಡಿದ್ದಾರೆ. ಕಲಬುರಗಿಯಲ್ಲಿ ಕಲೆಗೆ ಕೊರತೆಯಿಲ್ಲ ಎಂಬುದು ಇಂದಿನ ಚಿತ್ರಸಂತೆಯಿಂದ ಸಾಬೀತಾಗಿದೆ.
> ■ ಸಾಹಿತ್ಯಾ ಆಲದಕಟ್ಟಿ, ಸಹಾಯಕ ಆಯುಕ್ತೆ

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತಾಡಿದ ಅವರು, ಜಿಲ್ಲೆಯು ಪ್ರತಿಭೆಗಳ ಗಣಿಯಾಗಿದ್ದು, ಇಲ್ಲಿನ ಕಲಾವಿದರಲ್ಲಿ ಅದ್ಭುತವಾದ ಹುಮ್ಮಸ್ಸು ಮತ್ತು ಕಲಾ ನೈಪುಣ್ಯತೆ ಇದೆ. ಇಂತಹ ವೇದಿಕೆಗಳು ಕಲಾವಿದರ ಪ್ರತಿಭೆಯನ್ನು ಜಗತ್ತಿಗೆ ಪರಿಚಯಿಸಲು ಸಹಕಾರಿಯಾಗುತ್ತವೆ ಎಂದರು.

ಹಿರಿಯ ಚಿತ್ರಕಲಾವಿದರು ಮತ್ತು ಚೈತನ್ಯಮಯ ಟ್ರಸ್ಟ ನಿರ್ದೇಶಕ ಎ.ಎಸ್.ಪಾಟೀಲ ಮಾತನಾಡಿ, ಚಿತ್ರಸಂತೆ ಆರಂಭವಾಗಿ 21 ವರ್ಷಗಳಾಗಿದ್ದರೆ, ಕಲಬುರಗಿಯಲ್ಲಿ 2014 ರಿಂದ ನಿರಂತರವಾಗಿ ನಡೆಯುತ್ತಿದೆ. ಜಿಲ್ಲೆಯಲ್ಲಿ ಮಾತ್ರ ಸತತ 12 ವರ್ಷಗಳಿಂದ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ. ಈ ಯಶಸ್ಸಿನ ಹಿಂದೆ ಒಬ್ಬ ವ್ಯಕ್ತಿಯ ಶ್ರಮವಿಲ್ಲ, ಬದಲಾಗಿ ಎಲ್ಲಾ ಕಲಾ ಸಂಸ್ಥೆಗಳು, ಹಿರಿಯ ಕಲಾವಿದರು ಮತ್ತು ಸಂಘಟನೆಗಳ ಒಗ್ಗಟ್ಟಿನ ಶ್ರಮವಿದೆ ಎಂದು ತಿಳಿಸಿದರು. ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಶರಣಬಸಪ್ಪ ಪಪ್ಪಾ ಬಿಸಿಲು ಆರ್ಟ ಗ್ಯಾಲರಿ ಮುಖ್ಯಸ್ಥ ವಿ.ಬಿ.ಬಿರಾದಾರ ಮಾತನಾಡಿದರು.

ಹಿರಿಯ ಕಲಾವಿದ ಬಸವರಾಜ್ ಜಾನೆ, ಆನಂದ ದಂಡೋತಿ, ಕಸಾಪ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ್ ತೇಗಲತಿಪ್ಪಿ, ಖ್ಯಾತ ವಾಣಿಜ್ಯೋದ್ಯಮಿ ರಾಧೇಶ್ಯಾಮ ಠಾಕೂರ, ಎಂ.ಎಚ್.ಬೆಳಮಗಿ, 13ನೇ ಕಲಬುರಗಿ ಚಿತ್ರಸಂತೆ ಸಂಯೋಜಕ ಡಾ.ಪರಶುರಾಮ್ ಪಿ. ಉಪಸ್ಥಿತರಿದ್ದರು.

ಪ್ರಾಣಿ-ಪಕ್ಷಿಗಳಿಗೆ ನೆರವಾದ ಅರಣ್ಯ ಸಿಬ್ಬಂದಿ

ನೀರಿಗಾಗಿ ಕೃಷ್ಣಮೃಗಗಳ ಪರದಾಟ

▸ಜೆ.ವಿ.ದೀಪಾವಳಿ

◆**ರಾಣೇಬೆನ್ನೂರ:** ಬೇಸಿಗೆ ಮುನ್ನವೇ ರಾಜ್ಯದ ವಿವಿಧ ಭಾಗಗಳಲ್ಲಿ ಮನುಕುಲದಿಂದ ಹಿಡಿದು ವನ್ಯ ಜೀವಿಗಳೂ ಸಹ ನೀರಿಗಾಗಿ ಹಾಹಾಕಾರ ಪಡುತ್ತಿರುವ ಸನ್ನಿವೇಶಗಳು ಕಂಡು ಬರುತ್ತಿವೆ. ಅದರಲ್ಲೂ ರಾಜ್ಯದಲ್ಲಿಯೇ ಉತ್ತರ ಕರ್ನಾಟಕದ ಹೆಬ್ಬಾಗಿಲು ಎಂದು ಹೆಸರುವಾಸಿಯಾಗಿರುವ ರಾಣೇಬೆನ್ನೂರಿನ ಕೃಷ್ಣಮೃಗ ಅಭಯಾರಣ್ಯವೂ ಒಂದು ಇಲ್ಲಿಯ ವನ್ಯ ಜೀವಿಗಳಿಗೆ ನೀರುಣಿಸಲು ಅರಣ್ಯ ಸಿಬ್ಬಂದಿ ಪಡುತ್ತಿರುವ ಶ್ರಮ ನಿಜಕ್ಕೂ ಶ್ಲಾಘನೀಯವಾಗಿದೆ.

ಕೃಷ್ಣಮೃಗ ಅಭಯಾರಣ್ಯದಲ್ಲಿ 10ಸಾವಿರಕ್ಕೂ ಅಧಿಕ ಜಿಂಕೆಗಳನ್ನು ಹೊಂದಿರುವ ವಿಶಾಲವಾದ ಅರಣ್ಯಪ್ರದೇಶ ಇದಾಗಿದೆ. ಆದರೆ, ಮಳೆಯ ಕೊರತೆಯಿಂದಾಗಿ ಅರಣ್ಯ ಪ್ರದೇಶದಲ್ಲಿರುವ ಹಳ್ಳ ಕೊಳ್ಳಗಳು ಸಂಪೂರ್ಣ ಬತ್ತಿ ಬರಿದಾಗಿರುವ ದೃಶ್ಯ ಇಲ್ಲಿ ಕಂಡು ಬರುತ್ತಿದೆ. ಇದರಿಂದಾಗಿ ಪ್ರಾಣಿ ಪಕ್ಷಿಗಳಿಗೆ ಹಾಗೂ ಕೃಷ್ಣಮೃಗಗಳಿಗೆ ನೀರಿನ ದಾಹ ತೀರಿಸಲು ಅರಣ್ಯ ಇಲಾಖೆಯ ಸಿಬ್ಬಂಧಿಗಳು ಹರಸಾಹಸ ಪಡುತ್ತಿರುವುದು ಕಂಡು ಬರುತ್ತಿದೆ.

ಕೃಷ್ಣಮೃಗ ಅಭಯಾರಣ್ಯವು ಒಟ್ಟು 11950 ಹೆಕ್ಟೇರ್ ವ್ಯಾಪ್ತಿಯ ಪ್ರದೇಶವನ್ನು ಹೊಂದಿದ್ದು, 2015ರ ವರದಿಯ ಪ್ರಕಾರ 7100ಕ್ಕೂ ಅಧಿಕ ಕೃಷ್ಣಮೃಗಗಳು ಜಿಂಕೆ, ಕತ್ತೆಕಿರುಬ, ನರಿ, ತೋಳ, ಕಾಡುಹಂದಿ, ಗುಳ್ಳೆನರಿ, ಮಂಗಗಳು ಸೇರಿದಂತೆ ನೂರಾರು ಬಗೆಯ ಪಕ್ಷಿಗಳು ಅಭಯಾರಣ್ಯದಲ್ಲಿ ಕಂಡು ಬರುತ್ತವೆ. ಆಗಾಗ ಚಿರತೆಗಳೂ ಸಹ ಇಲ್ಲಿ ಕಾಣಿಸಿಕೊಳ್ಳುತ್ತವೆ. ಹೀಗಾಗಿ ಇಲ್ಲಿ ವಾಸಿಸುವ ವನ್ಯ ಜೀವಿಗಳಿಗೆ ನೀರು ಅತ್ಯವಶ್ಯಕವಾಗಿದ್ದು ಅವಗಳಿಗೆ ನೀರುಣಿಸಲು ಅಲ್ಲಲ್ಲಿ ನೀರಿನ ತೊಟ್ಟಿಗಳನ್ನು ನಿರ್ಮಿಸಿ ನೀರು ತುಂಬಿಸಲಾಗುತ್ತಿದೆ. ಬೋರ್ ವೆಲ್ ಮೂಲಕ ನೀರನ್ನು ಟ್ರ್ಯಾಕ್ಟರ್ ಟ್ಯಾಂಕರ್‌ಗಳಿಗೆ ತುಂಬಿಸಿ ಟ್ಯಾಂಕರ್ ಮೂಲಕ ಸಿಬ್ಬಂದಿ ಕಾಡಿನಲ್ಲಿರುವ ಎಲ್ಲ ತೊಟ್ಟಿಗಳಿಗೂ ನೀರು ತುಂಬಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದು ಕಂಡು ಬರುತ್ತಿದೆ.

ಕಳೆದ ವರ್ಷ ಹಿಂಗಾರು ಮಳೆ ಕೈ ಕೊಟ್ಟ ಪರಿಣಾಮ ಹಳ್ಳಕೊಳ್ಳಗಳು ಸಂಪೂರ್ಣ ಬತ್ತಿ ಬರಿದಾಗಿವೆ. ಇದರಿಂದಾಗಿ ಬೇಸಿಗೆ ಪ್ರಾರಂಭದಲ್ಲಿಯೇ ಇಲ್ಲಿಯ ಸಿಬ್ಬಂದಿಗಳು ಒಟ್ಟು 42 ನೀರಿನ ತೊಟ್ಟಿಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಿ ಪ್ರಾಣಿ ಪಕ್ಷಿಗಳ ನೀರಿನ ದಾಹ ತೀರಿಸುತ್ತಿದ್ದಾರೆ. ಮಳೆಗಾಲದಲ್ಲಿ ಮಾತ್ರ ಕೃಷ್ಣಮೃಗ ಅಭಯಾರಣ್ಯದ ಸೌಂದರ್ಯ ಸವಿಯಬಹುದು. ಮಳೆಗಾಲದಲ್ಲಿ ಹಚ್ಚ ಹಸಿರಿನಿಂದ ಕೂಡಿದ ಅರಣ್ಯ ಪ್ರದೇಶ ಹಸಿರು ಸೀರೆಯುಟ್ಟಂತೆ ಕಂಗೊಳಿಸುತ್ತದೆ. ಮಳೆಗಾಲದಲ್ಲಿ ಅಲ್ಲಲ್ಲಿ ಹುಲ್ಲಿನ ಬೀಜ ಹಾಗೂ ಇತರೆ ಕಾಳು ಕಡಿಗಳ ಬೀಜವನ್ನು ಬಿತ್ತಿ ಪ್ರಾಣಿಪಕ್ಷಿಗಳಿಗೆ ಆಹಾರ ಪೂರೈಸಲು ಮುಂದಾಗುತ್ತಾರೆ. ಬೇಸಿಗೆಯಲ್ಲಂತೂ ಆಳೆತ್ತರಕ್ಕೆ ಬೆಳದ ಗಿಡಮರಗಳನ್ನು ಬಿಟ್ಟರೆ ಇನ್ನೂಳಿದ ಎಲ್ಲ ಪ್ರದೇಶವೂ ಬರಿದಾದ ಬಂಜರು ಭೂಮಿಯಂತೆ ಒಣಗಿದ ಹುಲ್ಲಿನಿಂದ ಕಂಡು ಬರುತ್ತದೆ.

ಒಟ್ಟಿನಲ್ಲಿ ವಿಶಾಲವಾದ ಅರಣ್ಯಪ್ರದೇಶದಲ್ಲಿ ಬೇಸಿಗೆಯಲ್ಲೂ ಸಹ ಹುಲ್ಲು ಮೇವು ಹಾಗೂ ಗಿಡಗಳನ್ನು ಹಾಗೂ ಇತರೆ ಕಾಳು ಕಡಿಗಳನ್ನು ಬೆಳೆದು ವನ್ಯ ಜೀವಿಗಳಿಗೆ ಆಹಾರದ ಕೊರತೆಯನ್ನು ನೀಗಿಸುವುದರ ಜೊತೆಗೆ ನೋಡುಗರ ಕಣ್ಮನ ಸೆಳೆಯಲು ಅರಣ್ಯ ಪ್ರದೇಶವನ್ನು ಹಚ್ಚ ಹಸಿರಾಗಿರುವಂತೆ ಮಾಡಲು ಬೋರ್‌ವೆಲ್‌ಗಳ ಮೂಲಕ ನೀರು ಹಾಯಿಸುವ ಮತ್ತು ಪ್ರಾಣಿ ಪಕ್ಷಿಗಳಿಗೆ ನೀರುಣಿಸುವ ಪ್ರಯತ್ನ ಮಾಡಿದಗ ಮಾತ್ರ ಇಲ್ಲಿನ ಪ್ರಾಣಿ ಸಂಕುಲಗಳು ನಾಶವಾಗದಂತೆ ಕಂಗೊಳಿಸಲು ಸಾಧ್ಯವಾಗುತ್ತದೆ.



ಅರಣ್ಯದಲ್ಲಿ ಪ್ರಾಣಿ ಪಕ್ಷಿಗಳಿಗೆ ಆಹಾರ ಮತ್ತು ನೀರಿನ ಕೊರತೆಯಾಗದಂತೆ ನೋಡಿಕೊಂಡರೆ ಅವುಗಳು ರೈತರ ಜಮೀನಿಗೆ ಬರುವುದಿಲ್ಲ. ಕೊರತೆ ಕಂಡು ಬಂದಲ್ಲಿ ಜಿಂಕೆಗಳು ರೈತರ ಹೊಲಗಳಿಗೆ ನುಗ್ಗಿ ಬೆಳೆದ ಬೆಳೆಗಳನ್ನು ನಾಶ ಮಾಡುತ್ತವೆ. ಇದರಿಂದ ರೈತರೂ ಸಹ ಸಂಕಷ್ಟ ಅನುಭವಿಸುವಂತಾಗಿದೆ.
■ **ಶಿವಕುಮಾರ ಓಲೇಕಾರ,** ಯಕ್ಲಾಸಪುರ ಗ್ರಾಮದ ರೈತ

ಕಳೆದ ವರ್ಷ ಮಳೆ ಪ್ರಮಾಣ ಕಡಿಮೆಯಾಗಿದ್ದರಿಂದ ಅಭಯಾರಣ್ಯದಲ್ಲಿರುವ ಕೆರೆ ಕಟ್ಟೆಗಳು ಈಗಾಗಲೇ ಸಂಪೂರ್ಣವಾಗಿ ಬತ್ತಿವೆ ಮುಂಜಾಗೃತವಾಗಿ ಕೃಷ್ಣಮೃಗಗಳಿಗೆ ಹಾಗೂ ಪ್ರಾಣಿಪಕ್ಷಿಗಳಿಗೆ ನೀರಿನ ಸಮಸ್ಯೆ ಬಾರದಂತೆ ದಿನಕ್ಕೆ ಎರಡು ಮೂರು ಬಾರಿ ಎಲ್ಲ ನೀರಿನ ತೊಟ್ಟಿಗಳು ಹಾಗೂ ಬಾಣಿಗಳನ್ನು ತುಂಬಿಸಲಾಗುತ್ತಿದೆ. ಆಹಾರದ ಸಮಸ್ಯನ್ನು ನೀಗಿಸಲೂ ಸಹ ಅಲ್ಲಲ್ಲಿ ಹುಲ್ಲನ್ನು ಬೆಳೆಸಲಾಗುತ್ತಿದೆ.
■ **ಲಿಂಗಾರೆಡ್ಡಿ ಮಂಕಣಿ,** ಆರ್‌ಎಫ್‌ಒ, ವನ್ಯ ಜೀವಿ ವಲಯ ರಾಣೇಬೆನ್ನೂರ

ದ್ವಿಚಕ್ರ ವಾಹನ ಸವಾರರೇ ಹೆಚ್ಚು ಸಾವು

ಐದು ವರ್ಷಗಳಲ್ಲಿ 824 ಜೀವ ಬಲಿ

ದಿಗಂತ ವಿಶೇಷ

▸ರುದ್ರಗೌಡ ಪಾಟೀಲ

◆**ಗದಗ:** ಜಿಲ್ಲಾ ಪೊಲೀಸ್ ಇಲಾಖೆಯ ಅಂಕಿ-ಅಂಶಗಳ ಪ್ರಕಾರ, 2021ರಿಂದ 2025ರ ಡಿಸೆಂಬರ್ ವರೆಗೆ ಜಿಲ್ಲೆಯಲ್ಲಿ ಒಟ್ಟು 1,592 ರಸ್ತೆ ಅಪಘಾತಗಳು ಸಂಭವಿಸಿದ್ದು, 824 ಮಂದಿ ಕೊನೆಯುಸಿರೆಳೆದಿದ್ದಾರೆ. ಈ ಐದು ವರ್ಷಗಳ ಅಂಕಿ-ಅಂಶಗಳನ್ನು ಗಮನಿಸಿದರೆ, ದ್ವಿಚಕ್ರ ವಾಹನಗಳ ಅಪಘಾತ ಹಾಗೂ ಸಾವುಗಳ ಸಂಖ್ಯೆಯೇ ಅಧಿಕವಾಗಿದೆ.

ಈ ಐದು ವರ್ಷಗಳಲ್ಲಿ ಜಿಲ್ಲೆಯಲ್ಲಿ 819 ದ್ವಿಚಕ್ರ ವಾಹನ ಅಪಘಾತಗಳು ಸಂಭವಿಸಿ, 460 ಮಂದಿ ಸವಾರರು ಮೃತಪಟ್ಟಿದ್ದಾರೆ. 2021ರಲ್ಲಿ 144 ದ್ವಿಚಕ್ರ ಅಪಘಾತಗಳು ನಡೆದಿದ್ದರೆ, 2025ರಲ್ಲಿ ಈ ಸಂಖ್ಯೆ 189ಕ್ಕೆ ಏರಿಕೆಯಾಗಿದೆ. ಸಾವಿನ ಸಂಖ್ಯೆಯೂ 69 ರಿಂದ 114ಕ್ಕೆ ಹೆಚ್ಚಾಗಿರುವುದು ಅಪಘಾತಗಳ ತೀವ್ರತೆಯನ್ನು ತೋರಿಸುತ್ತದೆ.

ದ್ವಿಚಕ್ರ ವಾಹನಗಳಷ್ಟೇ ಅಲ್ಲದೆ, 2021ರಿಂದ 2025ರ ಡಿಸೆಂಬರ್ ವರೆಗೆ ಕಾರು, ಟ್ಯಾಕ್ಸಿ ಹಾಗೂ ವ್ಯಾನ್‌ಗಳಿಗೆ ಸಂಬಂಧಿಸಿದಂತೆ 239 ಅಪಘಾತಗಳು ಸಂಭವಿಸಿ, 122 ಮಂದಿ ಮೃತಪಟ್ಟಿದ್ದಾರೆ. 5 ವರ್ಷದಲ್ಲಿ ಭಾರೀ ವಾಹನಗಳಾದ ಟ್ರಕ್, ಲಾರಿ, ಬಸ್‌ಗಳ ಒಟ್ಟು 157 ಅಪಘಾಗಳು ಸಂಭವಿಸಿ 53 ಮಂದಿ ಮೃತಪಟ್ಟಿದ್ದಾರೆ.

ವರ್ಷ	ಅಪಘಾತ	ಸಾವು
2021	291	150
2022	329	172
2023	344	170
2024	312	163
2025	316	169
ಒಟ್ಟು	1592	824

ಅತಿ ವೇಗವೇ ಅಪಘಾತಕ್ಕೆ ಕಾರಣ: ಪೊಲೀಸ್ ಇಲಾಖೆ ನೀಡಿರುವ ಮಾಹಿತಿಯಂತೆ, ದ್ವಿಚಕ್ರ ವಾಹನ ಅಪಘಾತಗಳಿಗೆ ಪ್ರಮುಖ ಕಾರಣಗಳು ಸ್ಪಷ್ಟವಾಗಿವೆ. ಹೆಲ್ಮೆಟ್ ಧರಿಸದೇ ಬೈಕ್ ಚಲಾಯಿಸುವುದು, ಲೈಸೆನ್ಸ್ ಇಲ್ಲದ ಮಕ್ಕಳ ಕೈಗೆ ಪೋಷಕರೇ ಬೈಕ್ ನೀಡುವುದು, ಹದಿಹರೆಯದ ಮಕ್ಕಳು ಅತಿವೇಗದಲ್ಲಿ ವಾಹನ ಚಾಲನೆ ಮಾಡುವುದು, ಮದ್ಯಪಾನ ಸೇವಿಸಿ ವಾಹನ ಓಡಿಸುವುದು, ಚಾಲನೆಯ ವೇಳೆ ಮೊಬೈಲ್ ಬಳಸುವುದು ಹಾಗೂ ಟ್ರಾಫಿಕ್ ನಿಯಮಗಳನ್ನು ಪಾಲಿಸದಿರುವುದು ಅಪಘಾತಗಳಿಗೆ ಪ್ರಮುಖ ಕಾರಣಗಳಾಗಿವೆ.

ಹೆಲ್ಮೆಟ್ ಕಡ್ಡಾಯ: ತಜ್ಞರ ಅಭಿಪ್ರಾಯದಂತೆ, ಅಪಘಾತಗಳನ್ನು ತಡೆಯಲು ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ನಿಗದಿತ ವೇಗ ಮಿತಿಯಲ್ಲಿ ವಾಹನ ಚಲಾಯಿಸಬೇಕು ಹಾಗೂ ರಸ್ತೆ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಬೈಕ್‌ಗೆ ಸಂಪೂರ್ಣ ಇನ್ಶೂರೆನ್ಸ್ ಮಾಡಿಸಿಕೊಳ್ಳುವುದು, ಮದ್ಯಪಾನ ಹಾಗೂ ಮೊಬೈಲ್ ಬಳಕೆಯಿಂದ ದೂರವಿರುವುದು ಅತ್ಯಗತ್ಯ. ಲೈಸೆನ್ಸ್ ಇಲ್ಲದ ಮಕ್ಕಳಿಗೆ ಬೈಕ್ ನೀಡದಿರುವ ಜವಾಬ್ದಾರಿಯೂ ಪೋಷಕರ ಮೇಲಿದೆ.



ವಾಹನ ಸವಾರರು ರಸ್ತೆ ಸಾರಿಗೆ ನಿಯಮಗಳನ್ನು ಪಾಲಿಸಬೇಕು. ಮದ್ಯಪಾನ ಮಾಡಿ ವಾಹನ ಚಲಾಯಿಸುವುದು ಅಪರಾಧ, ಪೊಲೀಸ್ ಹಾಗೂ ಸಾರಿಗೆ ಇಲಾಖೆ ಜಂಟಿಯಾಗಿ ಹಲವು ಜಾಗೃತಿ ಅಭಿಯಾನಗಳನ್ನು ನಡೆಸಲಾಗುತ್ತಿದೆ.
■ **ರೋಹನ ಜಗದೀಶ,** ಪೊಲೀಸ್ ವರಿಷ್ಠಾಧಿಕಾರಿ

ಪ್ರತಿಯೊಬ್ಬ ಸವಾರನ ಎಚ್ಚರಿಕೆಯೇ ಅನೇಕ ಜೀವ ಉಳಿಸಬಲ್ಲದು. ಬೈಕ್ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಮನರಂಜನೆಗಾಗಿ ಅತಿವೇಗದಲ್ಲಿ ಚಾಲನೆ ಮಾಡಬಾರದು.
■ **ಮಹಾಂತೇಶ ಸಜ್ಜನ,** ಡಿವೈಎಸ್ಪಿ

ಅಧಿಕಾರಿಗಳ ಎಚ್ಚರಿಕೆ: ಜಿಲ್ಲೆಯಲ್ಲಿ ರಸ್ತೆ ಅಪಘಾತಗಳನ್ನು ತಡೆಗಟ್ಟಲು ಜಾಗೃತಿಯ ಜೊತೆಗೆ ವೈಯಕ್ತಿಕ ಹೊಣೆಗಾರಿಕೆಯೂ ಅಗತ್ಯವಾಗಿದ್ದು, ಪ್ರತಿಯೊಬ್ಬ ಸವಾರನ ಎಚ್ಚರಿಕೆಯೇ ಅನೇಕ ಜೀವಗಳನ್ನು ಉಳಿಸಬಲ್ಲದು. ಬೈಕ್ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಮನರಂಜನೆಗಾಗಿ ಅತಿವೇಗದಲ್ಲಿ ಚಾಲನೆ ಮಾಡಿ ಅಪಘಾತಕ್ಕೆ ಈಡಾಗಬಾರದು. ಪ್ರತಿ ವರ್ಷ ಬೈಕ್ ಸಂಪೂರ್ಣ ಇನ್ಶೂರೆನ್ಸ್ ಮಾಡಿಸಿಕೊಳ್ಳಬೇಕು.

ವಾಹನ ಸವಾರರು ರಸ್ತೆ ಸಾರಿಗೆ ನಿಯಮಗಳನ್ನು ಪಾಲಿಸಬೇಕು. ಮದ್ಯಪಾನ ಸೇವಿಸಿ ವಾಹನ ಚಲಾಯಿಸುವುದು ಅಪರಾಧ. ಪೊಲೀಸ್ ಹಾಗೂ ಸಾರಿಗೆ ಇಲಾಖೆ ಜಂಟಿಯಾಗಿ ಹಲವು ಜಾಗೃತಿ ಅಭಿಯಾನಗಳನ್ನು ನಡೆಸಲಾಗಿದೆ. ಸಾರ್ವಜನಿಕರೂ ಎಚ್ಚೆತ್ತುಕೊಳ್ಳಬೇಕಿದೆ.

ನಾಳೆ ಶ್ರೀರಾಮಲಿಂಗೇಶ್ವರ ದೇವಸ್ಥಾನದ ಕಳಸಾರೋಹಣ

◆**ನವಲಗುಂದ:** ಸ್ಥಳೀಯ ಇತಿಹಾಸ ಪ್ರಸಿದ್ಧ ಕಲಿಯುಗದ ಕಾಮಧೇನುವೆಂದು ಕರೆಯಲ್ಪಡುವ ರಾಮಲಿಂಗ ಓಣಿಯ ಶ್ರೀ ರಾಮಲಿಂಗೇಶ್ವರ ದೇವಸ್ಥಾನದ ಕಳಸಾರೋಹಣ, ಯಾತ್ರಿ ನಿವಾಸ, ದೇವಸ್ಥಾನ ಟ್ರಸ್ಟ್ ಕಾರ್ಯಾಲಯ ಹಾಗೂ ಭಕ್ತರಿಗಾಗಿ ನಿರ್ಮಿಸಿದ ಮನೆಗಳ ಉದ್ಘಾಟನಾ ಸಮಾರಂಭವು ಫೆ.24ರಿಂದ 26ರ ವರೆಗೆ ನಡೆಯಲಿದೆ ಎಂದು ರಾಮಲಿಂಗೇಶ್ವರ ದೇವಸ್ಥಾನ ಚಾರಿಟೇಬಲ್ ಟ್ರಸ್ಟ್ ಕಾರ್ಯದರ್ಶಿ ಯಲ್ಲಪ್ಪ ಭೋವಿ ಹೇಳಿದರು.

ಭಾನುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.24ರಂದು ಬೆಳಿಗ್ಗೆ 8 ಗಂಟೆಗೆ ಮುತ್ತೈದೆಯರಿಂದ ಜರುಗಲಿರುವ ಕಳಸದ ಉತ್ಸವವು ಕುಂಭ ಮೇಳದೊಂದಿಗೆ ವಿವಿಧ ವಾದ್ಯಗಳ ಮೆರವಣಿಗೆಯೊಂದಿಗೆ ನೀಲಮ್ಮನ ಕೆರೆಯಿಂದ ಮಾರುಕಟ್ಟೆ ಮಾರ್ಗವಾಗಿ ಗಣಪತಿ ದೇವಸ್ಥಾನ, ಗವಿಮಠ, ನಾಗಲಿಂಗಮಠ, ಭೋವಿ ಓಣಿ ಹಾಗೂ ಗುಡ್ಡದ ಕೇರಿ ಓಣಿಯ ಮೂಲಕ ಹಾಯ್ದು ರಾಮಲಿಂಗ ಕಾಮದೇವರ ದೇವಸ್ಥಾನ ತಲುಪಲಿದೆ.

ಫೆ.25ರಂದು ಸಂಜೆ 5ಗಂಟೆಗೆ ಯಾಗಶಾಲೆ ಪ್ರವೇಶ ಶೈವಪಣ್ಯಾವಾಚನ, ಋತ್ವಿಗ್ವರಣಮ್ ಪಂಚಗವ್ಯ ಶುದ್ಧಿ, ಪಂಚಗವ್ಯಪ್ರಾಶಣ, ಹೋಮ ಅಘೋರಾಶ್ರಮ ಹೋಮ, ಗ್ರಾಮಶಾಂತಿ ಹಾಗೂ ಕ್ಷೇತ್ರಾಭಿವೃದ್ಧಿಗೆ ರುದ್ರ ಹೋಮ ನಡೆಯಲಿದೆ.

ಫೆ.26ರಂದು ಬೆಳಿಗ್ಗೆ ಬ್ರಾಹ್ಮಿ ಮುಹೂರ್ತದಲ್ಲಿ ಮೂಲ ಮೂರ್ತಿಗೆ ಕಲಶಾಭಿಷೇಕ, ನ್ಯಾಸಕ್ರಮಪ್ರಧಾನ ಮೂಲ ಮಂತ್ರಹೋಮ, ಜೀವಾತ್ಮ ಪ್ರತಿಷ್ಠಾಪನೆ ಸೇರಿದಂತೆ ಶಿಖರ ಕಳಸಾರೋಹಣ ನಂತರ ಮಹಾ ಪೂರ್ಣಾಹುತಿ ಮಹಾಮಂಗಳಾರತಿ ನೆರವೇರಲಿದ್ದು, ಬೆಳಿಗ್ಗೆ 11ಗಂಟೆಗೆ ದೇವಸ್ಥಾನದಿಂದ ನಿರ್ಮಿಸಲಾದ ಯಾತ್ರಿ ನಿವಾಸ,ದೇವಸ್ಥಾನದ ಕಾರ್ಯಾಲಯ ಹಾಗೂ ಭಕ್ತರಿಗೆ ಮನೆಗಳ ಹಸ್ತಾಂತರ ಕಾರ್ಯಕ್ರಮ ನಡೆಯಲಿದ್ದು, ನೂತನ ಕಟ್ಟಡಗಳ ಉದ್ಘಾಟಕರಾಗಿ ವಿಪ ಸಭಾಪತಿ ಬಸವರಾಜ ಹೊರಟ್ಟಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪಾಲ್ಗೊಳ್ಳಲಿದ್ದು, ಸ್ಥಳೀಯ ಶಾಸಕ ಎನ್.ಎಚ್. ಕೋನರಡ್ಡಿ ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಕೆ.ಎನ್.ಗಡ್ಡಿ, ವಿನೋದ ಅಸೂಟಿ ಮತ್ತಿತರರು ಅತಿಥಿಗಳಾಗಿ ಪಾಲ್ಗೊಳ್ಳಿದ್ದಾರೆ.

ನಂತರ ಧರ್ಮ ಸಭೆಯ ಸಾನ್ನಿಧ್ಯವನ್ನು ಶಿರಹಟ್ಟಿ ಭಾವೈಕ್ಯ ಮಠದ ಶ್ರೀ ಫಕ್ಕೀರ ಸಿದ್ದರಾಮ ಸ್ವಾಮೀಜಿ ವಹಿಸಲಿದ್ದು, ಪಂಚಗ್ರಹ ಹಿರೇಮಠದ ಶ್ರೀ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ, ಗವಿಮಠದ ಶ್ರೀ ಬಸವಲಿಂಗ ಸ್ವಾಮೀಜಿ, ಮಣಕವಾಡ ದೇವಮಂದಿರದ ಶ್ರೀ ಮೃತ್ಯುಂಜಯ ಸ್ವಾಮೀಜಿ, ನಾಗಲಿಂಗ ಮಠದ ಶ್ರೀ ವೀರಯ್ಯ ಸ್ವಾಮೀಜಿ ನೇತೃತ್ವ ವಹಿಸಲಿದ್ದಾರೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ಜಲಾದಿ, ಶಶಿಧರ ಭರತಭೋಜನಮಠ, ಈರಪ್ಪ ಪುಗಶೆಟ್ಟಿ, ಓಂಕಾರಪ್ಪ ಕರಿಸಕ್ರಣ್ಣವರ, ಲೋಕಪ್ಪ ನರಗುಂದ, ಉಮೇಶ ಕುರಟ್ಟಿ, ನಾರಾಯಣ ಮಾಡಿಕರ, ಮದರಸಾಬ ಉಗರಗೋಳ, ನಾಗಪ್ಪ ಭೋವಿ, ಉಮೇಶ ಹೂಗಾರ, ಫಕಕೀರಪ್ಪ ಪೂಜಾರ, ಬಾಬಣ್ಣ ಗಾಯಕವಾಡ, ಇಮಾಮಸಾಬ ಗೋವನಕೊಪ್ಪ ಉಪಸ್ಥಿತರಿದ್ದರು.

ಕೆಎಸ್‌ಆರ್‌ಟಿಸಿ ನೌಕರ ಆತ್ಮಹತ್ಯೆ: ಮೃತ್ಯುಪತ್ರ ಬಹಿರಂಗ

◆**ಸವಣೂರ:** ಹಣಕಾಸಿನ ಸಂಕಷ್ಟ, ಮಕ್ಕಳ ಶಿಕ್ಷಣದ ಹೆಚ್ಚುತ್ತಿರುವ ವೆಚ್ಚ ಹಾಗೂ ಕರ್ತವ್ಯ ಬದಲಾವಣೆಗೆ ಅವಕಾಶ ಸಿಗದ ಬೇಸರ. ಈ ಮೂರೂ ಕಾರಣಗಳ ಜಂಜಾಟದಲ್ಲಿ ಸಿಲುಕಿದ ಕೆಎಸ್‌ಆರ್‌ಟಿಸಿ ನೌಕರನೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ದಾರುಣ ಘಟನೆ ಪಟ್ಟಣದ ಬಸ್ ನಿಲ್ದಾಣದ ಆವರಣದಲ್ಲಿ ನಡೆದಿದೆ.

ಮೃತ ದುರ್ದೈವಿ ಸವಣೂರು ಪಟ್ಟಣದ ಗೌಡ್ರ ಓಣಿಯ ಮಹದೇವಪ್ಪ ಪಕೀರಪ್ಪ ಎರೇಸೀಮಿ (49) ಎಂದು ಗುರುತಿಸಲಾಗಿದೆ. ಹಾವೇರಿ ವಿಭಾಗೀಯ ಉಪಾಧ್ಯಕ್ಷರಾಗಿ, ಸವಣೂರ ಬಸ್ ಘಟಕದ ಚಾಲಕ ಬೋಧಕರಾಗಿ ಕೆಲಸ ಮಾಡುತ್ತಿದ್ದರು. ಪ್ರಸ್ತುತ ಅಧಿಕಾರಿಗಳ ಆದೇಶದ ಮೇಲೆ ನಿಗಮದ ಇಂಧನ ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ಘಟನೆ ವಿವರ: ಫೆ.22ರಂದು ಮುಂಜಾನೆ 8 ಗಂಟೆಯಿಂದ ಮಧ್ಯಾಹ್ನ 1 ಗಂಟೆಯ ನಡುವಿನ ಅವಧಿಯಲ್ಲಿ ಪಟ್ಟಣದ ಬಸ್ ನಿಲ್ದಾಣದಲ್ಲಿರುವ ಇಂಧನ ಶಾಖೆಯ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಪತ್ತೆಯಾಗಿದೆ. ಪತ್ನಿ ಲಕ್ಷ್ಮೀ ಮಹದೇವಪ್ಪ ಎರೇಸೀಮಿ ನೀಡಿದ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೃತ್ಯುಪತ್ರದಲ್ಲಿ ಏನಿದೆ?: ಘಟನಾಸ್ಥಳದಿಂದ ಪತ್ತೆಯಾದ ಮೃತ್ಯುಪತ್ರದಲ್ಲಿ ಮಹದೇವಪ್ಪ ಅವರು ತಮ್ಮ ಆರ್ಥಿಕ ಸಂಕಷ್ಟವನ್ನು ವಿವರಿಸಿದ್ದಾರೆ. ನಾನು ಚಾಲಕ ಬೋಧಕನಾಗಿ ಕೆಲಸ ನಿರ್ವಹಿಸುತ್ತಿದ್ದು, ನನ್ನ ತಂದೆ ನಿಧನರಾದ ಬಳಿಕ ಸಾಕಷ್ಟು ಹಣದ ತೊಂದರೆ ಎದುರಿಸುತ್ತಿದ್ದೆ. ಚಾಲಕನಾಗಿ ಕೆಲಸ ನಿರ್ವಹಿಸಲು ಹಲವು ಬಾರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಇದರಲ್ಲೇ ಮುಂದುವರಿಯಬೇಕು ಎಂದು ನಿರಾಕರಿಸಿದರು. ಎರಡು ಮಕ್ಕಳ ಶಿಕ್ಷಣ ಖರ್ಚು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಈ ನಿರ್ಧಾರ ತೆಗೆದುಕೊಂಡಿದ್ದೇನೆ ಎಂದು ಬರೆದಿರುವುದು ತಿಳಿದುಬಂದಿದೆ.

ಘಟನಾ ಸ್ಥಳಕ್ಕೆ ಸೋಕೊ ತಂಡ ಭೇಟಿ ನೀಡಿ ಪರಿಶೀಲನೆ ಕೈಗೊಂಡರು.

ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಮೃತ್ಯುಪತ್ರವನ್ನು ವಶಪಡಿಸಿಕೊಂಡು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ. ಈ ಕುರಿತು ಸವಣೂರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಸಿಡಿ ಮೈದಾನದಲ್ಲಿ ಶ್ವಾನಗಳ ಹಬ್ಬ। ದೇಶಿ-ವಿದೇಶಿ ತಳಿಗಳ ಸಮ್ಮಿಲನ

ಶ್ವಾನ ಪ್ರೇಮಿಗಳ ಮಹಾಸಂಗಮ

◆**ಧಾರವಾಡ:** ಸ್ಥಳೀಯ ಕರ್ನಾಟಕ ಕಾಲೇಜಿನ ಮೈದಾನದಲ್ಲಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಪಶು ಇಲಾಖೆ ಭಾನುವಾರ ಏರ್ಪಡಿಸಿದ್ದ ಶ್ವಾನ ಪ್ರದರ್ಶನ ಮತ್ತು ಬೀದಿ ನಾಯಿಗಳ ದತ್ತು ಯೋಜನೆ, ಶ್ವಾನ ಪ್ರೇಮಿಗಳ ಮಹಾಸಂಗಮಕ್ಕೆ ಸಾಕ್ಷಿಯಾಯಿತು.

ಸಾಕುವ ಹಾಗೂ ಸಾಧು ಪ್ರಾಣಿ ನಾಯಿಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಜಿಲ್ಲಾಡಳಿತ ಸರ್ಕಾರೇತರ ಸಂಘ-ಸಂಸ್ಥೆಗಳಲ್ಲಿ ಸಹಯೋಗದಲ್ಲಿ ಹಮ್ಮಿಕೊಂಡ ಈ ಶ್ವಾನ ಪ್ರದರ್ಶನದಲ್ಲಿ ಸುಮಾರು 20 ಪ್ರಭೇದದ ನಾಯಿಗಳು ಪಾಲ್ಗೊಂಡಿದ್ದವು.

ವೈವಿಧ್ಯ ತಳಿಗಳು: ಜರ್ಮನ್ ಶೆಫರ್ಡ್, ಲ್ಯಾಬ್ರಡಾರ್, ಗೋಲ್ಡನ್ ರಿಟ್ರೈವರ್ ಅಂತಹ ಜನಪ್ರಿಯ ತಳಿಗಳ ಜೊತೆಗೆ ಬೃಹತ್ ಗಾತ್ರದ ಗ್ರೇಟ್ ಡೇನ್, ಮುದ್ದಾದ ಪಗ್, ಚುರುಕಿನ ಡಾಬರ್ ಮನ್ ಶ್ವಾನಗಳ ಪ್ರದರ್ಶನದ ಪ್ರಮುಖ ಆಕರ್ಷಣೀಯವಾಗಿದ್ದು ಬಹಳಷ್ಟು ವಿಶೇಷ.

ದೇಶಿ ಮೆರಗು: ವಿದೇಶಿ ತಳಿಗಳ ಅರ್ಭಟದ ನಡುವೆಯೇ ನಮ್ಮ ಮಣ್ಣಿನ ಹೆಮ್ಮೆಯ ಮುಧೋಳ್ ಹೌಂಡ್ ತಳಿ ಶ್ವಾನಗಳ ರಾಜ ಗಾಂಭೀರ್ಯದ ನಡುಗೆ ಎಲ್ಲರ ಗಮನ ಸೆಳೆದವು. ಈ ದೇಶಿ-ವಿದೇಶಿ ತಳಿಗಳ ಸಮ್ಮಿಲನ ನೋಡುಗರಿಗೆ ಬಹಳಷ್ಟು ರೋಮಾಂಚನ ಮೂಡಿಸಿತು.

ಸಾಹಸ ಪ್ರದರ್ಶನ: ಕೇವಲ ಅಂದವಲ್ಲದೆ, ಶ್ವಾನಗಳ ಶಿಸ್ತು ಮತ್ತು ಮಾಲೀಕರ ಆಜ್ಞೆಯು ಪಾಲಿಸುವ ರೀತಿಯೂ ನೆರದ ಪ್ರೇಕ್ಷಕರನ್ನು ಬೆರಗುಗೊಳಿಸಿತು. ಕೆಲವು ಶ್ವಾನಗಳ ಆಳೆತ್ತರಕ್ಕೂ ಜಿಗಿಯುವ ಮೂಲಕ ಶ್ವಾನಗಳು ತಮ್ಮ ಚುರುಕತನ ಸಾಬೀತುಪಡಿಸಿದ್ದು ಬಹಳ ವೈಶಿಷ್ಟ್ಯ.

ಪ್ರೇಮಿಗಳ ಸಂಭ್ರಮ: ಶ್ವಾನ ಪ್ರದರ್ಶನಕ್ಕೆ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ನೂರಾರು ಹೆಚ್ಚು ಶ್ವಾನ ಪ್ರೀಯರು ತಮ್ಮ ನಾಯಿಗಳೊಂದಿಗೆ ಆಗಮಿಸಿದ್ದರು. ಶ್ವಾನಗಳನ್ನು ಬಹು ಅಂದವಾಗಿ ಅಲಂಕರಿಸಿ, ಅವುಗಳ ಓಟ ನಡಿಗೆಯನ್ನು ತೀರ್ಪುಗಾರರ ಮುಂದೆ ಪ್ರದರ್ಶಿಸಿದರು.

ಪ್ರಮಾಣಪತ್ರ ವಿತರಣೆ: ವಿವಿಧ ಭಾಗಗಳಿಂದ ಆಗಮಿಸಿ ಪ್ರದರ್ಶನದಲ್ಲಿ ಪಾಲ್ಗೊಂಡು ವಿಜೇತ ಶ್ವಾನಗಳಿಗೆ ಬಹುಮಾನ ಮತ್ತು ಪ್ರಮಾಣ ಪತ್ರವನ್ನು ಕೂಡ ವಿತರಿಸಲಾಯಿತು. ಭಾನುವಾರ ರಜೆಯ ಮಜವನ್ನು ಕಳೆಯಲು ಬಂದ ಮಕ್ಕಳು ಶ್ವಾನಗಳ ಜೊತೆ ಸೆಲ್ಫಿ ಪಡೆದು ಸಂಭ್ರಮಿಸಿದರು.






ಪ್ರಬೇಧ ಮತ್ತು ವಿಶೇಷ!

ವೇಗವಾಗಿ ಓಡುವ ಮುಧೋಳ್ ಹೌಂಡ್, ಸ್ನೇಹಮಯಿ ಮತ್ತು ಬುದ್ಧಿವಂತ ಲ್ಯಾಬ್ರಡಾರ್ ರಿಟ್ರೈವರ್, ಮಕ್ಕಳೊಂದಿಗೆ ಬೆರೆಯುವ ಗೋಲ್ಡನ್ ರೀಟ್ರೈವರ್, ಸಣ್ಣ ಗಾತ್ರದ ಮುದ್ದಾದ ಪಗ್, ಅತ್ಯಂತ ಚುರುಕಾದ ಡಾಬರಮನ್, ಬಲಿಷ್ಠ ತಳಿ ರಾಟ್‌ವೈಲರ್, ಉತ್ತಮ ಕಾವಲು ನಾಯಿ ಬಾಕ್ಸರ್, ಆನೆ ಗಾತ್ರದ ಗ್ರೇಟ್ ಡೇನ್, ಉದ್ದು ಕೂದಲಿನ ಶಿಟ್ಜು, ಬೇಟೆ ಜಾತಿಯ ಬೀಗಲ್, ರಕ್ಷಣೆ ಮತ್ತು ಪೊಲೀಸ್ ಕೆಲಸಕ್ಕೆ ಬಳಸುವ ಜರ್ಮನ್ ಶೆಫರ್ಡ್ ಹೀಗಾಗಿ ಅನೇಕ ಪ್ರಬೇಧದ ಶ್ವಾನಗಳು ಪಾಲ್ಗೊಂಡಿದ್ದವು.

ನನ್ನ ಶ್ವಾನಕ್ಕೆ ಪ್ರಶಸ್ತಿ ಬಂದಿರುವುದು ಸಂತಸ ತಂದಿದೆ. ಇಂತಹ ಪ್ರದರ್ಶನಗಳು ಪ್ರಾಣಿ ಪ್ರೇಮಿಗಳಿಗೆ ಒಂದೆಡೆ ಸೇರಲು ಮತ್ತು ಶ್ವಾನಗಳ ಆರೈಕೆ ಬಗ್ಗೆ ಮಾಹಿತಿ ವಿನಿಮಯಕ್ಕೂ ಸಹಕಾರಿ.
■ **ಕ್ಯಾರ್ಲಿನ್,** ಶ್ವಾನ ಪ್ರಿಯೆ



ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.
ಜಾಹೀರಾತು ವ್ಯವಸ್ಥಾಪಕರು



ಕ್ರಿಮಿನಲ್ ಮಿಸಲೆನಿಯಸ ನಂ : 461/2025
ಮಾ॥ಜೆ.ಎಮ್.ಎಫ್.ಸಿ. ನ್ಯಾಯಾಲಯ ಸವಣೂರ ಇವರ ನ್ಯಾಯಾಲಯದಲ್ಲಿ
ಅರ್ಜಿದಾರರು : ಶ್ರೀಮತಿ ರಹಮತಬಿ ಕೋಂ [illegible]
ವಿರುದ್ಧ
ಎದುರುಗಾರರು : ಜನನ ವ ಮರಣ ನೋಂದಣಿ ಅಧಿಕಾರಿಗಳು ವ. ತಹಶೀಲ್ದಾರರು,ಸವಣೂರ.
ಸಾರ್ವಜನಿಕ ನೋಟೀಸು
ಇದರಲ್ಲಿ ಅರ್ಜಿದಾರರ ತಂದೆಯಾದ ಶ್ರೀ ಬಾಬುಸಾಬ ತಂದೆ ಮೌಲಾಸಾಬ ನಾಶಿಪುಡಿ ಇವರು ದಿನಾಂಕ: 10-08-1982ರಂದು ಸವಣೂರ ತಾಲೂಕಾ ಹೈಕೆ ಬಳ್ಳಾಳ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು ಇರುತ್ತದೆ. ಸದರಿಯವರ ಮರಣದ ನೋಂದಣಿ ರಜಿಸ್ಟರದಲ್ಲಿ ನೊಂದಾಯಿಸಿಕೊಳ್ಳಲು ಮಾನ್ಯ ಮೇಲ್ಕಾಣಿಸಿದ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಕಾರಣ ಸದರ ಅರ್ಜಿಗೆ ಯಾರಾದರು ತಕರಾರು ತಗ್ಗೆದೆ ಮಾಡುವವರಿದ್ದಲ್ಲಿ ಅಂತವರು ದಿನಾಂಕ:25-03-2026 ರಂದು ಮುಂಜಾನೆ 10=30 ಘಂಟೆಗೆ ಮೇಲ್ಕಾಣಿಸಿದ ಮಾನ್ಯ ನ್ಯಾಯಾಲಯದಲ್ಲಿ ತಾವಾಗಲಿ ಇಲ್ಲವೆ ತಮ್ಮ ಪರ ವಕೀಲರ ಮೂಲಕವಾಗಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸಬೇಕು.ಇಲ್ಲದೆ ಇದ್ದಲ್ಲಿ ಕಾನೂನ ಪ್ರಕಾರ ಮುಂದಿನ ಆದೇಶ ಮಾಡಲಾಗುತ್ತವೆ.ಈ ದಿನ ಅಂದರೆ ದಿನಾಂಕ:17-02-2026 ರಂದು ನ್ಯಾಯಾಲಯದ ಮೊಹರನೊಂದಿಗೆ ಕೊಡಲ್ಪಟ್ಟಿರುತ್ತದೆ.
ಸ್ಥಳ:ಸವಣೂರ
ದಿನಾಂಕ :11-02-2026
ಸಹಿ/-ಶಿರಸ್ತೇದಾರರು
ದಿವಾಣಿ ನ್ಯಾಯಾಧೀಶರು ವ 1ನೇ ವರ್ಗದ ನ್ಯಾಯಿಕ ದಂಡಾಧಿಕಾರಿಗಳು ಸವಣೂರ ಇವರ ನ್ಯಾಯಾಲಯ.
ಸಹಿ/- ಶ್ರೀ ಎಂ.ಎಂ.ಪಾಟೀಲ
ಅರ್ಜಿದಾರರ ಪರ ವಕೀಲರು

ಅಸಲು ದಾವಾ : 250/2024.
ಮಾನ್ಯ ಪ್ರಧಾನ ದಿವಾಣಿ ನ್ಯಾಯಾಧೀಶರು ಹುನಗುಂದ ಇವರ ನ್ಯಾಯಾಲಯದಲ್ಲಿ
ವಾದಿ :1. ಅಕ್ಕಮ್ಮ ಗಂ. ಮಾರುತೇಶ ಅಗಸರ ಸಾ॥ ಲವಲಸರ, ಪೋಸ್ಟ್ ಚಾಲಕಲಮದಿನ್ನಿ, ತಾ॥ ಇಲಕಲ್ಲ, ಜಿ: ಬಾಗಲಕೋಟ
-ವಿರುದ್ಧ-
ಪ್ರತಿವಾದಿ :1. ಮಾರುತೇಶ ತಂ. ರುದ್ರಪ್ಪ ಅಗಸರ ಸಾ॥ ಲವಲಸರ, ತಾ॥ ಇಲಕಲ್ಲ, ಜಿ: ಬಾಗಲಕೋಟ
ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 5 ನಿಯಮ 20(ಎ) ಅಡಿಯಲ್ಲಿ
ಗೆ,
1. ಮಾರುತೇಶ ತಂ. ರುದ್ರಪ್ಪ ಅಗಸರ
ವಯಾ: 40 ವರ್ಷ, ಉದ್ಯೋಗ: ಒಕ್ಕಲುತನ
ಸಾ॥ ಲವಲಸರ, ತಾ: ಇಲಕಲ್ಲ, ಜಿ: ಬಾಗಲಕೋಟ
.....ಎದುರುದಾರರು/ಪ್ರತಿವಾದಿ
ಈ ಕೋರ್ಟಿನ ಸಮನಸ್ಸ ಮೂಲಕ ನಿಮಗೆ ತಿಳಿಯ ಪಡಿಸುವದೇನೆಂದರೆ,
ಸದರಿ ದಾವೆಯ ವಾದಿಯು ನಿಮ್ಮ ಅಂದರೆ ಪ್ರತಿವಾದಿಯ ವಿರುದ್ಧ ಮೆ। ನ್ಯಾಯಾಲಯದಲ್ಲಿ ಅಸಲು ದಾವಾ ನಂ. 250/2024 ಅಂತಾ ಜೀವನಾಂಶ ಕೋರಿ ದಾವೆ ದಾಖಲಿಸಿದ್ದು ಇರುತ್ತದೆ. ಈ ಸದರಿ ದಾವೆಯು ದಿನಾಂಕ: 01/04/2026 ರಂದು ನಿಮ್ಮ ಹಾಜರಾತಿಗಾಗಿ ಮುಂಜಾನೆ 11-00 ಘಂಟೆಗೆ ಇರುತ್ತದೆ. ಅವತ್ತಿನ ದಿವಸ ನೀವಾಗಲಿ ಅಥವಾ ನಿಮ್ಮ ಪರ ವಕೀಲರ ಮುಖಾಂತರವಾಗಲಿ ಮೆ॥ ನ್ಯಾಯಾಲಯಕ್ಕೆ ಹಾಜರಾಗಿ ನಿಮ್ಮದ್ದು ಯಾವುದಾದರು ತಂಟೆ ತಕರಾರು ಇದ್ದಲ್ಲಿ ಸಲ್ಲಿಸಬೇಕು. ನಿಮ್ಮ ಹೇಳಿಕೆ ವ ತಕರಾರು ಇದ್ದಲ್ಲಿ ಸಲ್ಲಿಸಬೇಕು. ಒಂದು ವೇಳೆ ತಪ್ಪಿದ್ದಲ್ಲಿ ನಿಮ್ಮನ್ನು ಗೈರು ಹಾಜರಿ ಅಂತಾ ಪರಿಗಣಿಸಿ ಏಕತರ್ಫಿ ಆದೇಶ ಮಾಡಲಾಗುವದು. ಈ ಮೂಲಕ ನ್ಯಾಯಾಲಯದ ಮೊಹರಿನೊಂದಿಗೆ ಪ್ರಕಟಿಸಲಾಗಿದೆ ಅಂತಾ ಈ ಮೂಲಕ ಕೊಟ್ಟ ಕೋರ್ಟ ನೋಟಿಸ್.
ಸ್ಥಳ : ಹುನಗುಂದ
ದಿನಾಂಕ :19/02/2026.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು,
ಮೆ॥ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹುನಗುಂದ
ಸಹಿ/- (ಎಮ್.ಎಫ್. ಒಂಟೆಳ್ಳಿ)
ವಾದಿಯರ ಪರ ವಕೀಲರು

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗಂಗಾವತಿ ಇಟಿರ್ನರಿ ಕೋರ್ಟ್, ಕಾರಟಗಿ ಇವರ ಸಮಕ್ಷಮದಲ್ಲಿ
ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ: 965/2025
ಅರ್ಜಿದಾರರು :1) ಶ್ರೀಮತಿ ಅಂಬಮ್ಮ ಗಂಡ ಭೀಮಣ್ಣ ವಯಸ್ಸು 64 ವರ್ಷ, ಉದ್ಯೋಗ: ಮನೆಗೆಲಸ ಸಾ: ವಾರ್ಡ ನಂ.02, ಕಾರಟಗಿ ತಾ: ಕಾರಟಗಿ, ಜಿ ಕೊಪ್ಪಳ. 2) ಶ್ರೀಮತಿ ಲಕ್ಷ್ಮೀದೇವಿ ಕಟ್ಟಿಮನಿ ಗಂಡ ಭೋಗೇಶ ಕಟ್ಟಿಮನಿ (ತಂದೆ ಭೀಮಣ್ಣ) ವಯಸ್ಸು 36 ವರ್ಷ, ಉದ್ಯೋಗ: ಮನೆಗೆಲಸ, ಸಾ: ಚಲುವಾದಿ ಓಣಿ, ಗಂಗಾವತಿ, ತಾ: ಗಂಗಾವತಿ, ಜಿ ಕೊಪ್ಪಳ
ವಿರುದ್ಧ
ಎದುರುದಾರರು:-ಜನನ ಮರಣ ನೋಂದಣಾಧಿಕಾರಿಗಳು, ಮುಖ್ಯಾಧಿಕಾರಿಗಳು, ಪುರಸಭೆ ಕಾರ್ಯಾಲಯ, ಕಾರಟಗಿ ಮತ್ತು ಸಂಬಂಧಪಟ್ಟವರು
ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮರಣ ನೋಂದಣಿ ಕಾಯ್ದೆ 1969 ರ ಕಲಂ 13(3) ನಿಯಮ 9(3) ಮತ್ತು ಕೆ.ಆರ್.ಬಿ & ಡಿ ನಿಯಮಗಳು 1999 ರ ಅಡಿ ಯಲ್ಲಿ ಅರ್ಜಿದಾರರು ಮೃತರಾದ ದಿ ಭೀಮಣ್ಣ ತಂದೆ ಹನುಮಂತಪ್ಪ ಇಂಡಿ ಇವರ ಮರಣ ನೋಂದಣಿಗಾಗಿ ಕೋಲ ಅರ್ಜಿ ಸಲ್ಲಿಸಿದ್ದು, ಅರ್ಜಿದಾರರು ನಂ.01 ರವರು ಮೃತರಿಗೆ ಹೆಂಡತಿಯಾಗಿದ್ದು, ಅರ್ಜಿದಾರ ನಂ.02 ರವರು ಮೃತರಿಗೆ ಮಗಳಾಗಿದ್ದು, ಅರ್ಜಿದಾರರು ನಂ.01 ಮತ್ತು 02 ರವರು, ದಿ ಭೀಮಣ್ಣ ತಂದೆ ಹನುಮಂತಪ್ಪ ಇಂಡಿ ಇವರ ಮರಣ ದಿನಾಂಕ: 21/12/1996 ರಂದು ಕೊಪ್ಪಳ ಜಿಲ್ಲೆಯ ಕಾರಟಗಿ ತಾಲ್ಲೂಕಿನ ಕಾರಟಗಿ ಪಟ್ಟಣದ ವಾರ್ಡ ನಂ.02, ಕಾರಟಗಿಯಲ್ಲಿ ಮರಣ ಹೊಂದಿದ್ದು, ಸದರಿ ಅವರ ಮರಣ ನೋಂದಣಿ ಮಾಡಲು ಹಾಗೂ ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರರ ಕಾರ್ಯಾಲಯಕ್ಕೆ ಆದೇಶವನ್ನು ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರು ನಂ.01 ಮತ್ತು 02 ಇವರು ಈ ಅರ್ಜಿಯನ್ನು ದಾಖಲು ಮಾಡಿದ್ದಾರೆ. ಈ ಪ್ರಕರಣವು ದಿನಾಂಕ 23/212026ರಂದು ಮಾನ್ಯ ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಗಂಗಾವತಿಯಲ್ಲಿ ಬೆಳಿಗ್ಗೆ 11-00 ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರಾದರೂ ತಕರಾರು ಸಲ್ಲಿಸುವುದಿದ್ದರೆ ಈ ಮೇಲೆ ತಿಳಿಸಿದ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಿಗಣಿಸಿ, ಅರ್ಜಿದಾರರ ಪರ ಏಕ ಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು,
ಸ್ಥಳ : ಗಂಗಾವತಿ
ದಿ: 1/2/2008
ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಅಪಕಾಧಿಕಾರಿ
ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಗಂಗಾವತಿ ಇಟರ್ನರಿ ಕೋರ್ಟ್, ಕಾರಟಗಿ
ಅರ್ಜಿದಾರ ಪರ ವಕೀಲರು
ಎಸ್.ರಾಮಚಂದ್ರ ದೇವರಗುಡಿ

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಗಂಗಾವತಿ ಇಟರ್ನರಿ ಕೋರ್ಟ್, ಕಾರಟಗಿ ಇವರ ಸಮಕ್ಷಮದಲ್ಲಿ
ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ: 965/2025
ಅರ್ಜಿದಾರರು: ಶ್ರೀಮತಿ ಅಂಬಮ್ಮ ಗಂಡ ಭೀಮಣ್ಣ ವಯಸ್ಸು: 64 ವರ್ಷ, ಉದ್ಯೋಗ: ಮನೆಗೆಲಸ ಸಾ. ವಾರ್ಡ ನಂ.02, ಕಾರಟಗಿ ತಾ ಕಾರಟಗಿ, 5 ಕೊಪ್ಪಳ. 2) ಶ್ರೀಮತಿ ಲಕ್ಷ್ಮೀದೇವಿ ಕಟ್ಟಿಮನಿ ಗಂಡ ಭೋಗೇಶ ಕಟ್ಟಿಮನಿ (ತಂದೆ ಭೀಮಣ್ಣ ವಯಸ್ಸು 36 ವರ್ಷ, ಉದ್ಯೋಗ: ಮನೆಗೆಲಸ, ಸಾ: ಚಲುವಾದಿ ಓಣಿ, ಗಂಗಾವತಿ, ತಾ ಗಂಗಾವತಿ, 5 ಕೊಪ್ಪಳ.
ವಿರುದ್ಧ
ಎದುರುದಾರರು:ಜನನ ಮರಣ ನೋಂದಣಾಧಿಕಾರಿಗಳು, ಮುಖ್ಯಾಧಿಕಾರಿಗಳು, ಪುರಸಭೆ ಕಾರ್ಯಾಲಯ, ಕಾರಟಗಿ ಮತ್ತು ಸಂಬಂಧಪಟ್ಟವರು
ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮರಣ ನೋಂದಣಿ ಕಾಯ್ದೆ 1969 ರ ಕಲಂ 13(3) ನಿಯಮ 9(3) ಮತ್ತು ಕೆ.ಆರ್.ಬಿ &ಡಿ ನಿಯಮಗಳು 1999 ರ ಅಡಿ ಯಲ್ಲಿ ಅರ್ಜಿದಾರರು ಮೃತರಾದ ದಿ॥ಭೀಮಣ್ಣ ತಂದೆ ಹನುಮಂತಪ್ಪ ಇಂಡಿ ಇವರ ಮರಣ ನೋಂದಣಿಗಾಗಿ ಕೋಲ ಅರ್ಜಿ ಸಲ್ಲಿಸಿದ್ದು, ಅರ್ಜಿದಾರರು ನಂ.01 ರವರು ಮೃತರಿಗೆ ಹೆಂಡತಿಯಾಗಿದ್ದು, ಅರ್ಜಿದಾರ ನಂ.02 ರವರು ಮೃತರಿಗೆ ಮಗಳಾಗಿದ್ದು, ಅರ್ಜಿದಾರರು ನಂ.01 ಮತ್ತು 02 ರವರು, ದಿ॥ ಭೀಮಣ್ಣ ತಂದೆ ಹನುಮಂತಪ್ಪ ಇಂಡಿ ಇವರ ಮರಣ ದಿನಾಂಕ: 21/12/1996 ರಂದು ಕೊಪ್ಪಳ ಜಿಲ್ಲೆಯ ಕಾರಟಗಿ ತಾಲ್ಲೂಕಿನ ಕಾರಟಗಿ ಪಟ್ಟಣದ ವಾರ್ಡ ನಂ.02, ಕಾರಟಗಿಯಲ್ಲಿ ಮರಣ ಹೊಂದಿದ್ದು, ಸದರಿ ಅವರ ಮರಣ ನೋಂದಣಿ ಮಾಡಲು ಹಾಗೂ ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರರ ಕಾರ್ಯಾಲಯಕ್ಕೆ ಆದೇಶವನ್ನು ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರು ನಂ.01 ಮತ್ತು 02 ಇವರು ಈ ಅರ್ಜಿಯನ್ನು ದಾಖಲು ಮಾಡಿದ್ದಾರೆ. ಈ ಪ್ರಕರಣವು ದಿನಾಂಕ 23/212026ರಂದು ಮಾನ್ಯ ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಗಂಗಾವತಿಯಲ್ಲಿ ಬೆಳಿಗ್ಗೆ 11:00 ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರಾದರೂ ತಕರಾರು ಸಲ್ಲಿಸುವುದಿದ್ದರೆ ಈ ಮೇಲೆ ತಿಳಿಸಿದ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಿಗಣಿಸಿ, ಅರ್ಜಿದಾರರ ಪರ ಏಕ ಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು,
ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಆಪಕಾಧಿಕಾರಿ
ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಗಂಗಾವತಿ ಇಟರ್ನರಿ ಕೋರ್ಟ್, ಕಾರಟಗಿ
ಅರ್ಜಿದಾರ ಪರ ವಕೀಲರು
ಎಸ್.ರಾಮಚಂದ್ರ ದೇವರಗುಡಿ

ಇಂದಿನ ಪಂದ್ಯಗಳು

ಜಿಂಬಾಬ್ವೆ vs ವೆಸ್ಟ್ ಇಂಡೀಸ್
ಸಂಜೆ 7 (ವಾಂಖೇಡೆ, ಮುಂಬೈ)

ಸೂಪರ್-8 ಕದನ: ದಕ್ಷಿಣ ಆಫ್ರಿಕಾಗೆ 76 ರನ್ ಭರ್ಜರಿ ಜಯ | ಭಾರತಕ್ಕೆ ಮೊದಲ ಸೋಲು

ಕಿಲ್ಲರ್ ಮಿಲ್ಲರ್ ಆಫ್ರಿಕಾ ವಿನ್ನರ್!

ಅಹಮದಾಬಾದ್: ಟಿ20 ವಿಶ್ವಕಪ್ ಸೂಪರ್-8 ಪಂದ್ಯದಲ್ಲಿ ಭಾನುವಾರ ಡೇವಿಡ್ ಮಿಲ್ಲರ್ ಸ್ಫೋಟಕ ಅರ್ಧಶತಕ, ಬ್ರೇವಿಸ್ ಮತ್ತು ಸ್ಟಬ್ಸ್ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ದಕ್ಷಿಣ ಆಫ್ರಿಕಾ ರನ್‌ಗಳ ಭರ್ಜರಿ 76 ರನ್‌ಗಳಿಂದ ಜಯ ಸಾಧಿಸಿದೆ.

ಆರಂಭಿಕ ಆಘಾತದ ಹೊರತಾಗಿಯೂ ಚೇತರಿಸಿಕೊಂಡ ದಕ್ಷಿಣ ಆಫ್ರಿಕಾ ತಂಡ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 187 ರನ್ ಪೇರಿಸಿತ್ತು. 188 ರನ್ ಸವಾಲನ್ನು ಬೆನ್ನತ್ತಿದ ಭಾರತ ತಂಡ 18.5 ಓವರ್‌ಗಳಲ್ಲಿ 111 ರನ್‌ಗಳಿಗೆ ಆಲೌಟಾಯಿತು. ಅಜೇಯವಾಗಿ ಸೂಪರ್-8 ಮುನ್ನುಗ್ಗಿದ್ದ ಭಾರತ ಮೊದಲ ಸೋಲುಂಡಿದೆ.

ಮಿಲ್ಲರ್ ಆಧಾರ: ಪವರ್‌ಪ್ಲೇ ಓವರ್‌ಗಳಲ್ಲಿ ಪ್ರಮುಖ 3 ವಿಕೆಟ್‌ಗಳನ್ನು ಕಳೆದುಕೊಂಡ ದಕ್ಷಿಣ ಆಫ್ರಿಕಾ ತಂಡ ಭಾರತೀಯ ವೇಗಿಗಳ ದಾಳಿಗೆ ಪರದಾಡಿತು. ಆರಂಭಿಕ ಡಿ ಕಾಕ್(6) ಅವರನ್ನು ಕ್ಲೀನ್‌ಬೌಲ್ಡ್ ಮಾಡುವುದರ ಮೂಲಕ ವೇಗಿ ಜಸ್‌ಪ್ರೀತ್ ಬೂಮ್ರಾ ಮೊದಲ ಬ್ರೇಕ್ ನೀಡಿದರು. ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ನಾಯಕ ಏಡೆನ್ ಮಾರ್ಕ್ರಂ ಕೇವಲ 4 ರನ್ ಮಾಡಿ ಅರ್ಷದೀಪ್ ಅವರಿಗೆ ವಿಕೆಟ್ ಒಪ್ಪಿಸಿದರು. ಆರಂಭಿಕರಿಬ್ಬರೂ 2 ರನ್ ಅಂತರದಲ್ಲಿ ಪೆವಿಲಿಯನ್ ಸೇರಿದ್ದು, 12 ರನ್ ಗಳಿಸುವುಷ್ಟರಲ್ಲಿ ಇಬ್ಬರೂ ಔಟಾಗಿದ್ದರು. ಎಸೆತಕ್ಕೊಂದರಂತೆ 7 ರನ್ ಗಳಿಸಿದ ರಿಕೆಲ್ಟನ್ 4ನೇ ಓವರ್‌ನಲ್ಲಿ ಬೂಮ್ರಾಗೆ ವಿಕೆಟ್ ಒಪ್ಪಿಸಿದರು. ಕ್ರೀಸ್‌ಗಿಳಿದ ಡೇವಿಡ್ ಮಿಲ್ಲರ್ ಆಕರ್ಷಕ ಹೊಡೆತಗಳೊಂದಿಗೆ ಆತ್ಮವಿಶ್ವಾಸ ಹೆಚ್ಚಿಸಿದ್ದು, ಆಫ್ರಿಕಾ 6 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 41 ರನ್ ಪೇರಿಸಿತ್ತು. ಇಲ್ಲಿಂದ ಮಿಲ್ಲರ್ ಸ್ಫೋಟಕ ಬ್ಯಾಟಿಂಗ್ ಮೂಲಕ ಆಟವನ್ನು ಬದಲಿಸಿದರು. ಭರ್ಜರಿ ಅರ್ಧಶತಕ ದಾಖಲಿಸಿದ ಮಿಲ್ಲರ್ ಕುಸಿದ ಆಫ್ರಿಕಾಗೆ ಆಧಾರಸ್ತಂಭವಾದರು. 35 ಎಸೆತಗಳಿಂದ 7 ಬೌಂಡರಿ ಮತ್ತು 3 ಸಿಕ್ಸರ್ ಒಳಗೊಂಡಿದ್ದ 63 ರನ್ ಚಚ್ಚಿದ್ದರು. ಬ್ರೇವಿಸ್ (45) ಮತ್ತು ಟ್ರಿಸ್ಟನ್ ಸ್ಟಬ್ಸ್ (44) ಸಹ ಸ್ಫೋಟಕ ರನ್ ಕೊಡುಗೆ ನೀಡಿದ್ದರು.





ಸ್ಕೋರ್ ಬೋರ್ಡ್

ದಕ್ಷಿಣ ಆಫ್ರಿಕಾ 187/7(20)

ಮಾರ್ಕ್ರಂ ಸಿ ಪಾಂಡ್ಯ ಬಿ ಅರ್ಷದೀಪ್	4
ಡಿ ಕಾಕ್ ಬಿ ಬೂಮ್ರಾ	6
ರಿಕಲ್ಟನ್ ಸಿ ದುಬೆ ಬಿ ಬೂಮ್ರಾ	7
ಬ್ರೇವಿಸ್ ಸಿ ಅಭಿಷೇಕ್ ಬಿ ದುಬೆ	45
ಮಿಲ್ಲರ್ ಸಿ ತಿಲಕ್ ಬಿ ವರುಣ್	63
ಸ್ಟಬ್ಸ್ ಔಟಾಗದೆ	44
ಜೆನ್ಸನ್ ಸಿ ಸಿಂಗ್ ಬಿ ಅರ್ಷದೀಪ್	2
ಬಾಶ್ ಸಿ ಆ್ಯಂಡ್ ಬಿ ಬೂಮ್ರಾ	5
ರಬಾಡ ಔಟಾಗದೆ	0
ಇತರೆ	11

ಬೌಲಿಂಗ್ ವಿವರ

ಅರ್ಷದೀಪ್ ಸಿಂಗ್	4-0-28-2
ಜಸ್‌ಪ್ರೀತ್ ಬೂಮ್ರಾ	4-0-15-3
ವರುಣ್ ಚಕ್ರವರ್ತಿ	4-0-47-1
ವಾಷಿಂಗ್ಟನ್ ಸುಂದರ್	2-0-17-0
ಹಾರ್ದಿಕ್ ಪಾಂಡ್ಯ	4-0-45-0
ಶಿವಂ ದುಬೆ	2-0-32-1

ಭಾರತ ಪರದಾಟ!

ನಿರಂತರ ವಿಕೆಟ್‌ಗಳನ್ನು ಕಳೆದುಕೊಳ್ಳುತ್ತಲೇ ಇದ್ದ ಭಾರತ, ಜತೆಯಾಟದ ಕೊರತೆಯೊಂದಿಗೆ ರನ್ ಕಲೆಹಾಕುವಲ್ಲಿ ಪರದಾಡಿ ಆಘಾತ ಅನುಭವಿಸಿದೆ. ಆರಂಭಿಕ ಇಶಾನ್ ಕಿಶನ್ ಶೂನ್ಯ ಸಂಪಾದನೆಯ ಮೂಲಕ ಆರಂಭಿಸಿದ ಪೆವಿಲಿಯನ್ ಪಯಣ ಮುಂದುವರಿಯಿತು. ಮಾರ್ಕ್ರಂ ಎಸೆತದಲ್ಲಿ ಕಿಶನ್ ಕ್ಲೀನ್‌ಬೌಲ್ಡ್ ಆಗಿದ್ದರು. ಶಿವಂ ದುಬೆ (42) ಏಕಾಂಗಿ ಹೋರಾಟ ಬಿಟ್ಟರೆ, ಅಗ್ರ ಮತ್ತು ಮಧ್ಯಮ ಕ್ರಮಾಂಕ ಸಂಪೂರ್ಣ ವೈಫಲ್ಯ ಕಂಡಿದ್ದರಿಂದ ಭಾರತ ಹೀನಾಯ ಸೋಲುಂಡಿದೆ. ವೇಗಿ ಜೆನ್ಸನ್, ಬಾಶ್ ಮಾರಕ ಬೌಲಿಂಗ್ ನಡೆಸುವ ಮೂಲಕ ಭಾರತ ತಂಡದ ಅಗ್ರ ಮತ್ತು ಮಧ್ಯಮ ಕ್ರಮಾಂಕದ ಬೆನ್ನುಮೂಳೆ ಮುರಿದರೆ, ಭಾರತೀಯ ಮೂಲದ ಸ್ಪಿನ್ನರ್ ಕೇಶವ್ ಮಹಾರಾಜ್ 3 ವಿಕೆಟ್ ಕಬಳಿಸಿದರು.

ಅಶ್ವಿನ್ ಹಿಂದಿಕ್ಕಿದ ಜಸ್‌ಪ್ರೀತ್ ಬೂಮ್ರಾ




ಟಿ20 ವಿಶ್ವಕಪ್ ಇತಿಹಾಸದಲ್ಲಿ ಭಾರತದ ಪರ ಅತ್ಯಧಿಕ ವಿಕೆಟ್ ಕಬಳಿಸಿದ ರವಿಚಂದ್ರನ್ ಅಶ್ವಿನ್ (32) ದಾಖಲೆಯನ್ನು ವೇಗಿ ಜಸ್‌ಪ್ರೀತ್ ಬೂಮ್ರಾ, ಹಿಂದಿಕ್ಕಿದ್ದಾರೆ. ಭಾನುವಾರ ಡಿ ಕಾಕ್, ರಿಕೆಲ್ಟನ್ ಮತ್ತು ಕೊರ್ಬಿನ್ ಬಾಶ್ ಅವರ ವಿಕೆಟ್‌ಗಳನ್ನು ಕಬಳಿಸಿದ ಬೂಮ್ರಾ, ಅಶ್ವಿನ್‌ರನ್ನು ಹಿಂದಿಕ್ಕಿದರು. ಇನ್ನೋರ್ವ ವೇಗಿ ಅರ್ಷದೀಪ್ ಇದೇ ಪಂದ್ಯದಲ್ಲಿ ಅಶ್ವಿನ್ ದಾಖಲೆ ಸರಿಗಟ್ಟಿದ್ದಾರೆ. ಭಾರತ ಪರ ಬೂಮ್ರಾ (33), ಅರ್ಷದೀಪ್ (32), ಅಶ್ವಿನ್ (32), ಹಾರ್ದಿಕ್ (29) ಮತ್ತು ಜಡೇಜಾ (22) ಅತ್ಯಧಿಕ ವಿಕೆಟ್ ಕಬಳಿಸಿದ್ದಾರೆ.

ಕಿರುಸುದ್ದಿ

ನಾಳೆ 15ನೇ ಬಾರಿ ಫೈನಲ್ ಆಡಲಿದೆ ಕರ್ನಾಟಕ ತಂಡ

ಹೊಸದಿಲ್ಲಿ: ಋತುವಿನುದ್ದಕ್ಕೂ ಅದ್ಭುತ ಪ್ರದರ್ಶನ ನೀಡಿರುವ ದೇವದತ್ ಪಡಿಕ್ಕಲ್ ನೇತೃತ್ವದ ಕರ್ನಾಟಕ ಫೆ.24ರಂದು ಮಂಗಳವಾರ 15ನೇ ಬಾರಿ ರಣಜಿ ಟ್ರೋಫಿ ಫೈನಲ್ ಆಡಲಿದ್ದು, 9ನೇ ಬಾರಿ ಚಾಂಪಿಯನ್ ಪಟ್ಟ ಅಲಂಕರಿಸುವ ಗುರಿ ಹೊಂದಿದೆ. 2014-15ರ ಆವೃತ್ತಿಯ ಬಳಿಕ ಇದೇ ವರ್ಷ ಫೈನಲ್ ಪ್ರವೇಶಿಸಿದ ಕರ್ನಾಟಕ ತಂಡ, ಜಮ್ಮು ಕಾಶ್ಮೀರವನ್ನು ಎದುರಿಸಲಿದೆ. ಸೆಮಿಫೈನಲ್ ಪಂದ್ಯದಲ್ಲಿ ಉತ್ತರಾಖಂಡ್ ವಿರುದ್ಧ ಕರ್ನಾಟಕ ಡ್ರಾ ಫಲಿತಾಂಶ ಕಂಡಿದ್ದು, ಮೊದಲ ಇನ್ನಿಂಗ್ಸ್‌ನ ಭಾರೀ ಮುನ್ನಡೆಯ ಪರಿಣಾಮ ಕರ್ನಾಟಕ ಫೈನಲ್ ಪ್ರವೇಶಿಸಿತ್ತು.

ಕತಾರ್ ಓಪನ್ 2026 ಪ್ರಶಸ್ತಿ ಗೆದ್ದ ಅಲ್ಕರಾಜ್



ದೋಹಾ: ಏಳು ಬಾರಿಯ ಗ್ರ್ಯಾಂಡ್ ಸ್ಲಾಮ್ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಫ್ರಾನ್ಸ್ ಎದುರಾಳಿಯನ್ನು ಸೋಲಿಸಿ ಕತಾರ್ ಓಪನ್ 2026ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಈ ಪ್ರಶಸ್ತಿ ಗೆಲುವಿನೊಂದಿಗೆ ಅಲ್ಕರಾಜ್ ಟೆನಿಸ್ ವೃತ್ತಿಜೀವನದ 26ನೇ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಫ್ರಾನ್ಸ್ ಎದುರಾಳಿ ಆರ್ಥರ್ ಫಿಲ್ಸ್ ಅವರನ್ನು ಅಲ್ಕರಾಜ್ ಕೇವಲ 50 ನಿಮಿಷಗಳಲ್ಲಿ ಮಣಿಸಿದ್ದಾರೆ. ಸ್ಪೇನ್ ಟೆನಿಸಿಗ ಅಲ್ಕರಾಜ್ 6-2, 6-1 ನೇರ ಸೆಟ್‌ಗಳಿಂದ ಗೆಲುವು ಸಾಧಿಸಿದ್ದಾರೆ. ಇತ್ತೀಚೆಗೆ ಆಸ್ಟ್ರೇಲಿಯಾ ಓಪನ್ ಯಶಸ್ಸು ಸಾಧಿಸಿದ ಅಲ್ಕರಾಜ್ ತಮ್ಮ 22ನೇ ವಯಸ್ಸಿನಲ್ಲಿಯೇ ಟೆನಿಸ್ ವೃತ್ತಿಜೀವನದ ಎಲ್ಲಾ ಗ್ರ್ಯಾಂಡ್ ಸ್ಲಾಮ್‌ಗಳನ್ನೂ ಒಂದೊಂದು ಬಾರಿ ಗೆದ್ದಿರುವ ದಾಖಲೆ ಬರೆದುಕೊಂಡಿದ್ದಾರೆ.

ಕತಾರ್‌ನಲ್ಲಿ ಶೇ.447ರಷ್ಟು ಕ್ರಿಕೆಟ್ ಚಟುವಟಿಕೆ ಏರಿಕೆ!

ದುಬೈ: ಕತಾರ್‌ನಲ್ಲಿ ಕ್ರಿಕೆಟ್ ಉತ್ತೇಜಿಸುವ ಉದ್ದೇಶದೊಂದಿಗೆ ಅಂತಾರಾಷ್ಟ್ರೀಯ ಕ್ರಿಕೆಟ್ ನಿಯಂತ್ರಣ ಸಂಸ್ಥೆ ಐಸಿಸಿ ತನ್ನ ಮುಂದಿನ ಸುತ್ತಿನ ಸಭೆಯನ್ನು ಮಾ.25ರಿಂದ 27ರವರೆಗೆ ದೋಹಾದಲ್ಲಿ ನಡೆಸಲಿದೆ. 2020ರಿಂದ ಈವರೆಗೆ ಕತಾರ್‌ನಲ್ಲಿ ಕ್ರಿಕೆಟ್ ಚಟುವಟಿಕೆಗಳು ಶೇ.447ರಷ್ಟು ಪ್ರಗತಿ ಕಂಡಿದೆ ಎಂದು ಐಸಿಸಿ ಹೇಳಿಕೊಂಡಿದೆ. ಇದೇ ಕಾರಣ 2036ರ ಕತಾರ್ ಒಲಿಂಪಿಕ್ಸ್ ಸಮಿತಿಯ ಶಾಲಾ ಒಲಿಂಪಿಕ್ಸ್ ಕಾರ್ಯಕ್ರಮದಲ್ಲಿ ಕ್ರಿಕೆಟ್ ಸೇರ್ಪಡೆಯಾಗಿದೆ. ಐಸಿಸಿ ಮಂಡಳಿ ನಿರ್ದೇಶಕರು, ಪ್ರಧಾನ ಕಾರ್ಯದರ್ಶಿಗಳು, ಸಮಿತಿ ಸದಸ್ಯರು ಮತ್ತು ಹಿರಿಯ ನಾಯಕರು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಸೂರ್ಯವಂಶಿಗೆ ₹50 ಲಕ್ಷ ನೀಡಿ ಸನ್ಮಾನಿಸಿದ ನಿತೀಶ್

ಪಾಟ್ನಾ: 19 ವರ್ಷದೊಳಗಿನವರ (ಅ-19) ಏಕದಿನ ವಿಶ್ವಕಪ್ ಹೀರೋ ಪ್ರತಿಭಾನ್ವಿತ ಯುವ ಕ್ರಿಕೆಟಿಗ ವೈಭವ್ ಸೂರ್ಯವಂಶಿ ಅವರಿಗೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ 50 ಲಕ್ಷ ರೂ. ಚೆಕ್ ನೀಡಿ ಸನ್ಮಾನಿಸಿದ್ದಾರೆ.



ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಮತ್ತು ಬಿಹಾರ ಕ್ರೀಡಾ ಸಚಿವೆ ಶ್ರೇಯಸಿ ಸಿಂಗ್ ಜತೆಗಿದ್ದರು. ಇತ್ತೀಚೆಗೆ ಜಿಂಬಾಬ್ವೆಯಲ್ಲಿ ನಡೆದ ವಿಶ್ವಕಪ್ ಫೈನಲ್‌ನಲ್ಲಿ ಸೂರ್ಯವಂಶಿ ಕೇವಲ 80 ಎಸೆತಗಳಿಂದ 15 ಬೌಂಡರಿ ಮತ್ತು 15 ಸಿಕ್ಸರ್‌ಗಳನ್ನು ಒಳಗೊಂಡ 175 ರನ್ ಚಚ್ಚಿದ್ದರು. ಅ-19 ವಿಶ್ವಕಪ್‌ನ 7 ಪಂದ್ಯಗಳಲ್ಲಿ 169.5 ಸ್ಟ್ರೈಕ್ ರೇಟ್ ಮತ್ತು 62.71ರ ಸರಾಸರಿಯಲ್ಲಿ 439 ರನ್‌ಗಳನ್ನು ಕಲೆಹಾಕಿದ್ದರು. ಬಿಹಾರದ ಸ್ಫೋಟಕ ಬ್ಯಾಟರ್, ಐಪಿಎಲ್‌ನಲ್ಲಿ ಇವರು ರಾಜಸ್ಥಾನ ರಾಯಲ್ಸ್ ಪ್ರತಿನಿಧಿಸುತ್ತಿದ್ದಾರೆ.

ಎರಡೂ ಆವೃತ್ತಿಗಳಲ್ಲಿ ಭಾರತಕ್ಕೆ ಕಪ್ | ಬಾಂಗ್ಲಾಗೆ ಮುಖಭಂಗ

ವನಿತೆಯರಿಗೆ ಸತತ 2ನೇ ಏಷ್ಯಾ ಕಿರೀಟ



ಬ್ಯಾಂಕಾಕ್: ಟಿ20 ವಿಶ್ವಕಪ್ ಬಹಿಷ್ಕರಿಸಿದ ಬಾಂಗ್ಲಾದೇಶ, ಮಹಿಳಾ ಏಷ್ಯಾ ಕಪ್‌ನಲ್ಲಿ ಸತತ ಎರಡನೇ ಬಾರಿ ಭಾರತದ ಮುಂದೆ ಶರಣಾಗಿ ಮುಖಭಂಗ ಅನುಭವಿಸಿದೆ. ಭಾರತ ಸತತ 2ನೇ ಬಾರಿ ಪ್ರಶಸ್ತಿ ಗೆದ್ದಿದ್ದು, ಬಾಂಗ್ಲಾ ಸತತ 2ನೇ ಬಾರಿ ರನ್ನರ್‌ಅಪ್ ಪ್ರಶಸ್ತಿಗೆ ತೃಪ್ತಿಪಟ್ಟಿದೆ.

ರಾಧಾ ಯಾದವ್ ನೇತೃತ್ವದ ಭಾರತ ಎ ತಂಡ ಮಹಿಳಾ ಏಷ್ಯಾ ಕಪ್ ರೈಸಿಂಗ್ ಸ್ಟಾರ್ಸ್ ಟ್ರೋಫಿಯನ್ನು ತನ್ನಲ್ಲೇ ಉಳಿಸಿಕೊಳ್ಳಲು ಯಶಸ್ವಿಯಾಗಿದೆ. ಥಾಯ್ಲೆಂಡ್‌ನ ಬ್ಯಾಂಕಾಕ್‌ನಲ್ಲಿ ನಡೆದಿದ್ದ ಫೈನಲ್‌ನಲ್ಲಿ ನೆರೆಯ ಬಾಂಗ್ಲಾದೇಶವನ್ನು 46 ರನ್‌ಗಳಿಂದ ಮಣಿಸಿದ ಭಾರತ ಎ ಏಷ್ಯಾ ಕಪ್ ಪ್ರಶಸ್ತಿ ಉಳಿಸಿಕೊಂಡಿದೆ.

ಲೋ ಸ್ಕೋರಿಂಗ್ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ಭಾರತ ಎ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 134 ರನ್ ಕಲೆಹಾಕಿತ್ತು. 135 ರನ್ ಸವಾಲು ಬೆನ್ನತ್ತಿದ ಬಾಂಗ್ಲಾದೇಶ ತಂಡವು 19.1 ಓವರ್‌ಗಳಲ್ಲಿ ಕೇವಲ 88 ರನ್‌ಗಳಿಗೆ ಆಲೌಟಾಯಿತು. ಪಂದ್ಯಾವಳಿಯ ದ್ವಿತೀಯ ಆವೃತ್ತಿಯಲ್ಲೂ ಭಾರತವೇ ಕಪ್ ಗೆದ್ದುಕೊಂಡಿದೆ. ಟಾಸ್ ಗೆದ್ದ ನಾಯಕಿ ರಾಧಾ ಬ್ಯಾಟಿಂಗ್ ಆಯ್ದುಕೊಂಡಿದ್ದರು. ಬ್ಯಾಟಿಂಗ್ ಆರಂಭಿಸಿದ ಭಾರತ ವನಿತೆಯರು ಆರಂಭಿಕ ಆಘಾತ ಅನುಭವಿಸಿದರು. ಪವರ್‌ಪ್ಲೇ ಓವರ್‌ಗಳ ಮುಕ್ತಾಯದ ವೇಳೆಗೆ ಭಾರತ ಎ 33 ರನ್‌ಗಳಿಗೆ 3 ಅಗ್ರ ಕ್ರಮಾಂಕದ ವಿಕೆಟ್‌ಗಳನ್ನು ಕಳೆದುಕೊಂಡಿತ್ತು.

ತೇಜಲ್-ರಾಧಾ 69 ರನ್ ಜತೆಯಾಟ: ತೇಜಲ್ ಹಸಬ್ನಿಸ್ ಅವರ ಅಜೇಯ ಅರ್ಧಶತಕ (51) ಮತ್ತು ನಾಯಕಿ ರಾಧಾ ಅವರ ಜವಾಬ್ದಾರಿಯುತ ಇನ್ನಿಂಗ್ಸ್ ಕಾರಣದಿಂದ ಚೇತರಿಸಿಕೊಂಡ ಭಾರತ ಎ ವನಿತೆಯರು ಸ್ಪಿನ್ ಪಿಚ್‌ನಲ್ಲಿ ಉತ್ತಮ ಮೊತ್ತ ಪೇರಿಸುವಲ್ಲಿ ಯಶಸ್ವಿಯಾಗಿದೆ. ತೇಜಲ್ ಮತ್ತು ರಾಧಾ 5ನೇ ವಿಕೆಟ್‌ಗೆ 69 ರನ್‌ಗಳ ಮಹತ್ವದ ಜತೆಯಾಟವಾಡಿದರು. 34 ಎಸೆತಗಳನ್ನು ಎದುರಿಸಿದ್ದ ತೇಜಲ್ 3 ಬೌಂಡರಿ ಮತ್ತು 2 ಸಿಕ್ಸರ್ ಒಳಗೊಂಡ 51 ರನ್ ಗಳಿಸಿ ಅಜೇಯರಾಗಿ ಉಳಿದಿದ್ದರು. ರಾಧಾ 30 ಎಸೆತಗಳಿಂದ 3 ಬೌಂಡರಿ ಮತ್ತು 1 ಸಿಕ್ಸರ್ ಇದ್ದ 36 ರನ್ ಗಳಿಸಿದ್ದರು. ಬಾಂಗ್ಲಾ ಪರ ಕರಾರುವಾಕ್ ಲೆಗ್ ಸ್ಪಿನ್ ಬೌಲಿಂಗ್ ದಾಳಿ ನಡೆಸಿದ ಫಹೀಮಾ ಖಾತುನ್ 25 ರನ್‌ಗಳಿಗೆ 4 ವಿಕೆಟ್ ಕಿತ್ತರು.

ಇನ್ನೊಮ್ಮೆ ಬಾಂಗ್ಲಾ ಸೋಲಿಸಿದ ಭಾರತ

ಇತ್ತೀಚೆಗೆ ಭಾರತದ ಆತಿಥ್ಯದಲ್ಲಿ ಟಿ20 ವಿಶ್ವಕಪ್ ಆಡುವುದಿಲ್ಲವೆಂದು ಬಾಂಗ್ಲಾದೇಶ ಪುರುಷರ ಕ್ರಿಕೆಟ್ ತಂಡ ಹೊರಗುಳಿದಿತ್ತು. ಬಾಂಗ್ಲಾ ಬೆಂಬಲಿಸಿ ಲೀಗ್ ಪಂದ್ಯ ಬಹಿಷ್ಕರಿಸುವ ಬೆದರಿಕೆ ಹಾಕಿದ್ದ ಪಾಕಿಸ್ತಾನ ಯೂಟರ್ನ್ ಹೊಡೆದಿದ್ದಲ್ಲದೆ ಹೀನಾಯ ಸೋಲುಂಡು ಮುಖಭಂಗ ಎದುರಿಸಿತ್ತು. ಇದೀಗ ಬಾಂಗ್ಲಾ ಎ ಮಹಿಳಾ ತಂಡ ಏಷ್ಯಾ ಕಪ್ ಫೈನಲ್‌ನಲ್ಲಿ ಇನ್ನೊಮ್ಮೆ ಭಾರತಕ್ಕೆ ಶರಣಾಗಿದೆ. 2023ರಲ್ಲಿ ನಡೆದಿದ್ದ ಮೊದಲ ಆವೃತ್ತಿಯ ಫೈನಲ್‌ನಲ್ಲಿ ಭಾರತ ವಿರುದ್ಧ ಬಾಂಗ್ಲಾ 31 ರನ್‌ಗಳಿಂದ ಸೋಲುಂಡಿತ್ತು. 2026ರಲ್ಲಿ 46 ರನ್ ಅಂತರದಿಂದ ಶರಣಾಗಿದೆ

ಸ್ಕೋರ್ ಬೋರ್ಡ್

ಭಾರತ ಎ ವನಿತೆಯರು134/7(20)

ನಂದಿನಿ ರನೌಟ್	8
ವೃಂದಾ ಬಿ ಫಾತಿಮಾ	19
ಅನುಷ್ಕಾ ಬಿ ಫಹೀಮಾ	8
ಮಿನ್ನು ಸಿ ಸಂಜಿದಾ ಬಿ ಫರ್ಜಾನಾ	0
ತೇಜಲ್ ಔಟಾಗದೆ	51
ರಾಧಾ ಸಿ ಫರ್ಜಾನಾ ಬಿ ಫಹೀಮಾ	36
ತನುಜಾ ಸಿ ಲತಾ ಬಿ ಫಹೀಮಾ	1
ಪ್ರೇಮಾ ಸಿ ಫರ್ಜಾನಾ ಬಿ ಫಹೀಮಾ	4
ಮಮತಾ ಔಟಾಗದೆ	2
ಇತರೆ	5

ಬೌಲಿಂಗ್ ವಿವರ

ಫರಿಹಾ ತ್ರಿಸ್ನಾ	3-0-23-0
ಸಂಜಿದಾ ಅಖ್ತರ್	4-0-21-0
ಫರ್ಜಾನಾ ಈಸ್ಮಿನ್	4-0-30-1
ಫಾತಿಮಾ ಜಹಾನ್	4-0-19-1
ಫಹೀಮಾ ಖಾತುನ್	4-0-25-4
ಲತಾ ಮೊಂಡೆಲ್	1-0-14-0

ಬಾಂಗ್ಲಾ ಎ ವನಿತೆಯರು 88/10(19.1)

ಇಶ್ಮಾ ಸಿ ಶರ್ಮಾ ಬಿ ಠಾಕೂರ್	3
ಶಮೀಮಾ ಸಿ ಮಮತಾ ಬಿ ರಾವತ್	20
ಶರ್ಮಿನ್‌ಸಿ ರಾವತ್ ಬಿ ಯಾದವ್	18
ಸಾದಿಯಾ ಸಿ ಕಶ್ಯಪ್ ಬಿ ರಾವತ್	10
ಲತಾ ಸ್ಟಂಪ್ ಮಮತಾ ಬಿ ರಾವತ್	1
ಫಹೀಮಾ ಸಿ ಠಾಕೂರ್ ಬಿ ಮಿನ್ನು	14
ಫರ್ಜಾನಾ ಸಿ ಕಶ್ಯಪ್ ಬಿ ಸೋನಿಯಾ	6
ಶೋರಿಫಾ ಸಿ ರಾವತ್ ಬಿ ಕನ್ವಾರ್	9
ಸಂಜಿದಾ ಸಿ ರಾವತ್ ಬಿ ಕನ್ವಾರ್	5
ಫಾತಿಮಾ ಸಿ ಕನ್ವಾರ್ ಬಿ ಸೋನಿಯಾ	1
ಫರೀಹಾ ಔಟಾಗದೆ	0
ಇತರೆ	1

ಬೌಲಿಂಗ್ ವಿವರ

ಸೈಮಾ ಠಾಕೂರ್	2-0-11-1
ಸೋನಿಯಾ ಮೇಂಧಿಯಾ	4-0-21-2
ತನುಜಾ ಕನ್ವಾರ್	3.1-0-11-2
ಮಿನ್ನು ಮಣಿ	2-0-17-1
ಪ್ರೇಮಾ ರಾವತ್	4-0-12-3
ರಾಧಾ ಯಾದವ್	4-0-16-1

ನಾಳೆಯಿಂದ ಹುಬ್ಬಳ್ಳಿಯಲ್ಲಿ ರಣಜಿ ಫೈನಲ್

ಕಠಿಣ ಅಭ್ಯಾಸ ನಡೆಸಿದ ರಾಜ್ಯ

ಹುಬ್ಬಳ್ಳಿ: ಪ್ರಸ್ತುತ ಋತುವಿನಲ್ಲಿ ಅಮೋಘ ಆಟದ ಪ್ರದರ್ಶನ ನೀಡುವ ಮೂಲಕ ಫೈನಲ್ ತಲುಪಿದ ಕರ್ನಾಟಕ ತಂಡದ ಆಟಗಾರರು ಭಾನುವಾರ ಕಠಿಣ ಅಭ್ಯಾಸ ನಡೆಸಿದರು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಮೈದಾನದಲ್ಲಿ ಕರ್ನಾಟಕ ಹಾಗೂ ಜಮ್ಮು ಕಾಶ್ಮೀರ ತಂಡಗಳು ಇದೇ ಮೊದಲ ಬಾರಿಗೆ ಮುಖಾಮುಖಿಯಾಗಲಿದ್ದು, ಫೆ.24ರಿಂದ 28ರವರೆಗೆ ಫೈನಲ್ ನಡೆಯಲಿದೆ.ಭಾನುವಾರ ಬೆಳಗ್ಗೆ ಕರ್ನಾಟಕ ತಂಡದ ಆಟಗಾರರು ನಗರಕ್ಕೆ ಆಗಮಿಸಿದರು. ನಾಯಕ ಪಡಿಕ್ಕಲ್ ಮಧ್ಯಾಹ್ನ 2 ಗಂಟೆಗೆ ಮೈದಾನಕ್ಕೆ ಆಗಮಿಸಿದ ಆಟಗಾರರು ಕೆಲ ಸಮಯ ಫುಟ್ಬಾಲ್ ಆಡಿ ನೆಟ್ಸ್‌ನಲ್ಲಿ ಬೆವರು ಸುರಿಸಿದರು. ನಾಯಕ ದೇವದತ್ತ ಪಡಿಕ್ಕಲ್, ಮಯಾಂಕ್ ಅಗರವಾಲ್, ಕರುಣ್ ನಾಯರ್, ಆರ್.ಸ್ಮರಣ್ ಹಾಗೂ ಹಲವು ಆಟಗಾರರು ನೆಟ್ಸ್‌ನಲ್ಲಿ ಧಾರವಾಡ ವಲಯದ ಕ್ಲಬ್‌ನ ಬೌಲರ್ ಅನ್ನು ಎದುರಿಸಿದರು. ಇದರ ಜೊತೆಗೆ ಶ್ರೇಯಸ್ ಗೋಪಾಲ್, ವಿದ್ವತ್ ಕಾವೇರಪ್ಪ ಬಿಲ್ಡಿಂಗ್ ಹಾಗೂ ಬೌಲಿಂಗ್ ಅಭ್ಯಾಸ ನಡೆಸಿದರು. ನಂತರ ಥ್ರೋಡೌನ್ ಎಸೆತಗಳನ್ನು ಆಡಿದರು.

ರಾಹುಲ್, ಪ್ರಸಿದ್ಧ ಗೈರು: ಕರ್ನಾಟಕ ತಂಡದ ಆಕರ್ಷಣೀಯ ಆಟಗಾರರಾದ ಕೆ.ಎಲ್.ರಾಹುಲ್ ಹಾಗೂ ಪ್ರಸಿದ್ಧ ಕೃಷ್ಣ ಮೈದಾನದಲ್ಲಿ ಕಾಣಿಸಲಿಲ್ಲ, ನಾಯಕ ಪಡಿಕ್ಕಲ್ ತಂಡ ಮುಖ್ಯ ಕೋಚ್ ಜತೆ ಸಮಾಲೋಚನೆ ನಡೆಸಿದರು.

ಎರಡನೇ ದಿನವೂ ಜಮ್ಮು ಅಭ್ಯಾಸ: ಜಮ್ಮು ಮತ್ತು ಕಾಶ್ಮೀರ ತಂಡದ ಆಟಗಾರರು ಅಭ್ಯಾಸ ಎರಡನೇ ದಿನವೂ ಮುಂದುವರಿಯಿತು. ಶುಕ್ರವಾರವೇ ನಗರಕ್ಕೆ ಬಂದಿರುವ ತಂಡವು, ನಗರದ ನವೀನ್ ಹೋಟೆಲ್‌ನಲ್ಲಿ ವಾಸ್ತವ್ಯ ಮಾಡಿದೆ. ಭಾನುವಾರ ಕ್ರೀಡಾಂಗಣಕ್ಕೆ ಬಂದ ಆಟಗಾರರು, ಎರಡು ಗಂಟೆ ತಾಲೀಮು ನಡೆಸಿದರು. ನಂತರ ಪಿಚ್ ವೀಕ್ಷಣೆ ಮಾಡಿದರು. ಕೋಚ್ ಅಜಯ್ ಶರ್ಮಾ ಮಾರ್ಗದರ್ಶನದಲ್ಲಿ ಆಟಗಾರರು ಸ್ಥಳೀಯ ಕ್ರಿಕೆಟ್ ಅಕಾಡೆಮಿ ತಂಡದ ಆಟಗಾರರ ಎಸೆತಗಳನ್ನು ಎದುರಿಸಿದರು. ಕೆಲ ಹೊತ್ತು ಥ್ರೋಡೌನ್ ಎಸೆತಗಳನ್ನು ಆಡಿದರು. ಭಾನುವಾರ ಅಭ್ಯಾಸಕ್ಕೆ ಬಾರದಿದ್ದ ಜಮ್ಮು ಕಾಶ್ಮೀರ ತಂಡದ ನಾಯಕ ಪರಾಸ್ ಡೋಗ್ರಾ, ಅಬ್ದುಲ್ ಸಮದ್, ಆಖಿಬ್ ನಬಿ ಮೈದಾನದಲ್ಲಿ ತಾಲೀಮು ನಡೆಸಿದರು.



ಫೈನಲ್‌ಗಾಗಿ ಸಕಲ ಸಿದ್ಧತೆ: ಫೈನಲ್ ಪಂದ್ಯಕ್ಕಾಗಿ ಕೆಎಸ್‌ಸಿಎ ಧಾರವಾಡದ ವಲಯದಿಂದ ಸಕಲ ಸಿದ್ಧತೆ ಭರದಿಂದ ಸಾಗಿದೆ. ಪಂದ್ಯ ವೀಕ್ಷಿಸಲು ಬರುವ ಕ್ರಿಕೆಟ್ ಅಭಿಮಾನಿಗಳಿಗೆ ಬಿಸಿಲು ತಾಕದಂತೆ ಪೆಂಡಾಲ್ ಹಾಕಲಾಗಿದೆ. ನಗರಕ್ಕೆ ಬಂದ ತಂಡವನ್ನು ಕೆಎಸ್‌ಸಿಎ ಧಾರವಾಡ ವಲಯ ಸ್ವಾಗತಿಸಿತು.

ಭಾರತಕ್ಕೆ ಸತತ 6ನೇ ಸೋಲು



ಲಖನೌ: ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಭಾರತೀಯ ಹಾಕಿ ತಂಡ ಸತತ 6ನೇ ಸೋಲುಂಡಿದೆ. ಭಾನುವಾರ ಹೋಬರ್ಟ್‌ನಲ್ಲಿ ನಡೆದ ಆಸ್ಟ್ರೇಲಿಯಾ ವಿರುದ್ಧದ ಲೀಗ್ ಪಂದ್ಯದಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ 4-5 ಗೋಲ್‌ಗಳ ಅಂತರದಿಂದ ಭಾರತ ವೀರೋಚಿತ ಸೋಲುಂಡಿದೆ. ಭಾರತ ಪರ 15ನೇ ನಿಮಿಷದಲ್ಲಿ ಅಮಿತ್ ರೋಹಿದಾಸ್ ಮತ್ತು 43ನೇ ನಿಮಿಷದಲ್ಲಿ ಜುಗ್ರಾಜ್ ಸಿಂಗ್ ಗೋಲ್ ಸ್ಕೋರ್ ಮಾಡಿದರು. ಆಸ್ಟ್ರೇಲಿಯಾ ಪರ 47ನೇ ಮತ್ತು 56ನೇ ನಿಮಿಷದಲ್ಲಿ ಜೋಯೆಲ್ ರಿಂಟಾಲಾ ಅವಳಿ ಗೋಲ್ ದಾಖಲಿಸಿದ್ದರು. ಜೋಯೆಲ್ ಗೋಲ್ ದಾಖಲಿಸಿ ಡ್ರಾ ಸಾಧಿಸಿದರು. ಇದಾದ ಬಳಿಕ ಪೆನಾಲ್ಟಿ ಶೂಟೌಟ್‌ನಲ್ಲಿ ಭಾರತದ ಪರ ರಾಜಕುಮಾರ್, ಶೈಲಾನಂದ್, ಮಣೀಂದರ್ ಮತ್ತು ಜುಗ್ರಾಜ್ ಅವರು ಗೋಲ್ ದಾಖಲಿಸಿದರು. ಆದರೆ ಆದಿತ್ಯ ಲಾಲಗೆ ಅವರು ಗೋಲ್ ದಾಖಲಿಸುವಲ್ಲಿ ವಿಫಲ ಆಗಿದ್ದರಿಂದ ಭಾರತ 4-5ರಿಂದ ಸೋಲುಂಡಿತು. ಫೆ.24ರಂದು ಸ್ಪೇನ್ ತಂಡವನ್ನು ಭಾರತ ಎದುರಿಸಲಿದೆ. ಜುಗ್ರಾಜ್ ಅವರಿಗೆ ಪಂದ್ಯಶ್ರೇಷ್ಠ ಪ್ರಶಸ್ತಿ ಸಂದಿದೆ.

ವಿಲ್ ಪವರ್, ಲಂಕಾ ಪತನ



ಸಂಕ್ಷಿಪ್ತ ಸ್ಕೋರ್

ಇಂಗ್ಲೆಂಡ್ 146/7(20)
ಸಾಲ್ಟ್ 62, ಜ್ಯಾಕ್ಸ್ 21
(ದುನಿತ್ 26ಕ್ಕೆ 3)
ಶ್ರೀಲಂಕಾ 95/10(16.4)
ದಸೂನ್ 30 (ಜ್ಯಾಕ್ಸ್ 22ಕ್ಕೆ 3)

ಇಂಗ್ಲೆಂಡ್‌ಗೆ 51 ರನ್ ಭರ್ಜರಿ ಜಯ

ಪಲ್ಲೆಕೆಲೆ: ಆಲ್‌ರೌಂಡರ್ ವಿಲ್ ಜ್ಯಾಕ್ಸ್ ಪರಾಕ್ರಮದಿಂದಾಗಿ ಆತಿಥೇಯ ಶ್ರೀಲಂಕಾ ವಿರುದ್ಧ ಇಂಗ್ಲೆಂಡ್ 51 ರನ್‌ಗಳ ಭರ್ಜರಿ ಗೆಲುವು ಸಾಧಿಸಿದೆ. ಭಾನುವಾರ ಪಲ್ಲೆಕೆಲೆಯಲ್ಲಿ ನಡೆದ ಟಿ20 ವಿಶ್ವಕಪ್ ಪಂದ್ಯದಲ್ಲಿ 147 ರನ್‌ಗಳ ಸವಾಲು ಬೆನ್ನತ್ತಿದ ಶ್ರೀಲಂಕಾ 16.4 ಓವರ್‌ಗಳಲ್ಲೇ 95 ರನ್‌ಗಳಿಗೆ ಆಲೌಟಾಗುವ ಮೂಲಕ ಹೀನಾಯ ಸೋಲುಂಡಿತು. ಶ್ರೀಲಂಕಾದ 3 ವಿಕೆಟ್ ಕಬಳಿಸಿದ ಜ್ಯಾಕ್ಸ್ ಗೆಲುವಿನ ರೂವಾರಿಯಾಗಿ ಹೊರಹೊಮ್ಮಿದರು. ಮೊದಲು ಬ್ಯಾಟ್ ಮಾಡಿದ್ದ ಇಂಗ್ಲೆಂಡ್ ತಂಡ ಆರಂಭಿಕ ಫಿಲ್ ಸಾಲ್ಟ್ ಭರ್ಜರಿ ಅರ್ಧಶತಕ (62) ಮತ್ತು ಜ್ಯಾಕ್ಸ್ (21) ಬ್ಯಾಟಿಂಗ್ ನೆರವಿನಿಂದ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 146 ರನ್ ಸ್ಪರ್ಧಾತ್ಮಕ ಮೊತ್ತವನ್ನು ಪೇರಿಸಿತ್ತು. ಶ್ರೀಲಂಕಾ ಪರ ನಾಯಕ ದಸೂನ್ ಶನಕ 30 ರನ್ ಮಾಡಿದ್ದು ಬಿಟ್ಟರೆ ಬೇರ್‍ಯಾವ ಬ್ಯಾಟ್ಸ್‌ಮನ್‌ಗಳೂ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ, ಆರ್ಚರ್, ಡಾವ್ಸನ್ ಮತ್ತು ರಶೀದ್ ತಲಾ 2 ವಿಕೆಟ್ ಕಿತ್ತರು.

ವೈಷ್ಣವಿ ರನ್ನರ್‌ಅಪ್


ಬೆಂಗಳೂರು: ಟೂರ್ನಿಯುದ್ದಕ್ಕೂ ಗೆಲುವಿನ ನಾಗಾಲೋಟ ಕಂಡಿದ್ದ ಭಾರತದ ಉದಯೋನ್ಮುಖ ಟೆನಿಸ್ ಆಟಗಾರ್ತಿ ವೈಷ್ಣವಿ ಅಡ್ಕರ್ ಐಟಿಎಫ್ ಮಹಿಳೆಯರ ಓಪನ್‌ನಲ್ಲಿ ರನ್ನರ್ ಅಪ್ ಪ್ರಶಸ್ತಿಗೆ ತೃಪ್ತಿಪಟ್ಟುಕೊಂಡರು. ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಬೆಲ್ಜಿಯಂನ ಹನ್ನೆ ವಾಂಡೆವಿನ್ಕೆಲ್ ಎದುರು 6-0, 6-1 ನೇರ ಸೆಟ್‌ಗಳ ಸೋಲುಂಡರು. ಸಾನಿಯಾ ಮಿರ್ಜಾ ಬಳಿಕ ಐಟಿಎಫ್ ಮಹಿಳಾ ಓಪನ್ ಫೈನಲ್ ಪ್ರವೇಶಿಸಿದ ಮೊದಲ ಭಾರತೀಯ ಆಟಗಾರ್ತಿ ಎಂಬ ದಾಖಲೆಯನ್ನು 21ರ ಹರೆಯದ ಪುಣೆ ಮೂಲದ ಆಟಗಾರ್ತಿ ಬರೆದಿದ್ದರು. 690ನೇ ಶ್ರೇಯಾಂಕದ ವೈಷ್ಣವಿ ಅವರು 124ನೇ ಶ್ರೇಯಾಂಕದ ಹನ್ನೆ ವಿರುದ್ಧ ಸೋಲುಂಡರು. ಪ್ರಶಸ್ತಿ ಮುಡಿಗೇರಿಸಿಕೊಂಡ ಹನ್ನೆ 100 ರ್‍ಯಾಂಕಿಂಗ್ ಅಂಕಗಳನ್ನು ಸಂಪಾದಿಸಿದ್ದು, ವೈಷ್ಣವಿ 65 ರ್‍ಯಾಂಕಿಂಗ್ ಅಂಕಗಳನ್ನು ಪಡೆದರು.



ಬಹುಮಾನ: ಹನ್ನೆ (ಚಾಂಪಿಯನ್) - 15,239 ಡಾಲರ್, ವೈಷ್ಣವಿ (ರನ್ನರ್‌ಅಪ್) - 8,147 ಡಾಲರ್

ಪ ದ ಬಂ ಧ

» ರಾಜಾ ಸಂಗಮೇಶ ಹಿರೇಮಠ



5904

ಎಡದಿಂದ ಬಲಕ್ಕೆ
3.ದೇವರ್ಷಿ-ಕಲಹಪ್ರಿಯ-ನಾರದ (5)
6.ಗರನ ಗತಿಕಾಣಿಸಿದ ಪತಿವ್ರತೆ (3)
7.ಜರದ ನಡುವೆ ಶಿವನಡಗಿದ್ದಾನೆ (4)
8. ಕದ ತೆರದಾಗ ಕಂಡ ಕೂಸು (2)
9. ತುಸು ದೂರದಲ್ಲಿ ಕುಳಿತಿರುವ ಮಗ (2)
12.ನಾನು ಕಡೆಯಲ್ಲಿ ನೋಡಿದ ಸ್ವರ್ಗ (2)
14.ಯಜಮಾನನಿಗಿರುವ ಮರ್ಯಾದೆ (2)
15.ಪ್ರಜೆಗಳು ಚುನಾವಣೆಯಲ್ಲಿ ನೀಡುವ ಅಭಿಪ್ರಾಯ (4)
17.ಹಾಡುಗಾರ ಕಡೆಯಲ್ಲಿ ದೀರ್ಘವಾಗಿದ್ದಾನೆ (3)
18.ಅತಿ ಎಚ್ಚರಿಕೆಯಿಂದ ಕಾಯುತ್ತಿದೆ ಹಾವು (5)

ಮೇಲಿನಿಂದ ಕೆಳಕ್ಕೆ
1.ಹೊಳೆ-ಪ್ರಕಾಶಿಸು ಎಂಬರ್ಥದ ಶಬ್ದ (5)
2.ಭೂಮಿ ಮುಟ್ಟಿದಂತೆ ಕಾಣುವ ಆಕಾಶಭಾಗ (3)
4.ಕಂಡ ಸವಿಯಾದ ಕನಸು (5)
5.ನಿಧಾನವಾಗಿ ಕೇಳಿದ ಇಂಪಾದ ಸ್ವರ (3)
8.ನಡುಕವು ಕಡೆಯಲ್ಲಿ ದೀರ್ಘವಾಗಿದೆ (3)
10. ಬಿಸಿ-ಕಾವಿನಿಂದ ಕೂಡಿದ್ದು (3)
11. ಕಮಲದಲ್ಲಿ ಹುಟ್ಟಿದವನು ತಲೆಕೆಳಗಾಗಿದ್ದಾನೆ (5)
13. ಕಿಮ್ಮತ್ತಿಲ್ಲದ್ದು-ಅತ್ಯಲ್ಪ ಹಣ (5)
14. ಕೈಲಾಸ ಪರ್ವತದಲ್ಲಿರುವ ಸರೋವರ (3)
16. ವ್ಯಾಜ್ಯದ ಕೈಯಲ್ಲಿ ನಾಣ್ಯವಿಡಿಯಿದೆ (3)

5903 ಉತ್ತರ

ಎಡದಿಂದ ಬಲಕ್ಕೆ:
1.ಅರಮರಿಕೆ 5.ಪಲ್ಲಂಗ
6.ಅಂಕುರ 7.ನನಸಾಗು
9.ರಾಹುಕಾಲ
10.ಮನೋಹರ
11.ತಮೋಗುಣ
13.ಗಾರುಡಿ 15.ಹರಕೆ
16.ತಲೆತಪ್ಪಿಸು

ಮೇಲಿನಿಂದ ಕೆಳಕ್ಕೆ :
1.ಅಪದ್ಧನ 2.ಅಗ
3.ಅಂಕೆ 4.ಬರಗಾಲ
8.ಗುಡಾರ 9.ರಾವಣ
10.ಮತ್ಸ್ಯಾಗಾರ
12.ತಲೆಕೆಡು 14.ತಡಿ
15.ಹಸು

ಕಿರುಸುದ್ದಿ

ಪುಲಿಗೆರೆ ಉತ್ಸವ: ಗಮನ ಸೆಳೆದ ನೃತ್ಯ ವೈಭವ

ಲಕ್ಷ್ಮೇಶ್ವರ: ಪಟ್ಟಣದ ಸೋಮೇಶ್ವರ ದೇವಸ್ಥಾನದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಆಶ್ರಯದಲ್ಲಿ ಭಾರತೀಯ ವಿದ್ಯಾಭವನದಿಂದ ನಡೆಯುತ್ತಿರುವ ಪುಲಿಗೆರೆ ಉತ್ಸವದ ಮೊದಲ ದಿನ ಸಂಜೆ ಕಾರ್ಯಕ್ರಮದಲ್ಲಿ ಸಿದ್ದಾಪುರದ ಕೊಳಗಿ ಕೇಶವ ಹೆಗಡೆ ತಂಡದವರು ಸಾದರಪಡಿಸಿದ ಯಕ್ಷಗಾನ ನೃತ್ಯ ವೈಭವ ನೋಡುಗರಲ್ಲಿ ಮೈನವಿರೇಳಿಸಿತು.

ಕಲಾವಿದರು ಕೃಷ್ಣಾರ್ಜುನರ ಕಾಳಗದ ಪ್ರಸಂಗ ಆಯ್ದುಕೊಂಡು ಪ್ರಸ್ತುತಪಡಿಸಿದ ಯಕ್ಷಗಾನ ಅತ್ಯಂತ ಮನಮೋಹಕವಾಗಿತ್ತು.

ಗಯಗಂಧರ್ವನು ಯಜ್ಞವನ್ನು ಅಪವಿತ್ರಗೊಳಿಸಿದ ಹಿನ್ನೆಲೆಯಲ್ಲಿ ಕುಪಿತನಾದ ಶ್ರೀಕೃಷ್ಣ ಅವನನ್ನು ಎಂಟು ದಿನಗಳಲ್ಲಿ ಸಂಹರಿಸುವುದಾಗಿ ಶಪಥ ಮಾಡುತ್ತಾನೆ. ಇದನ್ನರಿತ ಗಯುಗಂಧರ್ವ ಭಯಪಟ್ಟು ನನ್ನನ್ನು ಕಾಪಾಡು ಎಂದು ಅರ್ಜುನನಲ್ಲಿ ಮೊರೆ ಇಡುತ್ತಾನೆ. ಇದು ಕೃಷ್ಣಾರ್ಜುನರ ಕಾಳಗಕ್ಕೆ ಕಾರಣವಾಗಿರುತ್ತದೆ. ಈರ್ವರು ಕಲಾವಿದರು ಸನ್ನಿವೇಶ, ಸಂಗೀತಕ್ಕೆ ತಕ್ಕಂತೆ ನೃತ್ಯ ಮಾಡಿ ಎಲ್ಲರ ಮನ ಸೆಳೆದರು.

ಬಳಿಕ ಶಿಗ್ಗಾವಿಯ ಬಸವೇಶ್ವರ ನೃತ್ಯ ಶಾಲೆಯ ಶರಣ ಶೇಖಪ್ಪ ಬಡ್ಡಿ ಮತ್ತು ತಂಡದವರು ಪ್ರದರ್ಶಿಸಿದ ಭರತ ನಾಟ್ಯ ಪ್ರದರ್ಶನ ನಾಟ್ಯ ಲೋಕವನ್ನೇ ಸೃಷ್ಟಿಸಿತ್ತು. ಯುವ ಕಲಾವಿದ ಶರಣ ಈವರೆಗೆ 500 ವೇದಿಕೆಗಳಲ್ಲಿ ತಮ್ಮ ಭರತ ನಾಟ್ಯ ಪ್ರದರ್ಶಿಸಿ ಕಲಾರಸಿಕರ ಮೆಚ್ಚುಗೆ ಗಳಿಸಿದ್ದಾರೆ. ಆರಂಭದಲ್ಲಿ ಸಾದರಪಡಿಸಿದ ಸ್ವಾಗತ ನೃತ್ಯ, ಸುಂದರವಾಗಿ ಮೂಡಿ ಬಂದಿತು.

ನಂತರ ಗಣಪನ ಪೂಜಾ ನೃತ್ಯ ವೈಭವ ಮತ್ತು ಸಭಿಕರಿಗೆ ಹೂಗಳ ಸಮರ್ಪಣೆ ನೃತ್ಯ ಅದ್ಭುತವಾಗಿ ಮೂಡಿ ಬಂದಿತು.

ನಂತರ ಸ್ಥಳೀಯ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಸಂಗೀತ ಶಿಕ್ಷಕ ಡಾ.ಅರ್ಜುನ ವಠಾರ ಅವರು ಹಿಂದೂಸ್ತಾನಿ ಸಂಗೀತ ಪ್ರಸ್ತುತಪಡಿಸಿದರು. ಅವರು ಬಳಿಕ ದಾಸರ ಪದಗಳನ್ನು ಹಾಡಿ ಸಂಗೀತ ಪ್ರೇಮಿಗಳ ಮನಸೂರೆಗೊಂಡರು.

ಹಿಂದೂ ಸಮಾಜೋತ್ಸವ ಧರ್ಮ ಸಭೆ ಇಂದು

ಲಕ್ಷ್ಮೇಶ್ವರ: ತಾಲೂಕಿನ ಪು.ಬಡ್ನಿ ಗ್ರಾಮದಲ್ಲಿ ಬಟ್ಟೂರ ಹೋಬಳಿಯ ಹಿಂದೂ ಸಮ್ಮೇಳನ ಸಮಿತಿಯಿಂದ ಫೆ.23ರಂದು ಮಧ್ಯಾಹ್ನ 3ಕ್ಕೆ ಬಡ್ನಿ ಗ್ರಾಮದಲ್ಲಿ ಬೃಹತ್ ಶೋಭಾ ಯಾತ್ರೆ ನಡೆಯಲ್ಲಿದ್ದು



ಬಳಿಕ ಸಂಜೆ 5ಕ್ಕೆ ಗ್ರಾಮದ ಶ್ರೀ ಆಂಜನೇಯ ದೇವಸ್ಥಾನದ ಪ್ರಾಂಗಣದಲ್ಲಿ ಹಿಂದೂ ಸಮಾಜೋತ್ಸವ ಧರ್ಮ ಸಭೆ ನಡೆಯಲಿದೆ.ಹೊಸರಿತ್ತಿಯ ಶ್ರೀ ಗುದ್ದಲಿಶಿವಯೋಗೀಶ್ವರ ಸ್ವಾಮಿಗಳು ಮತ್ತು ಸಂಕದಾಳದ ವಾಗೀಶ ಪಂಡಿತಾರಾಧ್ಯ, ಹಾಲಶಿವಯೋಗಿಗಳು ಸಾನಿಧ್ಯವಹಿಸುವರು. ಸನಾತನ ಧರ್ಮ, ಸಂಸ್ಕೃತಿ, ಸ್ವಾಮಿವಿವೇಕಾನಂದರ ರಾಷ್ಟ್ರಪ್ರೇಮ, ತತ್ವ ಚಿಂತನೆಗಳ ಬಗ್ಗೆ ಜನರಲ್ಲಿ ಜಾಗೃತಿ, ಅಭಿಮಾನ ಮೂಡಿಸಲು ಯುವ ವಾಗ್ಮಿ ಕು. ಹಾರಿಕ ಮಂಜುನಾಥ್ ದಿಕ್ಸೂಚಿ ಭಾಷಣಕಾರರಾಗಿ ಆಗಮಿಸುವವರು. ತಾಲೂಕಿನ ಮಾಡಳ್ಳಿ, ಯತ್ತಿನಹಳ್ಳಿ, ಯಳವತ್ತಿ, ಗೊಜನೂರ, ಅಕ್ಕಿಗುಂದ, ಅಕ್ಕಿಗುಂದತಾಂಡಾ ಶೆಟ್ಟಿಕೇರಿ, ಕುಂದ್ರಳ್ಳಿ, ಕುಂದ್ರಳ್ಳಿತಾಂಡಾ, ಬಟ್ಟೂರ, ಸಂಕದಾಳ, ನಾದಿಗಟ್ಟಿ, ವಡ್ಡರಪಾಳ್ಯ, ಆದರಹಳ್ಳಿ, ಪು. ಬಡ್ನಿ, ಹಿರೇಮಲ್ಲಾಪೂರ, ಅಮರಾಪೂರ ಗ್ರಾಮಗಳ ಸಮಸ್ತ ಹಿಂದೂ ಬಾಂಧವರು ಪಾಲ್ಗೊಳ್ಳಬೇಕೆಂದು ಹಿಂದೂ ಸಮ್ಮೇಳನ ಸಮಿತಿ ತಿಳಿಸಿದೆ.

ಶಾಸಕ ಡಾ.ಚಂದ್ರು ವಿರುದ್ಧ ಷಡ್ಯಂತ್ರ: ಗುಡಿಮನಿ

ಮುಂಡರಗಿ: ಶಾಸಕ ಡಾ.ಚಂದ್ರು ಲಮಾಣಿ ಅವರು ಸರ್ಕಾರದ ವೈಫಲ್ಯವನ್ನು ಸದನದೊಳಗೆ ಮತ್ತು ಹೊರಗಡೆ ಪ್ರತಿಭಟಿಸಿದಕ್ಕೆ ವಿರೋಧಿಗಳು ವ್ಯವಸ್ಥಿತವಾಗಿ ಲೋಕಾಯುಕ್ತಕ್ಕೆ ದೂರು ನೀಡಿ ಟ್ರ್ಯಾಪ್ ಮಾಡಿದ್ದಾರೆ ಎಂದು ಬಂಜಾರ ಸಮಾಜದ ಪ್ರಮುಖ ಸುಭಾಸ ಗುಡಿಮನಿ ತಿಳಿಸಿದ್ದಾರೆ.



ಈ ಕುರಿತು ಭಾನುವಾರ ಪ್ರಕಟಣೆ ನೀಡಿರುವ ಅವರು, ಶಾಸಕ ಡಾ.ಚಂದ್ರು ಅವರ ವಿರುದ್ಧ ಷಡ್ಯಂತರ ಮಾಡಲಾಗಿದೆ. ಒಬ್ಬ ದಲಿತ ಬಿಜೆಪಿ ಶಾಸಕ ಬೆಳೆಯುತ್ತಿರುವುದನ್ನು ಸಹಿಸಲಾಗದ ಪಟ್ಟಬದ್ಧ ವಿರೋಧಿಗಳು ಉದ್ದೇಶಪೂರ್ವಕವಾಗಿ ಷಡ್ಯಂತ್ರ ಮಾಡಿ ಅವರನ್ನು ಸಿಲುಕಿಸುವಂತ ಕೆಲಸ ಮಾಡಿದ್ದಾರೆ. ಇಂತಹ ಘಟನೆಗಳು ಯಾರಿಗೂ ಒಳ್ಳೆಯದಲ್ಲ, ಇದನ್ನು ಸಮಗ್ರ ತನಿಖೆ ಮಾಡಿ ಟ್ರ್ಯಾಪ್ ಮಾಡಿರುವವರ ಹಿಂದೆ ಯಾರಿದ್ದಾರೆ ಎನ್ನುವ ಬಗ್ಗೆ ಸೂಕ್ತ ತನಿಖೆ ಮಾಡಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಈ ಷಡ್ಯಂತ್ರದಲ್ಲಿ ಶಾಸಕ ಡಾ.ಚಂದ್ರು ಲಮಾಣಿ ಅವರು ಯಾವುದೆ ತಪ್ಪು ಮಾಡಿಲ್ಲ ಎಂದಿದ್ದಾರೆ.



ಲಕ್ಷ್ಮೇಶ್ವರ: ಪಟ್ಟಣದ ಸೋಮೇಶ್ವರ ದೇವಸ್ಥಾನದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಆಶ್ರಯದಲ್ಲಿ ಭಾರತೀಯ ವಿದ್ಯಾಭವನದಿಂದ ನಡೆಯುತ್ತಿರುವ ಪುಲಿಗೆರೆ ಉತ್ಸವದ ಮೊದಲ ದಿನ ಸಂಜೆ ಕಾರ್ಯಕ್ರಮದಲ್ಲಿ ಭರತ ನಾಟ್ಯ ಪ್ರದರ್ಶನ ನಾಟ್ಯ ಲೋಕವನ್ನೇ ಸೃಷ್ಟಿಸಿತ್ತು.

ವಿಶ್ವವಿದ್ಯಾಲಯದಲ್ಲಿ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ

ಗದಗ: ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಪಠ್ಯೇತರ ಚಟುವಟಿಕೆಗಳು ಅತ್ಯಂತ ಅವಶ್ಯಕವಾಗಿದ್ದು, ಕ್ರೀಡಾ ಚಟುವಟಿಕೆಗಳು ಶಾರೀರಿಕ ಆರೋಗ್ಯ, ಮಾನಸಿಕ ಸಮತೋಲನ ಹಾಗೂ ಸಾಮಾಜಿಕ ಜವಾಬ್ದಾರಿತ್ವವನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ವಿಶ್ವವಿದ್ಯಾಲಯದ ಕುಲಪತಿ ಹಾಗೂ ಕುಲಸಚಿವ ಪ್ರೊ.ಡಾ.ಸುರೇಶ್ ನಾಡಗೌಡ್ರ ಹೇಳಿದರು.

ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ 9ನೇ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದರು. ಶಿಕ್ಷಣದ ಜೊತೆಗೆ ಕೌಶಲ್ಯ, ಶಿಸ್ತು ಹಾಗೂ ಸೇವಾ ಮನೋಭಾವವನ್ನು ಬೆಳೆಸುವುದು ವಿಶ್ವವಿದ್ಯಾಲಯದ ಪ್ರಮುಖ ಗುರಿಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.ಮೇಘಾ ಮುನವಳ್ಳಿಮಠ ಮಾತನಾಡಿದರು. ಸ್ಕಿಲ್ ಪಿಕ್ ಸಂಸ್ಥೆಯ ಸಂಸ್ಥಾಪಕ ಹಾಗೂ ಅಂತಾರಾಷ್ಟ್ರೀಯ ಭಾಷಣಕಾರ ಡಾ.ವಿನಯ ಪಾಟೀಲ ಮಾತನಾಡಿ, ಯುವಕರು ಕ್ರೀಡೆ ಮತ್ತು ಶಿಕ್ಷಣವನ್ನು ಸಮನ್ವಯಗೊಳಿಸಿಕೊಂಡು ಸಮಗ್ರ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದು ಹೇಳಿದರು. ದೈಹಿಕ ಶಿಕ್ಷಣ ಮತ್ತು ಕ್ರೀಡೆ ವಿಭಾಗದ ಸಹಾಯಕ ನಿರ್ದೇಶಕ ಡಾ.ವಿರೇಶಕುಮಾರ ವಿಜಯಪುರ, ಶಶಿಭೂಷಣ್ ದೇವೂರ, ಮೃತ್ಯುಂಜಯ ಮೆಣಸಿನಕಾಯಿ, ಎಂ.ಬಿ.ಚೆನ್ನಪ್ಪಗೌಡರ, ಪ್ರಕಾಶ ಮಾಚೇನಹಳ್ಳಿ, ವಿಶ್ವವಿದ್ಯಾಲಯದ ಕ್ರೀಡಾಪಟುಗಳು, ಅಧ್ಯಾಪಕರು, ಅಧಿಕಾರಿಗಳು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.



ಗದಗ: ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ 9ನೇ ವಾರ್ಷಿಕ ಕ್ರೀಡಾಕೂಟಕ್ಕೆ ವಿಶ್ವವಿದ್ಯಾಲಯದ ಕುಲಪತಿ ಹಾಗೂ ಕುಲಸಚಿವ ಪ್ರೊ.ಡಾ.ಸುರೇಶ್ ನಾಡಗೌಡ್ರ ಚಾಲನೆ ನೀಡಿದರು. ಮೇಘಾ ಮುನವಳ್ಳಿಮಠ, ಸ್ಕಿಲ್ ಪಿಕ್ ಸಂಸ್ಥೆಯ ಸಂಸ್ಥಾಪಕ ಹಾಗೂ ಅಂತಾರಾಷ್ಟ್ರೀಯ ಭಾಷಣಕಾರ ಡಾ.ವಿನಯ ಪಾಟೀಲ ಇತರರು ಇದ್ದರು.

ವಾರದಲ್ಲಿ ಎರಡು ಅಗ್ನಿ ಅವಘಡ | ಜನಪ್ರತಿನಿಧಿಗಳ ಮೇಲೆ ಜನಾಕ್ರೋಶ

ತಾಲೂಕಿನಲ್ಲಿ ಅಗ್ನಿಶಾಮಕ ಕಚೇರಿ ಇದ್ದರೂ ಕಾರ್ಯಾರಂಭವಿಲ್ಲ!

ಗಜೇಂದ್ರಗಡ: ಗಜೇಂದ್ರಗಡ ನಗರ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಜನಸಂದಣಿಯು ಹೆಚ್ಚಾಗುತ್ತಿದೆ. ತಾಲೂಕು ಎಂದು ಘೋಷಣೆಯಾಗಿ ದಶಕಗಳೇ ಗತಿಸಿದರು ಸರ್ಕಾರಿ ಕಚೇರಿಗಳ ಪ್ರಾರಂಭ ಮಾತ್ರ ಆಮೆ ಗತಿಯಲ್ಲಿ ಸಾಗುತ್ತಿದೆ. ಇದಕ್ಕೆ ತಾಜಾ ಉದಾಹರಣೆ ಎಂದರೆ ಅಗ್ನಿಶಾಮಕ ಕಚೇರಿ ನಿರ್ಮಾಣಗೊಂಡು ವರ್ಷ ಗತಿಸಿದರು ಕಾರ್ಯಾರಂಭ ಮಾತ್ರ ಮರೀಚಿಕೆಯಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.



ಕಣ್ಮುಚ್ಚಿ ಕುಳಿತ ಜನಪ್ರತಿನಿಧಿ: ಅಗ್ನಿ ಅವಘಡಗಳಿಗೆ



ಸಂಬಂಧಿಸಿದಂತೆ ನಿತ್ಯ ವರದಿಗಳು ಪ್ರಕಟಗೊಂಡರೂ ತಾಲೂಕಿನ ಜನಪ್ರತಿನಿಧಿ ಶಾಸಕಜಿ.ಎಸ್.ಪಾಟೀಲ ಮಾತ್ರ ಕಚೇರಿಗೆ ಬೇಕಾಗುವ ಸಿಬ್ಬಂದಿ ಮತ್ತು ವಾಹನಕ್ಕೆ ಪ್ರಸ್ತಾವನೆ ಸಲ್ಲಿಸಿ ಸುಮ್ಮನಿದ್ದಾರೆ ಎಂಬ ಮಾತು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

ಅಗ್ನಿ ಅವಘಡ: ಕಳೆದ ಫೆ.13ರಂದು ನಗರದ ಜಡೆಯ ಶಂಕರಲಿಂಗೇಶ್ವರ ದೇವಸ್ಥಾನದ ಕೂಗಳತೆ ದೂರದಲ್ಲಿರುವ ಶರಣಪ್ಪ ಚುರ್ಚಿಹಾಳ ಎಂಬುವವರ ಹೋಟೆಲನಲ್ಲಿ ರಾತ್ರಿ ಏಕಾಏಕಿ ಸಿಲಿಂಡರ್ ಸೋರಿಕೆಯಿಂದ ದೊಡ್ಡ ಪ್ರಮಾಣದ ಸದ್ದು ಕೇಳಿಸಿ ಸ್ಫೋಟಗೊಂಡು ಬೆಂಕಿಯ ಕೆನ್ನಾಲಿಗೆ ಇಡೀ ಅಂಗಡಿಯ ಒಳಗಿನ ಎಲ್ಲ ವಸ್ತುಗಳನ್ನು ಸುಟ್ಟು ಕರಕಲಾದವು. ಈ ಸಂದರ್ಭದಲ್ಲಿ ಸ್ಥಳೀಯ ಯುವಕರೇ ತಮ್ಮ ಜೀವದ ಹಂಗು ತೊರೆದು ತುಂಬಿದ ಎರಡು ಸಿಲೆಂಡರ್‌ಗಳನ್ನು ಹೊರತೆಗೆದು ಬೆಂಕಿಯನ್ನು ನಂದಿಸುವಲ್ಲಿ ಸಹಕರಿಯಾದರು.ಈ ಸಂದರ್ಭದಲ್ಲಿ ಜೀವ ಹಾನಿಯಾಗಿದ್ದಾರೆ ಯಾರು ಹೊಣೆ?

> **2022-23ನೇ ಸಾಲಿನಲ್ಲಿ ಶಾಸಕರಾಗಿದ್ದ ಕಳಕಪ್ಪ ಬಂಡಿಯವರೆ 3 ಕೋಟಿ ರೂ. ವೆಚ್ಚದ ಕಾಮಗಾರಿಗೆ ಭೂಮಿಪೂಜೆ ಮಾಡಿದ್ದರು.ಆದರೆ, ಕಾಮಗಾರಿ ಪೂರ್ಣಗೊಂಡು ವರ್ಷಗಳೆ ಗತಿಸಿದರು ಸ್ಥಳೀಯ ಜನಪ್ರತಿನಿಧಿಗಳು ಮಾತ್ರ, ಜನೋಪಯೋಗಿ ಕಚೇರಿಗೆ ಕಾರ್ಯಾರಂಭ ಮಾಡುವ ಭಾಗ್ಯ ದೊರಕಿಸದೆ ಇರುವುದು ವಿಪರ್ಯಾಸ.**
> ■ ಅಶೋಕ ವನ್ನಾಲ. ಬಿಜೆಪಿ ಮುಖಂಡ.

ಫೆ. 18ರಂದು ನಗರದ ಕುಷ್ಟಗಿ ರಸ್ತೆಯ ಪಕ್ಕದಲ್ಲಿರುವ ಈದ್ಗಾ ಮೈದಾನಕ್ಕೆ ಹತ್ತಿರವಿರುವ ಗಾದಿ ಅಂಗಡಿ ಮತ್ತು ಅಲುಮಿನಿಯಂ ಅಂಗಡಿಗಳಿಗೆ ಆಕಸ್ಮಿಕ ಬೆಂಕಿ ಅವಗಡ ಸಂಭವಿಸಿ ಹಗಲು ಹೊತ್ತಿನಲ್ಲಿಯೇ ಎರಡು ಅಂಗಡಿಗಳು ಸುಟ್ಟು ಕರಕಲಾದವು ಇಲ್ಲಿಯೂ ಕೂಡ ಸ್ಥಳೀಯ ಸಾರ್ವಜನಿಕರೇ ಬೆಂಕಿ ನಂದಿಸುವಲ್ಲಿ ಹರಸಾಹಸ ಪಟ್ಟರು.

ಮೇಲಿನ ಎರಡು ಅವಘಡ ಸಂಭವಿಸುವ ಸಂದರ್ಭದಲ್ಲಿ ರೋಣದಿಂದ ಬಂದ ಅಗ್ನಿಶಾಮಕ ವಾಹನ ಸುಟ್ಟುಹೋದ ವಸ್ತುಗಳಿಗೆ ನೀರು ಸುರಿದು ಹೋಗಿದ್ದು ಬಿಟ್ಟರೆ ದೊಡ್ಡ ಪ್ರಮಾಣದ ಸಹಾಯವಾಗಲಿಲ್ಲ ಎಂದು ಸಾರ್ವಜನಿಕರು ಹೇಳಿದರು.

ಈಗಲಾದರೂ ಸ್ಥಳೀಯ ಶಾಸಕ ಜಿ.ಎಸ್. ಪಾಟೀಲ ಸರ್ಕಾರದ ಮೇಲೆ ಒತ್ತಡ ತಂದು ಕೂಡಲೇ ಕಚೇರಿಗೆ ಬೇಕಾದ ಸಿಬ್ಬಂದಿ ಮತ್ತು ವಾಹನ ತರುವಲ್ಲಿ ಗಮನ ಹರಿಸಲಿ ಎಂಬುವುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

ಶಿವಧ್ಯಾನದಿಂದ ಜೀವನ ಪ್ರಾಪ್ತಿ

ಗದಗ: ಆಧುನಿನ ದಿನಮಾನವು ಎಐ ತಂತ್ರಜ್ಞಾನದತ್ತ ಹೊರಳುತ್ತಿದೆ. ಪ್ರತಿಯೊಬ್ಬರೂ ಒತ್ತಡದ ಬದುಕಿನಲ್ಲಿ ಬದುಕುವಂತಾಗಿದ್ದು, ಸಮಯ ಸಿಕ್ಕಾಗೆಲ್ಲ ಶಿವಧ್ಯಾನ, ಪ್ರಾರ್ಥನೆ ಹಾಗೂ ಭಕ್ತಿ ಮಾರ್ಗದಲ್ಲಿ ನಡೆಯುವ ಮೂಲಕ ಸಂತೃಪ್ತಿ ಜೀವನ ನಡೆಸಬೇಕು ಎಂದು ಶಿವಕುಮಾರ ಶರಣರು ಹೇಳಿದರು.

ತಾಲೂಕಿನ ನರಸಾಪೂರ ಗ್ರಾಮದ ನಾಲತವಾಡ ವೀರೇಶ್ವರ ಶರಣರ ಮಠದಲ್ಲಿ ವೀರೇಶ್ವರ ಶರಣರ ಜಯಂತ್ಯುತ್ಸವ, ಮಹಾರಥೋತ್ಸವ ಹಾಗೂ ಚಂದ್ರಶೇಖರ ಶರಣರ 12ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ನಡೆದ ಧರ್ಮಸಭೆಯಲ್ಲಿ ಅವರು ಮಾತನಾಡಿದರು.

ಅಡ್ನೂರು ದಾಸೋಹ ಮಠದ ಅಭಿನವ ಪಂಚಾಕ್ಷರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಧರ್ಮಸಭೆಗೂ ಮುನ್ನ ಬೆಳಿಗ್ಗೆ ಷಟಸ್ಥಲ ಧ್ವಜಾರೋಹಣ, ವೀರೇಶ್ವರ ಶರಣರ ಹಾಗೂ ಚಂದ್ರಶೇಖರ ಶರಣರ ಮೂರ್ತಿಗಳಿಗೆ ಮಹಾರುದ್ರಾಭಿಷೇಕ

> **ಸಂಭ್ರಮದ ರಥೋತ್ಸವ**
>
> ತಾಲೂಕಿನ ನರಸಾಪೂರ ಗ್ರಾಮದ ನಾಲತವಾಡ ವೀರೇಶ್ವರ ಶರಣರ ಮಠದಲ್ಲಿ ವೀರೇಶ್ವರ ಶರಣರ ಜಯಂತ್ಯುತ್ಸವ, ಚಂದ್ರಶೇಖರ ಶರಣರ ಪುಣ್ಯಸ್ಮರಣೋತ್ಸವದ ಅಂಗವಾಗಿ ರವಿವಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದ ಮಹಾರಥೋತ್ಸವ ಜರುಗಿತು. ಶ್ರೀಮಠದ ಶಿವಕುಮಾರ ಶರಣರು ನೇತೃತ್ವ ವಹಿಸಿದ್ದರು.

ನಂತರ ಚಂದ್ರಶೇಖರ ಶರಣರ ಪುಣ್ಯಸ್ಮರಣೋತ್ಸವ ಕಾರ್ಯಕ್ರಮ ಜರುಗಿತು. ನಂತರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ನೂರಾರು ಭಕ್ತರು ಪಾಲ್ಗೊಂಡರು.

ಕಳಕಮಲ್ಲಯ್ಯ ಹಿರೇಮಠ, ಕೆ.ಎಸ್. ಹಿರೇಮಠ ಸೇರಿ ಅನೇಕರು ಇದ್ದರು. ಡಾ.ಸುಜಾತಾ ಪಾಟೀಲ ಉಚಿತ ಆರೋಗ್ಯ ಶಿಬಿರ ನಡೆಯಿತು.



ಫೆ.24ರಂದು ಶಾಂತಗಿರಿಯಲ್ಲಿ ಹಿಂದೂ ಸಮ್ಮೇಳನ



ಗಜೇಂದ್ರಗಡ: ತಾಲೂಕಿನ ಶಾಂತಗಿರಿ ಗ್ರಾಮದಲ್ಲಿ ಹಿಂದೂ ಸಮ್ಮೇಳನ ಸಮಿತಿಯಿಂದ ಫೆ.24ರಂದು ಹಿಂದೂ ಸಮ್ಮೇಳನ ನಡೆಯಲಿರುವ ಹಿನ್ನೆಲೆಯಲ್ಲಿ ಭಾನುವಾರ ನಗರದ ಪ್ರವಾಸಿ ಮಂದಿರದಲ್ಲಿ ಹಿಂದೂ ಮುಖಂಡರಿಂದ ಪತ್ರಿಕಾಗೋಷ್ಠಿ ನಡೆಯಿತು.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಹಿಂದೂ ಸಮ್ಮೇಳನ ಸಮಿತಿ ಅಧ್ಯಕ್ಷ ಹನಮಂತಪ್ಪ ನಾರಾಯಣಪುರ, ಹಿಂದೂಗಳಲ್ಲಿ ಧರ್ಮ ಜಾಗೃತಿಗಾಗಿ ಈ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಫೆ.24ರಂದು ಗಜೇಂದ್ರಗಡ ತಾಲೂಕಿನ ಶಾಂತಗಿರಿ ಗ್ರಾಮದಲ್ಲಿ ಬೃಹತ್ ಪ್ರಮಾಣದ ಸಮ್ಮೇಳನ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ 5 ಸಾವಿರಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ ಇದೆ ಎಂದರು.

ಸಮ್ಮೇಳನ ಸಮಿತಿ ಉಪಾಧ್ಯಕ್ಷ ಶರಣಪ್ಪ ಪ್ಯಾಟಿ ಮಾತನಾಡಿ, ಹಿಂದೂ ಸಮ್ಮೇಳನದಲ್ಲಿ 19 ಗ್ರಾಮದ ಜನ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಫೆ.24ರ ಮಧ್ಯಾಹ್ನ 3 ಗಂಟೆಗೆ ಬೃಹತ್ ಪ್ರಮಾಣದ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ನಾಡಿನ ಅನೇಕ ಸಾಂಸ್ಕೃತಿಕ ಕಲಾ ತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿವೆ. ಸಂಜೆ ಶಾಂತಗಿರಿ ಗ್ರಾಮದ ಮುಂದಿನ ಬಯಲು ಜಾಗೆಯಲ್ಲಿ ಸಮಾರೋಪ ಸಮಾರಂಭ ನಡೆಯಲಿದೆ ಎಂದರು.

ಹಿಂದೂ ಪರ ಸಂಘಟನೆ ಮುಖಂಡ ಸಂಜೀವ ಕುಮಾರ ಜೋಷಿ ಮಾತನಾಡಿ, ಈ ಕಾರ್ಯಕ್ರಮಕ್ಕೆ ಚಿಂತಕರಾದ ದಿವಾಕರ ಹೆಗಡೆಯವರು ಆಗಮಿಸಲಿದ್ದು, ಸಾನ್ನಿಧ್ಯವನ್ನು ರೋಣದ ಬೂದೇಶ್ವರ ಮಠದ ಶ್ರೀಗಳಾದ ಡಾ. ವಿಶ್ವನಾಥ ಮಹಾಸ್ವಾಮಿಗಳು ಹಿರೇಮಠ ವಹಿಸಿಕೊಳ್ಳಲಿದ್ದಾರೆ. ಇದೊಂದು ಐತಿಹಾಸಿಕ ಸಮ್ಮೇಳನವಾಗಲಿದೆ ಎಂದರು.

ಉಮೇಶ ಮಲ್ಲಾಪುರ ಮಾತನಾಡಿ, ಆರ್‌ಎಸ್‌ಎಸ್ ಸಂಘಟನೆ ಪ್ರಾರಂಭಗೊಂಡು ನೂರರ ಸಂಭ್ರಮ ಆಚರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಭಾರತ ಹಿಂದೂ ರಾಷ್ಟ್ರ, ಹಿಂದೂ ಧರ್ಮದ ಆಚಾರ ವಿಚಾರ ಸಂಸ್ಕೃತಿಯನ್ನು ಭಾರತೀಯರಲ್ಲಿ ಜಾಗೃತಗೊಳಿಸುವ ಉದ್ದೇಶದಿಂದ ಹಿಂದೂ ಸಮ್ಮೇಳನಗಳನ್ನು ದೇಶಾದ್ಯಾಂತ ಹಮ್ಮಿಕೊಳ್ಳಲಾಗಿದೆ ಎಂದರು.

ಈ ಸಂದರ್ಭದಲ್ಲಿ ಉಮೇಶ ಮಲ್ಲಾಪುರ, ಆಶೋಕ ಕಟ್ಟಿಮನಿ, ಆರ್.ಕೆ. ಚವ್ಹಾಣ, ಹನಮಂತಪ್ಪ ಹಟ್ಟಿಮನಿ, ಯಲ್ಲಪ್ಪ ಮಾದರ, ಮಲ್ಲು ಕುರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ರಾಜ್ಯ ಕೃಷಿ ನೀತಿ ಆಯೋಗ ರಚಿಸಲು ರಾಜ್ಯ ಸರ್ಕಾರಕ್ಕೆ ಒತ್ತಾಯ

ಲಕ್ಷ್ಮೇಶ್ವರ: ರಾಜ್ಯದ ರೈತರ ಹಾಗೂ ಕೃಷಿ ವಲಯದ ಭವಿಷ್ಯದ ಹಿತದೃಷ್ಟಿಯಿಂದ ಸಮಗ್ರ ಕೃಷಿ ನೀತಿ ರೂಪಿಸಲು ರಾಜ್ಯ ಕೃಷಿ ನೀತಿ ಆಯೋಗ ರಚಿಸಬೇಕು ಎಂದು ಜಿಲ್ಲಾ ಕೃಷಿಕ ಸಮಾಜ ಅಧ್ಯಕ್ಷ ವೀರೇಂದ್ರಗೌಡ ಪಾಟೀಲ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ



ಈ ಬಗ್ಗೆ ಪಟ್ಟಣದ ಪತ್ರಿಕಾ ಕಾರ್ಯಾಲಯದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು,2026-27 ನೇ ಬಜೆಟನಲ್ಲಿ ಕೃಷಿ ಇಲಾಖೆಯಲ್ಲಿ ಸಹಾಯಧನ ದರದಲ್ಲಿ ವಿತರಣೆ ಮಾಡುವ ಬಿತ್ತನೆ ಬೀಜಗಳ ಸಬ್ಸಿಡಿಯ ಸಾಮಾನ್ಯ ರೈತರಿಗೆ ಕಡಿಮೆ ಇದ್ದು ಸಾಮಾನ್ಯ ವರ್ಗದ ರೈತರಿಗೂ ಸಹ ಸಬ್ಸಿಡಿಯನ್ನುಹೆಚ್ಚಿಸಬೇಕು, ಕಳೆದ 10 ವರ್ಷಗಳಿಂದ ಬಿತ್ತನೆ ಬೀಜಗಳಿಗೆ ಕೊಡುವ ಸರ್ಕಾರದ ಸಹಾಯಧನವನ್ನು ಹೆಚ್ಚಳ ಮಾಡಿಲ್ಲ ಆದ್ದರಿಂದ ಈ ವರ್ಷದಿಂದ ಸಹಾಯಧನವನ್ನು ಹೆಚ್ಚಳ ಮಾಡಬೇಕು. ಕೇಂದ್ರ ಸರಕಾರ ಪ್ರತಿ ವರ್ಷ ರೈತರ ಬೆಳೆಗಳಿಗೆ ಎಂಎಸ್‌ಪಿ ಘೋಷಿಸುವಂತೆ ರಾಜ್ಯ ಸರ್ಕಾರವೂ ಸಹ ಹೆಚ್ಚುವರಿಯಾಗಿ ರೈತರ ಬೆಳೆಗಳಿಗೆ ಎಂಎಸ್‌ಪಿ ಘೋಷಿಸಬೇಕು, ಅದೇ ರೀತಿ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ ಸಿರಿದಾನ್ಯಗಳ ಸಂಶೋಧನಾ ಹಾಗೂ ವಿಸ್ತರಣಾ ಘಟಕವನ್ನು ಸ್ಥಾಪಿಸಲು ಬೇಕಾದ ಭೂಮಿ ಹಾಗೂ ಎಲ್ಲಾ ಮೂಲ ಸೌಕರ್ಯಗಳು ಲಭ್ಯವಿದ್ದು, ಈ ವಿಷಯವನ್ನು 2026-27ಸಾಲಿನ ಬಜೆಟನಲ್ಲಿ ಘೋಷಣೆ ಮಾಡಬೇಕು ಎಂದು ಮನವಿ ಮಾಡಿದ್ದಾರೆ,


ಈ ಸಂದರ್ಭದಲ್ಲಿ ತಾಲೂಕ ಕೃಷಿಕ ಸಮಾಜದ ಅಧ್ಯಕ್ಷ ಮಹೇಶ ಹೊಗೆಸೊಪ್ಪಿನ, ಉಪಾಧ್ಯಕ್ಷ ಫಕ್ಕೀರಗೌಡ ಪಾಟೀಲ, ಸುರೇಶ ಭೀರಣ್ಣವರ ಇದ್ದರು.

ಛತ್ರಪತಿ ಶಿವಾಜಿ ಕೊಡುಗೆ ಅಪಾರ

ಮುಂಡರಗಿ: ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದಲ್ಲಿ ತಾಲೂಕು ಆಡಳಿತದ ವತಿಯಿಂದ ಗುರುವಾರ ಛತ್ರಪತಿ ಶಿವಾಜಿ ಮಹಾರಾಜ ಜಯಂತಿ ಆಚರಿಸಲಾಯಿತು.

ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್. ಮಾತನಾಡಿ, ಛತ್ರಪತಿ ಶಿವಾಜಿ ಮಹಾರಾಜರು ದೇಶಪ್ರೇಮ ಹೊಂದಿದ್ದರು. ಹಿಂದೂ ಸ್ವರಾಜ್ಯದ ಸ್ಥಾಪನೆಗೆ ಶ್ರಮಿಸಿದರು ಎಂದು ಹೇಳಿದರು.

ಭೀಮಣ್ಣ ಆರೇರ, ದೇವಪ್ಪ ಇಟಗಿ, ಬಸವರಾಜ ನವಲಗುಂದ, ಪವನ್ ಲೇಡ್ವೆ, ಬಸವರಾಜ ಜೋಗಿನ್, ಮಲ್ಲಪ್ಪ ಆರೇರ, ಯಲ್ಲಪ್ಪ ಬನ್ನೂರ, ಸಿದ್ದಪ್ಪ ಆರೇರ, ಧ್ರುವಕುಮಾರ ಹೂಗಾರ ಇತರರು ಇದ್ದರು.





ಗದಗ: ಪ್ರಜಾಪತಿ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಿಂದ ಮಹಾಶಿವರಾತ್ರಿಯ ಅಂಗವಾಗಿ ನಗರದ ಮುನ್ಸಿಪಲ್ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಲಾದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಡಿ.ಆರ್.ಪಾಟೀಲ್, ಬಿ.ಬಿ.ಅಸೂಟಿ, ಬಿ.ಕೆ.ಜಯಂತಿ ಅಕ್ಕನವರು, ಬಿ.ಕೆ.ಸಾವಿತ್ರಿ ಅಕ್ಕನವರು, ಅಕ್ಬರಸಾಬ್ ಬಬರ್ಚಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಡಾ.ಕಾಳೆ ಅವರ ಆರೋಗ್ಯ ಸೇವೆ ಅನನ್ಯ: ಎಚ್. ಕೆ. ಪಾಟೀಲ

ನರೇಗಲ್ಲ: ಸಮರ್ಪಿತ ಅಭಿನಂದನಾ ಗ್ರಂಥವು ಡಾ. ಕಾಳೆಯವರ ವ್ಯಕ್ತಿತ್ವವನ್ನು ತೆರೆದಿಡುವುದರಲ್ಲಿ ಸಫಲವಾಗಿದೆ.ಅವರ ಆರೋಗ್ಯ ಸೇವೆ ಅನನ್ಯ ಮತ್ತು ಅವರ ಸರಳ, ಸಜ್ಜನ, ಸಂಭಾವಿತ ವ್ಯಕ್ತಿಗೆ ಸಮಾಜದಲ್ಲಿ ಮಾನಸನ್ಮಾನಗಳು ಹೇಗೆ ದೊರಕುತ್ತವೆ ಎಂಬುದಕ್ಕೆ ಡಾ. ಕಾಳೆ ಉದಾಹರಣೆಯಾಗಿದ್ದಾರೆ. ಅವರ ಜನ್ಮ ಶತಮಾನೋತ್ಸವವನ್ನು ನಾವುಗಳೆಲ್ಲರೂ ಸೇರಿ ವಿಜೃಂಭಣೆಯಿಂದ ಆಚರಿಸೋಣ ಎಂದು ರಾಜ್ಯದ ಕಾನೂನು ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್. ಕೆ. ಪಾಟೀಲ ಹೇಳಿದರು.



ಪಟ್ಟಣದ ಕೋಡಿಕೊಪ್ಪದ ಶ್ರೀ ವೀರಪ್ಪಜ್ಜನವರ ಶ್ರೀಮಠದಲ್ಲಿ ಜರುಗಿದ ಡಾ. ಜಿ. ಕೆ. ಕಾಳೆಯವರ ಅಮೃತ ಮಹೋತ್ಸವ ಸಮಾರಂಭದಲ್ಲಿ ಸಮರ್ಪಿತ ಅಭಿನಂದನಾ ಗ್ರಂಥವನ್ನು ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

ವಿಧಾನಪರಿಷತ್ ಸದಸ್ಯ ಎಸ್.ವಿ. ಸಂಕನೂರ ಮಾತನಾಡಿ, ಅಮೃತ ಮಹೋತ್ಸವ ಜೀವನದ ಮೈಲುಗಲ್ಲು, ಡಾ.ಕಾಳೆಯವರು ವೈದ್ಯಕೀಯ ವೃತ್ತಿಯಲ್ಲಿ ಮೇರುಪರ್ವತವನ್ನು ತಲುಪಿದ್ದಾರೆ ಎಂದರು.

ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಮಾತನಾಡಿ, ಹಿರಿಯರಿಗೆ ಗೌರವ ಸಲ್ಲಿಸುವ ಸಮಾರಂಭವೆ ಅಭಿನಂದನಾ ಸಮಾರಂಭ. ಹಿರಿಯರನ್ನು ಗೌರವಿಸುವದರಿಂದ ಚತುರ್ವಿದಫಲ ದೊರಕುತ್ತದೆ. ಡಾ. ಕಾಳೆಯವರ ಕುಟುಂಬದಲ್ಲಿನ ಸಂಸ್ಕಾರವನ್ನು ಕಂಡು ಆನಂದವಾಗಿದೆ ಎಂದರು.

ಶ್ರೀ ಮುಪ್ಪಿನ ಬಸವಲಿಂಗಸ್ವಾಮೀಜಿ ಆಶೀರ್ವಚನ ನೀಡಿ, ವ್ಯಕ್ತಿಯನ್ನು ಗುರುತಿಸುವಲ್ಲಿ ಭಾವನೆ ಬಹಳಷ್ಟು ಮುಖ್ಯ. ಸಮರ್ಪಿತ ಅಭಿನಂದನಾ ಗ್ರಂಥ ಡಾ. ಕಾಳೆಯವರಿಗೆ ಸಂದದ್ದು ಅಭಿನಂದನೀಯ. ಡಾ. ಕಾಳೆ ಸಮಾಜಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ. ಅವರ ಪ್ರಾಮಾಣಿಕತೆಯ ನೇರ-ನುಷ್ಠುರ ವ್ಯಕ್ತಿತ್ವ ಅವರನ್ನು ದೊಡ್ಡವರನನ್ನಾಗಿಸಿದೆ ಎಂದರು.

ಮಾಜಿ ಶಾಸಕ ಡಿ.ಆರ್. ಪಾಟೀಲ ಸಮಾರಂಭವನ್ನುದ್ಘಾಟಿಸಿದರು. ಶ್ರೀ ಗುರುಪಾದ ಸ್ವಾಮಿಗಳು, ಅಭಿನವ ಚನ್ನಬಸವೇಶ್ವರ ಶ್ರೀಗಳು, ಧರ್ಮಾಧಿಕಾರಿ ಡಾ. ಶಿವಕುಮಾರ ಸ್ವಾಮಿಗಳು ಆಶೀರ್ವಚನ ನೀಡಿದರು. ಸಭೆಯನ್ನುದ್ದೇಶಿಸಿ ಸಿದ್ದಪ್ಪ ಬಂಡಿ, ಡಾ. ಜಿ.ಕೆ. ಕಾಳೆ, ಅಧ್ಯಕ್ಷತೆ ವಹಿಸಿದ್ದ ಪ್ರಕಾಶ ಕುಲಕರ್ಣಿ ಮಾತನಾಡಿದರು. ಬಾಹುಬಲಿ ಜೈನರ, ಕೊಟ್ರೇಶ ಅರವಟಗಿಮಠ ನಿರೂಪಿಸಿದರು. ಡಾ. ದೀಪಾಲಿಕಾಳೆ ಸ್ವಾಗತಿಸಿದರು. ಎಂ. ಎಸ್. ಧಡೇಸೂರಮಠ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕೆ.ಎಸ್. ಕಳಕಣ್ಣವರ ಅಭಿನಂದನಾಪತ್ರ ಓದಿದರು. ವೇದಿಕೆಯ ಮೇಲೆ ಡಾ. ಮಲ್ಲಯ್ಯ ಚಪ್ಪನ್ನಮಠ, ರವೀಂದ್ರನಾಥ ದೊಡ್ಡಮೇಟಿ, ಭಾಗ್ಯವತಿಬಾಯಿ ಕಾಳೆ, ಗುರಣ್ಣ ಬಳಗಾನೂರ, ವಿದ್ಯಾಧರ ದೊಡ್ಡಮನಿ, ಮದನ ಕುಲಕರ್ಣಿ ಮುಂತಾದವರಿದ್ದರು.

ಸಾಮಾಜಿಕ ನ್ಯಾಯ ದಿನದ ಆಚರಣೆ: ಕಾನೂನು ಅರಿವು ನೆರವು ಕಾರ್ಯಕ್ರಮ

ಮುಂಡರಗಿ: ಕಾನೂನು ಸೇವೆಗಳ ಪ್ರಾಧಿಕಾರ ಗದಗ, ತಾಲೂಕು ಕಾನೂನು ಸೇವೆಗಳ ಸಮಿತಿ ಮುಂಡರಗಿ ಹಾಗೂ ಜಗದ್ಗುರು ತೋಂಟದ ಸಿದ್ಧಲಿಂಗೇಶ್ವರ ಕೋಟೆ ಪ್ರೌಢಶಾಲೆ ಇವುಗಳ ಆಶ್ರಯದಲ್ಲಿ ಸಾಮಾಜಿಕ ನ್ಯಾಯ ದಿನದ ಆಚರಣೆ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮ ನಡೆಯಿತು.



ಮುಖ್ಯ ಅತಿಥಿಗಳಾಗಿ ಹಿರಿಯ ವಕೀಲರಾದ ಆರ್.ವಿ. ದೊಡ್ಡಮನಿ ಮಾತನಾಡಿ, ಮಕ್ಕಳಿಗೆ ಸಾಮಾಜಿಕ ನ್ಯಾಯ ಎಂದರೇನು? ಎಂಬುದರ ಕುರಿತು ವಿವರವಾಗಿ ತಿಳಿಸಿದರು. ಹಿಂದುಳಿದ, ದಲಿತ ಹಾಗೂ ಬಡವರಿಗೆ ಕಾನೂನಿನ ಅಡಿಯಲ್ಲಿ ಅವರಿಗೆ ವಿಶೇಷ ಸೌಲಭ್ಯಗಳನ್ನು, ಅವಕಾಶಗಳನ್ನು ಕಲ್ಪಿಸಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರಿಗಾಗಿ ವಿಶೇಷ ಅವಕಾಶಗಳನ್ನು ಕಲ್ಪಿಸಿ ಮುಖ್ಯ ವಾಹಿನಿಗೆ ಅವರನ್ನು ಕರೆತರುವ ಉದ್ದೇಶದಿಂದ ಈ ಮೀಸಲಾತಿ ವ್ಯವಸ್ಥೆಯನ್ನು ಕಾನೂನು ತಜ್ಞರು ರೂಪಿಸಿದ್ದಾರೆ ಎಂದರು.

ವಕೀಲರಾದ ಮಂಜುನಾಥ ಅರಳಿ ಭಾಗವಹಿಸಿ ವಿದ್ಯಾರ್ಥಿಗಳೊಂದಿಗೆ ಸಂವಾದ ಮಾಡಿದರು. ವಿದ್ಯಾರ್ಥಿಗಳ ಹಲವಾರು ಪ್ರಶ್ನೆಗಳಿಗೆ ಉತ್ತರಿಸಿದರು. ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಿಯರಿಗೆ ವಿವಾಹವಾದರೆ ಬಾಲ್ಯ ವಿವಾಹ ಆಗುತ್ತದೆ, ಅದು ಕಾನೂನು ಬಾಹಿರ ಎಂದು ತಿಳಿಸಿದರು.

ತಮ್ಮ ಮನೆಯಲ್ಲಿ ತಮಗೆ ಅಥವಾ ತಮ್ಮ ಗೆಳತಿಯರಿಗೆ ಅಥವಾ ತಮ್ಮ ಸುತ್ತಮುತ್ತಲಿನಲ್ಲಿ ಯಾರಿಗಾದರೂ ಮದುವೆ ಮಾಡಲು ತಯಾರಿ ನಡೆಸಿದ್ದರೆ ತಕ್ಷಣ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ಅಥವಾ ಶಿಕ್ಷಕರಿಗೆ ಅಥವಾ ಮಕ್ಕಳ ಸಹಾಯವಾಣಿಗೆ ಕರೆ ಮಾಡಿ ನೀವು ತಿಳಿಸಿದರೆ ಅದನ್ನು ತಕ್ಷಣ ತಡೆಗಟ್ಟುವ ಕೆಲಸ ಕಾರ್ಯಗಳನ್ನು, ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರು ಮತ್ತು ಮಕ್ಕಳ ರಕ್ಷಣಾ ಆಯೋಗರವರು ಮಾಡುತ್ತಾರೆ ಎಂದು ಮಾತನಾಡಿದರು. ಒಂದು ವೇಳೆ ನೀವು ಕೋರ್ಟಿಗೆ ಬಂದರೆ ನಿಮಗೆ ಒಂದು ರೂಪಾಯಿ ತೆಗೆದುಕೊಳ್ಳದೆ ನಿಮಗೆ ಕೋರ್ಟಿನಲ್ಲಿ ನಿಮ್ಮ ಪರವಾಗಿ ಉಚಿತವಾಗಿ ವಾದಿಸಿ ನಿಮಗೆ ನ್ಯಾಯ ಕೊಡಿಸುವ ವ್ಯವಸ್ಥೆ ಕೋರ್ಟಿನಲ್ಲಿ ಇದೆ ಎಂದು ತಿಳಿಸಿದರು.

ಭುವನೇಶ್ವರಿ ವಿದ್ಯಾವರ್ಧಕ ಸಮಿತಿಯ ಗೌರವಕಾರ್ಯದರ್ಶಿಗಳಾದ ಎ.ವೈ. ನವಲಗುಂದ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಎಲ್ಲಾ ಧರ್ಮದವರು ಮತ್ತು ಎಲ್ಲಾ ಜಾತಿಯವರು ಒಪ್ಪಿಕೊಳ್ಳುವಂತಹ ಯಾವುದಾದರೂ ಈ ದೇಶದಲ್ಲಿ ಒಂದು ಗ್ರಂಥ ಇದ್ದರೆ ಅದು ಭಾರತದ ಸಂವಿಧಾನ ಎಂದರು, ಶತಮಾನಗಳಿಂದ ಅವಕಾಶಗಳಿಂದ ವಂಚಿತರಾದವರಿಗೆ, ರಾಜಕೀಯವಾಗಿ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದವರಿಗೆ ಕಾನೂನಿನ ಅಡಿಯಲ್ಲಿ ಮೀಸಲಾತಿಗಳನ್ನು ನೀಡಿ ಅವರನ್ನು ಮುಖ್ಯ ವಾಹಿನಿಗೆ ಕರೆತರುವ ವ್ಯವಸ್ಥೆ ಆಗಿರುತ್ತದೆ. ಅದು ಇತರರಿಗೆ ಬೇರೆ ರೀತಿ ಕಾಣಬಹುದು ಆದರೂ ಕಾನೂನು ತಜ್ಞರ ಪ್ರಕಾರ ಮತ್ತು ಕಾನೂನಿನ ಅಡಿಯಲ್ಲಿ ಅದು ಸರಿಯಾಗಿದೆ ಹಾಗಾಗಿ ಕಾನೂನು ಎಲ್ಲರನ್ನು ಸಮಾನವಾಗಿ ಕಾಣುತ್ತದೆ ಎಂದರು. ಶಾಲೆಯ ಮುಖ್ಯೋಪಾಧ್ಯಾಯರಾದ ಮಂಜುನಾಥ ತೆಗ್ಗಿನಮನಿ ಎಲ್ಲರನ್ನು ಪುಷ್ಪಾರ್ಪಣೆಯೊಂದಿಗೆ ಸ್ವಾಗತಿಸಿದರು, ಶಿಕ್ಷಕರಾದ ಆರ್.ವಿ. ಅರ್ಕಸಾಲಿ ನಿರೂಪಿಸಿದರು, ಪ್ರದೀಪ್ ನಾಯಕ್ ರವರು ವಂದಿಸಿದರು.

ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಉದ್ಘಾಟನೆ | ಸಿದ್ದರಾಮಯ್ಯ ಮಾತು

ಗ್ಯಾರಂಟಿಯಿಂದ ಅಭಿವೃದ್ಧಿ ನಿಂತಿಲ್ಲ



ಕಾರವಾರ: ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳಿಂದಾಗಿ ಅಭಿವೃದ್ಧಿ ಯೋಜನೆಗಳು ಸ್ಥಗಿತಗೊಂಡಿವೆ ಎನ್ನುವ ವಿರೋಧ ಪಕ್ಷಗಳ ಟೀಕೆಗೆ, ರಾಜ್ಯಾದ್ಯಂತ ನಡೆಯುತ್ತಿರುವ ಕಾಮಗಾರಿಗಳ ಉದ್ಘಾಟನಾ ಕಾರ್ಯಕ್ರಮಗಳೇ ಸೂಕ್ತ ಉತ್ತರ ನೀಡುತ್ತಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಗ್ಯಾರಂಟಿ ಯೋಜನೆಗಳ ಮೂಲಕ ಸಾರ್ವಜನಿಕರಿಗೆ 2,954 ಕೋಟಿ ರೂ. ನೀಡಿದ್ದು, ರಾಜ್ಯದಲ್ಲಿ 1.18 ಲಕ್ಷ ಕೋಟಿ ರೂ. ನೆರವು ನೀಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅವರು ಭಾನುವಾರ ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ 198.27 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ 450 ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಉದ್ಘಾಟನೆ ಮತ್ತು ಯಲ್ಲಾಪುರ ತಾಲೂಕಿನ ಖಾನಾಪುರ ತಾಳಗುಪ್ಪಾ ರಾಜ್ಯ ಹೆದ್ದಾರಿ-93ರಲ್ಲಿ 720.81 ಲಕ್ಷ ರೂ ವೆಚ್ಚದ ಸೇತುವೆ ಕಾಮಗಾರಿ, ಯಲ್ಲಾಪುರ ಪಟ್ಟಣದಲ್ಲಿ 202.89 ಲಕ್ಷ ರೂ.ವೆಚ್ಚದ ನಿರೀಕ್ಷಣಾ ಮಂದಿರದ ಹೊಸ ಕಟ್ಟಡ ನಿರ್ಮಾಣ ಹಾಗೂ ಮುಂಡಗೋಡ ತಾಲೂಕಿನಲ್ಲಿ 248.18 ಲಕ್ಷ ರೂ. ಮೊತ್ತದ ಹೊಸ ಪ್ರವಾಸಿ ಮಂದಿರ ನಿರ್ಮಾಣ ಕಾಮಗಾರಿ ಉದ್ಘಾಟಿಸಿ ಮಾತನಾಡಿದರು.

ಕಾರವಾರಕ್ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆಗಬೇಕು ಎಂದು ಶಾಸಕ ಸತೀಶ ಸೈಲ್ ಹಲವು ಬಾರಿ ಬೇಡಿಕೆ ಸಲ್ಲಿಸಿದ್ದಾರೆ ಹಾಗೂ ಒತ್ತಾಯಿಸಿದ್ದಾರೆ ಮತ್ತು ಇದು ಈ ಭಾಗದ ಜನರ ಪ್ರಮುಖ ಬೇಡಿಕೆ ಕೂಡ ಆಗಿದ್ದು, ಈ ಬಾರಿಯ ಆಯವ್ಯಯದಲ್ಲಿ ಕಾರವಾರಕ್ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಂಜೂರು ನೀಡಲಾಗುವುದು ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಮಾತನಾಡಿ, ನಮ್ಮ ಸರ್ಕಾರ ನುಡಿದಂತೆ ನಡೆದು ಎಲ್ಲಾ ಗ್ಯಾರಂಟಿಗಳನ್ನು ಜನರಿಗೆ ತಲುಪಿಸುವ ಅತ್ಯಂತ ಪ್ರಾಮಾಣಿಕ ಪ್ರಯತ್ನ ಮಾಡಿದೆ. ಪಂಚ ಗ್ಯಾರಂಟಿ ಜೊತೆಗೆ ಭೂಮಿ ಗ್ಯಾರಂಟಿ, ನೀರು ಗ್ಯಾರಂಟಿ, ಮನೆ ಗ್ಯಾರಂಟಿ, ಇ-ಖಾತೆ ಗ್ಯಾರಂಟಿ, ಆರೋಗ್ಯ ಗ್ಯಾರಂಟಿ ನೀಡಲಾಗುತ್ತಿದೆ. ಕರಾವಳಿ ಭಾಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಹೊಸ ನೀತಿ ರೂಪಿಸಲು ಮಂಗಳೂರಿನಲ್ಲಿ ಎಲ್ಲಾ ಶಾಸಕರು ಮತ್ತು ಬಂಡವಾಳ ಹೂಡಿಕೆದಾರರೊಂದಿಗೆ ಸಭೆ ನಡೆಸಲಾಗಿದ್ದು, ಪ್ರವಾಸೋದ್ಯಮ ಅಭಿವೃದ್ಧಿ ಮೂಲಕ ಇಲ್ಲಿನ ಯುವಕರಿಗೆ ಇಲ್ಲಿಯೇ ಉದ್ಯೋಗ ಒದಗಿಸಲಾಗುವುದು ಎಂದರು.

> ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸರ್ಕಾರಿ ಮೆಡಿಕಲ್ ಕಾಲೇಜು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಟ್ರೋಮಾ ಕೇರ್ ಸೆಂಟರ್ ಮತ್ತು ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣದ ಉದ್ದೇಶ ಹೊಂದಲಾಗಿದ್ದು, ಈ ಗುರಿಯನ್ನು ಪೂರ್ಣಗೊಳಿಸಲಾಗುವುದು.
> ■ ಡಾ.ಶರಣ ಪ್ರಕಾಶ ಪಾಟೀಲ್, ವೈದ್ಯಕೀಯ ಸಚಿವ

ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್. ವೈದ್ಯ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಎಂಸಿಎ ಅಧ್ಯಕ್ಷ ಹಾಗೂ ಶಾಸಕ ಸತೀಶ್ ಸೈಲ್ ಮಾತನಾಡಿ, ಈ ಹಿಂದೆ ನಾನು ಕಾರವಾರಕ್ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಾಡದಿದ್ದರೆ ನನ್ನ ಶಾಸಕ ಸ್ಥಾನಕ್ಕೆ ರಾಜಿನಾಮೆ ನೀಡುವುದಾಗಿ ಹೇಳಿದ್ದೆ. ಆದರೆ, ಇಂದು ಮುಖ್ಯಮಂತ್ರಿಗಳು ಸೂಪರ್ ಸ್ಪೆಷಾಲಿಟಿ ಈ ಘೋಷಣೆ ಮಾಡಿರುವುದಕ್ಕೆ ಅಭಿನಂದನೆ ಸಲ್ಲಿಸುವೆ ಎಂದರು.

ಶಾಸಕ ಆರ್.ವಿ.ದೇಶಪಾಂಡೆ, ಶಿವರಾಮ ಹೆಬ್ಬಾರ್, ಭೀಮಣ್ಣ ನಾಯ್ಕ, ವಿಧಾನ ಪರಿಷತ್ ಶಾಸಕ ಗಣಪತಿ ಉಳ್ವೇಕರ್, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಸತೀಶ ನಾಯ್ಕ, ವೈದ್ಯಕೀಯ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹಸಿನ್, ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕಿ ಡಾ.ಬಿ.ಎಲ್.ಸುಜಾತಾ ರಾಥೋಡ್, ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ, ಜಿ.ಪಂ ಸಿಇಓ ದಿಲೀಪ್ ಶಶಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಕ್ರಿಮ್ಸ್‌ನ ಡೀನ್ ಡಾ.ಪೂರ್ಣಿಮಾ ಮತ್ತಿತರರು ಉಪಸ್ಥಿತರಿದ್ದರು.

ಜಂಬಗಿ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ ಉದ್ಘಾಟನೆ

ಆಸ್ಪತ್ರೆ ದೊಡ್ಡ ಮಟ್ಟದಲ್ಲಿ ಬೆಳೆಯಲಿ: ಹೆಬ್ಬಾಳ್ಕರ್



ಬೆಳಗಾವಿ: ನಗರದ ಕೃಷ್ಣ ದೇವರಾಯ ಸರ್ಕಲ್ ಬಳಿ ಡಾ.ಲಕ್ಷ್ಮಣ ಜಂಬಗಿ ಅವರ ನೂತನ ಜಂಬಗಿ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯನ್ನು ಭಾನುವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ರಾಜ್ಯದಲ್ಲಿಯೇ ಬೆಳಗಾವಿ ದೊಡ್ಡ ಜಿಲ್ಲಾ ಹಾಗೂ ಎರಡನೇಯ ರಾಜಧಾನಿ, ದಿನನಿತ್ಯ ದೊಡ್ಡ ಮಟ್ಟದಲ್ಲಿ ಬೆಳೆಯುತ್ತಿದೆ. ಕೆಎಲ್ಇ ಸಂಸ್ಥೆಯು ಒಂದು ಆಲದ ಮರ. ಆ ಮರದ ಕೆಳಗಡೆ ಎಲ್ಲರೂ ಕುಳಿತುಕೊಳ್ಳುತ್ತಿದ್ದಾರೆ.

ಗಟ್ಟಿಯಾಗಿರುವುದರಿಂದ ಇವತ್ತು ಆರೋಗ್ಯ ದೃಷ್ಟಿ ಹೆಚ್ಚಾಗುತ್ತಿದೆ. ಆರೋಗ್ಯಕ್ಕೆ ವಿಶ್ವಾಸ ಎಂದು ಬೆಳಗಾವಿ ವೈದ್ಯರು ಹಾಗೂ ವೈದ್ಯಕೀಯ ಕ್ಷೇತ್ರ. ಅದೇ ರೀತಿಯಲ್ಲಿ ಜಂಬಗಿ ಆಸ್ಪತ್ರೆಯು ದೊಡ್ಡ ಮಟ್ಟದಲ್ಲಿ ಬೆಳೆಯಲಿದೆ ಎಂದು ಭರವಸೆ ನೀಡಿದರು.

ಈ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಜರ್ಮನಿ, ಜಪಾನ್‌ನಿಂದ ಚಿಕಿತ್ಸೆಗೆ ಬೇಕಾಗಿರುವ ಸಲಹಕರಣೆಗಳನ್ನು ತರಿಸಿದ್ದಾರೆ. ಈ ಆಸ್ಪತ್ರೆಯೂ ದೊಡ್ಡ ಮಟ್ಟದಲ್ಲಿ ಬೆಳೆದು ರಾಜ್ಯಾದ್ಯಂತ ವಿಸ್ತರಿಸಬೇಕೆಂದು ಲಕ್ಷ್ಮೀ ಹೆಬ್ಬಾಳಕ್ಕರ್ ಹೇಳಿದರು.

ಇದೇ ವೇಳೆ ಪದ್ಮಶ್ರೀ ಡಾ.ಪ್ರಭಾಕರ್ ಕೋರೆ ಅವರು ಮಾತನಾಡಿ, ಕಳೆದ ನಾಲವತ್ತು ವರ್ಷಗಳ ಹಿಂದೆ ಬೆಳಗಾವಿ ಯಾವ ರೀತಿ ಇತ್ತು. ಇದೀಗ ಯಾವ ರೀತಿಯಾಗಿ ಬೆಳಗಾವಿ ಬದಲಾವಣೆ ಆಗಿದೆಯೂ ಅದೇ ರೀತಿ ನಮ್ಮ ವೈದ್ಯಕೀಯವೂ ನೂತನ ತಂತ್ರಜ್ಞಾನಗಳೊಂದಿಗೆ ಬದಲಾವಣೆಯಾಗುತ್ತಿದೆ. ಜಂಬಗಿ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆನೋಡಿದರೆ ಒಂದು ಫೈವ್ ಸ್ಟಾರ್ ಹೋಟೆಲ್ ರೀತಿ ಕಾಣುತ್ತಿದೆ. ಅಷ್ಟು ಸುಂದರವಾಗಿ ಕಟ್ಟದ ನಿರ್ಮಾಣ ಮಾಡಿದ್ದಾರೆ. ಜಂಬಗಿ ಆಸ್ಪತ್ರೆಯು ಜಿಲ್ಲೆಯಲ್ಲಿ ಅಷ್ಟೇ ಅಲ್ಲದೆ, ರಾಜ್ಯ ಹಾಗೂ ದೇಶ ವ್ಯಾಪ್ತಿಯಲ್ಲಿ ಬೆಳದು ಜನತೆಯ ಸೇವೆ ಮಾಡಬೇಕು ಎಂದರು.

> ಕಳೆದ ಮೂವತ್ತು ವರ್ಷಗಳಿಂದ ವೈದ್ಯಕೀಯ ಕ್ಷೇತ್ರದಲ್ಲಿ ಜನತೆಯ ಸೇವೆ ಮಾಡಿಕೊಂಡು ಬರುತ್ತಿದ್ದೇವೆ. ಮೊದಲು ರಾಯಬಾಗ ತಾಲೂಕಿನ ಹಾರೂಗೇರಿಯಲ್ಲಿ ಸಣ್ಣ ಆಸ್ಪತ್ರೆ ಪ್ರಾರಂಭ ಮಾಡಿ ಸತತವಾಗಿ ಜನತೆಯ ಸೇವೆ ಮಾಡಿಕೊಂಡು ಬಂದು ಇದೀಗ ಬೆಳಗಾವಿಯ ಕೇಂದ್ರ ಬಿಂದುವಿನಲ್ಲಿ ದೊಡ್ಡ ಮಟ್ಟದಲ್ಲಿ ಜನತೆಯ ಸೇವೆ ಮಾಡಬೇಕೆಂದು ಈ ಆಸ್ಪತ್ರೆ ನಿರ್ಮಾಣ ಮಾಡಲಾಗಿದೆ.
> ■ ಲಕ್ಷ್ಮಣ ಜಂಬಗಿ, ಜಂಬಗಿ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ ಸಂಸ್ಥಾಪಕ

ಈ ಸಂದರ್ಭದಲ್ಲಿ ಜಂಬಗಿ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ ಸಂಸ್ಥಾಪಕ ಲಕ್ಷ್ಮಣ ಜಂಬಗಿ ಮಾತನಾಡಿ, ಇನ್ನು ಈ ಸಂಸ್ಥೆ ಒಂದೇ ಸೂರಿನಡಿ ಸಂಪೂರ್ಣ ಕಣ್ಣಿನ ಚಿಕಿತ್ಸೆಯನ್ನು ಒದಗಿಸುತ್ತದೆ. ಇದರಲ್ಲಿ ಕಣ್ಣಿನ ಪೊರೆ ಬಿಂದು, ಕ್ಯಾಟರಾಕ್ಟ್, ಕಾರ್ನಿಯಾ, ರೆಟಿನಾ, ಗ್ಲಕೋಮಾ, ಮಕ್ಕಳ ನೇತ್ರಚಿಕಿತ್ಸೆ, ಒಕ್ಯುಲೋಪ್ಲಾಸ್ಟಿ, ನ್ಯೂರೋ-ಅಫ್ತಾಲ್ಮಾಲಜಿ, ರಿಫ್ರಾಕ್ಟಿವ್ ಶಸ್ತ್ರಚಿಕಿತ್ಸೆ ಸೇರಿದಂತೆ ವಿಶೇಷ ಡ್ರೈ ಐ ಹಾಗೂ ಕಾಂಟ್ಯಾಕ್ಟ್ ಲೆನ್ಸ್ ಕ್ಲಿನಿಕ್ ಕೂಡ ಸೇರಿದೆ. ಮತ್ತು ಮೊದಲ ಬಾರಿಗೆ ರೋಬೋಟಿಕ್ 4) ಫ್ಯಾಕೋ ಕ್ಯಾಟರಾಕ್ಟ್ ಶಸ್ತ್ರಚಿಕಿತ್ಸೆ ಹಾಗೂ ಕನ್ನಡಕ ಮುಕ್ತಿಗಾಗಿ ಜೈಸ್ಟ್ ಒಇಐ 90 ಎಕ್ಸಿಮರ್ ಲೇಸರ್ ತಂತ್ರಜ್ಞಾನವನ್ನು ಹೆಚ್ಚಿನ ನಿಖರತೆ, ಸುರಕ್ಷತೆ ಮತ್ತು ವೇಗವಾದ ಗುಣಮುಖತೆಯನ್ನು ಪಡೆದುಕೊಳ್ಳಲಿದೆ ಜನತೆಯು ಇದರ ಲಾಭ ಪಡೆದುಕೊಳ್ಳಬೇಕು ಎಂದರು.

ಈ ವೇಳೆ ಡಾ.ಪ್ರಭಾಕರ ಕೋರೆ, ಡಾ.ಲಕ್ಷ್ಮಣ ಜಂಬಗಿ, ಡಾ.ವರ್ಷಾ ಜಂಬಗಿ, ಡಾ.ಅಮೋಘ ಜಂಬಗಿ, ಡಾ.ಪ್ರೇರಣಾ ಜಂಬಗಿ, ಡಾ.ಹಿತಾ ಹೆಬ್ಬಾಳ್ಕರ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಕಿರುಸುದ್ದಿ

ಅಧಿಕಾರ ಹಂಚಿಕೆ ವಿಷಯ ಶೀಘ್ರ ತೆರೆ: ಜಾರಕಿಹೊಳಿ



ಹೊನ್ನಾವರ: ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಅಧಿಕಾರ ಹಂಚಿಕೆ ವಿದ್ಯಮಾನದ ಕುರಿತು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರು ಶೀಘ್ರ ತೆರೆ ಎಳೆಯಲಿದ್ದಾರೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ವಿಶ್ವಾಸ ವ್ಯಕ್ತಪಡಿಸಿದರು. ಜಿಲ್ಲೆಯಲ್ಲಿ ಎರಡು ದಿನ ಪ್ರವಾಸದಲ್ಲಿರುವ ಸಚಿವರು ಹೊನ್ನಾವರದ ಅರೇಅಂಗಡಿಯ ಶ್ರೀಧರ ಶೆಟ್ಟಿ ಮನೆಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಷಯ ಸದ್ಯ ಚರ್ಚೆ ಇಲ್ಲ. ಇದು ಪಕ್ಷದ ಹೈಕಮಾಂಡ್ ಮಟ್ಟದಲ್ಲಿ ತೀರ್ಮಾನವಾಗಲಿದೆ. ಕಳೆದ ಆರು ತಿಂಗಳಿನಿಂದ ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆಯನ್ನು ಹೈಕಮಾಂಡ್ ಗಮನಿಸುತ್ತಿದೆ ಎನ್ನುವ ಮೂಲಕ ಸಿಎಂ ಸಿದ್ದರಾಮಯ್ಯವರೇ ಮುಂದುವರಿಯುವ ಪರೋಕ್ಷ ಸೂಚನೆ ನೀಡಿದರು. ಗದಗ ಜಿಲ್ಲೆಯ ಶಿರಹಟ್ಟಿ ಬಿಜೆಪಿ ಶಾಸಕ ಲಂಚ ಸ್ವೀಕರಿಸಿರುವ ಸಮಯದಲ್ಲಿ ಲೋಕಾಯುಕ್ತರಿಗೆ ಸಿಕ್ಕಿ ಬಿದ್ದ ಬಗ್ಗೆ ಪ್ರಶ್ನಿಸಿದಾಗ, ಈ ಬಗ್ಗೆ ತನಿಖೆ ನಡೆದು ಶಿಕ್ಷೆಯಾದಾಗ ಮಾತ್ರ ಮುಂದಿನ ದಿನದಲ್ಲಿ ಭ್ರಷ್ಟಾಚಾರ ನಿಯಂತ್ರಣವಾಗಲಿದೆ. ಈ ಬಗ್ಗೆ ಲೋಕಾಯುಕ್ತ ಇಲಾಖೆ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ನೀಡುವ ವಿಶ್ವಾಸವಿದೆ ಎಂದರು.

ಹೈಕೋರ್ಟ್‌ಗೆ ಸುಪ್ರೀಂ ಮಾದರಿ ಸೌಲಭ್ಯ: ಕೋನರಡ್ಡಿ



ಧಾರವಾಡ: ಸುಪ್ರೀಂಕೋರ್ಟ್ ಮಾದರಿ ಹೈಕೋರ್ಟ್‌ಗೂ ಕೂಡ ಮೂಲಭೂತ ಸೌಕರ್ಯಗಳು ಒದಗಿಸುವುದು, ಧಾರವಾಡ ವಕೀಲರ ಸಂಘಕ್ಕೆ ಆಧುನಿಕ ಬಾರ್ ಅಸೋಸಿಯೇಷ್ ಕಟ್ಟಡ ನಿರ್ಮಾಣ ತೀರ್ಮಾನಿಸಲು ದೆಹಲಿಗೆ ಹೋಗಿದ್ದಾಗಿ ಶಾಸಕ ಎನ್.ಎಚ್.ಕೋನರಡ್ಡಿ ಹೇಳಿದರು. ಭಾನುವಾರ ಸುದ್ದಿಗಾರರಿಗೆ ದೆಹಲಿ ಪ್ರವಾಸದ ಕುರಿತು ಸ್ಪಷ್ಟನೆ ನೀಡಿದ ಅವರು, ಸತೀಶ ಜಾರಕಿಹೊಳಿ ನೇತೃತ್ವದಲ್ಲಿ ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿದ್ದಾಗಿ ತಿಳಿಸಿದ ಅವರು, ರಾಜ್ಯ ರಾಜಕೀಯದ ಸಮಸ್ಯೆ ಶೀಘ್ರದಲ್ಲೇ ಇತ್ಯರ್ಥವಾಗಲಿದೆ. ಹೈಕಮಾಂಡ್ ಎಲ್ಲವೂ ಪರಿಹರಿಸಲಿದೆ ಎಂದರು.

ವಿದೇಶಿಗರ ಸವಿರುಚಿ ಹೆಚ್ಚಿಸಿದ ಕರ್ನಾಟಕ

ರಾಜ್ಯದ ಕೃಷಿಗೆ ಜಾಗತಿಕ ಮನ್ನಣೆ



ಧಾರವಾಡ: ಪ್ರಧಾನಿ ನರೇಂದ್ರ ಮೋದಿ ರಾಜ್ಯದ ಕೃಷಿ ಉತ್ಪನ್ನ ಸೇರಿ ಭಾರತದ ಕೃಷಿಗೆ ಜಾಗತಿಕ ಮನ್ನಣೆ ಕಲ್ಪಿಸಿಕೊಟ್ಟಿದ್ದಾರೆ. ಪರಿಣಾಮ ನಂಜನಗೂಡು ಬಾಳೆ, ಮೈಸೂರು ವೀಳ್ಯದೆಲೆ, ಇಂಡಿಯ ನಿಂಬೆಹಣ್ಣು ವಿದೇಶಿ ಪ್ರಸಿದ್ಧಿ ಪಡೆದಿವೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ಇಲ್ಲಿನ ವಡ್ಡಿನ ಕಲ್ಯಾಣ ಮಂಟಪದಲ್ಲಿ ಭಾನುವಾರ ಪ್ರಧಾನಿ ಮೋದಿ 131ನೇ 'ಮನ್ ಕೀ ಬಾತ್' ಸಂಚಿಕೆ ವೀಕ್ಷಿಸಿ ಮಾತನಾಡಿದ ಅವರು, ಮನ್ ಕೀ ಬಾತ್ ನಲ್ಲಿ ಪ್ರಧಾನಿ ಮೋದಿ ಅವರು ವಿಶೇಷವಾಗಿ ಕರ್ನಾಟಕದ ರೈತರ ಸಾಧನೆ ಬಗ್ಗೆ ತಿಳಿಸಿ ಶ್ಲಾಘಿಸಿದ್ದಾರೆ ಎಂದು ತಿಳಿಸಿದರು.

ಮನ್ ಕೀ ಬಾತ್‌ನಲ್ಲಿ ಅನಾವರಣ

ಮಾಲ್ಡೀವ್ಸ್ ಸೇರಿ ವಿದೇಶಗಳಲ್ಲಿ ಆಹಾರೋತ್ಪನ್ನದ ಸವಿರುಚಿ ಹೆಚ್ಚಿಸಿದ ರಾಜ್ಯದ ಅನ್ನದಾತರನ್ನು ಈ ಮೂಲಕ ಹುರಿದುಂಬಿಸುತ್ತಿದ್ದಾರೆ. ರಾಜ್ಯದ ಹೆಮ್ಮೆಯ ಜಿಐ ಮಾನ್ಯತೆ ಪಡೆದ ನಂಜನಗೂಡಿನ ಬಾಳೆ, ಮೈಸೂರು ವೀಳ್ಯದೆಲೆ, ಇಂಡಿಯ ನಿಂಬೆಹಣ್ಣು ವಿಶಿಷ್ಟತೆ ಜೋಶಿ ಕೊಂಡಾಡಿದರು.

ಕೇಂದ್ರ ಸರ್ಕಾರದ ರಫ್ತು ನೀತಿ, ನಿಯಮಗಳು ಹಾಗೂ ರೈತರು ಮತ್ತು ವರ್ತಕರ ಬೆಂಬಲಕ್ಕೆ ನಿಂತು ಯೋಜನೆಗಳಿಂದ ಕೃಷಿ ಉತ್ಪನ್ನಗಳಿಗೂ ಇಂದು ಮಾಲ್ಡೀವ್ಸ್ ಅಂತಹ ರಾಷ್ಟ್ರದಲ್ಲಿ ಮಾರುಕಟ್ಟೆ ದೊರೆತು ಜಾಗತಿಕ ಮಟ್ಟದಲ್ಲಿ ಕರ್ನಾಟಕ ಉತ್ಪನ್ನಗಳಿಗೆ ಬೇಡಿಕೆ ಕಂಡು ಬರುತ್ತಿದೆ ಎಂದರು.

ರಾಜ್ಯದ ರೈತರು ಅಧಿಕ ಇಳುವರಿಗೆ ಸೀಮಿತವಾಗದೆ. ಗುಣಮಟ್ಟಕ್ಕೂ ಆದ್ಯತೆ ನೀಡುವ ಮೂಲಕ ಭಾರತೀಯ ಕೃಷಿ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ನೀಡುತ್ತಿದ್ದಾರೆ. ಜತೆಗೆ ಪ್ರಧಾನಿ ಅವರೂ ರಾಜ್ಯದ ರೈತರನ್ನು ಪ್ರೋತ್ಸಾಹಿಸುತ್ತಿದ್ದಾರೆ ಎಂಬುವುದಕ್ಕೆ ಮನ್ ಕೀ ಬಾತ್ ನಿದರ್ಶನ ಎಂದು ತಿಳಿಸಿದರು.

ಶಾಸಕ ಅರವಿಂದ ಬೆಲ್ಲದ, ಮಾಜಿ ಸಚಿವ ಮುರುಗೇಶ ನಿರಾಣಿ, ಮೇಯರ್ ಜ್ಯೋತಿ ಪಾಟೀಲ, ಬಿಜೆಪಿ ಮಂಡಲ ಅಧ್ಯಕ್ಷ ಮಂಜುನಾಥ ಮಲ್ಲಿಗವಾಡ, ಜಿಲ್ಲಾ ಕಾರ್ಯದರ್ಶಿ ಬಸವರಾಜ ಗರಗ, ಪರಶುರಾಮ ಸಾಖರೆ, ಪಾಲಿಕೆ ಸದಸ್ಯರು, ಪಕ್ಷದ ಪದಾಧಿಕಾರಿಗಳು, ಕಾರ್ಯಕರ್ತರು ಇದ್ದರು.

> **ವೈಭವ ಕೊಂಡಾಡಿದ ಪ್ರಧಾನಿ ಮೋದಿ**
> ಭಾಷಾ ವೈವಿಧ್ಯತೆ-ಸಂಪ್ರದಾಯಗಳ ವೈಭವ, ವಿಜ್ಞಾನ ಸಾಧನೆ, ದೇಶಿ ಪರಂಪರೆ, ವಿದೇಶಗಳಲ್ಲಿ ಭಾರತೀಯ ಸಂಸ್ಕೃತಿ-ರೈತರ ಪರಿಶ್ರಮದ ಅನಾವರಣ, ಸ್ತ್ರೀ ಶಕ್ತಿ-ಯುವ ಶಕ್ತಿ, ಯೋಗ-ಆಯುರ್ವೇದ, ಆರೋಗ್ಯ ಸಂದೇಶ, ಸ್ವಚ್ಛತೆ ಹಾಗೂ ಸ್ವಾವಲಂಬನೆಯಿಂದ ಅಭಿವೃದ್ಧಿಶೀಲತೆ, ತ್ರಿವರ್ಣದ ಗರ್ವವರೆಗೆ ಇಡೀ ದೇಶ ಹೆಮ್ಮೆಪಡುವಂತೆ ಭಾರತದ ಅನೇಕ ಸಂಗತಿಗಳನ್ನು ಪ್ರಧಾನಿ ಮೋದಿ ಅವರು ಮನ್ ಕೀ ಬಾತ್ ಮೂಲಕ ಪ್ರತಪಡಿಸಿದರು.

ಸಚಿವ ಸತೀಶ ಜಾರಕಿಹೊಳಿ ಅಭಿಪ್ರಾಯ

ಜನರ ಕಷ್ಟಗಳಿಗೆ ಸ್ಪಂದಿಸುವ ವ್ಯಕ್ತಿ ಶಿಲೇದಾರ



ಎಸ್.ಜೆ.ಇಂಟರ್ ನ್ಯಾಷನಲ್ ಹೋಟೆಲ್ ಲೋಕಾರ್ಪಣೆ

ಚನ್ನಮ್ಮನ ಕಿತ್ತೂರು: ಹಬೀಬ ಶಿಲೇದಾರ ಇವರು ಈ ಭಾಗದಲ್ಲಿ ಸಾಕಷ್ಟು ಜನರಿಗೆ ಉದ್ಯೋಗ ನೀಡಿ ಉದ್ಯೋಗವಂತರನ್ನಾಗಿ ಮಾಡುವುದರ ಜೊತೆಗೆ ಸಮಾಜ ಸೇವೆಯ ಮೂಲಕ ಜನರ ಕಷ್ಟಗಳಿಗೆ ಸ್ಪಂದಿಸುವ ವ್ಯಕ್ತಿಗಳಾಗಿದ್ದಾರೆ ಎಂದು ಲೋಕೋಪಯೋಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಅಂಬಡಗಟ್ಟಿ ಕ್ರಾಸ್, ಸತೀಶಣ್ಣಾ ಕಲ್ಯಾಣ ಮಂಟಪದ ಹತ್ತಿರ ನಿರ್ಮಾಣವಾಗಿರುವ ಎಸ್.ಜೆ.ಇಂಟರ್ ನ್ಯಾಷನಲ್ ಹೋಟೆಲ್, ಉಡುಪಿ ವೈಭವ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಕಿತ್ತೂರು ಭಾಗದಲ್ಲಿ ಕಲ್ಯಾಣ ಮಂಟಪ ನಿರ್ಮಿಸಿ ಸಾಕಷ್ಟು ಜನರಿಗೆ ಉದ್ಯೋಗ ಮತ್ತು ಉಚಿತ ಹೊಲಿಗೆ ತರಬೇತಿ ಕೇಂದ್ರ ಸ್ಥಾಪಿಸುವ ಮೂಲಕ ಮಹಿಳೆಯರು ಸ್ವಯಂ ಉದ್ಯೋಗ ಕೈಗೊಳ್ಳಲು ಕ್ರಮಕ್ಕೆಗೊಂಡು ಅಂಬಡಗಟ್ಟಿ ಸಣ್ಣ ಗ್ರಾಮದಲ್ಲಿ ಗಾರ್ಮೆಂಟ್ ಪ್ರಾರಂಭಿಸಿ ಮಹಿಳೆಯರಿಗೆ ಉದ್ಯೋಗವನ್ನು ನೀಡಿದ್ದಾರೆ.

ಬೆಳಗಾವಿಯಿಂದ ಧಾರವಾಡ ನಡುವೆ ಉತ್ತಮ ಹೋಟೆಲ್ ಇಲ್ಲದ ಕಾರಣ ಈ ಭಾಗದಲ್ಲಿ ಒಳ್ಳೆಯ ಹೋಟೆಲ್, ವಸತಿ ಗೃಹ ನಿರ್ಮಿಸಿ ಈ ಭಾಗದಲ್ಲಿ ಸಾಕಷ್ಟು ಉದ್ಯೋಗಗಳನ್ನು ಸೃಷ್ಟಿ ಮಾಡಿ ಆರ್ಥಿಕವಾಗಿ ಬೆಳೆಯಲು ಶಿಲೇದಾರ ಸಾಕ್ಷಿಯಾಗಿದ್ದು, ಇವರ ಹೋಟೆಲ್ ಉದ್ಯಮವು ಉತ್ತುಂಗಕ್ಕೇರಲಿ ಎಂದು ಹಾರೈಸಿದರು.

ಬೈಲೂರು ನಿಷ್ಕಲ ಮಂಟಪದ ನಿಜಗುಣಾನಂದ ಸ್ವಾಮೀಜಿ ಮಾತನಾಡಿ, ಹಬೀಬ ಶಿಲೇದಾರ ದುಡಿಮೆಯ ಮೂಲಕ ಕಿತ್ತೂರು ಭಾಗದಲ್ಲಿ ದೊಡ್ಡ ವ್ಯಕ್ತಿಯಾಗಿದ್ದು, ಸತೀಶ ಜಾರಕಿಹೊಳಿಯವರನ್ನು ಆತ್ಮ ವಿಶ್ವಾಸದಿಂದ ನಂಬಿದ ಕಾರಣ ಇಷ್ಟೊಂದು ಬೆಳೆಯಲು ಸಾಧ್ಯವಾಯಿತು. ಜನರ ಸೇವೆ ಮಾಡುವ ಮೂಲಕ ಜಾತ್ಯಾತೀತ ವ್ಯಕ್ತಿಯಾಗಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಎಲ್ಲ ವರ್ಗದ ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಿದ್ದಾರೆ. ಸಮಾಜಮುಖಿ ಕೆಲಸ ಕಾರ್ಯಗಳ ಮೂಲಕ ಹೆಸರುವಾಸಿಯಾಗಿದ್ದಾರೆ. ಸಮಾಜ ಒಳ್ಳೆಯವರನ್ನು ಬೆಳೆಸಬೇಕು. ಸತೀಶ ಜಾರಕಿಹೊಳಿಯವರು ಒಳ್ಳೆಯವರನ್ನು ಬೆಳೆಸುತ್ತಾರೆ. ಹೋಟೆಲ್ ಉದ್ಯಮ ಹೆಚ್ಚಿನ ಪ್ರಮಾಣದಲ್ಲಿ ಯಶಸ್ಸು ಕಾಣಲಿ ಎಂದು ಆಶಿಸಿದರು.

ಕಿತ್ತೂರು ಭಾಗದಲ್ಲಿ ಸರ್ಕಾರಿ ಎಂಜನಿಯರಿಂಗ್ ಕಾಲೇಜು ನಿರ್ಮಿಸಬೇಕು ಈ ನಿಟ್ಟಿನಲ್ಲಿ ಸಚಿವರು ಕೆಲಸ ಮಾಡಬೇಕೆಂದು ಮನವಿ ಮಾಡಿದರು.

ಉದ್ಯಮಿ, ಕಾಂಗ್ರೆಸ್ ಮುಖಂಡ ಹಬೀಬ ಶಿಲೇದಾರ ಮಾತನಾಡಿ, ನನ್ನ ಜೀವ ಇರುವ ವರೆಗೂ ನನ್ನ ಗುರು ಸತೀಶಣ್ಣಾ ಜಾರಕಿಹೊಳಿಯವರ ಹೆಸರಿನ ಮೂಲಕ ನನ್ನ ಮನೆಸೇರಿದಂತೆ ಎಲ್ಲವನ್ನು ಅವರ ಹೆಸರಿನಲ್ಲಿ ಪ್ರಾರಂಭಿಸಿದ್ದೇನೆ. ಅದರಂತೆ ನೂತನವಾಗಿ ಪ್ರಾರಂಭಿಸಲಾದ ಹೋಟೆಲ್‌ನ್ನು ಎಸ್.ಜೆ.ಇಂಟರ್ ನ್ಯಾಷನಲ್ ಹೋಟೆಲ್ ಎಂದು ನಾಮಕರಣ ಮಾಡಿ ಕಿತ್ತೂರು ನಾಡು ಮಾತ್ರವಲ್ಲದೆ ಐತಿಹಾಸಿಕ ನಾಡಿಗೆ ಬರುವ ಎಲ್ಲ ಪ್ರವಾಸಿಗರಿಗೆ ಉತ್ತಮ ಸೇವೆ ಸಿಗಲಿದೆ ಇಲ್ಲಿ ಊಟ, ಉಪಹಾರ, ವಸತಿ ವ್ಯವಸ್ಥೆ ಹೊಂದಿದೆ ಎಂದರು.

ನಮ್ಮ ತಂದೆಗೆ ಸಂವಿಧಾನಿಕ ಹುದ್ದೆ ನೀಡಿ

ಹಬೀಬ ಶಿಲೇದಾರ ಪುತ್ರಿ ಅಲ್ಮಾಸ್ ಶಿಲೇದಾರ ಮಾತನಾಡಿ, ಸತೀಶ ಜಾರಕಿಹೊಳಿಯವರು ನಮ್ಮ ಮನೆಯ ಆರಾಧ್ಯ ದೈವವಾಗಿದ್ದಾರೆ. ನಮ್ಮ ತಂದೆ ಹಬೀಬ ಶಿಲೇದಾರ ಶ್ರಮ ಜೀವಿಗಳಾಗಿ ಕಳೆದ 27 ವರ್ಷಗಳಿಂದ ಜಾತಿ ಬೇದ ಭಾವವಿಲ್ಲದೆ, ಸಮಾಜ ಸೇವೆ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ನಮ್ಮ ತಂದೆಯವರಿಗೆ ಯಾವುದಾದರೂ ಸಂವಿಧಾನಿಕ ಹುದ್ದೆ ಸ್ಥಾನಮಾನ ನೀಡಬೇಕೆಂದು ಸಚಿವರಲ್ಲಿ ವಿನಂತಿಸಿದರು.

ಉದ್ಯಮಿ, ಕಾಂಗ್ರೆಸ್ ಮುಖಂಡ ಹಬೀಬ ಶಿಲೇದಾರ ಅವರಿಗೆ ಅಭಿಮಾನಿಗಳು ಹೂವು ಮಾಲೆ, ಶಾಲು ಹಾಕಿ ಸನ್ಮಾನದ ಮೂಲಕ ನೂರಾರು ಜನರು ಹೊಸ ಉದ್ಯಮಕ್ಕೆ ಶುಭ ಹಾರೈಸಿದರು.

ಉದ್ಯಮಿಗಳಾದ ಪ್ರಭಾಕರ ಶೆಟ್ಟಿ, ಗುಣಾಕಾರ ಶೆಟ್ಟಿ, ಕಿತ್ತೂರಿನ ರಾಜ ಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗಿಂದ್ರ ಸ್ವಾಮೀಜಿ, ಮುಜರಾಯಿ ಇಲಾಖೆ ನಿರ್ದೇಶಕ ಮಹಾಂತಯ್ಯ ಶಾಸ್ತ್ರೀ, ಮುಸ್ಲಿಂ ಧರ್ಮಗುರು ಹಜರತ್ ಸೈಯದ ಮೈನುದ್ದೀನ್ ಷಾ ಅಲಖಾದ್ರಿ, ಮೌಲಾನಾ ಸೈಯದ ಅಲ್ಲಾವುದ್ದೀನ್, ಗಾಡ್ ಕ್ರಿಯೇಶನ್ ಸಂಸ್ಥಾಪಕ ರವೇಂದರ ಮಹೇಶ, ಪಪಂ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಎಫ್.ಜಕಾತಿ, ಚಂದ್ರಕಾಂತ ಕಾದ್ರೊಳ್ಳಿ, ಬೆಳಗಾವಿ ಡಿವೈಎಸ್‌ಪಿ ವೀರೇಶ ದೊಡಮನಿ, ಪರುಶುರಾಮ ದುಡಗುಂಟಿ, ಅಂತಾರಾಷ್ಟ್ರೀಯ ಕುಸ್ತಿ ಪಟು ರಫೀಕ್ ಹೊಳಿ, ಶ್ಯಾಮ ಕಾದ್ರೊಳ್ಳಿ, ಎಂ.ಎಸ್.ಕಲ್ಮಠ, ಜಿ.ಪಿ.ಪತ್ತಾರ, ಜಿ.ಜಿ. ಹನುಮಸಾಗರ ಉಪಸ್ಥಿತರಿದ್ದರು.

ಗಾಯಕ ಪ್ರತಾಪಕುಮಾರ ನಿರೂಪಿಸಿದರು. ಜೂನಿಯರ್ ಶಿವರಾಜಕುಮಾರ ತಂಡದಿಂದ ರಸಮಂಜರಿ ಕಾರ್ಯಕ್ರಮ ಜರುಗಿದವು. ಅಪಾರ ಪ್ರಮಾಣದಲ್ಲಿ ಜನರು ಆಗಮಿಸಿದ್ದರು. ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಹಸನ್ಮಾಳದ ಕೆರೆಯಲ್ಲಿ ಜಿಂಕೆ ಭೇಟಿಯಾಡಿದ ಮೊಸಳೆ

ದಾಂಡೇಲಿ: ನಗರದ ಸಮೀಪದಲ್ಲಿರುವ ಹಸನ್ಮಾಳದ ಕೆರೆಗೆ ನೀರು ಕುಡಿಯಲೆಂದು ಇಳಿದಿದ್ದ ಜಿಂಕೆಯೊಂದನ್ನು ಕರೆಯಲ್ಲಿದ್ದ ಮೊಸಳೆಯೊಂದು ಹೊತ್ತೊಯ್ದು ಸಾಯಿಸಿದ ಘಟನೆ ಭಾನುವಾರ ನಡೆದಿದೆ. ಈ ಸಂದರ್ಭದಲ್ಲಿ ಅಲ್ಲೇ ಹತ್ತಿರದಲ್ಲಿದ್ದ ಬಜರಂಗದಳದ ಗೋ ರಕ್ಷಣಾ ತಂಡದವರು ಜಿಂಕೆಯನ್ನು ಮೊಸಳೆಯ ಬಾಯಿಂದ ತಪ್ಪಿಸಲು ಹರಸಾಹಸ ಮಾಡಿದ್ದಾರೆ. ಆದಾಗ್ಯೂ ಪ್ರಯತ್ನ ಫಲ ನೀಡಲಿಲ್ಲ. ಕೊನೆಗೆ ಬಜರಂಗದಳದ ಗೋರಕ್ಷಣ ತಂಡದವರು ಅರಣ್ಯ ಇಲಾಖೆಗೆ ಮಾಹಿತಿಯನ್ನು ನೀಡಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಚಂದ್ರು ಲಮಾಣಿ ವಿರುದ್ಧ ಷಡ್ಯಂತ್ರ: ಮುರುಗೇಶ ನಿರಾಣಿ



ಧಾರವಾಡ: ರಾಜ್ಯ ಕಾಂಗ್ರೆಸ್ ಒಡೆದ ಮನೆ. ಪಕ್ಷದಲ್ಲಿ ಮೂರು ಗುಂಪುಗಳಾಗಿವೆ. ಇದರಿಂದ ಅಭಿವೃದ್ಧಿ ಆಗುತ್ತಿಲ್ಲ. ಇದನ್ನು ವಿಷಯಾಂತರ ಮಾಡಲು ಷಡ್ಯಂತ್ರವೂ ನಡೆದಿದೆ ಎಂದು ಮಾಜಿ ಸಚಿವ ಮುರುಗೇಶ ನಿರಾಣಿ ಹೇಳಿದರು.

ಶಿರಹಟ್ಟಿ ಶಾಸಕ ಚಂದ್ರು ಲಮಾಣಿ ಲೋಕಾಯುಕ್ತರ ಬಲೆಗೆ ಬಿದ್ದಿರುವ ಪ್ರಶ್ನೆಗೆ ಭಾನುವಾರ ಸುದ್ದಿಗಾರರಿಗೆ ಉತ್ತರಿಸಿದ ಅವರು, ಕೆಲ ಆಡಿಯೋಗಳಿವೆ. ಆದರೆ, ಹಣ ಕೊಟ್ಟಿರುವ ಬಗ್ಗೆ ಆಧಾರಗಳಿಲ್ಲ ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್ ತನ್ನ ಮೇಲಿನ ಭ್ರಷ್ಟಾಚಾರದ ಆರೋಪ ಬಿಜೆಪಿ ಮೇಲೆ ಹಾಕಲು ತಂತ್ರ ರೂಪಿಸಿದೆ. ವಿಚಾರಣೆ ಬಳಿಕ ಸತ್ಯಾಸತ್ಯತೆ ಹೊರಗೆ ಬರಲಿದೆ. ತಪ್ಪಿತಸ್ಥರು ಯಾರೇ ಇದ್ದರೂ ಸಹ ಶಿಕ್ಷೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

ಸಿದ್ದರಾಮಯ್ಯ ಟ್ವಿಟ್ ವಿಚಾರಕ್ಕೆ ಪ್ರತಿಕ್ರಿಯಿಸಿದ ನಿರಾಣಿ, ಮೊದಲ ಅವಧಿಯಲ್ಲಿ ನೀಡಿದ ಆಡಳಿತ ಎರಡನೇ ಅವಧಿಯಲ್ಲಿ ನೀಡಲು ಮುಖ್ಯಮಂತ್ರಿಗಳು ವಿಫಲ ಆಗಿದ್ದಾರೆ. ಹತಾಶರಾಗಿ ಮಾತನಾಡುತ್ತಿದ್ದಾರೆ ಎಂದರು.

ಸಿದ್ದರಾಮಯ್ಯ ಅವರನ್ನು ತುಳಿಯುತ್ತಿರುವವರು ಯಾರು? ಬಿಜೆಪಿ ಹಾಗೂ ಜೆಡಿಎಸ್ ಪಕ್ಷದವರು ಅಲ್ಲವಲ್ಲ. ಅವರ ಪಕ್ಷದವರೇ ತುಳಿಯುತ್ತಿದ್ದು, ಸಮಸ್ಯೆ ಗೋಡೆಯ ಮಧ್ಯೆ ಪರಿಹರಿಸಿಕೊಳ್ಳಲು ಸಲಹೆ ನೀಡಿದರು.

ಖುರ್ಚಿ ಕಲಹಕ್ಕೆ ಬಡವಾದ ರಾಜ್ಯ: ಬೆಲ್ಲದ



ಧಾರವಾಡ: ಮುಖ್ಯಮಂತ್ರಿ ಖುರ್ಚಿ ಕಲಹದಿಂದ ರಾಜ್ಯ ಬಡವಾಗಿದೆ. ಎಲ್ಲಿಯವರೆಗೂ ಈ ಖುರ್ಚಿ ಜಗಳ ನಿಲ್ಲುವುದಿಲ್ಲವೋ, ಅಲ್ಲಿವರೆಗೂ ಈ ರಾಜ್ಯ ಬಡವಾಗಿಯೇ ಇರುತ್ತದೆ ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ವ್ಯಂಗ್ಯವಾಡಿದರು. ಭಾನುವಾರ ಸುದ್ದಿಗಾರ ರೊಂದಿಗೆ ಅವರು ಮಾತನಾಡಿ, ಸಿಎಂ ಸಿದ್ದರಾಮಯ್ಯ ಟ್ವಿಟ್ ಮಾಡಿರುವುದು ಡಿಕೆಶಿಗೆ. ಅದು ಅವರಿಗೂ ಗೊತ್ತಿದೆ. ರಾಜ್ಯ ಕಾಂಗ್ರೆಸ್ ಆಡಳಿತಕ್ಕೆ ಜನತೆ ಬೇಸತ್ತಿದ್ದು, ಭವಿಷ್ಯದ ತಕ್ಕ ಪಾಠ ಕಲಿಸುತ್ತಾರೆ ಎಂದು ಬೆಲ್ಲದ ಎಚ್ಚರಿಸಿದರು. ಶಾಸಕ ಲಮಾಣಿ ಮೇಲೆ ಲೋಕಾ ದಾಳಿಗೆ ಪ್ರತಿಕ್ರಿಯಿಸಿದ ಅವರು, ಸಾರ್ವಜನಿಕ ಜೀವನದಲ್ಲಿ ಇರುವವರು ಪ್ರಶ್ನಾತೀತ ಮತ್ತು ನೈತಿಕವಾಗಿರಬೇಕು. ಶಿರಹಟ್ಟಿಯ ಶಾಸಕರ ಮೇಲಾದ ದಾಳಿ ಷಡ್ಯಂತ್ರ ಎಂದು ಕೇಳಿ ಬಂದಿದೆ ಎಂದು ಪ್ರಶ್ನೆಗೆ ಉತ್ತರಿಸಿದರು. ಲೋಕಾಯುಕ್ತ ಸಂಸ್ಥೆಯು ಯಾವುದೇ ಒತ್ತಡ ಇಲ್ಲದೇ ತನಿಖೆ ಮಾಡಲಿ. ತಪ್ಪು ಇದ್ದರೆ ಶಿಕ್ಷೆ ಆಗಲಿ. ತಪ್ಪು ಇರದಿದ್ದರೆ ಅವರು ದೋಷಮುಕ್ತರಾಗಿ ಹೊರ ಬರಲಿ. ಟಾರ್ಗೆಟ್ ಮಾಡಿ ದಾಳಿ ಮಾಡಿಸುವುದು ಸರಿಯಲ್ಲ ಎಂದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ನಾಳೆ ಜನಸ್ಪಂದನಾ ಸಭೆ

ಭಟ್ಕಳ: ತಾಲೂಕಿನ ಕಟಗಾರಕೊಪ್ಪ ಗ್ರಾಪಂ ಸಭಾಭವನದಲ್ಲಿ ಫೆ. 24ರಂದು ಬೆಳಗ್ಗೆ 10.30 ಗಂಟೆಗೆ ಜನಸ್ಪಂದನಾ ಸಭೆ ಆಯೋಜಿಸಲಾಗಿದೆ. ಸಭೆಯಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿರಲಿದ್ದು, ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದು ಎಂದು ತಹಶೀಲ್ದಾರ್ ನಾಗೇಂದ್ರ ಕೋಳಶೆಟ್ಟಿ ತಿಳಿಸಿದ್ದಾರೆ.

ಮೌಲ್ಯ ಶಿಕ್ಷಣ ಸ್ಪರ್ಧೆ: ವಂಶಿಕಾ ಪ್ರಥಮ



ದಾಂಡೇಲಿ : ಇಸ್ಕಾನ್ ಸಂಸ್ಥೆಯ ಆಶ್ರಯದಡಿ ನಡೆದ ಜಿಲ್ಲಾ ಮಟ್ಟದ ಮೌಲ್ಯ ಶಿಕ್ಷಣ ಸ್ಪರ್ಧೆಯಲ್ಲಿ ದಾಂಡೇಲಿಯ ಸೈಂಟ್ ಮೈಕಲ್ ಕಾನ್ವೆಂಟ್ ಆಂಗ್ಲ ಮಾಧ್ಯಮ ಶಾಲೆಯ 6ನೇ ತರಗತಿಯ ವಿದ್ಯಾರ್ಥಿನಿ ವಂಶಿಕಾ ಚೇತನ್ ಶರ್ಮಾ ಇವಳು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ಪ್ರತಿಭಾನ್ವಿತ ವಿದ್ಯಾರ್ಥಿನಿಯಾಗಿರುವ ವಂಶಿಕಾ ಚೇತನ್ ಶರ್ಮಾ ಇವಳು ವೆಸ್ಟ್ ಕೋಸ್ಟ್ ಕಾಗದ ಕಾರ್ಖಾನೆಯ ಔದ್ಯೋಗಿಕ ಆರೋಗ್ಯ ಕೇಂದ್ರದಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಚೇತನ್ ಶರ್ಮಾ ಹಾಗೂ ರಾಜಶ್ರೀ ದಂಪತಿಗಳ ಸುಪುತ್ರಿಯಾಗಿದ್ದಾಳೆ. ಈಕೆಯ ಸಾಧನೆಗೆ ಶಾಲೆಯ ಮುಖ್ಯೋಪಾಧ್ಯಾಯಿನಿ ಸಿಸ್ಟರ್ ಕ್ಲಾರೇಟ್ ಹಾಗೂ ಶಿಕ್ಷಕ ವೃಂದದವರು ನಗರದ ಗಣ್ಯರು ಅಭಿನಂದಿಸಿದ್ದಾರೆ.

ನೀರು ಹಾವಿನ ಮೊಟ್ಟೆ ರಕ್ಷಣೆ



ಮುಂಡಗೋಡ: ಪಟ್ಟಣದ ಕಂಬಾರಗಟ್ಟಿ ಪ್ಲಾಟ್‌ನಲ್ಲಿ ಕಾಣಿಸಿಕೊಂಡ ದೊಡ್ಡ ಗಾತ್ರದ ನೀರು ಹಾವು ಹಾಗೂ ನೀರು ಹಾವಿನ ಮೊಟ್ಟೆ (ಸುಮಾರು 35 ರಿಂದ 40)ಗಳನ್ನು ಗಸ್ತು ಅರಣ್ಯ ಪಾಲಕ ಉರಗ ರಕ್ಷಕ ಮುತ್ತುರಾಜ ಹಳ್ಳಿ ರಕ್ಷಿಸಿದ್ದಾರೆ. ಶಿವಪ್ಪ ದುರ್ಗಪ್ಪ ಮಾದರ ಅವರು ಮನೆಯ ಪಾಯ ತೆಗೆಯುತ್ತಿದ್ದಾಗ ಹಾವು ಮತ್ತು ಮೊಟ್ಟೆಗಳು ಕಂಡು ಬಂದಿವೆ. ಮಾಹಿತಿ ಪಡೆದ ಉಪವಲಯ ಅಧಿಕಾರಿ ಅಜ್ಜಪ್ಪ ಮುತ್ತುರಾಜ ಅವರಿಗೆ ತಿಳಿಸಿದ್ದಾರೆ. ನಂತರ ಬಂದ ಅವರು ಹಾವನ್ನು ಹಾಗೂ ಮೊಟ್ಟೆಗಳನ್ನು ರಕ್ಷಿಸಿದ್ದು ಹಾವನ್ನು ಅದರ ಸೂಕ್ತ ಆವಾಸ ಸ್ಥಾನಕ್ಕೆ ಬಿಟ್ಟಿದ್ದಾರೆ. ಕಾರ್ಯಾಚರಣೆಯಲ್ಲಿ ಪ್ರಾಣಿ ಪ್ರಿಯ ನಾಗರಾಜ ಗುಬ್ಬಕ್ಕನವರ ಹಾಗೂ ಸಾರ್ವಜನಿಕರು ಇದ್ದರು.

ಆಶಿತ ಯುನಿವರ್ಸಿಟಿ ಬ್ಲ್ಯೂ ಆಗಿ ಆಯ್ಕೆ

ಭಟ್ಕಳ : ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವು ಆಯೋಜಿಸಿದ ವಿಶ್ವವಿದ್ಯಾಲಯ ಮಟ್ಟದ ಗುಡ್ಡಗಾಡು ಓಟ (ಕ್ರಾಸ್ ಕಂಟ್ರಿ) ದಲ್ಲಿ ಗುರು ಸುಧೀಂದ್ರ ಕಾಲೇಜಿನ ವಿದ್ಯಾರ್ಥಿನಿ ಆಶಿತಾ ನಾಯ್ಕ ಅವರು ಯುನಿವರ್ಸಿಟಿ ಬ್ಲೂ ಆಗಿ ಆಯ್ಕೆಯಾಗಿದ್ದಾಳೆ.



ಈಕೆ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಜರಗುವ ಅಂತರವಿಶ್ವವಿದ್ಯಾಲಯ-ದಕ್ಷಿಣ ಭಾರತ ವಲಯವನ್ನು ಪ್ರತಿನಿಧಿಸಲಿದ್ದಾರೆ. ಈಕೆ ಭಟ್ಕಳದ ಭಾರತಿ ನಾಯ್ಕ ಹಾಗೂ ವೆಂಕಟೇಶ ನಾಯ್ಕ ರವರ ಪುತ್ರಿಯಾಗಿದ್ದು, ಈಕೆಯ ಸಾಧನೆಗೆ ಭಟ್ಕಳ ಎಜ್ಯುಕೇಶನ್ ಟ್ರಸ್ಟ ಆಡಳಿತ ಮಂಡಳಿ, ಪ್ರಾಂಶುಪಾಲರು, ಶಿಕ್ಷಕರು, ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

ಗಂಜಿಮಾರಿಯಮ್ಮ ದೇವಿ ಉತ್ಸವ ಸಂಪನ್ನ

ಭಟ್ಕಳ: ಇಲ್ಲಿನ ಹರಿಜನಕೇರಿಯ ಅಂಜುಮಾನ್ ಕಾಲೇಜ್ ರೋಡ್‌ನಲ್ಲಿರುವ ಗಂಜಿಮಾರಿಯಮ್ಮ ಸಪರಿವಾರ ದೇವಸ್ಥಾನದಲ್ಲಿ ಉತ್ಸವವು ವಿಜೃಂಭಣೆಯಿಂದ ನೆರವೇರಿತು. ಉತ್ಸವದ ಅಂಗವಾಗಿ ಸ್ವಸ್ತಿ ವಾಚನೆ, 25 ಕಲಶ ಅಧಿವಾಸ ಹೋಮ, ಅಭಿಷೇಕ, ಲಲಿತಾ ಸಹಸ್ರನಾಮಾರ್ಚನೆ, ಮಹಾಪೂಜೆ ಹಾಗೂ ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಿತು. ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಉತ್ಸವದ ಅಂಗವಾಗಿ ದೇವರ ಬೆಳ್ಳಿ ಕವಚ ಮೆರವಣಿಗೆ ನಾಗಯಕ್ಷೆ ದೇವಸ್ಥಾನದಿಂದ ಆರಂಭವಾಗಿ ಹಳೆ ಬಸ್ ನಿಲ್ದಾಣ, ಸಂಸುದ್ದೀನ್ ಸರ್ಕಲ್ ಹಾಗೂ ತಾಲೂಕು ಆಡಳಿತ ಸೌಧಾ ಮಾರ್ಗವಾಗಿ ಗಂಜಿಮಾರಿಯಮ್ಮ ದೇವಸ್ಥಾನಕ್ಕೆ ತಲುಪಿತು. ಮೆರವಣಿಗೆಯಲ್ಲಿ ವಿವಿಧ ಟ್ಯಾಬ್ಲೋಗಳು, ಮಹಿಳೆಯರ ಭಜನೆ-ನೃತ್ಯ, ಚಂಡೆ ವಾದ್ಯಗಳ ಘೋಷ ಹಾಗೂ ನೂರಾರು ಭಕ್ತರ ಉಪಸ್ಥಿತಿ ಉತ್ಸವಕ್ಕೆ ಮತ್ತಷ್ಟು ಮೆರುಗು ನೀಡಿತು.



ಮುಂಡಗೋಡ: ಪಟ್ಟಣದ ಲೊಯೋಲ ವಿಕಾಸ ಕೇಂದ್ರದಲ್ಲಿ ಬುಡಕಟ್ಟು ಮತ್ತು ತಳಸಮುದಾಯಗಳ ಒಕ್ಕೂಟ ಹಾಗೂ ಲೊಯೋಲ ವಿಕಾಸ ಕೇಂದ್ರದ ಆಶ್ರಯದಲ್ಲಿ ಜರುಗಿದ ಸಾಂಸ್ಕೃತಿಕ ಕಲಾಮೇಳವನ್ನು ಡೊಳ್ಳು ಬಾರಿಸುವ ಮೂಲಕ ತಾಪಂ ಇಒ ಟಿ.ವೈ.ದಾಸನಕೊಪ್ಪ ಉದ್ಘಾಟಿಸಿದರು.

ಕಲೆ ಉಳಿಸಿ ಬೆಳೆಸಿ: ಟಿ.ವೈ.ದಾಸನಕೊಪ್ಪ

ಮುಂಡಗೋಡ: ಜಿಲ್ಲೆಯಲ್ಲಿ ನಮ್ಮ ತಾಲೂಕು ವೈವಿಧ್ಯಮಯವಾಗಿದೆ ಎಲ್ಲ ಜಾತಿಯ ಜನರು ಇದ್ದಾರೆ ಎಲ್ಲರೂ ಸೌಹಾರ್ದತೆಯಿಂದ ಬದುಕುತ್ತಿದ್ದೇವೆ ನಮ್ಮ ನಾಡಿನ ಸಂಸ್ಕೃತಿಯನ್ನು ಬಿಂಬಿಸುವ ಮೂಲಕ ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಬುಡಕಟ್ಟು ಸಮುದಾಯದವರ ಪಾತ್ರ ಬಹು ಮುಖ್ಯವಾಗಿದೆ ಎಂದು ತಾಪಂ ಇಒ ಟಿ.ವೈ.ದಾಸನಕೊಪ್ಪ ಹೇಳಿದರು. ಪಟ್ಟಣದ ಲೊಯೋಲ ವಿಕಾಸ ಕೇಂದ್ರದಲ್ಲಿ ಬುಡಕಟ್ಟು ಮತ್ತು ತಳಸಮುದಾಯಗಳ ಒಕ್ಕೂಟ ಹಾಗೂ ಲೊಯೋಲ ವಿಕಾಸ ಕೇಂದ್ರದ ಆಶ್ರಯದಲ್ಲಿ ಜರುಗಿದ ಸಾಂಸ್ಕೃತಿಕ ಕಲಾಮೇಳವನ್ನು ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಹಬ್ಬದ ವಾತಾವರಣ ನಿರ್ಮಾಣವಾಗಿದೆ. ಎಲ್ಲಾ ಜಾತಿಗಳನ್ನು ಪ್ರತಿನಿಧಿಸುವ ವಿನೂತನ ಕಾರ್ಯಕ್ರಮ. ಹಲವಾರು ಸಮುದಾಯದ ವೇಷಭೂಷಣಗಳು ಕಾಣ ಬರುತ್ತಿವೆ. ಬುಡಕಟ್ಟು ಮತ್ತು ತಳಸಮುದಾಯದವರಿಗೆ ಅಭಿವೃದ್ಧಿ ಯೋಜನೆಗಳನ್ನು ತಲುಪಿಸುವ ಪ್ರಯತ್ನ ಮಾಡಲಾಗುವುದು ಎಂದರು.ಫಾ.ಅನಿಲ ಡಿಸೋಜಾ ಪ್ರಾಸ್ತಾವಿಕ ಮಾತನಾಡಿದರು. ಜಂಪಾ ಲಾಮಾ ಮಾತನಾಡಿದರು. ಬೀರು ಕಾತ್ರಟ್, ಜನವೇದಿಕೆ ನಾಯಕರು, ಬಸವಂತಪ್ಪ ಪೂಜಾರ, ನವೀನ ಸಿದ್ದಿ, ಫಾ.ಅಲ್ವಿನ್ ಡಿಸೋಜಾ, ಡಾ.ಸಿ.ಗ್ಲ್ಯಾಡೀಸ್ ಮಿನೇಜಸ್, ಫಾ.ಅನಿಲ ಡಿಸೋಜಾ, ಜನ್ನಾಬಾಯಿ ಕೊಕರೆ, ತನ್ವೀರ್ ಮಿರ್ಜಾನಕರ, ಸರೋಜಾ ಚವ್ಹಾಣ, ಸುರೇಶ ಲಮಾಣಿ, ಅಶೋಕ ದೈವಜ್ಞ, ಸಿ. ರಿಟಾ ಕಾಸ್ಟ್, ಮಂಜುನಾಥ ಹಿರೇಮಠ, ಫಾ.ಜೊಯಿಸ್, ವಿಷ್ಣು ಪಿಲ್ಲೋಜಿ, ಸುನೀಲ ಸಿದ್ದಿ, ಸುನೀಲ ಸಳಕೆ ಇದ್ದರು. ಅಂಜನಾ ತಹಶೀಲ್ದಾರ ಸ್ವಾಗತಿಸಿದರು. ಗುಲ್ಜಾರ್ ಸಂಗೂರು ನಿರೂಪಿಸಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮ ಗಮನ ಸೆಳೆದವು.



ಗೋಕರ್ಣ: ತದಡಿ ಬಂದರಿನ ಅಳವೆ ಭಾಗದಲ್ಲಿ 2ಕೋಟಿ 65 ಲಕ್ಷ ರೂಪಾಯಿ ವೆಚ್ಚದ ಹೂಳೆತ್ತುವ ಕಾರ್ಯಕ್ಕೆ ಶಾಸಕ ದಿನಕರ ಶೆಟ್ಟಿ ಚಾಲನೆ ನೀಡಿದರು. ಈ ವೇಳೆ ಬಂದರು ಇಲಾಖೆ ಇಂಜಿನೀಯರ್ ಜಿ.ಎಮ್ ರಾಥೋಡ, ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ರಾಜೇಶ ಸಜ್ಜನ್,ತದಡಿ ಮೀನುಗಾರರ ಸಹಕಾರಿ ಸಂಘದ ಅಧ್ಯಕ್ಷ ಮಹೇಶ ಮೂಡಂಗಿ ಮತ್ತಿತರರಿದ್ದರು.

ಗಂಗಾವಳಿ ಸೇತುವೆ ಉದ್ಘಾಟನೆ | ಸಿಎಂ ಸಿದ್ದರಾಮಯ್ಯ ಹೇಳಿಕೆ

ಪ್ರವಾಸೋದ್ಯಮಕ್ಕೆ ಸೇತುವೆ ಸಹಕಾರಿ

ಅಂಕೋಲಾ: ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ನೆನೆಗುದಿಗೆ ಬಿದ್ದಿರುವ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸುವ ಕಾರ್ಯವನ್ನು ಕಾಂಗ್ರೆಸ್ ಸರ್ಕಾರ ಮಾಡಿದ್ದು ಜನರ ಅಗತ್ಯತೆಗಳಿಗೆ ಸ್ಪಂದಿಸುವ ಕೆಲಸ ಆಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ತಾಲೂಕಿನ ಮಂಜಗುಣಿಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ಗಂಗಾವಳಿ ನದಿಗೆ 34.21 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಅಂಕೋಲಾ ಗೋಕರ್ಣ ಸಂಪರ್ಕಿಸುವ ಸೇತುವೆಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, 2017 ರಲ್ಲಿ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಶಂಕುಸ್ಥಾಪನೆ ನೆರವೇರಿಸಿದ ಸೇತುವೆಯನ್ನು ಇದೀಗ ಉದ್ಘಾಟನೆ

ಮಾಡಲಾಗುತ್ತಿದೆ. ಈ ಹಿಂದಿನ ಬಿಜೆಪಿ ಸರ್ಕಾರ ಈ ಸೇತುವೆ ಪೂರ್ಣಗೊಳಿಸಲು ಆಸಕ್ತಿ ವಹಿಸದ ಕಾರಣ ವಿಳಂಬವಾಗಿದೆ. ಈಗ ನಮ್ಮ ಸರ್ಕಾರ ಸೇತುವೆ ನಿರ್ಮಾಣ ಪೂರ್ಣಗೊಳಿಸಿದ್ದು, ಇದರಿಂದಾಗಿ ಗಂಗಾವಳಿ ಸೇತುವೆಯಿಂದ ಅಂಕೋಲಾ ಮತ್ತು ಗೋಕರ್ಣದ ಜನತೆಗೆ ಸಾಕಷ್ಟು ಅನುಕೂಲ ಆಗಲಿದೆ. ಗಂಗಾವಳಿ ನದಿ ದಾಟುವ ಕಷ್ಟ ಅಂತ್ಯಗೊಂಡಿದೆ. ಪುಣ್ಯಕ್ಷೇತ್ರ ಗೋಕರ್ಣಕ್ಕೆ ಆಗಮಿಸುವ ಪ್ರವಾಸಿಗರಿಗೂ ಸುಮಾರು 18 ಕಿಮಿ ಪ್ರಯಾಣದ ದೂರ ಕಡಿಮೆಯಾಗಲಿದೆ ಎಂದರು. ಈ ಸೇತುವೆ ಪೂರ್ಣಗೊಳಿಸುವಲ್ಲಿ ಶಾಸಕ ಸತೀಶ ಸೈಲ್ ಅವರ ಪ್ರಯತ್ನವನ್ನು ಸಿಎಂ ಶ್ಲಾಘಿಸಿದರು.



ಸಿಎಂ-ಡಿಸಿಎಂಗೆ ಭವ್ಯ ಸ್ವಾಗತ

ಮಂಜಗುಣಿಯಲ್ಲಿ ನಿರ್ಮಿಸಿರುವ ಹೆಲಿಪ್ಯಾಡ್‌ಗೆ ಹೆಲಿಕಾಪ್ಟರ್ ಮೂಲಕ ಬಂದಿಳಿದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಶಾಸಕ ಸತೀಶ ಸೈಲ್ ಜಿಲ್ಲಾಧಿಕಾರಿ ಕೆ.ಲಕ್ಷ್ಮೀ ಪ್ರಿಯಾ ಮೊದಲಾದವರು ಭವ್ಯ ಸ್ವಾಗತ ಕೋರಿದರು. ಸೇತುವೆ ನಿರ್ಮಾಣ ಸ್ಥಳಕ್ಕೆ ಹಾಲಕ್ಕಿ ಸಮಾಜದ ಸಾಂಪ್ರದಾಯಿಕ ಗುಮಟೆ ವಾದನ,ಬಡಗು ಶೈಲಿಯ ಯಕ್ಷಗಾನ ನೃತ್ಯ ಸ್ವಾಗತ ಕೋರಲಾಯಿತು.

ಅಭಿವೃದ್ಧಿಗೆ ವೇಗ : ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮಾತನಾಡಿ, ಪ್ರತಿಯೊಂದು ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ನಡೆಸುವ ಕೆಲಸ ಕಾಂಗ್ರೆಸ್ ಸರ್ಕಾರದಿಂದ ಆಗಿದ್ದು ಉತ್ತರ ಕನ್ನಡ ಜಿಲ್ಲೆ ಮತ್ತು ಕರಾವಳಿ ಪ್ರದೇಶದ ಅಭಿವೃದ್ಧಿಗೆ ವಿಶೇಷ ಯೋಜನೆ ರೂಪಿಸಲಾಗುತ್ತಿದ್ದು ಪ್ರವಾಸಿಗರನ್ನು ಸೆಳೆಯುವ ಹೂಡಿಕೆದಾರರನ್ನು ಆಕರ್ಷಿಸುವ ಮೂಲಕ ಪ್ರವಾಸೋದ್ಯಮದ ಅಭಿವೃದ್ಧಿ, ಉದ್ಯೋಗ ಸೃಷ್ಟಿಗೆ ಚಿಂತನೆ ನಡೆದಿದೆ ಆ ದಿಶೆಯಲ್ಲಿ ವಿಮಾನ ನಿಲ್ದಾಣದ ನಿರ್ಮಾಣಕ್ಕೆ ಹಣ ಬಿಡುಗಡೆ ಮಾಡಿ ಕಾಮಗಾರಿ ವೇಗ ಪಡೆಯುವಂತೆ ಮಾಡಲಾಗುತ್ತಿದೆ ಎಂದರು.

ಶಾಸಕ ಸತೀಶ ಸೈಲ್ ಪ್ರಾಸ್ತಾವಿಕ ಮಾತನಾಡಿ, ಗಂಗಾವಳಿ ಸೇತುವೆಯ ಲೋಕಾರ್ಪಣೆಯಿಂದ ಈ ಭಾಗದ ಜನರ ನಾಲ್ಕು ದಶಕಗಳ ಕನಸು ಸಾಕಾರಗೊಂಡಿದೆ ಎಂದರು.ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಹಳಿಯಾಳ ಶಾಸಕ ಆರ್ .ವಿ.ದೇಶಪಾಂಡೆ, ಶಿರಸಿ ಶಾಸಕ ಭೀಮಣ್ಣ ನಾಯ್ಕ, ಕುಮಟಾ ಶಾಸಕ ದಿನಕರ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಇಂದು ಚಾಲನೆ

ಹೊನ್ನಾವರ: ಕುಮಟಾ ಹೊನ್ನಾವರ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸೋಮವಾರ ಚಾಲನೆ ನೀಡಲಿದ್ದೇನೆ. ಈಗಾಗಲೇ ಎರಡು ಸೇತುವೆ ಮಂಜೂರಾಗಿದ್ದು, ಇದರ ಶಂಕುಸ್ಥಾಪನೆ ನಡೆಸಲಾಗುವುದು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಜಿಲ್ಲೆಯಲ್ಲಿ ಎರಡು ದಿನ ಪ್ರವಾಸದಲ್ಲಿರುವ ಸಚಿವರು ಹೊನ್ನಾವರದ ಆರೇ ಅಂಗಡಿಯ ಶ್ರೀಧರ ಶೆಟ್ಟಿ ಮನೆಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಳೆದ 20 ವರ್ಷದಿಂದ ನನ್ನ ಕ್ಷೇತ್ರದಲ್ಲಿ ಉತ್ಸವ ಮಾಡುತ್ತಿದ್ದು, ಅದರಂತೆ ಹೊನ್ನಾವರ ಉತ್ಸವ ನೋಡಲು ಇಂದು ಆಗಮಿಸಿದ್ದೇನೆ. ಈ ದಿನದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಇಲ್ಲಿಯ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಮಳಿಗೆಗಳನ್ನು ವೀಕ್ಷಿಸುತ್ತೇನೆ ಎಂದು ಹೇಳಿದರು.

ಕರ್ಕಿ ಪಾವಿನಕುರ್ವಾ ಗ್ರಾಮದ ತೂಗುಸೇತುವೆ ವೀಕ್ಷಿಸಿ ಅಧಿಕಾರಿಗಳೊಂದಿಗೆ ಚರ್ಚೆ ಸಮಸ್ಯೆ ಬಗೆಹರಿಸುವ ವಿಶ್ವಾಸ ವ್ಯಕ್ತಪಡಿಸಿದರು.

ಹೊನ್ನಾವರ ಮಣಸಿ ರಾಜ್ಯ ಹೆದ್ದಾರಿ ಬಗ್ಗೆ ಸ್ಥಳಿಯರಿಂದ ಮನವಿ ಸ್ವೀಕರಿಸಿ ಅರಣ್ಯ ಇಲಾಖೆಯಿಂದ ಅನುಮೋದನೆ ಪಡೆದು ಕಾಮಗಾರಿ ಆರಂಭಿಸುವ ಮೂಲಕ ದಶಕಗಳ ಬೇಡಿಕೆಯನ್ನು ಈಡೇರಿಸುದಾಗಿ ಸಚಿವರು ಭರವಸೆ ನೀಡಿದರು.ಆರೇ ಅಂಗಡಿ ಸರ್ಕಲ್ ನಿರ್ಮಾಣದ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಮೀಪದಲ್ಲೆ ಇರುವ ಲಲಿತಾ ಹುಲಸ್ವಾರ ಇವರ ಮನೆಗೆ ಭೇಟಿ ನೀಡಿ ಪ್ರಾಣಿ ಸಾಕಾಣಿಕೆಯನ್ನು ಗಮನಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಈ ವೇಳೆ ಮಾಜಿ ಶಾಸಕಿ ಶಾರದಾ ಶೆಟ್ಟಿ, ಜಿ.ಪಂ. ಮಾಜಿ ಸದಸ್ಯ ಶಿವಾನಂದ ಹೆಗಡೆ ಕಡತೋಕಾ, ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಅಲಿ ಗೊರವನಕೊಳ್ಳ, ಕಾಂಗ್ರೆಸ್ ಮುಖಂಡರಾದ ಮಂಜುನಾಥ ನಾಯ್ಕ, ರವಿಕುಮಾರ ಶೆಟ್ಟಿ, ವಿನಾಯಕ ಶೆಟ್ಟಿ, ಸಂದೇಶ ಶೆಟ್ಟಿ, ವಿನೋದ ನಾಯ್ಕ ಸೇರಿದಂತೆ ನೂರಾರು ಕಾರ್ಯಕರ್ತರು, ಸಾರ್ವಜನಿಕರು ಇದ್ದರು.



ಸನಾತನ ಧರ್ಮ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ

ಸಿದ್ದಾಪುರ: ಸನಾತನ ಧರ್ಮವನ್ನು ಯಾರೂ ಹುಟ್ಟುಹಾಕಿಲ್ಲ, ಅದರಂತೆ ಸನಾತನ ಧರ್ಮಕ್ಕೆ ಕೊನೆಯಿಲ್ಲ, ಸನಾತನ ಧರ್ಮ ಸತ್ಯವನ್ನೇ ಪ್ರತಿಪಾದಿಸುತ್ತದೆ. ಸನಾತನ ಧರ್ಮದಲ್ಲಿ ಶಾಂತಿ, ನೆಮ್ಮದಿ ಲಭಿಸುತ್ತದೆ. ನಮ್ಮ ಸಾಧು ಸಂತರು ದೇವರನ್ನು ಕಂಡುಕೊಂಡವರಲ್ಲ, ಸಾಕ್ಷಾತ್ಕರಿಸಿಕೊಂಡವರು ಎಂದು ಶಿರಳಗಿಯ ಶ್ರೀಚೈತನ್ಯ ರಾಜಾರಾಮ ಕ್ಷೇತ್ರದ ಶ್ರೀ ಬ್ರಹ್ಮಾನಂದ ಭಾರತೀ ಶ್ರೀಗಳು ಹೇಳಿದರು.

ತಾಲೂಕಿನ ಹಲಗೇರಿಯ ದೇವಾಲಯದ ಆವರಣದಲ್ಲಿ ಹಿಂದೂ ಸಮಾವೇಶ ಸಮಿತಿ ಆಯೋಜಿಸಿದ್ದ ಹಿಂದೂ ಸಮಾವೇಶದ ಸಾನಿಧ್ಯವಹಿಸಿ ಶ್ರೀಗಳು ಮಾತನಾಡಿ, ಈ ಜಗತ್ತು ಧರ್ಮದ ಆಧಾರದ ಮೇಲೆ ನಡೆಯುತ್ತಿದೆ. ಪ್ರತಿಯೊಂದು ಪ್ರಾಣಿಗಳಿಗೂ ಅವುಗಳದ್ದೇ ಆದ ಧರ್ಮವಿದೆ. ಉದ್ದೇಶಪೂರ್ವಕವಾಗಿ ಸನಾತನ ಶಿಕ್ಷಣವನ್ನು ಬದಿಗಿಡಲಾಗಿದೆ. ಶಾಲೆಗಳಲ್ಲಿ ಸನಾತನ ಶಿಕ್ಷಣವಿಲ್ಲ, ಪಾಲಕರು ಮಕ್ಕಳಿಗೆ ಸನಾತನ ಧರ್ಮದ ಶಿಕ್ಷಣ, ಸಂಸ್ಕೃತಿ ಹಾಗೂ ಸಂಸ್ಕಾರದ ಬಗ್ಗೆ ತಿಳಿಸಬೇಕಾಗಿದೆ. ಯಾರು ಸನಾತನ ಧರ್ಮವನ್ನು, ಈ ದೇಶವನ್ನು ಗೌರವಿಸುತ್ತಾರೋ, ಯಾರಿಗೆ ವಂದೇ ಮಾತರಂ ಹೇಳಲು ಹೆಮ್ಮೆ ಇದೆಯೋ ಅಂತವರನ್ನು ಗೌರವಿಸೋಣ. ನಮ್ಮಲ್ಲಿ ಸಂಘಟನೆ, ಸ್ವಾಭಿಮಾನ ಹೆಚ್ಚಾಗಬೇಕು. ಸ್ವಾಭಿಮಾನಕ್ಕಾಗಿ ಸಮಾಜೋತ್ಸವ ಎಲ್ಲ ಕಡೆಯಲ್ಲಿ ಆಚರಿಸುವಂತಾಗಬೇಕು ಎಂದು ಶ್ರೀಗಳು ಆಶಯ ವ್ಯಕ್ತಪಡಿಸಿದರು.

ದಿಕ್ಸೂಚಿ ಭಾಷಣ ಮಾಡಿದ ರಾಷ್ಟ್ರಗೋರಕ್ಷಣಾ ಪಡೆಯ ಸಂಸ್ಥಾಪಕ ಪುನೀತ ಕೆರೆಹಳ್ಳಿ ರಾಷ್ಟ್ರದ ಹೊರತು ಬೇರೆ ಧರ್ಮ ಇಲ್ಲ ಎನ್ನುವ ಸಿದ್ಧಾಂತವನ್ನು ಹೊಂದಿರುವುದು ನಮ್ಮ ಸನಾತನ ಧರ್ಮ. ನಮ್ಮ ಧರ್ಮ ನಮ್ಮ ಹೆಮ್ಮೆ ಎನ್ನುವುದನ್ನು ನಾವು ನಮ್ಮ ಮಕ್ಕಳಿಗೆ ತಿಳಿಸಿಕೊಡುವ ಜವಾಬ್ದಾರಿ ನಮ್ಮ ಮೇಲಿದೆ. ನಮ್ಮ ಸಂಸ್ಕೃತಿ, ಪರಂಪರೆಯ ಬಗ್ಗೆ ಜಾಗೃತಿ ಮೂಡಿಸುವ ಶಿಕ್ಷಣ ನೀಡಬೇಕಾಗಿದೆ. ಗೋಮಾತೆ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಪ್ರತಿ ಮನೆಯಿಂದ ಕನಿಷ್ಟ ಒಬ್ಬರಾದರೂ ದೇಶದ ರಕ್ಷಣೆಗಾಗಿ, ಧರ್ಮದ ರಕ್ಷಣೆಗಾಗಿ ಬರಬೇಕು ಎಂದು ಕರೆ ನೀಡಿದರು.

ಹಿಂದು ಸಮಾವೇಶ ಸಮಿತಿ ಅಧ್ಯಕ್ಷ ಕೃಷ್ಣಮೂರ್ತಿ ಹೆಗಡೆ ಅಧ್ಯಕ್ಷತೆವಹಿಸಿದ್ದರು. ಊರಿನ ಹಿರಿಯರಾದ ವೀರಭದ್ರ ಹುಚ್ಚ ನಾಯ್ಕ ಸುಂಕತ್ತಿ ಹಾಗೂ ಅಮೃತಾ ಸತೀಶ ಹೆಗಡೆ ಕಿಲಾರ ಉಪಸ್ಥಿತರಿದ್ದರು.


ಮಂಜುನಾಥ ನಾಯ್ಕ ದಂಪತಿಗಳು ಶ್ರೀಗಳನ್ನು ಗೌರವಿಸಿದರು. ರಾಷ್ಟ್ರಗೋರಕ್ಷಣಾ ಪಡೆಯ ಸಂಸ್ಥಾಪಕ ಪುನೀತ ಕೆರೆಹಳ್ಳಿ ಅವರನ್ನು ಸಮಿತಿ ವತಿಯಿಂದ ಗೌರವಿಸಲಾಯಿತು. ರವಿ ನಾಯ್ಕ ಸ್ವಾಗತಿಸಿದರು. ಶ್ರೀಧರ ನಾಯ್ಕ ಪ್ರಾಸ್ತಾವಿಕ ಮಾತನಾಡಿದರು. ನಾಗರಾಜ ನಾಯ್ಕ ವರದಿ ವಾಚಿಸಿದರು. ಚಂದ್ರಶೇಖರ ಕೊಡಿಯಾ ನಿರ್ವಹಿಸಿದರು. ಕಾರ್ಯಕ್ರಮದ ಪೂರ್ವದಲ್ಲಿ ಸುಂಕತ್ತಿ ಶಾಲಾಮೈದಾನದಿಂದ ಹಲಗೇರಿ ದೇವಾಲಯದವರೆಗೆ ಶೋಭಾಯಾತ್ರೆ ನಡೆಯಿತು.



ವಿಧಾನಸಭೆ ಚುನಾವಣೆ ಎದುರಿಸಲು ಸಿದ್ಧರಾಗಿ: ರೂಪಾಲಿ

ಕಾರವಾರ: ಮುಂಬರುವ ವಿಧಾನಸಭೆ ಚುನಾವಣೆಯನ್ನು ಎದುರಿಸಲು ನಾವೆಲ್ಲ ಈಗಲೇ ಸಿದ್ಧರಾಗಬೇಕು. ಜೊತೆಗೆ ಮತದಾರರ ಪಟ್ಟಿಯಲ್ಲಿ ಡಿಲೀಟ್ ಆದ ಸಂಖ್ಯೆಯನ್ನು ತೆಗೆಯುವ ಮತ್ತು ಹೊಸದಾಗಿ ಸೇರ್ಪಡೆ ಆಗಬೇಕಾದವರನ್ನು ಸೇರಿಸುವ ಬಗ್ಗೆ ಬಿಎಲ್ಎ 2 ಹಾಗೂ ಬೂತ್ ಅಧ್ಯಕ್ಷರು ಗಮನ ಕೊಡಬೇಕು ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ವಿನಂತಿಸಿದರು.

ಕಾರವಾರ ನಗರದ ಬಿಜೆಪಿ ಕಾರ್ಯಾಲಯದಲ್ಲಿ ರವಿವಾರ ನಡೆದ ಕ್ಷೇತ್ರದ ಬಿಎಲ್ ಎ 1 ಹಾಗೂ ಬಿಎಲ್ಎ 2 ಕಾರ್ಯಾಗಾರ ಹಾಗೂ ವಿಶೇಷ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಕೇಂದ್ರ ಸರ್ಕಾರದ ಯೋಜನೆಗಳ ಕುರಿತು ಪ್ರತಿ ಗ್ರಾಪಂ ವ್ಯಾಪ್ತಿಯಲ್ಲಿ ಸಭೆ ನಡೆಸಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಕೆಲಸ ಆದಷ್ಟು ಬೇಗ ಆಗಬೇಕು. ಹಾಗಾಗಿ ಬಿಜೆಪಿ ಕಾರ್ಯಕರ್ತರೆಲ್ಲರು ನಿಷ್ಠೆಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದು ಹೇಳಿದರು.ಗ್ರಾಮೀಣ ಮಂಡಲ ಅಧ್ಯಕ್ಷರಾಗಿರುವ ಸುಭಾಸ್ ಗುನಗಿ ಬಿಎಲ್ ಎ 2 ಕಾರ್ಯಾಗಾರ ಬಗ್ಗೆ ವಿಶೇಷ ಮಾಹಿತಿ ನೀಡಿದರು, ಸಭೆಯನ್ನು ಉದ್ದೇಶಿಸಿ ಜಿಲ್ಲಾ ಉಪಾಧ್ಯಕ್ಷರು ಆಗಿರುವ ಸಂಜಯ್ ಸಾಳುಂಕೆ ಮಾತಾಡಿದರು. ನಗರ ಸಭೆ ಮಾಜಿ ಅಧ್ಯಕ್ಷರಾದ ರವಿರಾಜ್ ಅಂಕೋಲೆಕರ ಪ್ರಸ್ತಾವಿಕವಾಗಿ ಮಾತನಾಡಿದರು. ಹಿಂದುಳಿದ ವರ್ಗ ಮೋರ್ಚಾದ



ಜಿಲ್ಲಾ ಅಧ್ಯಕ್ಷರಾದ ರಾಜೇಂದ್ರ ನಾಯ್ಕ್ ಮಾಹಿತಿ ನೀಡಿದರು, ಆರಂಭದಲ್ಲಿ ಭಾರತಾಂಬೆಗೆ ಪುಷ್ಪಸಮರ್ಪಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು, ಪಕ್ಷದ ನಗರ ಪ್ರಧಾನ ಕಾರ್ಯದರ್ಶಿ ಅಶೋಕ್ ಗೌಡ, ನಿರೂಪಿಸಿದರು, ಜಿಲ್ಲಾ ಮಾಧ್ಯಮ ಸಹ ಸಂಚಾಲಕ ಕಿಶನ್ ಕಾಂಬಳೆ, ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿಗಳು, ನಗರ ಸಭಾ ಮಾಜಿ ಸದ್ಯಸರುಗಳು, ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಸದ್ಯಸರು ಹಾಗೂ ಮಂಡಲ ಪ್ರಮುಖರು, ಪದಾಧಿಕಾರಿಗಳು, ಎಲ್ಲಾ ಮೋರ್ಚಾದವರು, ಮಹಾಶಕ್ತಿಕೇಂದ್ರ, ಶಕ್ತಿಕೇಂದ್ರದವರು, ಬೂತ್ ಅಧ್ಯಕ್ಷರು, ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಫಲಿತಾಂಶ ಸುಧಾರಣೆಗೆ ಕ್ರಮ ಕೈಗೊಳ್ಳಿ

ಮುಂಡಗೋಡ: ಎಲ್ಲ ವಿದ್ಯಾರ್ಥಿಗಳು ಉತ್ತೀರ್ಣರಾಗಿ ನಿಮ್ಮ ಭವಿಷ್ಯ ಉಜ್ವಲವಾಗಬೇಕು ಎನ್ನುವುದು ನಮ್ಮೆಲ್ಲರ ಕನಸಾಗಿದೆ ಎಂದು ಡಿಡಿಪಿಐ ಡಿ.ಆರ್ .ನಾಯ್ಕ ಹೇಳಿದರು.

ಇಲ್ಲಿನ ಪಪಂ ಸಭಾಭವನದಲ್ಲಿ ಶಿರಸಿ ಶೈಕ್ಷಣಿಕ ಜಿಲ್ಲೆಯ ಉಪನಿರ್ದೇಶಕ ಕಾರ್ಯಾಲಯ, ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ವಿಜೇತ ಶಿಕ್ಷಣ ಸಂಸ್ಥೆ ಧಾರವಾಡ ಇವರ ಸುಯುಕ್ತ ಆಶ್ರಯದಲ್ಲಿ ಬುಧವಾರ ಜರುಗಿದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಫಲಿತಾಂಶ ಸುಧಾರಣೆ ಮತ್ತು ಪ್ರತಿಭಾನ್ವೇಷಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರತಿಯೊಬ್ಬ ವಿದ್ಯಾರ್ಥಿ ಓದಿನಲ್ಲಿ ಗಮನವಿಟ್ಟು ತಮ್ಮನ್ನು ತಾವು ತೊಡಗಿಸಿಕೊಂಡರೆ ಈ ಬಾರಿ ತಾಲೂಕಿನ ಫಲಿತಾಂಶ ಶೇ.100ರಷ್ಟು ಆಗುವುದರಲ್ಲಿ ಸಂಶಯವಿಲ್ಲ, ಪ್ರತಿಯೊಬ್ಬ ವಿದ್ಯಾರ್ಥಿ ಉತ್ತಮ ಸಾಮರ್ಥ್ಯ ಹೊಂದಿದ್ದು ಸತತ ಪ್ರಯತ್ನ ಮಾಡಿ ಪಾಸು ಆಗುವ ಮೂಲಕ ಫಲಿತಾಂಶ ಸುಧಾರಣೆ ಮಾಡಬೇಕು ಎಂದರು.ಅಧ್ಯಕ್ಷತೆ ವಹಿಸಿದ್ದ ಬಿಇಒ ಸುಮಾ ಜಿ., ವಿಜೇತ ಶಿಕ್ಷಣ ಸಂಸ್ಥೆ ನಿರ್ದೇಶಕ ರಮೇಶ ಪರಿಟ್ ಮಾತಾನಡಿದರು. ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗಾಗಿ ನಡೆಸಿದ 2 ಪರೀಕ್ಷೆಯಲ್ಲಿ



ಶೇ.85ರಷ್ಟು ಫಲಿತಾಂಶ ಪಡೆದ 250 ವಿದ್ಯಾರ್ಥಿಗಳ ಜೊತೆ ರಾಷ್ಟ್ರ ಪ್ರಶಸ್ತಿ ವಿಜೇತ, ಶಿಕ್ಷಣ ತಜ್ಞ ಸುರೇಶ ಕುಲಕರ್ಣಿ, ತರ್ಲಗಟ್ಟಾ ಮುರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾಂಶುಪಾಲ ಮಂಜುನಾಥ ಮರಿತಮ್ಮಣ್ಣನವರ, ಗದಗ ಜಿಲ್ಲಾ ಪಿ.ಎಮ್.ಪೋಷಣೆ ಯೋಜನೆ ಸಹಾಯಕ ನಿರ್ದೇಶಕ ಶಂಕರ ಹಡಗಲಿ ಸಂವಾದ ನಡೆಸಿದರು.ಗದಗ ಜಿಲ್ಲಾ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ.ನಡುವಿನಮನಿ, ಕ್ಷೇತ್ರ ಸಮನ್ವಯಾಧಿಕಾರಿ ರಮೇಶ ಅಂಬಿಗೇರ, ಪಿ.ಎಮ್.ಪೋಷಣೆ ಯೋಜನೆ ಸಹಾಯಕ ನಿರ್ದೇಶಕ ವಾಸುದೇವ ನಾಯ್ಕ, ಶಿರಸಿ ಶೈಕ್ಷಣಿಕ ಜಿಲ್ಲಾ ಪ್ರೌಢಶಾಲಾ ಮುಖ್ಯಾಧ್ಯಾಪಕ ಸಂಘದ ಜಿಲ್ಲಾಧ್ಯಕ್ಷ ಎಸ್.ಡಿ.ಮುಡೆಣ್ಣವರ, ತಾಲೂಕು ಎಸ್.ಎಸ್.ಎಲ್.ಸಿ. ಪರೀಕ್ಷೆ ವಿಭಾಗದ ನೋಡೆಲ್ ಅಧಿಕಾರಿ ನಾಗರಾಜ ನಾಯ್ಕ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಸುಭಾಸ ಡೋರಿ ಸೇರಿದಂತೆ 20 ಪ್ರೌಢಶಾಲಾ ಮುಖ್ಯ ಶಿಕ್ಷಕರು ಇದ್ದರು.

ಗೋಶಾಲೆಯಲ್ಲಿ ಗಮನ ಸೆಳೆದ ಗೋ ಸಂಧ್ಯಾ

ಕುಮಟಾ: ಆಲೆಮನೆ ಹಬ್ಬದ ಮೂರನೇ ದಿನವಾದ ಶನಿವಾರ ವಾರ್ಷಿಕ ಗೋ ಸಂಧ್ಯಾ ಹಾಗೂ ಭಾರತೀಯ ಗೋ ಬ್ಯಾಂಕ್ ವಾಟ್ಸಪ್ ಗುಂಪಿನ ಸಕ್ರಿಯ ಕಾರ್ಯಕರ್ತರ ಸಮ್ಮೇಳನ ಭಕ್ತಿ, ಭಾವನೆ ಮತ್ತು ಗೋರಕ್ಷಣಾ ಸಂಕಲ್ಪದೊಂದಿಗೆ ಯಶಸ್ವಿಯಾಗಿ ನೆರವೇರಿತು.

ಬೆಳಗ್ಗೆ ಕಾಮಧೇನು ಹವನ, ಕಾಮಧೇನು ಪೂಜೆ ಹಾಗೂ ಗೋ ಪೂಜೆಗಳು ಶ್ರದ್ಧಾಭಕ್ತಿಯಿಂದ ನಡೆದವು. ಸಂಜೆ ಗೋ ಸಂಧ್ಯಾ ಕಾರ್ಯಕ್ರಮ ಸಂಪನ್ನವಾಯಿತು. ಸಭೆಯನ್ನು ಬೆಂಗಳೂರಿನ ಕಾರ್ಡಿನಲ್ ಹೆಲ್ತ್ ನ ಸೀನಿಯರ್ ಸಾಫ್ಟ್‌ವೇರ್ ಎಂಜಿನಿಯರ್ ಶಿವಪ್ರಸಾದ ಭಟ್ಟ ಹಾಗೂ ಗೋ ಸಂರಕ್ಷಕ ಅಕ್ಷಯ ಆಳ್ವಾ ಜಂಟಿಯಾಗಿ ಉದ್ಘಾಟಿಸಿದರು.

ಶಿವಪ್ರಸಾದ ಭಟ್ಟ ಅವರು ಗೋ ಬ್ಯಾಂಕಿನ ಕಾರ್ಯಗಳ ಬಗ್ಗೆ ತೃಪ್ತಿ ವ್ಯಕ್ತಪಡಿಸಿ, ಗವ್ಯ ಚಿಕಿತ್ಸಾ ಕೇಂದ್ರಕ್ಕೆ ತಮ್ಮ ಸಂಸ್ಥೆಯ ಪ್ರಾಯೋಜಕತ್ವ ಮುಂದುವರಿಯಲಿದೆ ಎಂದರು. ಅಕ್ಷಯ ಆಳ್ವಾ ದೇಸೀ ತಳಿಯ ಗೋವುಗಳ ಪೋಷಕಾಂಶ ಮತ್ತು ಔಷಧ ಗುಣಗಳ ಬಗ್ಗೆ ಮಾತನಾಡಿ, ದೇಶೀ ಗೋವನ್ನು ಉಳಿಸುವ ಅಗತ್ಯತೆಯನ್ನು ಒತ್ತಿಹೇಳಿದರು.

ಮಂಗೇಶ್ ನಾಯ್ಕ್ (ಗೋ ಸಂರಕ್ಷಕರು), ಅಕ್ಷಯ ಆಳ್ವಾ (ಮಲೆನಾಡ ಗಿಡ್ಡ ಗೋ ಸಂರಕ್ಷಕರು), ಪವನ್ ನಾಯ್ಕ್ (ಉರಗ ಹಾಗೂ ಗೋ ರಕ್ಷಕರು) ಮತ್ತು ಡಾ. ಅರವಿಂದ ನಾಯ್ಕ (ಪ್ರಾಧ್ಯಾಪಕರು, ಎ.ವಿ. ಬಾಳಿಗಾ ಕಾಲೇಜು, ಕುಮಟಾ) ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಗೋ ಬ್ಯಾಂಕಿನ ಕಾರ್ಯದರ್ಶಿ ಅರುಣ ಹೆಗಡೆ ಅವರು



ಗಣ್ಯರನ್ನು ಸಭೆಗೆ ಸ್ವಾಗತಿಸಿ ಪರಿಚಯಿಸಿದರು.ಗೋಶಾಲಾ ಸಮಿತಿ ಸದಸ್ಯ ಮಂಜುನಾಥ ಭಟ್ಟ ಸುವರ್ಣಗದ್ದೆ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ದೇಸೀ ಗೋವುಗಳ ಮಹತ್ವವನ್ನು ಮನದಟ್ಟು ಮಾಡಿದರು. ಹಾಲನ್ನು ಗುಣಮಟ್ಟದಲ್ಲಿ ಅಳೆಯಬೇಕು, ಪ್ರಮಾಣದಲ್ಲಿ ಅಲ್ಲ, ದೇಸೀ ಗೋವಿನ ಹಾಲು ಅಮೃತ ಸಮಾನ. ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಇದು ಅವಶ್ಯಕ ಎಂದು ಅಭಿಪ್ರಾಯಪಟ್ಟರು. ಗೋ ಬ್ಯಾಂಕಿನ ಕೋಶಾಧ್ಯಕ್ಷ ಸುಬ್ರಾಯ ಶಿವ ಭಟ್ಟ ಅವರು ವಾರ್ಷಿಕ ವರದಿ ಮಂಡಿಸಿದರು. ಸನ್ಮಾನಿತ ಅತಿಥಿ ಪವನ ನಾಯ್ಕ ಮಾತನಾಡಿದರು. ಗೋಶಾಲಾ ಸಮಿತಿಯ ಗೋಪಾಲಕೃಷ್ಣ ಉಗ್ರು ವಂದಿಸಿದರು. ಗಣೇಶ ಜೋಶಿ ನಿರೂಪಿಸಿದರು. ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕುಮಟಾದ ಕೊಂಕಣ ಎಜ್ಯುಕೇಶನ್ ಟ್ರಸ್ಟ್ ಹಾಗೂ ಮೂರೂರಿನ ವಿದ್ಯಾನಿಕೇತನ ಸಂಸ್ಥೆಯ ಹಿರಿ-ಕಿರಿಯ ವಿದ್ಯಾರ್ಥಿಗಳು ಭಕ್ತಿಗೀತೆ, ನೃತ್ಯ ರೂಪಕ ಮತ್ತು ಭರತನಾಟ್ಯ ಪ್ರದರ್ಶಿಸಿ ಜನರ ಮನಗಳಿಸಿತ್ತು.

ಧರ್ಮದ ಉಳಿವಿಗೆ ಶ್ರಮಿಸಿ: ಶ್ರೀಗಳು

ಹೊನ್ನಾವರ: ತಾಲೂಕಿನ ಖರ್ವಾ ಗ್ರಾಮದ ಕೊಳಗದ್ದೆ ವಿದ್ಯಾಮಂದಿರದ ಆವಾರದಲ್ಲಿ ಹಿಂದೂ ಸಂಚಾಲನ ಸಮಿತಿ ಖರ್ವಾ ಮಂಡಲದ ವತಿಯಿಂದ ಹಿಂದೂ ಸಮ್ಮೇಳನ ಅದ್ದೂರಿಯಾಗಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಬ್ರಹ್ಮಾನಂದ ಭಾರತೀ ಶ್ರೀಗಳು ಆಶೀರ್ವಚನ ನೀಡಿ, ಸನಾತನ ಎಂದರೆ ಶಾಶ್ವತ ಸತ್ಯ ಹೇಳುವ ಧರ್ಮ. ನಮ್ಮ ವೇದ, ಉಪನಿಷತ್ತು ಎಂದು ಸಂಕುಚಿತ ದೃಷ್ಟಿ ಇಟ್ಟುಕೊಂಡಿಲ್ಲ, ಪ್ರತಿಯೊಂದು ಧರ್ಮದ ಬಗ್ಗೆ ಗೌರವ ಭಾವ ಹೊಂದಿದೆ. ಆದರೆ ಬೇರೊಂದು ಗುಂಪು ಬಲಾತ್ಕಾರವಾಗಿ ಸಂಚಿನ ಮೂಲಕ ಮತಾಂತರ ಪ್ರಯತ್ನ ಮಾಡಿದ್ದಾರೆ ಅದಕ್ಕಾಗಿ ನಾವು ನಮ್ಮ ಮಕ್ಕಳಿಗೆ ಹಿಂದೂ ಧರ್ಮದ ಇತಿಹಾಸ, ಮಹತ್ವದ ಬಗ್ಗೆ ತಿಳಿಸಿಕೊಡಬೇಕು. ನಮ್ಮಲ್ಲಿನ ಶ್ರೇಷ್ಟ ವ್ಯಕ್ತಿಗಳ ಆದರ್ಶಗಳ ಬಗ್ಗೆ ಅರಿವು ಮೂಡಿಸಬೇಕು. ಈ ಶ್ರೇಷ್ಠ ಸಂಸ್ಕೃತಿ



ಮುಂದಿನ ತಲೆಮಾರಿಗೆ ನೀಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಇಲ್ಲವಾದಲ್ಲಿ ಮುಂದಿನ ಪೀಳಿಗೆ ನಮ್ಮನ್ನು ಶಪಿಸುತ್ತದೆ ಎಂದರು.

ದುರ್ಗಾ ಮಹಿಳಾ ಮಂಡಳಿ ಅಧ್ಯಕ್ಷೆ ನಂದಿತಾ ಭಟ್ಟ ಸನ್ಮಾನಿಸಲಾಯಿತು.

ದಿಕ್ಸೂಚಿ ಭಾಷಣ ಮಾಡಿದ ಆರ್ ಎಸ್‌ಎಸ್‌ನ ದಾಮೋದರ್.ಜಿ ಮಾತನಾಡಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘ ಎನ್ನುವುದು ಯಾವ ಪಕ್ಷದ ಅಥವಾ ಜಾತಿ,ಮತ,ಪಂಥದ ವಿರುದ್ಧವಾಗಿ ಇರುವುದಲ್ಲ, ದೇಶ ವಿರೋಧಿಗಳ ವಿರುದ್ಧವಾಗಿ ನಿಲ್ಲುವುದಾಗಿದೆ. ನಮ್ಮಲ್ಲಿ ಜಾತಿ, ಮತ,ಪಂಥ ಎಂಬ ಭೇದ-ಭಾವ ಇರಬಾರದು. ಹಿಂದೂಗಳು ಸಂಘಟಿತರಾಗಿ ಇರಬೇಕು. ಹಿಂದೂ ಸ್ವಾಭಿಮಾನಿ ಆಗಬೇಕು ಎಂದು ಹೇಳಿದರು. ಹಿಂದೂ ಸಂಚಾಲನ ಸಮಿತಿ ಖರ್ವಾ ಮಂಡಲದ ಅಧ್ಯಕ್ಷ ಉಮೇಶ ಭಟ್, ದುರ್ಗಾ ಮಹಿಳಾ ಮಂಡಳಿ ಅಧ್ಯಕ್ಷೆ ನಂದಿತಾ ಭಟ್ಟ ಉಪಸ್ಥಿತರಿದ್ದರು. ಖರ್ವಾ ವಿಎಸ್ ಎಸ್ ಮುಖ್ಯ ಕಾರ್ಯನಿರ್ವಾಹಕ ಮೋಹನ ನಾಯ್ಕ ಸ್ವಾಗತಿಸಿದರು. ಪ್ರದೀಪ ಭಟ್ ನಿರ್ವಹಿಸಿದರು. ದತ್ತಾತ್ರೇಯ ಮೇಸ್ತ ವಂದಿಸಿದರು.

ಬೈಕ್ ರ‍್ಯಾಲಿ ಹಾಗೂ ಚಂಡೆವಾದ್ಯ, ಪೂರ್ಣಕುಂಭದ ಮೂಲಕ ಶ್ರೀ ಬ್ರಹ್ಮಾನಂದ ಭಾರತೀ ಶ್ರೀಗಳು ಸ್ವಾಗತಿಸಲಾಯಿತು. ಹಿಂದೂ ಸಮಾಜಬಾಂಧವರು ಪಾಲ್ಗೊಂಡಿದ್ದರು.

ಫೆ.27ರಿಂದ ದಿಂಡಿ ಉತ್ಸವ

ಬನವಾಸಿ: ಇಲ್ಲಿನ ನಾಮದೇವ ಸಿಂಪಿ ಸಮಾಜದ ವತಿಯಿಂದ ನಡೆಯುವ ಶ್ರೀ ದೇವರ 41ನೇ ದಿಂಡಿ ಉತ್ಸವವು ಫೆ.27 ಮತ್ತು ಫೆ.28ರಂದು ಜರುಗಲಿದೆ.



ಫೆ.27 ರಂದು ಬೆಳಗ್ಗೆ 8ಗಂಟೆಗೆ ಶ್ರೀ ಮಧುಕೇಶ್ವರ ದೇವಸ್ಥಾನದಿಂದ ಪೋತಿ ಹಾಗೂ ಸಂತ ಶಿರೋಮಣಿ ಪಂಢರಪುರದ ಶ್ರೀ ಗುರುತಾತ್ಯಾ ರಾಶಿನಕರಡ ಮಹಾರಾಜ ಅವರನ್ನು ಭವ್ಯ ಮೆರವಣಿಗೆಯ ಮೂಲಕ ಇಲ್ಲಿನ ನಾಮದೇವ ಕಲ್ಯಾಣ ಮಂಟಪಕ್ಕೆ ಕರೆತರಲಾಗುವುದು. ಬೆಳಗ್ಗೆ 11 ಗಂಟೆಗೆ ವಿಠ್ಠಲ ರುಖುಮಾಯಿ ದೇವರ ಅಭಿಷೇಕ ಪೂಜೆ ಮತ್ತು ಜ್ಞಾನೇಶ್ವರಿ ಪಾರಾಯಣ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ ನಡೆಯುವುದು.

ಸಂಜೆ 4 ಗಂಟೆಗೆ ಗುರುತಾತ್ಯಾ ಮಹಾರಾಜರಿಂದ ನಾಮದೇವ ಸಭಾಭವನದ ಉದ್ಘಾಟನೆ ಹಾಗೂ ಗೌರವ ಸಮರ್ಪಣೆ, ಆಶೀರ್ವಚನ ಕಾರ್ಯಕ್ರಮ ನೆರವೇರುವುದು. ಸಂಜೆ 7ರಿಂದ ಅಖಂಡ ಜಾಗರಣೆ ನಿಮಿತ್ತ ಸಂತವಾಣಿ ಕಾರ್ಯಕ್ರಮ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಗಳು ನಡೆಯುತ್ತವೆ.

ಫೆ.28 ರಂದು ಪ್ರಾಥಕಾಲ 5ಗಂಟೆಗೆ ಕಾಕಡರಾತಿ ಭಜನೆ ಶ್ರೀದೇವರ ಪೂಜಾ ಕಾರ್ಯಕ್ರಮ. ಬೆಳಗ್ಗೆ 8 ರಿಂದ ವಿಠ್ಠಲ ರುಖುಮಾಯಿ ದೇವರ ರಾಜಬೀದಿ ಉತ್ಸವ ನಡೆಯಲಿದೆ. ಮಧ್ಯಾಹ್ನ ಮಹಾ ಮಂಗಳಾರತಿ, ಪ್ರಸಾದ ವಿತರಣೆ ಹಾಗೂ ಅನ್ನ ಸಂತರ್ಪಣೆ ನಡೆಯಲಿದೆ ಎಂದು ಶ್ರೀ ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ಮಧುಕರ ಮಾಳವದೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರು ಸುದ್ದಿ

ಪದವೀಧರ ಪದಾಧಿಕಾರಿಗಳ ಸಭೆ



ಹಾವೇರಿ: ಪಶ್ಚಿಮ ಪದವೀಧರ ಕ್ಷೇತ್ರದ ಕಾಂಗ್ರೆಸ್ ಪಕ್ಷದ ನಿಯೋಜಿತ ಅಭ್ಯರ್ಥಿ ಮೋಹನ ಲಿಂಬಿಕಾಯಿ ನೇತೃತ್ವದಲ್ಲಿ ಹಾವೇರಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸಭೆ ನಡೆಸಲಾಯಿತು ಪದವೀಧರ ಮತಕ್ಷೇತ್ರದ ಚುನಾವಣೆಯ ಕುರಿತು ಸುಧೀರ್ಘವಾಗಿ ಚರ್ಚೆ ನಡೆಸಿ, ಸಂಘಟನಾ ಬಲವರ್ಧನೆ, ಮತದಾರರ ನೋಂದಣಿ, ಪ್ರಚಾರ ಕಾರ್ಯಗಳ ಬಗ್ಗೆ ಸವಿಸ್ತಾರವಾದ ಚರ್ಚೆ ನಡೆಯಿತು. ಮುಂದಿನ ಹಂತದ ಕಾರ್ಯಕ್ರಮ ರೂಪಿಸಲು ಹಾಗೂ ಕಾರ್ಯತಂತ್ರವನ್ನು ಜಾರಿಗೆ ತರಲು ಸಮಗ್ರ ಯೋಜನೆ ರೂಪಿಸಲಾಯಿತು. ಪಕ್ಷದ ಏಕತೆಯೊಂದಿಗೆ ಹಾಗೂ ಸಮನ್ವಯದೊಂದಿಗೆ ಚುನಾವಣೆಯನ್ನು ಎದುರಿಸಿ ಜಯ ಸಾಧಿಸುವ ಸಂಕಲ್ಪವನ್ನು ಈ ಸಭೆಯಲ್ಲಿ ವ್ಯಕ್ತಪಡಿಸಲಾಯಿತು.

ಈ ಸಭೆಯಲ್ಲಿ ಜಿಲ್ಲಾ ಪ್ರಧಾನಕಾರ್ಯದರ್ಶಿ ಶಂಕರ್ ಮೆಹರವಾಡೆ, ಚೆನ್ನಪ್ಪ ಕಲಾಲ್, ಬಾಬಣ್ಣ ಮೊಮೀನಗರ, ಬಸವರಾಜ್ ಬಳ್ಳಾರಿ, ವಿನಯ ಪಾಟೀಲ್, ಮಹಾಲಿಂಗಯ್ಯ ಹಿರೇಮಠ್, ಮಂಜುನಾಥ್ ದಪ್ಪೆರ್, ಅನಿಲ್ ಭದ್ರಾಪುರ, ಶಂಕ್ರಪ್ಪ ಗೊಡ್ಡೆಮ್ಮಿ, ಧ್ಯಾಮನಗೌಡ್ರ ಚಿಕ್ಕನಗೌಡ್ರ, ಹಾಲೇಶ್ ಅರಿಕಟ್ಟಿ, ಶಿವಪ್ಪ ಕಾಂದಟೆ, ಸಂತೋಷ ಪಾಟೀಲ, ಮಧುಕರ್ ನೆಗಳೂರ್, ಶಾಂತಣ್ಣ, ಜಿಲ್ಲಾ ಪದಾಧಿಕಾರಿಗಳು ಹಾಗೂ ಜಿಲ್ಲೆಯ ಎಲ್ಲಾ ತಾಲೂಕಿನ ಪದವೀಧರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ನಾಳೆ ಪ್ರತಿಭಾ ಪುರಸ್ಕಾರ

ರಾಣೇಬೆನ್ನೂರ: ಕನಕ ಪರಮೇಶ್ವರಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ವತಿಯಿಂದ ಕನಕಪರಮೇಶ್ವರಿ ಸಾಂಸ್ಕೃತಿಕ ಉತ್ಸವ ಹಾಗೂ 202-26ನೇ ಸಾಲಿನ ಎಸ್ಎಸ್ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು 50 ಮಹಿಳೆಯರಿಗೆ ಉಚಿತ ಕಿಟ್ ಕೊಡುವ ಕಾರ್ಯಕ್ರಮ ಫೆ.24 ರಂದು ಬೆ.10.30ಕ್ಕೆ ನಗರದ ಮೇಡ್ಲೇರಿ ರಸ್ತೆಯಲ್ಲಿರುವ ಆದಿಶಕ್ತಿ ದೇವಸ್ಥಾನದ ಸಭಾಭವನದಲ್ಲಿ ನಡೆಯಲಿದೆ ಎಂದು ಸಂಸ್ಥೆಯ ಅಧ್ಯಕ್ಷೆ ಲಲಿತಾ.ಜಿ.ಪಾಟೀಲ್ ಹೇಳಿದರು. ಭಾನುವಾರ ನಗರದ ಪ್ರವಾಸಿಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಪೋಕ್ಷೇತ್ರ ಕಡೇನಂದಿಹಳ್ಳಿಯ ಗುರು ರೇವಣಸಿದ್ದೇಶ್ವರ ಶ್ರೀಗಳು, ಕೋಡಿಯಾಲದ ಜಗದೀಶ್ವರ ಶ್ರೀಗಳು, ಕೋಂಬಳಿ ಚೌಕಿಮಠದ ಗಾಡಿತಾತನವರು, ಹಾರನಹಳ್ಳಿಯ ಶಿವಯೋಗಿ ಶಿವಾಚಾರ್ಯ ಶ್ರೀಗಳು ಸಾನಿಧ್ಯವಹಿಸುವರು ಎಂದರು. ಶಾಸಕ ಪ್ರಕಾಶ ಕೋಳಿವಾಡ, ಪೂರ್ಣಿಮಾ ಕೋಳಿವಾಡ, ಮಾಜಿ ಶಾಸಕ ಅರುಣಕುಮಾರ ಪೂಜಾರ, ಸಮಾಜ ಸೇವಕ ಮಂಜಯ್ಯ ಚಾವಡಿ, ನಾಗರಾಜ ಸಾಲಗೇರಿ ಕಾರ್ಯಕ್ರಮ ಉದ್ಘಾಟಿಸುವರು. ಲಲಿತಾ ಪಾಟೀಲ ಅಧ್ಯಕ್ಷತೆವಹಿಸುವರು. ಹರಿಹರ ಶಾಸಕ ಬಿ ಪಿ ಹರೀಶ, ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ, ಮಾಜಿ ಶಾಸಕ ಶಿವಶಂಕರ ಬನ್ನಿಕೋಡ, ಸಂತೋಷಕುಮಾರ ಪಾಟೀಲ, ರೂಪಾ ಚಿನ್ನಿಕಟ್ಟಿ, ಪ್ರಕಾಶ ಬುರಡಿಕಟ್ಟಿ, ಬಸವರಾಜ ಹುಲ್ಲತ್ತಿ ಸೇರಿದಂತೆ ಅನೇಕ ಗಣ್ಯರು ಮುಖ್ಯ ಅತಿಥಿಗಳಾಗಿ ಆಗಮಿಸುವರು. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನಗೈದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಗುವುದು ಎಂದು ಪಾಟೀಲ್ ವಿವರಿಸಿದರು.

ಉಚಿತ ಕನ್ನಡಕ ವಿತರಿಸಿದ ಶಾಸಕ ಮಾನೆ



ಹಾನಗಲ್ಲ: ಅಂಧತ್ವ ನಿವಾರಣೆಗಾಗಿ ರಾಷ್ಟ್ರೀಯ ಬಾಲಸ್ವಾಸ್ಥ್ಯ ಕಾರ್ಯಕ್ರಮದಡಿ ತಾಲೂಕಿನ 632 ವಿಶೇಷ ಚೇತನ ಮಕ್ಕಳ ಪೈಕಿ 154 ಮಕ್ಕಳಿಗೆ ಶಾಸಕ ಶ್ರೀನಿವಾಸ ಮಾನೆ ಉಚಿತವಾಗಿ ಕನ್ನಡಕ ವಿತರಿಸಿದರು.

ಮಕ್ಕಳಲ್ಲಿನ ದೋಷಗಳು, ನ್ಯೂನ್ಯತೆಗಳನ್ನು ಮೊದಲೇ ಪತ್ತೆ ಹಚ್ಚಿ ಉಚಿತ ಚಿಕಿತ್ಸೆ ನೀಡುವ ಉದ್ದೇಶದಿಂದ ರಾಷ್ಟ್ರೀಯ ಬಾಲಸ್ವಾಸ್ಥ್ಯ ಕಾರ್ಯಕ್ರಮ ಜಾರಿಗೊಳಿಸಲಾಗಿದೆ. ದೃಷ್ಟಿದೋಷ ಸೇರಿದಂತೆ ಇತರ ಅಂಗವೈಕಲ್ಯಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ, ತಡೆಗಟ್ಟುವ ಮತ್ತು ಗುಣಪಡಿಸಿ ಮಕ್ಕಳ ಆರೋಗ್ಯ ಸುಧಾರಿಸುವ ಗುರಿಯನ್ನು ಕಾರ್ಯಕ್ರಮ ಹೊಂದಿದೆ. ಸಂಚಾರಿ ಆರೋಗ್ಯ ತಂಡ ಶಾಲೆಗಳಿಗೆ ಭೇಟಿ ನೀಡಿ ಮಕ್ಕಳ ಆರೋಗ್ಯ ತಪಾಸಣೆ ಕೈಗೊಂಡು ಉಚಿತ ಚಿಕಿತ್ಸೆ ಸಹ ನೀಡಲಿದೆ ಎಂದು ಹೇಳಿದರು. ಬಿಆರ್‌ಸಿ ಸಮನ್ವಯಾಧಿಕಾರಿ ನಾಗೇಂದ್ರಪ್ಪ ಡಿ., ಬಿಐಇಆರ್‌ಟಿ ಜಿ.ಎ.ಗುಮ್ಮಜ್, ಮಹೇಶ ದಾನಪ್ಪನವರ, ಜೆನಿಫರ್ ಪಿಂಟೋ, ಮುಖಂಡರಾದ ರವಿ ದೇಶಪಾಂಡೆ, ಗುರುರಾಜ್ ನಿಂಗೋಜಿ, ಶಿವು ಭದ್ರಾವತಿ, ಸುರೇಶ ಕರೆಪ್ಪನವರ, ದಾವಲಸಾಬ ನಾಗನೂರ ಇದ್ದರು.



ಹಾವೇರಿ:ತಾಲೂಕು ಕಾಟೇನಹಳ್ಳಿಯ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿದರು.

ಶಿವಾಜಿ ಮಹಾರಾಜರ ಆದರ್ಶ ಪಾಲಿಸಿ

ಕುಂದಗೋಳ: ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತ್ಯುತ್ಸವ ಅಂಗವಾಗಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪೂಜೆ ಹಾಗೂ ಪುಷ್ಪನಮನವನ್ನು ಗಣ್ಯರು ಸಲ್ಲಿಸುವ ಮೂಲಕ ವಿಜೃಂಭಣೆಯಿಂದ ಆಚರಿಸಲಾಯಿತು.

ತಹಶೀಲ್ದಾರ್ ರಾಜು ಮಾವರಕರ ಮಾತನಾಡಿ, ಛತ್ರಪತಿ ಶಿವಾಜಿ ಮಹಾರಾಜರ ಧೈರ್ಯ ಮತ್ತು ನೀತಿವಂತ ಆಡಳಿತಕ್ಕೆ ಹೆಸರಾದವರು. ಅವರ ಶೌರ್ಯ, ಹೋರಾಟದ ಹಾದಿ ಹಾಗೂ ಅವರ ಜೀವನದ ಆದರ್ಶಗಳು ಇಂದಿನ ಸಮಾಜಕ್ಕೆ ಪ್ರೇರಣೆಯಾಗಿವೆ. ಪ್ರತಿಯೊಬ್ಬರೂ ಶಿವಾಜಿ ಮಹಾರಾಜರ ದೇಶಪ್ರೇಮವನ್ನು ಅಳವಡಿಸಿಕೊಳ್ಳಬೇಕು ಎಂದರು. ಕೃಷಿಕ ಸಮಾಜ ನವದೆಹಲಿ ರಾಜ್ಯಾಧ್ಯಕ್ಷರಾದ ಮಾಣಿಕ್ಯ ಚಿಲ್ಲೂರ ಮಾತನಾಡಿದರು. ಶಿಕ್ಷಕ ಎಸ್. ಸಿ. ಶ್ಯಾನವಾಡ ಉಪನ್ಯಾಸ ನೀಡಿದರು. ಎಸ್‌ಎಸ್‌ಎಲ್.ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿ ಸಮಾಜದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಇಓ ಜಗದೀಶ ಕಮ್ಮಾರ, ತಾಲೂಕು ಗ್ಯಾರಂಟಿ ಯೋಜನೆ ಅಧ್ಯಕ್ಷ ಸತೀಶ ಕೊಬ್ಬಯ್ಯನವರ, ಮುಖಂಡರಾದ ನಾಗರಾಜ ದೇಶಪಾಂಡೆ, ವಿಠ್ಠಲ ಚವ್ಹಾಣ, ಅಶೋಕ ಘೋರ್ಪಡೆ, ಕಲ್ಲಪ್ಪ ಹರಕುಣಿ, ವಿನೋದ ಮಾಣಿಕ್ಯನವರ, ಶಂಕರ ಪರಮೇಕರ, ಗಣೇಶ ಕೊಕಾಟೆ, ಜ್ಯೋತಿಬಾ ಶಿಂಧೆ, ವನಮಾಲ ಪವಾರ, ಸರಸ್ವತಿ ಪವಾರ. ತುಳಸವ್ವ ನಿಂಬೋಜಿ ಇತರರಿದ್ದರು. ಶಿಕ್ಷಕ ನಾಗರಾಜ ಗೌಳಿ ನಿರೂಪಿಸಿದರು. ಸಂಭಾಜಿ ತಡಸದ ಅವರು ಶಿವಾಜಿ ಮಹಾರಾಜರ ವೇಷಭೂಷಣ ತೊಟ್ಟು ಕಾರ್ಯಕ್ರಮಕ್ಕೆ ವಿಶೇಷ ಮೆರುಗು ತಂದರು.



ಕುಂದಗೋಳ: ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತ್ಯುತ್ಸವ ಅಂಗವಾಗಿ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಪೂಜೆ ಹಾಗೂ ಪುಷ್ಪನಮನವನ್ನು ಗಣ್ಯರು ಸಲ್ಲಿಸುವ ಮೂಲಕ ವಿಜೃಂಭಣೆಯಿಂದ ಆಚರಿಸಲಾಯಿತು. ತಹಶೀಲ್ದಾರ್ ರಾಜು ಮಾವರಕರ, ಕೃಷಿಕ ಸಮಾಜ ನವದೆಹಲಿ ರಾಜ್ಯಾಧ್ಯಕ್ಷರಾದ ಮಾಣಿಕ್ಯ ಚಿಲ್ಲೂರ, ಶಿಕ್ಷಕ ಎಸ್. ಸಿ. ಶ್ಯಾನವಾಡ,ಇಒ ಜಗದೀಶ ಕಮ್ಮಾರ, ತಾಲೂಕು ಗ್ಯಾರಂಟಿ ಯೋಜನೆ ಅಧ್ಯಕ್ಷ ಸತೀಶ ಕೊಬ್ಬಯ್ಯನವರ ಮತ್ತಿತರರು ಇದ್ದರು.

ಶೃಂಗಸಭೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ನಡೆ ಖಂಡನೀಯ

ಕಾಂಗ್ರೆಸ್ ವಿರುದ್ಧ ಬಿಜೆಪಿ ಪ್ರತಿಭಟನೆ

ಹಾವೇರಿ: ಯುವ ಕಾಂಗ್ರೆಸ್ ಕಾರ್ಯಕರ್ತರು ಅಂತಾರಾಷ್ಟ್ರೀಯ ಎಐ ಶೃಂಗಸಭೆಯಲ್ಲಿ ಅರೆಬೆತ್ತಲೆಯಾಗಿ ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿಜೀಯವರ ವಿರುದ್ಧ ಘೋಷಣೆ ಕೂಗಿ ಶೃಂಗಸಭೆಗೆ ಅಡ್ಡಿಪಡಿಸಿದವರ ವಿರುದ್ಧ ಭಾರತೀಯ ಜನತಾ ಪಾರ್ಟಿ ಹಾವೇರಿ ಜಿಲ್ಲಾ ಘಟಕದ ವತಿಯಿಂದ ನಗರದ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಾ.ಸಂತೋಷ ಆಲದಕಟ್ಟಿ ಮಾತನಾಡಿ, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಹತಾಶಯರಾಗಿದ್ದಾರೆ. ದೇಶದಲ್ಲಿ ಚುನಾವಣೆಯ ನಂತರ ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರವನ್ನು ಕಳೆದುಕೊಂಡಿದೆ, ಕಾರಣ ರಾಹುಲ್ ಗಾಂಧಿ ಹತಾಶ ಮನೋಭಾವದಿಂದ ವಿದೇಶಗಳಲ್ಲಿ ದೇಶವನ್ನು ಟೀಕಿಸುವ ಮೂಲಕ ರಾಷ್ಟ್ರದ ಗೌರವಕ್ಕೆ ಚ್ಯುತಿ ತರುತ್ತಿದ್ದಾರೆ, ಅಲ್ಲದೇ ಇತ್ತೀಚೆಗೆ ನಡೆದ ಅಂತಾರಾಷ್ಟ್ರೀಯ ಎಐ ಶೃಂಗಸಭೆಯಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಅರೆಬೆತ್ತಲೆಯಾಗಿ ಪ್ರತಿಭಟಿಸುವ ಮೂಲಕ ದೇಶ ದ್ರೋಹದ ಕೃತ್ಯ ಎಸಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮುಖಂಡ ಗವಿಸಿದ್ದಪ್ಪ ದ್ಯಾಮಣ್ಣವರ ಮಾತನಾಡಿ, ದೇಶ ನರೇಂದ್ರ ಮೋದಿಜೀಯವರ ನೇತೃತ್ವದಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಪಥದಲ್ಲಿ ಸಾಗಿ ಇವತ್ತು ಜಗತ್ತಿನ 4ನೇ ಅತೀ ದೊಡ್ಡ ಆರ್ಥಿಕ ಶಕ್ತಿಯಾಗಿ ದೇಶ ಹೊರಹೊಮ್ಮಿದೆ ಎಂದು ತಿಳಿಸಿದರು.

ಜಿಲ್ಲಾಧ್ಯಕ್ಷರಾದ ವಿರುಪಾಕ್ಷಪ್ಪ ಬಳ್ಳಾರಿ ಮಾತನಾಡಿ, ದೇಶದ ಅನೇಕ ಹಂತಗಳಲ್ಲಿ ಕಾಂಗ್ರೆಸ್ ಅವನತಿಯತ್ತ ಸಾಗಿದೆ. ರಾಹುಲ್ ಗಾಂಧಿಯವರ ತಮ್ಮ ಹತಾಶೆ ಮನೋಭಾವನೆಯನ್ನು ದೇಶ ವಿರೋಧಿ ಕೃತ್ಯಗಳಿಗೆ ಕಾಂಗ್ರೆಸ್ ಕಾರ್ಯಕರ್ತರನ್ನು ಪ್ರಚೋದಿಸುತ್ತಿದ್ದಾರೆ, ಮತ್ತು ದೇಶದ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ನರೇಂದ್ರ ಮೋದಿಜೀ ಅವರು ಹಾಗೂ ಅವರ ಮಂತ್ರಿಮಂಡಲ ದೇಶದ ಸರ್ವತೋಮುಖ ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಕಾರ್ಯನಿರತರಾದ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಅರೆಬೆತ್ತಲೆಯಾಗಿ ಮೋದಿಜೀಯವರ ವಿರುದ್ಧ ಪ್ರತಿಭಟನೆ ಮಾಡಿರುವುದು ನಾಚಿಕೆಗೇಡಿನ ಸಂಗತಿ. ನೂರಾರು ದೇಶಗಳು ಭಾರತದ ದೂರದೃಷ್ಟಿ ಮತ್ತು ವಿಕಸಿತ ಭಾರತದ ಕನಸುಗಳನ್ನು ನನಸು ಮಾಡುವ ನಿಟ್ಟಿನಲ್ಲಿ ನರೇಂದ್ರ ಮೋದಿಜೀಯವರ ಕೈಬಲ ಪಡಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನಕಾರ್ಯದರ್ಶಿ ನೀಲಪ್ಪ ಚಾವಡಿ, ವಕ್ತಾರ ನಿರಂಜನ ಹೇರೂರ, ಜಿಲ್ಲಾ ಮಾಧ್ಯಮ ಸಂಚಾಲಕ ವಿಜಯಕುಮಾರ ಚಿನ್ನಿಕಟ್ಟಿ, ಮುಖಂಡರಾದ ಕಿರಣ ಕೊಳ್ಳಿ, ಕಿರಣ ಕೋಣನವರ, ವಿದ್ಯಾ ಶೆಟ್ಟಿ, ಮಂಜುನಾಥ ಮಲಗೋಡ, ರೋಹಿಣಿ ಪಾಟೀಲ, ವಿನಯ ತಹಶೀಲ್ದಾರ, ಕರಬಸಪ್ಪ ಹಳದೂರ, ಅಲ್ಲಾಭಕ್ಷ ತಿಮ್ಮಾಪೂರ, ರುದ್ರೇಶ ಚಿನ್ನಣ್ಣನವರ, ಮುತ್ತಣ್ಣ ಮುಷ್ಠಿ, ನಿಖೀಲ್ ಡೊಗ್ಗಳ್ಳಿ, ಚಿಕ್ಕಪ್ಪ ದೊಡ್ಡತಳವಾರ, ಬಸವರಾಜ ಹಾಲಪ್ಪನವರ, ಈರಣ್ಣ ಹೊನ್ನಾಳಿ, ಹಾಗೂ ನಗರಸಭೆಯ ಮಾಜಿ ಸದಸ್ಯರು, ಜಿಲ್ಲಾ ಮತ್ತು ಮಂಡಲ ಪದಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸಿದ್ದರು.



> ದೇಶದ ಅಪ್ರಬುದ್ಧ ರಾಜಕಾರಣಿ ರಾಹುಲ್ ಗಾಂಧಿ ಸೂಚನೆ ಮೇರೆಗೆ ಯುವ ಕಾಂಗ್ರೆಸ್ ಕಾರ್ಯಕರ್ತರು ಎಐ ಶೃಂಗಸಭೆಗೆ ನುಗ್ಗಿ ವಿರೋಧಿಸಿದ ಕಾರಣ ಸಭೆಯಲ್ಲಿ ನೆರೆದಂತಹ ದೇಶಭಕ್ತ ಸಾರ್ವಜನಿಕರಿಂದ ಒದೆ ತಿಂದಿರುವುದು ನಾಚಿಕೆಗೇಡಿನ ಸಂಗತಿ.
>
> ■ ಗವಿಸಿದ್ದಪ್ಪ ದ್ಯಾಮಣ್ಣವರ, ಮುಖಂಡ

ಬದುಕನ್ನು ಅರಿತರೆ ಯಶಸ್ಸು ಸಾಧ್ಯ: ಸಂಸದ ಬೊಮ್ಮಾಯಿ

ಹಾವೇರಿ: ಮನೆಯೇ ಮೊದಲ ಪಾಠ ಶಾಲೆ, ತಾಯಿ ತಾನೇ ಮೊದಲ ಗುರು. ತಾಯಿ ಸಂಸ್ಕಾರ ಕೊಟ್ಟರೆ, ಗುರುಗಳು ಶಿಕ್ಷಣ ಕೊಡುತ್ತಾರೆ. ಸಮಾಜ ಸಂಸ್ಕೃತಿ ಕೊಟ್ಟರೆ, ನಂಬಿಕೆಯ ಪ್ರಪಂಚದಲ್ಲಿ ದೇವರು ನಮಗೆ ಬದುಕು ಕಟ್ಟಿಕೊಳ್ಳಲು ಅವಕಾಶ ಕೊಡುತ್ತಾರೆ ಎಂದು ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ತಾಲೂಕಿನ ಕಾಟೇನಹಳ್ಳಿ ಗ್ರಾಮದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಭಾನುವಾರ ಸಂಜೆ ಆಯೋಜಿಸಿದ್ದ 21ನೇ ವಾರ್ಷಿಕ ಸ್ನೇಹ ಸಮ್ಮೇಳನ, ಸರಸ್ವತಿ ಪೂಜೆ, ವಿಜ್ಞಾನ ವಸ್ತು ಪ್ರದರ್ಶನ ಹಾಗೂ 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ವರ್ಷವಿಡೀ ವಿದ್ಯಾರ್ಜನೆ ಮಾಡಿ, ಪಾಠ ಕಲಿತು, ಆಟವಾಡಿ, ಸ್ನೇಹಿತರಾಗಿ ಒಬ್ಬರಿಗೊಬ್ಬರು ಬೆರೆತು ಕಲೆ, ಸಂಸ್ಕೃತಿ ಹಾಗೂ ವಿದ್ಯೆಯ ಪ್ರತಿಭೆ ತೋರಿಸುವ ಹಂತಕ್ಕೆ ಬಂದಿವೆ. ಮಕ್ಕಳ ಶ್ರೇಯೋಭಿವೃದ್ಧಿಗೆ ನಿರಂತರ ಪ್ರಯತ್ನವನ್ನು ಪಾಲಕರು, ಶಿಕ್ಷಕ ಮಾಡಬೇಕು. ಪಾಠ ಪರೀಕ್ಷೆ, ಪರೀಕ್ಷೆ ಪಾಠ ಇದು ನಿರಂತರ ನಡೆಯುವ ಪ್ರಕ್ರಿಯೆಯಾಗಿದೆ ಎಂದರು.

ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ ಮಾತನಾಡಿ, ಪ್ರಾಥಮಿಕ ಶಿಕ್ಷಣ ಜೀವನದ ಅಮೂಲ್ಯವಾದ ಹಂತವಾಗಿದೆ. ವಿದ್ಯಾರ್ಥಿ ದೇವೋಭವ ಎಂಬ ಮಾತನ್ನು ಶಿಕ್ಷಕರು ಅನುಸರಿಸಿ ಮಕ್ಕಳಿಗೆ ಪ್ರಾಮಾಣಿಕ ಶಿಕ್ಷಣ ಕೊಡಬೇಕು. ಮಕ್ಕಳಿಗೆ ಸಂಸ್ಕಾರ ನೀಡುವ ಶಕ್ತಿ ಇಂದಿನ ಮಠ ಮಾನ್ಯಗಳಿಗೆ ಇದೆ. ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡಿದರೆ ಭವ್ಯ ಭಾರತ ನಿರ್ಮಾಣ ಮಾಡಲು ಸಾಧ್ಯ. ಸಾಮಾಜಿಕ ಜಾಲತಾಣ ಬಳಸಿಕೊಂಡು ಮನ ಮುಟ್ಟುವ ಪಾಠ ಮಾಡಲು ಆಕರ್ಷಿಸುವ ಶಿಕ್ಷಣ ಕೊಡಬೇಕು ಎಂದರು.

ಸಂಸ್ಥೆಯ ಅಧ್ಯಕ್ಷ ಬಸವರಾಜ ಆರಬಗೊಂಡ ಅಧ್ಯಕ್ಷತೆ ವಹಿಸಿದ್ದರು. ಎಂ.ಆರ್.ಎಂ ಸಂಸ್ಥೆಯ ಅಧ್ಯಕ್ಷ ರಾಮ್ ಮೋಹನ್ ರಾವ್ ಮಾತನಾಡಿದರು.

ವಿದ್ಯಾದಾಯಿನಿ ಪಬ್ಲಿಕ್ ಶಾಲೆಯ ಅಧ್ಯಕ್ಷ ನಾಗೇಂದ್ರ ಕಟಕೊಳ, ಎಂ.ಎಸ್ ಪಾಟೀಲ, ದರ್ಶನ ಲಮಾಣಿ, ಅಶೋಕ ಹರನಗಿರಿ, ವೆಂಕಟೇಶ ನಾರಾಯಣಿ, ಡಾ. ಎಸ್. ಎಚ್ ತುಕ್ಕಣ್ಣವರ, ಗಡ್ಡೆಪ್ಪ ಹಂಚಟಗಿ, ಶಿವಾನಂದ ಮ್ಯಾಗೇರಿ, ಬಸವರಾಜ ಬಾಲಕ್ಕನವರ, ಜಯಪ್ಪ ಪೂಜಾರ, ವೀರಭದ್ರಪ್ಪ ಗೋಣೆಮ್ಮನವರ, ಚನ್ನವೀರಪ್ಪ ಅಕ್ಕಿ, ಹನುಮಂತಪ್ಪ ಅಂಗರಗಟ್ಟಿ, ಹುಲಗಪ್ಪ ನಾಗಮ್ಮನವರ, ಮಾಲತೇಶ ಕುರುಬರ, ಡಾ. ನಿಂಗಪ್ಪ ಆರಬಗೊಂಡ, ಬಸವರಾಜ ಕಳಸೂರ ಸೇರಿದಂತೆ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.



ಸಾಮಾಜಿಕ ನ್ಯಾಯ ಪ್ರತಿಪಾದಿಸಿದ ಸರ್ವಜ್ಞ

ಹಾವೇರಿ: ತ್ರಿಪದಿಕವಿ ಸರ್ವಜ್ಞ ಸಮಾಜದ ಅಂಕು ಡೊಂಕು ತಿದ್ದುವ ಅಂಕುಶವಾಗಿದ್ದರು. ಸಮಕಾಲೀನ ವ್ಯವಸ್ಥೆಗೆ ಅನ್ವಯವಾಗುವ ಸರ್ವಜ್ಞರ ತ್ರಿಪದಿಗಳು ಸಾರ್ವಕಾಲಿಕ ಪ್ರಸ್ತುತವಾಗಿವೆ ಎಂದು ಹೊಸಮಠದ ಬಸವ ಶಾಂತಲಿಂಗ ಸ್ವಾಮೀಜಿ ಹೇಳಿದರು.

ನಗರದ ಬಸವಕೇಂದ್ರ ಹೊಸಮಠದಲ್ಲಿ ಸರ್ವಜ್ಞ ಜಯಂತಿ ನಿಮಿತ್ತ ಏರ್ಪಡಿಸಿದ್ದ ಕವಿತೆಗಳಿಂದ ತ್ರಿಪದಿ ಕವಿಗೆ ನಮನ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಅವರು ಮಾತನಾಡಿ, ನಡೆವುದೊಂದೆ ಭೂಮಿ, ಕುಡಿವುದೊಂದೆ ನೀರು, ಆನೆ ಮುಕುರದೊಳದಗಿ, ಭಾನಸರಿವಿಯೊಳಡಗಿ ಆನೆನ್ನ ಗುರುವಿನೊಳಗಡಗಿ, ಸಂಸಾರ ತಾನೆತ್ತಣದು? ಸರ್ವಜ್ಞ..

ಸರ್ವಜ್ಞನ ತ್ರಿಪದಿಗಳು ಸಾರ್ವಕಾಲಿಕ ಸತ್ಯ ಮೌಲ್ಯಗಳನ್ನು ಒಳಗೊಂಡಿವೆ. ಕಾಲಜ್ಞಾನದ, ಯಜ್ಞ ವಿಘ್ನವಿಲ್ಲದ ಅವರ ತ್ರಿಪದಿಗಳಲ್ಲಿ ಮೂಢನಂಬಿಕೆ, ಕಂದಾಚಾರಗಳು ಖಂಡಿಸಿ, ನೀತಿ, ಜ್ಞಾನ, ಧರ್ಮದ ಕುರಿತ ಸಂದೇಶವಿದೆ. ನಮ್ಮ ಜಿಲ್ಲೆಯ ಹೆಮ್ಮೆಯ ದಾರ್ಶನಿಕರ ಜಯಂತಿ ಆಚರಣೆ ಪ್ರೇರಣೆ ನೀಡುತ್ತದೆ ಎಂದರು. ಮಹಿಳಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಶಿಕ್ಷಕಿ ಎಂ.ಕೆ. ಭಾಗ್ಯ ಮಾತನಾಡಿ, ಮಹಾನ್‌ದಾರ್ಶನಿಕರನ್ನು ಜಾತಿಗೆ ಸೀಮಿತಗೊಳಿಸುತ್ತಿರುವ ಇಂದಿನ ದಿನಗಳಲ್ಲಿ ಸರ್ವಜ್ಞ ಜಾತಿ ಮತ್ತು ಧರ್ಮಗಳ ಎಲ್ಲೆಗಳನ್ನು ಮೀರಿ ಬೆಳೆದಿರುವರು. ಅವರ ಸಂದೇಶಗಳು ಸಮ ಸಮಾಜ ನಿರ್ಮಾಣಕ್ಕೆ ಪೂರಕವಾಗಬಲ್ಲವು ಎಂದರು.

ಈ ವೇಳೆ ಜಿ.ಎಂ. ಓಂಕಾರಣ್ಣನವರ, ರೇಣುಕಾ ಗುಡಿಮನಿ, ಶೈಲಜಾ ಕೋರಿಶೆಟ್ಟರ್, ಶೇಖರ ಭಜಂತ್ರಿ, ನೇತ್ರಾವತಿ ಅಂಗಡಿ, ಪ್ರಶಾಂತ ಬಾನಣ್ಣವರ, ಸಂತೋಶ ಪಿಶೆ ಕವನ ವಾಚಿಸಿದರು. ಇದಕ್ಕೂ ಮುನ್ನ ಸರ್ವಜ್ಞರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮೂಲಕ ಗೌರವ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಜುಬೇದಾ ನಾಯಕ್ ಹಾಗೂ ಮಂಜುನಾಥ ಹತ್ತಿಯವರ ಉಪಸ್ಥಿತರಿದ್ದರು. ಗೂಳಪ್ಪ ಅರಳಿಕಟ್ಟಿ ನಿರ್ವಹಿಸಿದರು.



ಹಿಂದೂ ಸಮ್ಮೇಳನ: ಬೃಹತ್ ಶೋಭಾಯಾತ್ರೆ

ಹಾನಗಲ್ಲ: ಹಾನಗಲ್ಲಿನಲ್ಲಿ ಹಿಂದೂ ಸಮ್ಮೇಳನದ ಅಂಗವಾಗಿ ಭಾನುವಾರ ಇಳಿಹೊತ್ತಿನಲ್ಲಿ ನಡೆದ ಶೋಭಾಯಾತ್ರೆ, ಮಂಗಲ ವಾದ್ಯಗಳು, ಸ್ಥಬ್ಧ ಚಿತ್ರಗಳು, ರಿಕ್ಷಾಗಳಲ್ಲಿ ಸಂತರು, ದೇಶಭಕ್ತರು, ಮಹಾಪುರುಷರ ಭಾವಚಿತ್ರಗಳೊಂದಿಗೆ ಗೋಪೂಜೆಯ ಮೂಲಕ ಚಾಲನೆಗೊಂಡು ಪಟ್ಟಣದ ವಿವಿಧ ರಸ್ತೆಗಳಲ್ಲಿ ಸಹಸ್ರಾರು ಸಂಖ್ಯೆ ಹಿಂದೂ ಸಮುದಾಯದೊಂದಿಗೆ ಶೋಭಾಯಾತ್ರೆ ನಡೆಯಿತು.

ಪಟ್ಟಣದ ಎನ್‌ಸಿಜೆಸಿ ಕಾಲೇಜಿನಲ್ಲಿ ಗೋಪೂಜೆ ಸಲ್ಲಿಸಿ ಮೆರವಣಿಗೆ ಆರಂಭವಾಯಿತು. ಟ್ರ್ಯಾಕ್ಟರ್‌ಗಳಲ್ಲಿ ಸ್ಥಬ್ಧ ಚಿತ್ರಗಳು, ರಿಕ್ಷಾಗಳಲ್ಲಿ ವಿವಿಧ ಮಹಾಪುರುಷರ ಭಾವಚಿತ್ರಗಳು, ಮಂಗಲ ವಾದ್ಯಗಳು ಮೆರವಣಿಗೆಯ ಆಕರ್ಷಣೆಯಾಗಿದ್ದವು. ಕೇಸರಿ ಶಾಲು ಧರಿಸಿದ ಮಹಿಳೆಯರಾದಿಯಾಗಿ, ಹಿರಿಯರು, ಮಕ್ಕಳು ಯುವಕರು ಭಾರತ ಮಾತಾಕಿ ಜೈ ಘೋಷಣೆಯೊಂದಿಗೆ ಮೆರವಣಿಗೆಯಲ್ಲಿ ಸಾಗಿದರು. ರಾಷ್ಟ್ರೋತ್ಥಾನ ಶಾಲೆಯ ಮಕ್ಕಳ ಕೋಲಾಟ ಮೆರವಣಗೆಗೆ ಇನ್ನೊಂದು ಶೋಭೆಯಾಗಿತ್ತು.



ಎನ್‌ಸಿಜೆಸಿ ಕಾಲೇಜಿನಿಂದ ಆರಂಭವಾದ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ನಡೆದು ಸಮ್ಮೇಳನ ತಾರಕೇಶ್ವರ ದೇವಸ್ಥಾನದ ಬಳಿಯ ಮೈದಾನ ಸೇರಿತು.

ಕಣ್ಣುಗಳ ರಕ್ಷಣೆ ಅಗತ್ಯ: ಉಪ್ಪಾರ

ಬ್ಯಾಡಗಿ: ಮನುಷ್ಯನಿಗೆ ಪಂಚೇಂದ್ರಿಯಗಳು ಅತ್ಯಂತ ಪ್ರಮುಖವಾಗಿದ್ದು, ನೇತ್ರಗಳ ರಕ್ಷಣೆ ಅತ್ಯಂತ ಅವಶ್ಯಕವಾಗಿದೆ. ಯಾವುದೇ ಕಾರಣಕ್ಕೂ ನೇತ್ರ ರಕ್ಷಣೆ ವಿಷಯದಲ್ಲಿ ನಿಷ್ಕಾಳಜಿ ಬೇಡ ಎಂದು ರೋಟರಿ ಕ್ಲಬನ ಮಾಜಿ ಅಸಿಸ್ಟೆಂಟ್ ಗವರ್ನರ್ ಮಂಜುನಾಥ್ ಉಪ್ಪಾರ ಹೇಳಿದರು.

ಪಟ್ಟಣದ ಕದರಮಂಡಲಗೆ ರಸ್ತೆಯ ಸ್ನೇಹ ಸದನದಲ್ಲಿ ರೋಟರಿ ಕ್ಲಬ್ ಬ್ಯಾಡಗಿ ಮತ್ತು ಶಂಕರ ಕಣ್ಣಿನ ಆಸ್ಪತ್ರೆ ಶಿವಮೊಗ್ಗ ಮತ್ತು ಸ್ನೇಹ ಸದನ ಇವರ ಆಶ್ರಯದಲ್ಲಿ ನಡೆದ ಉಚಿತ ನೇತ್ರ ತಪಾಸಣೆ ಹಾಗೂ ಶಸ್ತ್ರಚಿಕಿತ್ಸೆ ಶಿಬಿರ ಉದ್ಘಾಟಿಸಿ ಅವರು ಮಾತನಾಡಿ, ಕಣ್ಣುಗಳ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದ್ದು, ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಅಧ್ಯಕ್ಷರಾದ ಅನಿಲ್ ಕುಮಾರ್ ದೊಡ್ಡಪಾಟಿ ಶಿಬಿರದಲ್ಲಿ ಒಟ್ಟು 62 ಜನರು ತಪಾಸಣೆ ಮಾಡಿಸಿಕೊಂಡರು 13 ಜನರಿಗೆ ಕನ್ನಡಕವನ್ನು ಶಿಫಾರಸು ಮಾಡಲಾಯಿತು ಮತ್ತು 44 ಶಿಭಿರಾರ್ಥಿಗಳನ್ನು ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಸ್ನೇಹ ಸದನ ನಿರ್ದೇಶಕಿ ಸಿಸ್ಟರ್ ರೂಪ ಮತ್ತು ಸರಸ್ವತಿ ಹಾಗೂ ಸಿಬ್ಬಂದಿ ಮತ್ತು ರೋಟರಿ ಕ್ಲಬ್ ಅಧ್ಯಕ್ಷರಾದ ಆನಂದ ಗೌಡ, ನಿರಂಜನ ಶೆಟ್ಟಿಹಳ್ಳಿ, ಕಲ್ಲಪ್ಪ ಚೂರಿ, ಕಿರಣ ಮಾಳೆನಹಳ್ಳಿ ಹಾಗೂ ಶಿವಮೊಗ್ಗದ ಶಂಕರ್ ಕಣ್ಣಿನ ಆಸ್ಪತ್ರೆಯ ನೇತ್ರ ಪರೀಕ್ಷಕರು ಡಾಕ್ಟರ್ ಸುನಿಲ್ ಆಸ್ಪತ್ರೆ ಸಿಬ್ಬಂದಿ ಅರುಣ್ ರವಿಕುಮಾರ್ ಹಾಗೂ ಅನೇಕರು ಉಪಸ್ಥಿತರಿದ್ದರು.

ನ್ಯಾಯ ಎಲ್ಲರಿಗೂ ಒಂದೇ: ನ್ಯಾ.ಶೈಲಜಾ

ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆ

ಹಾವೇರಿ: ಸಮಾಜದಲ್ಲಿ ನ್ಯಾಯ ಎಂಬುದು ಬಡವ ಮತ್ತು ಶ್ರೀಮಂತರಿಗೆ ಮಾತ್ರವಲ್ಲ ಎಲ್ಲರಿಗೂ ಎಲ್ಲರಿಗೂ ಒಂದೇ ಆಗಿದೆ. ಇದೇ ನಿಟ್ಟಿನಲ್ಲಿ ಬಡವರಿಗೆ ಕಾನೂನು ನೆರವು ನೀಡುವ ನಿಟ್ಟಿನಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ (ಡಿಎಲ್ಎಸ್ಎ -ಡಿಸ್ಟ್ರಿಕ್ಟ್ ಲೀಗಲ್ ಸರ್ವಿಸ್ ಅಥಾರಿಟಿ) ಕೆಲಸ ಮಾಡುತ್ತಿದೆ ಎಂದು ನ್ಯಾಯಾಧೀಶರಾದ ಶೈಲಜಾ ಎಚ್.ವಿ. ಹೇಳಿದರು.

ನಗರದ ಹೊರವಲಯವಾದ ಕೆರಿಮತ್ತಿಹಳ್ಳಿಯಲ್ಲಿ ಇರುವ ಜಿಲ್ಲಾ ಕಾರಾಗೃಹದಲ್ಲಿ ಜೈಲುಬಂಧಿಗಳಿಗೆ 'ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆ' ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಸ್ತುತ ದಿನಗಳಲ್ಲಿ ಸಾಮಾಜಿಕ ನ್ಯಾಯದ ಕುರಿತು ಹಲವು ಗೊಂದಲಗಳಿವೆ. ಆದರೆ ನ್ಯಾಯ ಎಂಬುದು ಎಲ್ಲರಿಗೂ ಸಮಾನವಾಗಿದೆ. ಆರ್ಥಿಕವಾಗಿ ಹಿಂದುಳಿದ ಅಥವಾ ಬಡವರಿಗೆ ಕಾನೂನು ನೆರವು ನೀಡುವ ಜತೆಗೆ ಕಾನೂನು ಪ್ರಕ್ರಿಯೆಯಲ್ಲಿನ ಜಾಮೀನು, ದಂಡ, ಬಿಡುಗಡೆ ಸಂದರ್ಭದಲ್ಲಿ ಆರ್ಥಿಕ ನೆರವು ನೀಡಲು ಸಾಧ್ಯವಾಗಲಿದೆ ಎಂದು ಹೇಳಿದರು.

ಇನ್ನು ಜೈಲುಬಂದಿಗಳಿಗೆ ಎಲ್ಲ ರೀತಿಯ ಉಚಿತ ಕಾನೂನು ನೆರವು ನೀಡುವ ನಿಟ್ಟಿನಲ್ಲಿ ಡಿಎಲ್ಎಸ್ಎ ಕಾರ್ಯನಿರ್ವಹಿಸಲಿದ್ದು, ಇದರ ಸದುಪಯೋಗ ಪಡೆದುಕೊಳ್ಳಿ, ಇದನ್ನು ನಿಮ್ಮ ಬಂದುಗಳಿಗೆ, ಪರಿಚಿತರಿಗೆ ತಿಳಿಸುವ ಮೂಲಕ ಇದರ ಸದ್ಬಳಕೆಗೆ ಮುಂದಾಗಿ ಎಂದು ಸಲಹೆ ಮಾಡಿದರು.

ಜಿಲ್ಲಾ ಕಾರಾಗೃಹದ ಅಧೀಕ್ಷಕಿ ನಾಗರತ್ನಮ್ಮಾ ಮಾತನಾಡಿ, ಆಕಸ್ಮಿಕವಾಗಿ ಇಲ್ಲಿಗೆ ಬಂದವರು ಪರಿತಪಿಸುವ ಮೂಲಕ ಪಶ್ಚಾತ್ತಾಪದಿಂದ ಬೆಂದಿರುತ್ತೀರಿ. ಆದರೆ ಅದು ಶಾಶ್ವತವಲ್ಲ ಬದಲಾವಣೆಗೆ ಸಕಾಲವಾಗಿದೆ. ಯಾವುದೋ ಕೆಟ್ಟ ಗಳಿಗೆಯಿಂದತಪ್ಪೆಸಗಿ ಇಲ್ಲಿಗೆ ಬಂದಿದ್ದು, ಇಲ್ಲಿ ನಿಮ್ಮ ಭವಿಷ್ಯ ಭದ್ರವಾಗಿಸುವ ನಿಟ್ಟಿನಲ್ಲಿ ಹಲವು ತರಬೇತಿಗಳನ್ನು ನೀಡಲಾಗುತ್ತಿದೆ. ಅವುಗಳನ್ನು ಸದ್ಬಳಕೆ ಮಾಡಿಕೊಂಡು ಬದುಕನ್ನು ಸಂವೃದ್ಧಗೊಳಿಸಿಕೊಳ್ಳಿ. ಇಲ್ಲಿಗೆ ಮತ್ತೆ ಬರುವಂತಹ ಸಂದರ್ಭ ಬಾರದಿರಲಿ. ಇಲ್ಲಿ ಪಡೆದ ತರಬೇತಿಗಳಿಂದ ವೃತ್ತಿ ಆರಂಭಿಸಿ ಬಂದುಗಳಿಗೆ, ಕುಟುಂಬಸ್ಥರಿಗೆ ಆಸ್ತಿಯಾಗುವ ಮೂಲಕ ಕೆಟ್ಟದಿನಗಳನ್ನು ಅಳಿಸಿ ಹೊಸ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗಲಿದೆ ಎಂದು ಸಲಹೆ ಮಾಡಿದರು.

ಈ ವೇಳೆ ರೋಟರಿ ಸಂಸ್ಥೆಯ ಅಧ್ಯಕ್ಷ ಕಾಶಿನಾಥ ಅರಾವತ, ಇಡಾರಿ ಸಂಸ್ಥೆಯ ಪರಿಮಳಾ ಜೈನ್, ಮಾಧುರಿ ದೇವಧರ, ಶರತ್ ಮಲ್ಲನಗೌಡ್ರ, ಎಸ್.ಸಿ. ಹಿರೇಮಠ, ಇನ್ನರವೀಲ್ ಸಂಸ್ಥೆಯ ಶಾಲಿನಿ ಕಮ್ಮಾರ ಮತ್ತಿತರರು ಇದ್ದರು.



ತಂದೆ-ತಾಯಿಯನ್ನು ಗೌರವಿಸಿ: ಶ್ರೀಗಳು

ಹಾವೇರಿ: 'ವಿದ್ಯಾ ಗುರೂಣಾಂ ಗುರುಃ' ಅಂದರೆ ವಿದ್ಯೆ ಮನುಷ್ಯನಿಗೆ ಸೌಂದರ್ಯವನ್ನು ಕರುಣಿಸುತ್ತದೆ. ಅದು ಗುಪ್ತವಾದ ಧನವಿದ್ದಂತೆ. ಭೋಗವನ್ನು ಯಶಸ್ಸನ್ನು ಕರುಣಿಸುತ್ತದೆ. ಅದು ಗುರುವಿನ ಗುರುವಾಗಿ ವಿದೇಶದಲ್ಲೂ ಬಂಧುವಿನಂತೆ ಸಹಾಯ ಮಾಡುತ್ತದೆ. ವಿದ್ವಾಂಸರು ಮಹಾರಾಜರಿಂದಲೂ ಪೂಜಿಸಲ್ಪಡುತ್ತಾರೆ ಎಂದು ಗೌರಿಮಠದ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಗೌರಿಮಠದ ಮಲ್ಲಿಕಾರ್ಜುನ ಆಂಗ್ಲ ಮಾಧ್ಯಮ ಶಾಲೆಯಲ್ಲಿ, ಸರಸ್ವತಿ ಪೂಜಾ ಹಾಗೂ ಹತ್ತನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ವಿದ್ಯೆಯೆಂಬ ಸಂಪತ್ತನ್ನು ಪಡೆಯಬೇಕು. ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಗುರು-ಹಿರಿಯರಿಗೆ ಹಾಗೂ ತಂದೆ-ತಾಯಿಯರನ್ನು ಪೂಜಿಸಿ ಶಾಲೆಗೆ ಮತ್ತು ಹೆತ್ತವರಿಗೆ ಕೀರ್ತಿ ತರಬೇಕು ಎಂದು ಹಾರೈಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಮನೋವೈದ್ಯರಾದ ಡಾ.ವಿಜಯಕುಮಾರ ಬಳಿಗಾರ ಮಾತನಾಡಿ, ಹತ್ತನೇ ತರಗತಿ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸುವ ಕುರಿತು ಮಾತನಾಡಿ, ಪರೀಕ್ಷೆ ಒಂದು ಅವಕಾಶ ಅದನ್ನು ಆತ್ಮವಿಶ್ವಾಸದಿಂದ ಜಯಿಸುವ ಮನೋಬಲ ಬೆಳೆಸಿಕೊಳ್ಳಿ. ಇದಕ್ಕೆ ಪೂರಕವಾಗಿ ನಿಯಮಿತ ಅಧ್ಯಯನ ನಿಮ್ಮನ್ನು ಗುರಿ ಸಾಧನೆಗೆ ಕೊಂಡೊಯ್ಯಲು ಮತ್ತು ಆತ್ಮವಿಶ್ವಾಸ ಹೆಚ್ಚಿಸುವ ಮೊದಲ ಮೆಟ್ಟಿಲಾಗಿದೆ. ಅಧ್ಯಯನ, ವಿರಾಮ, ಸಮಯದ ಸದ್ಬಳಕೆಗೆ ಮನೋವೈಜ್ಞಾನಿಕವಾದ ಹಲವು ಸಲಹೆಗಳನ್ನು ನೀಡಿ, ವಿಶೇಷ ಉಪನ್ಯಾಸ ನೀಡಿದರು.

ಡಾ.ಉಮಾ ಬಳಿಗಾರ ಮಾತನಾಡಿದರು.

ಮುಖ್ಯೋಪಾಧ್ಯಾಯ ಶಂಕರ ಅರ್ಕಸಾಲಿ, ಸಂಸ್ಥೆಯ ಕಾರ್ಯದರ್ಶಿ ಗುರುಸಿದ್ದಯ್ಯ ಹಿರೇಮಠ, ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾ ಕಾರ್ಯದರ್ಶಿ ಡಾ.ಗಂಗಯ್ಯ ಕುಲಕರ್ಣಿ, ಮಾಲತೇಶ ಅಂಗೂರ ಮುಂತಾದವರು ಉಪಸ್ಥಿತರಿದ್ದರು. ಮಧುಶ್ರೀ ಬೊಮ್ಮನಕಟ್ಟಿ ನಿರೂಪಿಸಿದರು, ಮಹೇಶ ರಟ್ಟೀಹಳ್ಳಿ ವಂದಿಸಿದರು.



ಪ್ರಶಸ್ತಿ ವಿತರಣೆ

ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಒಂದು ವಾರಗಳ ಕಾಲ ಜರುಗಿದ ವಿಜ್ಞಾನ ವಸ್ತು ಪ್ರದರ್ಶನ, ಕ್ರೀಡೆ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಜೇತರಾದವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಿರುಸುದ್ದಿ

ಸಚಿವ ಸತೀಶ ಜಾರಕಿಹೊಳಿಗೆ ಸನ್ಮಾನ

ರಾಯಬಾಗ: ಬೆಳಗಾವಿ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಕ್ಕೆ (ಬೆಳಗಾವಿ ಹಾಲು ಒಕ್ಕೂಟ) ಸರ್ಕಾರವು ಮೇಖಳಿ ಗ್ರಾಮದ ಕಾಂಗ್ರೆಸ್ ಪಕ್ಷದ ಮುಖಂಡ ವಸಂತ ಕರಿಗಾರ ಅವರನ್ನು ನಾಮ ನಿರ್ದೇಶನ ಮಾಡಿದ್ದು, ಭಾನುವಾರ ಬೆಳಗಾವಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಸನ್ಮಾನಿಸಿ ಗೌರವಿಸಿದರು.

ನಂತರ ವಸಂತ ಕರಿಗಾರ ಮಾತನಾಡಿ, 'ನನ್ನ ಮೇಲೆ ಸರ್ಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರು ಇಟ್ಟಿರುವ ನಂಬಿಕೆಯನ್ನು ಸಮರ್ಪಕವಾಗಿ ನಿಭಾಯಿಸುತ್ತೇನೆ. ಬೆಳಗಾವಿ ಹಾಲು ಒಕ್ಕೂಟದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಹಾಲು ಉತ್ಪಾದಕರ ಹಿತ ಕಾಯುವುದು ನನ್ನ ಮೊದಲ ಆದ್ಯತೆ. ಗ್ರಾಮೀಣ ಭಾಗದ ಸಣ್ಣ ಹಾಗೂ ಮಧ್ಯಮ ಹಾಲು ಉತ್ಪಾದಕರ ಸಮಸ್ಯೆಗಳಿಗೆ ಸ್ಪಂದಿಸಿ, ಸಂಘವನ್ನು ಇನ್ನಷ್ಟು ಬಲಿಷ್ಠಗೊಳಿಸುವ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಹಾವೀರ ಮೋಹಿತೆ, ಸಿದ್ರಾಮ ಪೂಜೇರಿ, ಅರ್ಜುನ ಬಂಡಗರ, ಜ್ಯೋತಿ ಕೆಂಪಟ್ಟಿ, ಮಲಕಾರಿ ಕೊಟ್ರೆ, ಅಶೋಕ ನಾಯಿಕ, ಪಿಂಟು ಕರಿಗಾರ, ಸಂತೋಷ ಸಾವಂತ, ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

ಶಾಲಾ ಮಕ್ಕಳಿಂದ ನೂತನ ಶಾಲಾ ಕಟ್ಟಡಕ್ಕೆ ಗುದ್ದಲಿ ಪೂಜೆ



ಯಮಕನಮರಡಿ: ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಚಿಕ್ಕೋಡಿ ಲೋಕಸಭಾ ಸದಸ್ಯೆ ಪ್ರಿಯಾಂಕ ಜಾರಕಿಹೊಳಿ ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ರಾಜ್ಯ ಯುವ ಪ್ರಧಾನ ಕಾರ್ಯದರ್ಶಿಗಳು ಅಪೇಕ್ಸ ಮತ್ತು ಡಿಸಿಸಿ ಬ್ಯಾಂಕ್ ನಿರ್ದೇಶಕ ರಾಹುಲ್ ಜಾರಕಿಹೊಳಿ ಅವರ ಆದೇಶದ ಮೇರೆಗೆ ಯಮಕನಮರಡಿ ಮತಕ್ಷೇತ್ರದಲ್ಲಿ ಬರುವ ಕರಗುಪ್ಪಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಕರಗುಪ್ಪಿ ಈ ಶಾಲೆಗೆ ಪಿಆರ್‌ಇ ಇಲಾಖೆಯಿಂದ ಒಟ್ಟು 85 ಲಕ್ಷ ಮಂಜೂರಾಗಿದ್ದು 5 ಶಾಲಾ ಕೊಠಡಿಗಳ ಅಡಿಗಲ್ಲು ಸಮಾರಂಭ ಪೂಜೆ ಕಾರ್ಯಕ್ರಮವನ್ನು ಭಾನುವಾರ ನೆರವೇರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಶೈಕ್ಷಣಿಕ ಆಪ್ತಸಹಾಯಕ ಜಂಗ್ಲಿಸಾಬ್ ನಾಯಕ್, ಲಗಮಣ್ಣ ಪನಗುದ್ದಿ ಹಾಗೂ ಎಸ್‌ಡಿಎಂಸಿ ಅಧ್ಯಕ್ಷರು, ಸರ್ವ ಸದಸ್ಯರು, ಗ್ರಾಪಂ ಕಾರ್ಯದರ್ಶಿಗಳು, ಊರಿನ ಹಿರಿಯರು, ಗುತ್ತಿಗೆದಾರರು, ಶಾಲೆಯ ಮುಖ್ಯೋಪಾಧ್ಯಾಯರು, ಸಹ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನಾಲ್ಕನೇ ದಿನದ ಆಧ್ಯಾತ್ಮಿಕ ಪ್ರವಚನ



ಯಮಕನಮರಡಿ: ಸ್ಥಳೀಯ ಸುಕ್ಷೇತ್ರ, ಗುರುಸಿದ್ದ ಶ್ರೀಗಳ 32ನೇ ಪುಣ್ಯ ಆರಾಧನಾ ಮಹೋತ್ಸವ ಕಾರ್ಯಕ್ರಮ ಅಂಗವಾಗಿ ಆಯೋಜಿಸಲಾಗಿದ್ದ ನಾಲ್ಕನೇ ದಿನದ ಪ್ರವಚನ ಕಾರ್ಯಕ್ರಮಕ್ಕೆ ಪಂಚಮ ಶಿವಲಿಂಗೇಶ್ವರ ಶ್ರೀಗಳು ಸಿದ್ಧ ಸಂಸ್ಥಾನ ಮಠ ನಿಡಸೋಶಿ ಹಾಗೂ ಬೈಲೂರಿನ ನಿಜಗುಣಾನಂದ ಶ್ರೀಗಳು ಚಿಕ್ಕೋಡ ವಿದೇಶ ಶರಣರು ಹಾಗೂ ಸ್ಥಳೀಯ ಮುಸ್ಲಿಂ ಸಮಾಜದ ಗುರು ಹರುಣ್ ಮೌಲಾನ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀಮಠದ ಉತ್ತರಾಧಿಕಾರಿ ಸಿದ್ಧಬಸವ ದೇವರು ಶರಣ ಚರಿತಾಮೃತ ಪ್ರವಚನವನ್ನು ಮಾರ್ಮಿಕವಾಗಿ ಹೇಳಿದರು. ಕಾರ್ಯಕ್ರಮದಲ್ಲಿ ಶ್ರೀಮಠದ ಆಡಳಿತ ಮಂಡಳಿಯ ಸದಸ್ಯರು, ಅಕ್ಕನ ಬಳಗ ಹಿರಿಯರು ಹಾಗೂ ಪರಸ್ಪರದಿಂದ ಬಂದಂತ ಭಕ್ತಾದಿಗಳನ್ನು ಸನ್ಮಾನಿಸಲಾಯಿತು. ಶ್ರೀಗಳಿಗೆ ಶ್ರೀಮಠದ ನೆನಪಿನ ಕಾಣಿಕೆ ನೀಡಿ ಆತ್ಮೀಯವಾಗಿ ಬಿಳ್ಕೊಡಲಾಯಿತು.



ರಾಯಬಾಗ: ಬೆಳಗಾವಿ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಕ್ಕೆ (ಬೆಳಗಾವಿ ಹಾಲು ಒಕ್ಕೂಟ) ಸರ್ಕಾರವು ಮೇಖಳಿ ಗ್ರಾಮದ ಕಾಂಗ್ರೆಸ್ ಪಕ್ಷದ ಮುಖಂಡ ವಸಂತ ಕರಿಗಾರ ಅವರನ್ನು ನಾಮ ನಿರ್ದೇಶನ ಮಾಡಿದ್ದು, ಭಾನುವಾರ ಬೆಳಗಾವಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಸನ್ಮಾನಿಸಿ ಗೌರವಿಸಿದರು.

ಮಹಿಳಾ ಖೋ-ಖೋ ತಂಡ ಆಯ್ಕೆ ಪ್ರಕ್ರಿಯೆ, ಪಂದ್ಯಾವಳಿ ಇಂದು

ಸವದತ್ತಿ: ಇಲ್ಲಿನ ಕೆಎಲ್‌ಇ ಸಂಸ್ಥೆಯ ಎಸ್.ವಿ.ಎಸ್.ಬೆಳ್ಳುಬ್ಬಿ ಮಹಾವಿದ್ಯಾಲಯ ಮತ್ತು ಬೆಳಗಾವಿಯ ರಾಣಿಚೆನ್ನಮ್ಮ ವಿಶ್ವವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ವಿಶ್ವವಿದ್ಯಾಲಯದ ಮಹಿಳೆಯರ ಖೋ ಖೋ ತಂಡದ ಆಯ್ಕೆ ಪ್ರಕ್ರಿಯೆ ಫೆ.23ಕ್ಕೆ ಮತ್ತು 24ರಂದು ಖೋ ಖೋ ಪಂದ್ಯಾವಳಿ ಬೆಳ್ಳುಬ್ಬಿ ಮಹಾವಿದ್ಯಾಲಯದ ಕ್ರೀಡಾಂಗಣದಲ್ಲಿ ನಡೆಯಲಿದೆ. ಫೆ.23ರಂದು ಬೆಳಿಗ್ಗೆ 9ಕ್ಕೆ ಗಂಟೆಗೆ ನಡೆಯುವ ಖೋ-ಖೋ ಆಯ್ಕೆ ಪ್ರಕ್ರಿಯೆ ಪ್ರಾರಂಭವಾಗುವುದು. ಇದರ ನಿಮಿತ್ಯ ಉದ್ಘಾಟನಾ ಸಮಾರಂಭಕ್ಕೆ ಸ್ಥಾನಿಕ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ವಿರುಪಾಕ್ಷ ಮಾಮನಿ, ಮುಖ್ಯ ಅತಿಥಿಗಳಾಗಿ ಖ್ಯಾತ ನ್ಯಾಯವಾದಿ ಬಿ.ವಿ.ಮಲಗೌಡರ ಭಾಗವಹಿಸಲಿದ್ದಾರೆ. ಪ್ರಾಚಾರ್ಯ ಡಾ.ಎನ್.ಆರ್.ಸವತಿಕರ ಅಧ್ಯಕ್ಷತೆ ವಹಿಸಲಿದ್ದಾರೆ. ಫೆ.24ರಂದು 10ಕ್ಕೆ ಖೋ-ಖೋ ಪಂದ್ಯಾವಳಿ ನಡೆಯಲಿದೆ. ಅಂದು ಸಂಜೆ ಸಮಾರೋಪ ಸಮಾರಂಭಕ್ಕೆ ಸ್ಥಾನಿಕ ಆಡಳಿತ ಮಂಡಳಿಯ ಸದಸ್ಯ ಉಮೇಶ್ ಬಾಳಿಯವರು ಮತ್ತು ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷರು ಮತ್ತು ನ್ಯಾಯವಾದಿ ರಾಜಶೇಖರ ನಿಡವಣಿಯವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ವಿಜೇತರಿಗೆ ಬಹುಮಾನ ನೀಡಿ ಸತ್ಕರಿಸಲಿದ್ದಾರೆ ಎಂದು ಪ್ರಾಚಾರ್ಯ ಡಾ.ಎನ್.ಆರ್.ಸವತಿಕರ, ಕ್ರೀಡಾ ವಿಭಾಗದ ಉಪಾಧ್ಯಕ್ಷ ಪ್ರೊ.ಕೆ.ರಾಮರೆಡ್ಡಿ, ದೈಹಿಕ ಶಿಕ್ಷಣ ನಿರ್ದೇಶಕ ಶಿವಾನಂದ ಹೊಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಪದ್ಯಾವಳಿಯಲ್ಲಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಕಾಲೇಜುಗಳು ಭಾಗವಹಿಸಿ ಸ್ಪರ್ಧಿಸಲಿವೆ.



ಬೆಳಗಾವಿ: ಇಲ್ಲಿನ ಹನುಮಾನ ನಗರದ ಬಂಜಾರಾ ಕಾಲೋನಿಯಲ್ಲಿ ಸಂತ ಶ್ರೀ ಸೇವಾಲಾಲ ಮಹಾರಾಜರ ಜಯಂತಿಯ ಉತ್ಸವದ ಮೆರವಣಿಗೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಚಾಲನೆ ನೀಡಿದರು.

ಭೂಮಿಪೂಜೆ ನೆರವೇರಿಸಿದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್

1 ಕೋಟಿ ರೂ.ವೆಚ್ಚದಲ್ಲಿ ರಸ್ತೆ ಕಾಮಗಾರಿಗೆ ಚಾಲನೆ

ಬೆಳಗಾವಿ: ದೇಸೂರ್ ಗ್ರಾಮದ ಕಮಲ ನಗರದಲ್ಲಿ ಸುಮಾರು 1 ಕೋಟಿ ರೂ.ಗಳ ವೆಚ್ಚದಲ್ಲಿ ರಸ್ತೆ ನಿರ್ಮಾಣ ಮಾಡಲಾಗುತ್ತಿದ್ದು, ಕಾಮಗಾರಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಭಾನುವಾರ ಭೂಮಿಪೂಜೆ ನೆರವೇರಿಸಿ, ಚಾಲನೆ ನೀಡಿದರು.



ಲಕ್ಷ್ಮೀ ಹೆಬ್ಬಾಳ್ಕರ್ ಅವರು ವಿಶೇಷ ಪ್ರಯತ್ನ ಮಾಡಿ ರಸ್ತೆ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಿಸಿದ್ದಾರೆ. ಗ್ರಾಮದಲ್ಲಿ ನಿರಂತರ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದು, ಜನರ ನಿರಂತರ ಬೆಂಬಲ, ಸಹಕಾರ ಇದಕ್ಕೆ ಕಾರಣ. ಮುಂದಿನ ದಿನಗಳಲ್ಲಿ ಸಹ ಇದೇ ಬೆಂಬಲ ನೀಡಬೇಕೆಂದು ಸಚಿವರು ಗ್ರಾಮಸ್ಥರಲ್ಲಿ ಮನವಿ ಮಾಡಿದರು.

ಬಳಿಕ, ಗ್ರಾಮದಲ್ಲಿ ಸುಮಾರು 25 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಮಾರುತಿ ದೇವಸ್ಥಾನದ ಕಟ್ಟಡ ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸಿದರು. ಆದಷ್ಟು ಬೇಗ ಉತ್ತಮ ಗುಣಮಟ್ಟದೊಂದಿಗೆ ದೇವಸ್ಥಾನದ ಕಾರ್ಯ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಈ ವೇಳೆ ನಿಂಗಪ್ಪ ಕೊರವಿ, ಭರಮಪ್ಪ ಪೂಜೇರಿ, ಪರಶುರಾಮ ಪೂಜೇರಿ, ದುರಗಪ್ಪ ನಾಯ್ಕ್, ಕಮಲೇಶ ಕೊರವಿ, ಮಹಿಳೆಯರು, ಗುತ್ತಿಗೆದಾರರು ಮುಂತಾದವರು ಉಪಸ್ಥಿತರಿದ್ದರು.

ಶಿಕ್ಷಕ ಉತ್ತಮ ವ್ಯಕ್ತಿತ್ವ ರೂಪಿಸುವ ಮಾರ್ಗದರ್ಶಕ

ರಾಯಬಾಗ: ಮಕ್ಕಳ ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಶಿಕ್ಷಕರು ಕೇವಲ ಪಾಠ ಬೋಧಿಸುವವರಲ್ಲ, ಅವರು ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವ ಮಾರ್ಗದರ್ಶಕರಾಗಿದ್ದಾರೆ ಎಂದು ಪರಮಾನಂದವಾಡಿಯ ಡಾ. ಅಭಿನವ ಬ್ರಹ್ಮಾನಂದ ಶ್ರೀಗಳು ಹೇಳಿದರು.

ರಾಯಬಾಗ ಸ್ಟೇಷನ್‌ನಲ್ಲಿರುವ ಹಾಲಸಿದ್ದೇಶ್ವರ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಶಿಕ್ಷಕರು ಮಕ್ಕಳಿಗೆ ಜ್ಞಾನದ ಜೊತೆಗೆ ಸದ್ಭಾವನೆ, ಶಿಸ್ತು, ನೈತಿಕ ಮೌಲ್ಯಗಳು, ಸಾಮಾಜಿಕ ಜವಾಬ್ದಾರಿ ಬೆಳೆಸುತ್ತಾರೆ. ಒಬ್ಬ ಉತ್ತಮ ಶಿಕ್ಷಕ ವಿದ್ಯಾರ್ಥಿಯಲ್ಲಿರುವ ಪ್ರತಿಭೆ ಗುರುತಿಸಿ, ಅದನ್ನು ಉತ್ತೇಜಿಸಿ ಅವರ ಆತ್ಮವಿಶ್ವಾಸ ಹೆಚ್ಚಿಸುತ್ತಾನೆ ಎಂದರು.

ವಕೀಲರಸಂಘದಅಧ್ಯಕ್ಷಕೃಷ್ಣಾಕೋಟಿವಾಲೆ ಮಾತನಾಡಿ, ಮಕ್ಕಳು ಶಾಲೆಯಲ್ಲಿ ಶಿಕ್ಷಕರನ್ನು ಮಾದರಿಯಾಗಿ ನೋಡುತ್ತಾರೆ. ಆದ್ದರಿಂದ ಶಿಕ್ಷಕರ ನಡೆ-ನುಡಿ, ಮಾತು, ವರ್ತನೆ ಎಲ್ಲವೂ ಮಕ್ಕಳ ಮೇಲೆ ಗಾಢ ಪ್ರಭಾವ ಬೀರುತ್ತದೆ. ಒಳ್ಳೆಯ ಶಿಕ್ಷಕರು ಮಕ್ಕಳಲ್ಲಿ ಸಕಾರಾತ್ಮಕ ಚಿಂತನೆ ಬೆಳೆಸುವುದರ ಜೊತೆಗೆ, ಸವಾಲುಗಳನ್ನು ಎದುರಿಸುವ ಧೈರ್ಯ ನೀಡುತ್ತಾರೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಕರ ಪಾತ್ರ ಇನ್ನಷ್ಟು ವಿಸ್ತರಿಸಿದೆ ಎಂದರು. ಸಂಸ್ಥಾಪಕ ಅಧ್ಯಕ್ಷ ಆರ್.ಎಚ್. ಗೊಂಡೆ ಮಾತನಾಡಿ, ವಿದ್ಯಾರ್ಥಿಗಳಿಗೆ ಕೇವಲ ಪಠ್ಯಜ್ಞಾನವಷ್ಟೇ ಅಲ್ಲ, ಜೀವನ ಕೌಶಲ್ಯಗಳನ್ನು ಕೂಡ ಕಲಿಸಿ, ಅವರನ್ನು ಭವಿಷ್ಯದ ಸಜ್ಜನ ನಾಗರಿಕರಾಗಿ ರೂಪಿಸುತ್ತಾರೆ. ಒಟ್ಟಿನಲ್ಲಿ ಒಬ್ಬ ಉತ್ತಮ ಶಿಕ್ಷಕ ಸಾವಿರಾರು ಉತ್ತಮ ನಾಗರಿಕರನ್ನು ನಿರ್ಮಿಸುತ್ತಾನೆ ಎಂಬ ಮಾತಿನಂತೆ, ಶಿಕ್ಷಕರ ಕೈಯಲ್ಲಿ ಸಮಾಜದ ಭವಿಷ್ಯವೇ ಅಡಕವಾಗಿದೆ ಎಂದರು.

ಪ್ರಧಾನ ಅಭಿಯೋಜಕ, ಪ್ರಥಮ ವರ್ಗ ಸಹಾಯಕರು ರಾಯಭಾಗ ನ್ಯಾಯಾಲಯದ ಮಹಾವೀರ ಗುಂಡಪ್ಪ ಗೋಳರವರು ಪಾಲಕರಿಗೆ ವಿದ್ಯಾರ್ಥಿಗಳ ವಿಕಾಸದ ಬಗ್ಗೆ ಕಾಳಜಿ ತೆಗೆದುಕೊಳ್ಳುವುದು ಹೇಗೆ ಎಂಬುದರ ಬಗ್ಗೆ ವಿಶೇಷವಾಗಿ ವಿವರಣೆ ನೀಡಿದರು.

ಚಿಕ್ಕೋಡಿ ಅಬಕಾರಿ ನಿರೀಕ್ಷಕ ರಾಜು ಗೊಂಡೆ, ಮಹಾದೇವಿ ದೀಪಾಳೆ, ಸತ್ಯಪ್ಪ ಗೊಂಡೆ, ಮಹಾದೇವ ಗೇನಾನಿ, ಸಾತಗೌಡ ಪಾಟೀಲ, ಅಂಬರೀಷ್ ಬ್ಯಾಕುಡೆ, ಕುಮಾರ ಗೇನಾನಿ, ಅರ್ಜುನ ವ್ಯಾಪಾರಿ ಸೇರಿದಂತೆ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು, ಗ್ರಾಪಂ ಸದಸ್ಯರು, ಪಾಲಕರು, ಪೋಷಕರು, ಶಿಕ್ಷಕರು ಇದ್ದರು.



ಸೇವಾಲಾಲ ಜಯಂತಿ ಮೆರವಣಿಗೆಗೆ ಚಾಲನೆ

ಬೆಳಗಾವಿ : ನಗರದ ಅಶೋಕ ವೃತ್ತದಲ್ಲಿ ಸಂತ ಶ್ರೀ ಸೇವಾಲಾಲ ಮಹಾರಾಜರ ಮೆರವಣಿಗೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಚಾಲನೆ ನೀಡಿದರು. ಸೇವಾಲಾಲ ಮಹಾರಾಜರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಗೌರವ ನಮನ ಸಲ್ಲಿಸಿದ ಸಚಿವರು ಮೆರವಣಿಗೆಯಲ್ಲಿ ಪಾಲ್ಗೊಂಡರು. ಈ ವೇಳೆ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಲಕ್ಷ್ಮೀ ಮಹಾದೇವ ರಾಥೋಡ್, ಸುರೇಶ ರಾಥೋಡ್, ದೇವೇಂದ್ರ ನಾಯ್ಕ, ಸೋಮಪ್ಪ ಕಾರಬಾರಿ, ಕಾಂತೇಶ್ ರಾಥೋಡ್, ಅಶೋಕ ಪೂಜಾರಿ, ವಿಷ್ಣು ಲಮಾಣಿ, ಪಾಂಡುರಂಗ ನಾಯ್ಕ ಸೇರಿದಂತೆ ಬಂಜಾರಾ ಸಮುದಾಯದ ಇತರರು ಇದ್ದರು.



ಸರ್ಕಾರಿ ಯೋಜನೆಗಳನ್ನು ಬಳಸಿಕೊಳ್ಳಿ

ಹುಕ್ಕೇರಿ: ಬುದ್ಧ, ಬಸವ, ಡಾ.ಅಂಬೇಡ್ಕರರ ತತ್ವಗಳನ್ನು ಅನುಸರಿಸಿಕೊಂಡು ಉದ್ದಿಮೆ ಸ್ಥಾಪಿಸಿ ನೂರಾರು ಯುವಕರಿಗೆ ಉದ್ಯೋಗ ಕಲ್ಪಿಸಿದ ಜಿ.ಟಿ ಉದ್ಯೋಗ ಸಮೂಹ ಸಂಸ್ಥೆ ಸಂಸ್ಥಾಪಕ ಸುರೇಶ ತಳವಾರ ಅವರ ಕಾರ್ಯ ಶ್ಲಾಘನೀಯ ಎಂದು ಮಾಜಿ ಸಂಸದ ರಮೇಶ ಕತ್ತಿ ತಿಳಿಸಿದರು.

ತಾಲೂಕಿನ ಸುಲ್ತಾನಪೂರ ಗ್ರಾಮದಲ್ಲಿ ಶನಿವಾರ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ರಾಷ್ಟ್ರೀಯ ಜಾನುವಾರು ಮಿಷನ್ (ಎನ್.ಎಲ್.ಎಂ.) ಯೋಜನೆಯಡಿ ಜಿ.ಟಿ. ಉದ್ಯೋಗ ಸಮೂಹ ಸಂಸ್ಥೆಯ ವತಿಯಿಂದ ನೂತನವಾಗಿ ಸ್ಥಾಪಿಸಿದ ಜಿ.ಟಿ. ಮೇಕೆ ಸಾಕಾಣಿಕೆ ಘಟಕದ ಸಮಾರಂಭದಲ್ಲಿ ಮಾತನಾಡಿ, ಯುವಜನಾಂಗ ಕೇಂದ್ರ, ರಾಜ್ಯ ಸರ್ಕಾರಗಳು ಹಲವಾರು ಯೋಜನೆಗಳನ್ನು ಬಳಸಿಕೊಂಡು ಉದ್ದಿಮೆದಾರರಾಗಬೇಕು ಎಂದರು.

ಶಾಸಕ ನಿಖಿಲ ಕತ್ತಿ ಮಾತನಾಡಿ, ಮುಖಂಡ ಸುರೇಶ ತಳವಾರ ಅವರನ್ನು ಮಾದರಿಯಾಗಿಟ್ಟುಕೊಂಡು ಯುವ ಜನಾಂಗ ಸ್ವಂತ ಉದ್ದಿಮೆಗಳನ್ನು ಸ್ಥಾಪಿಸಬೇಕು. ಆ ಕಾರ್ಯಕ್ಕೆ ಇವರ ಸಲಹೆ ಸೂಚನೆ ಪಡೆದುಕೊಳ್ಳುವಂತೆ ತಿಳಿಸಿದರು.

ಮಾಜಿ ಸಚಿವ ಎ.ಬಿ ಪಾಟೀಲ, ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಯರನಾಳ ಬ್ರಹ್ಮಾನಂದ ಸ್ವಾಮೀಜಿ, ಹುಣಸಿಕೊಳ್ಳ ಮಠದ ಸಿದ್ದಬಸವ ಸ್ವಾಮೀಜಿ,

> **ಸ್ವಂತ ಉದ್ದಿಮೆ ಪ್ರಾರಂಭಿಸಲು ರಾಜ್ಯ, ಕೇಂದ್ರ ಸರ್ಕಾರಗಳು ಹಲವಾರು ಯೋಜನೆಗಳನ್ನು ಜಾರಿಗೆ ತಂದಿವೆ. ಅವುಗಳನ್ನು ಬಳಸಿಕೊಂಡು ಉದ್ದಿಮೆ ಪ್ರಾರಂಭಿಸಬೇಕು. ಆ ನಿಟ್ಟಿನಲ್ಲಿ ಯಾರಿಗಾದರೂ ಸಲಹೆ ಸೂಚನೆ ಬೇಕಾದಲ್ಲಿ ನೀಡಲು ನಾನು ಸಿದ್ಧ.**
> ■ ಸುರೇಶ ತಳವಾರ, ಜಿಟಿ ಉದ್ಯೋಗ ಸಮೂಹ ಸಂಸ್ಥೆಯ ಸಂಸ್ಥಾಪಕ

ಕ್ಯಾರಗುಡ್ಡದ ಅಭಿನವ ಮಂಜುನಾಥ ಶ್ರೀಗಳು ಮತ್ತುಸುಲ್ತಾನಪುರದ ಶಿವಾನಂದ ಸ್ವಾಮೀಜಿ ಮತ್ತಿತರರು ಮಾತನಾಡಿದರು.

ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘದ ಅಧ್ಯಕ್ಷ ಮಹಾವೀರ ನಿಲಜಗಿ, ನಿರ್ದೇಶಕರಾದ ಸತ್ಯಪ್ಪಾ ನಾಯಕ, ಶಿವನಗೌಡ ಮದವಾಲ, ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಆರ್.ರುದ್ರಯ್ಯಾ, ಸುಭಾಷ್ ನಾಟೇಕರ, ಮಲ್ಲೇಶ ಚೌಗಲಾ, ಬಸವರಾಜಪಾಟೀಲ, ಭೀಮಣ್ಣಾರಾಮಗೋನಟ್ಟಿ, ಶ್ರೀಶೈಲ ಮಠಪತಿ, ಸಿದ್ದಪ್ಪ ತಳವಾರ, ಬಸವರಾಜ ತಳವಾರ, ಡಿ.ಶ್ರೀಕಾಂತ ಮತ್ತಿತರರಿದ್ದರು. ಸಂಸ್ಥೆಯ ಅಧ್ಯಕ್ಷ ಸುರೇಶ ತಳವಾರ ಸ್ವಾಗತಿಸಿದರು. ರಾಜು ತಳವಾರ ನಿರೂಪಿಸಿ ವಂದಿಸಿದರು.



ಅಲ್ಲಯ್ಯಾಗೆ ಕನ್ನಡ ಸೇವಾ ರತ್ನ ಪ್ರಶಸ್ತಿ

ಮುಗಳಖೋಡ: ಪಟ್ಟಣದ ಜಂಗಮ ಸಮಾಜದ ಹಿರಿಯರು, ಪಾರಂಪರಿಕ ನಾಟಿ ವೈದ್ಯರು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅಲ್ಲಯ್ಯಾ ಸಿ. ಹಿರೇಮಠ ಅವರ ಆಯುರ್ವೇದ ನಾಟಿ ಔಷಧ ವಿತರಣೆಯ ಸಾಮಾಜಿಕ ಸೇವೆಗೆ ರಾಜ್ಯ ಮಟ್ಟದ ಕನ್ನಡ ಸೇವಾ ರತ್ನ ಪ್ರಶಸ್ತಿ ದೊರೆತಿದೆ.

ಸಂಗೀತ ನೃತ್ಯ ಕಲಾನಿಕೇತನ ಟ್ರಸ್ಟ ರಿ ಕರ್ನಾಟಕ ಮಂಡ್ಯ, ಎ.ಎನ್. ನೊಸ್ರಾ ಎಜುಕೇಶನ್ - ಚಾರಿಟಬಲ್ ಟ್ರಸ್ಟ್ ರಿ ಮಂಡ್ಯ ಹಾಗೂ ನಕ್ಷತ್ರ ಫೌಂಡೇಶನ್ ರಿ ಕರ್ನಾಟಕ ಹುಬ್ಬಳ್ಳಿ ಸಹಯೋಗದಲ್ಲಿ ನಕ್ಷತ್ರ ಫೌಂಡೇಶನ್ ಆಯೋಜಿಸಿದ ಸಂಗೀತ ಮತ್ತು ಜಾನಪದ ನೃತ್ಯ ಕಾರ್ಯಕ್ರಮದ ಅಂಗವಾಗಿ ಹುಬ್ಬಳ್ಳಿಯ ಕೋರ್ಟ್ ಕ್ಲಬ್ ರೋಡ್ ಮಹಾರಾಷ್ಟ್ರ ಮಂಡಳಿ, ಎನ್.ಎಂ.ಆರ್ ಸ್ಕ್ಯಾನ್ ಸೆಂಟರ್ ಬಿಲ್ಡಿಂಗ್‌ನಲ್ಲಿ ಭಾನುವಾರ ನಡೆದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ನೀಡುವ ರಾಜ್ಯ ಮಟ್ಟದ ಕನ್ನಡ ಸೇವಾ ರತ್ನ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮುಗಳಖೋಡ ಪಟ್ಟಣದ ಪಾರಂಪರಿಕ ವೈದ್ಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅಲ್ಲಯ್ಯಾ ಸಿ. ಹಿರೇಮಠ ಅವರಿಗೆ ಕನ್ನಡ ಸೇವಾ ರತ್ನ ಪ್ರಶಸ್ತಿ ನೀಡಿದ್ದಾರೆ.

ನಾಟಿವೈದ್ಯ ಅಲ್ಲಯ್ಯಾ ಹಿರೇಮಠ ಅವರ ಪಾರಂಪರಿಕ ವೈದ್ಯಕೀಯ ಸೇವೆ ಜೊತೆಗೆ ಸಾಮಾಜಿಕ ಸೇವೆ, ಔಷಧೋಪಚಾರ ಪದ್ಧತಿ ಗಮನಿಸಿ, ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.



ನಕ್ಷತ್ರ ಫೌಂಡೇಶನ್ ರಾಜ್ಯಾಧ್ಯಕ್ಷೆ ಪುಷ್ಪಾ ಹಿರೇಮಠ, ಸಂಗೀತ ನೃತ್ಯ ಕಲಾನಿಕೇತನ ಟ್ರಸ್ಟ್‌ನ ಸಂಸ್ಥಾಪಕಿ ಶೋಭ ಪಿ. ಗೌಡ, ಆರ್.ಕೆ. ಬಾಲಚಂದ್ರ, ಶಿಕ್ಷಕ ಜಿ.ಎಂ. ಮಠಪತಿ, ನಿವೃತ್ತ ಸೈನಿಕ ಪಿ.ಆರ್.ಮಠಪತಿ, ಸಂಗಣ್ಣ ತೇಲಿ ಸೇರಿದಂತೆ ಇತರರು ಇದ್ದರು.

ಕಲ್ಲು ತೂರಿದವರ ವಿರುದ್ಧ ಕ್ರಮಕ್ಕೆ ಶ್ರೀರಾಮ ಸೇನೆ ಆಗ್ರಹ

ಬೆಳಗಾವಿ: ಫೆ. 19 ರಂದು ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯ ಮೆರವಣಿಗೆಯ ವೇಳೆ ಬಾಗಲಕೋಟೆಯಲ್ಲಿ ಮುಸ್ಲಿಂ ಕೆಲ ಕಿಡಗೇಡಿಗಳು ಮಸೀದಿಯಲ್ಲಿಂದ ಕಲ್ಲು, ಚಪ್ಪಲಿ ತೂರಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಶ್ರೀರಾಮ ಸೇನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಶನಿವಾರ ಶ್ರೀ ರಾಮ ಸೇನೆ ಸಂಘಟನೆಯ ಕಾರ್ಯಕರ್ತರು ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಈ ವೇಳೆ ಶ್ರೀರಾಮ ಸೇನೆಯ ಉತ್ತರ ಕರ್ನಾಟ ಜಿಲ್ಲಾ ಅಧ್ಯಕ್ಷ ರವಿಕುಮಾರ್ ಕೋಕಿತ್ಕರ ಮಾತನಾಡಿ, ಬಾಗಲಕೋಟೆಯಲ್ಲಿ ಫೆ. 19 ರಂದು ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಮೆರವಣಿಗೆಯ ಮೇಲೆ ಮಸೀದಿಯಲ್ಲಿ ಮುಸ್ಲಿಂ ಕೆಲ ಕಿಡಗೇಡಿಗಳು ಬೇಕತ್ತಲೆ ಗಲಭೆ ಸೃಷ್ಟಿಸುವುದಕ್ಕೆ ಶಿವಾಜಿ ಮಹಾರಾಜರ ಮೆರವಣಿಗೆಯ ವೇಳೆ ಕಲ್ಲು ತೂರಿ ಅಖಂಡ ಹಿಂದೂ ಸಮಾಜಕ್ಕೆ ಹಾಗೂ ಶಿವಾಜಿ ಮಾಹಾರಾಜರಿಗೆ ಅಪಮಾನ ಮಾಡಿರುವ ಕಿಡಗೇಡಿಗಳ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳಬೇಕು. ಈ ಘಟನೆ ಹಿಂದೆ ಯಾರ ಕೈವಾಡ ಇದೇ ಎಂದು ಪತ್ತೆ ಹಚ್ಚಿ ಅವರ ವಿರುದ್ಧ ಕ್ರಮ ಕೈಗೊಂಡ ಅವರ ವಿರುದ್ಧ ಗುಂಡಾ ಕಾಯ್ದೆ ಅಡಿ ಅವರನ್ನು ದೇಶ ದ್ರೋಹಿಗಳು ಎಂದು ಪಟ್ಟ ಕಟ್ಟಿ ಗಡಿಪಾರು ಮಾಡಬೇಕೆಂದು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿಕೊಂಡರು.



ಈ ವೇಳೆ ಶ್ರೀ ರಾಮ ಸೇನೆ ಉತ್ತರ ಕರ್ನಾಟಕ ರಾಜ್ಯಾಧ್ಯಕ್ಷ ರವಿಕುಮಾರ್ ಕೋಕೀತ್ಕರ್, ವಿನಯ ಬ ಅಗ್ರೋಳ್ಳಿ ರಾಜ್ಯ ಉಪಾಧ್ಯಕ್ಷರು, ಸಂಘಟನೆಯ ಮುಖಂಡರು ಸೇರಿದಂತೆ ಹಲವು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಅನುಮತಿ ಇಲ್ಲದೇ ಸಿನಿಮಾ ಚಿತ್ರೀಕರಣ: ಪೊಲೀಸ್ ಆಯುಕ್ತ ಗರಂ

ಬೆಳಗಾವಿ: ದಿನದಿಂದ ದಿನಕ್ಕೆ ಬೆಳಗಾವಿ ನಗರವು ಬೆಳೆಯುವುದರ ಜೊತೆಗೆ ಜನಸಂಖ್ಯೆಯು ಬೆಳೆಯುತ್ತಿದ್ದು, ಆದರೆ, ಅನುಮತಿ ಪಡೆಯದೆ ಸಿನಿಮಾ ಚಿತ್ರೀಕರಣ ನಡೆಸಿ ಟ್ರಾಫಿಕ್ ಸಮಸ್ಯೆಗೆ ಕಾರಣವಾದ ಘಟನೆಗಳು ರಾಜ್ಯದಲ್ಲಿ ಹಲವಾರು ಬಾರಿ ನಡೆದಿವೆ.

ಬೆಳಗಾವಿ ಕೊಲ್ಲಾಪುರ ವೃತ್ತದಲ್ಲಿ ಪೊಲೀಸ್ ಇಲಾಖೆ ಅನುಮತಿ ಪಡೆಯದೇ ನಡು ರಸ್ತೆಯಲ್ಲೇ ಕನಕರಾಜ ಚಿತ್ರವನ್ನು ಚಿತ್ರೀಕರಣ ನಡೆಸಿದ್ದರಿಂದ ಸಾರ್ವಜನಿಕರು, ವಾಹನ ಚಾಲಕರಿಗೆ ತೀವ್ರ ಟ್ರಾಫಿಕ್ ಸಮಸ್ಯೆ ಉಂಟಾಗಿರುವುದ ವಿರುದ್ಧ ಜನತೆ ಆಕ್ರೋಶ ಹೊರ ಹಾಕಿದ್ದಾರೆ.

ಕಳೆದ ವಾರದಿಂದ ಕನಕರಾಜ ಚಿತ್ರದ ಎರಡನೇ ಹಂತದ ಚಿತ್ರೀಕರಣ ಬೆಳಗಾವಿ, ಗೋಕಾಕ್ ಸೇರಿದಂತೆ ವಿವಿಧೆಡೆ ಬಾಗದಲ್ಲಿ, ಚಿತ್ರೀಕರಣ ನಡೆಯುತ್ತಿದೆ. ನಾಯಕ ಅನೂಪ್ ರೇವಣ್ಣ, ನಾಯಕಿ ನಿಮಿಷ, ಖಳನಟ ಮಂಜುನಾಥ್ ಅರಸ್ ಮುಂತಾದವರು ನಟಿಸುತ್ತಿರುವ ಈ ಚಿತ್ರದ ಚಿತ್ರೀಕರಣವನ್ನು ಕೊಲ್ಲಾಪುರ ವೃತ್ತದ ಬಳಿರುವ ಮ್ಯಾಕ್ಸ್ ಮಾಲ್ ಎದುರು ನಡು ರಸ್ತೆಯಲ್ಲೇ ಚಿತ್ರ ತಂಡ, ನಟಿಯ ಕಿಡ್ನಾಪ್ ಮಾಡುವ ಸೀನ್ ಚಿತ್ರಿಕರಣ ಮಾಡಿಲಾಗಿದೆ.

ಈ ಚಿತ್ರಕರಣದ ವೇಳೆ ರಸ್ತೆ ಮೇಲೆ ಸಂಚರಿಸುವ ವಾಹನ ಚಾಲಕರಿಗೆ ಟ್ರಾಫಿಕ್ ಕಿರಿಕಿರಿ ಉಂಟಾಗಿದೆ. ನಡು ರಸ್ತೆಯಲ್ಲಿ ವಾಹನಗಳು ರಸ್ತೆ ಮೇಲೆ ನಿಂತಲ್ಲೆ ನಿಂತಿರುವದರಿಂದ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.



ಸಿನಿಮಾ ಚಿತ್ರಿಕರಣ ಮಾಡಬೇಕೆಂದರೆ ಅಲ್ಲಿನ ಪೊಲೀಸ್ ಆಯುಕ್ತರ ಅನುಮತಿ ಪಡೆಯಬೇಕಾಗುತ್ತದೆ.

ನಗರದಲ್ಲಿ ಹೆಚ್ಚಿನ ಸಂಚಾರ ಇರುವ ರಸ್ತೆಯಲ್ಲಿ ಸಿನಿಮಾ ಚಿತ್ರಕರಣ ಮಾಡುವ ಮುಂಚೆ ಪೊಲೀಸ್ ಇಲಾಖೆಯಿಂದ ಅನುಮತಿ ಪಡೆಯಬೇಕು. ಆದರೆ ಈ ಚಿತ್ರ ತಂಡ ಯಾವುದೇ ರೀತಿ ನಮ್ಮ ಕಡೆಯಿಂದ ಅನುಮತಿ ಪಡೆದಿಲ್ಲ, ಈ ಚಿತ್ರಕರಣದ ಆಯೋಜಕರ ವಿರುದ್ದ ಕ್ರಮ ಕೈಗೊಳ್ಳಲಾಗುವುದು ಎಂದು ಬೆಳಗಾವಿ ನಗರ ಪೊಲೀಸ್ ಆಯುಕ್ತ ಭೂಷಣ್ ಭೋರಸೆ ತಿಳಿಸಿದ್ದಾರೆ.

ಡಿಜೆ ಸೌಂಡ್ ಸಿಸ್ಟಮ್ ಮಾಲೀಕರಿಗೆ ಎಚ್ಚರಿಕೆ ನೀಡಿದ ಸಿಪಿಐ

ಸವದತ್ತಿ: ವಿದ್ಯಾರ್ಥಿಗಳ ಪರೀಕ್ಷೆಗಳು ನಡೆಯುತ್ತಿದ್ದು ಹಾಗೂ ಸಾರ್ವಜನಿಕರ ಹಿತ ದೃಷ್ಟಿಯಿಂದ ತಾಲೂಕಿನಲ್ಲಿ ತಾಲೂಕಿನ ಯಾವುದೇ ಗ್ರಾಮಗಳಲ್ಲಿ ರಾತ್ರಿ 10ರ ನಂತರ ಯಾವುದೇ ಧ್ವನಿವರ್ಧಕ ಹಾಗೂ ಡಿಜೆ ಸೌಂಡ್ ಸಿಸ್ಟಮ್‌ಗಳನ್ನು ಹಚ್ಚಬಾರದು ಎಂದು ಸವದತ್ತಿ ಪೊಲೀಸ್ ಠಾಣೆಯ ಪಿಐ ಸುರೇಶ ಬೆಂಡೆಗುಂಬಳ ಡಿಜೆ ಸೌಂಡ್ ಸಿಸ್ಟಮ್ ಮಾಲೀಕರಿಗೆ ಖಡಕ್ ಎಚ್ಚರಿಕೆ ಕೊಟ್ಟರು.

ಪೊಲೀಸ್ ಠಾಣೆಯಲ್ಲಿ ಡಿಜೆ ಸೌಂಡ್ ಸಿಸ್ಟಮ್ ಮಾಲೀಕರ ಸಭೆ ಕರೆದು ಸಭೆಯಲ್ಲಿ ಮಾತನಾಡಿ, ಅತಿಯಾದ ಕರ್ಕಶ ಶಬ್ದದಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಪರೀಕ್ಷೆಗಳು ಸಮೀಪಿಸುತ್ತಿರುವುದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಆಗಬಾರದು ಹಾಗೂ ಡಿಜೆ ಸೌಂಡ್ ಸಿಸ್ಟಮ್ ಅತಿಯಾಗಿದ್ದರಿಂದ ವಯಸ್ಸಾದವರಿಗೆ ವಯೋವೃದ್ಧರಿಗೆ ತೊಂದರೆ ಆಗುತ್ತದೆ ಆದ್ದರಿಂದ ರಾತ್ರಿ 10ರನಂತರ ನಂತರ ಯಾರೂ ಕೂಡಾ ಡಿಜೆ ಹಚ್ಚುವುದಾಗಲಿ ಮತ್ತು ಪಟಾಕಿಗಳನ್ನು ಹಾರಿಸಿ ಸಂಭ್ರಮಾಚರಣೆಯನ್ನು ಮಾಡುವಂತಿಲ್ಲ ಒಂದು ವೇಳೆ ಯಾವುದೇ ಗ್ರಾಮಗಳಲ್ಲಾಗಲಿ ಅಥವಾ ಸವದತ್ತಿ ನಗರದಲ್ಲಿ ಆಗಲಿ ಇಂತಹ ಪ್ರಕರಣಗಳು ಕಂಡು ಬಂದರೆ ಅವರ ಮೇಲೆ ಯಾವುದೇ ಮುಲಾಜಿಲ್ಲದೆ ಪ್ರಕರಣ ದಾಖಲಿಸಲಾಗುವುದು ಎಂದು ಹೇಳಿದರು.



ಪಿಎಸ್‌ಐ ಪ್ರೀತಮ ನಾಯಿಕಗೆ ಪ್ರಶಂಸನೆ

ಕುಡಚಿ: ರಾಯಬಾಗ ತಾಲೂಕಿನ ಕುಡಚಿ ಪೊಲೀಸ್ ಠಾಣೆ ಪಿಎಸ್‌ಐ ಪ್ರೀತಮ ನಾಯಿಕ ಅವರಿಗೆ ಜಿಲ್ಲಾ ಪೊಲೀಸ್ ಅಧೀಕ್ಷಕರಿಂದ ಪ್ರಶಂಸನಾ ಪತ್ರ ನೀಡಲಾಗಿದೆ.

ಬೆಳಗಾವಿ ಜಿಲ್ಲೆಯ ಕುಡಚಿ ಠಾಣಾ ವ್ಯಾಪ್ತಿಗೆ ಬರುವ ಕರ್ನಾಟಕದ ಎರಡನೇಯ ಅತಿ ದೊಡ್ಡ ಹಾಗೂ ಕರ್ನಾಟಕ-ಮಹಾರಾಷ್ಟ್ರದ ಲಕ್ಷಾಂತರ ಭಕ್ತ ಸಮೂಹವನ್ನು ಹೊಂದಿದ ಚಿಂಚಲಿ ಶ್ರೀ ಮಾಯಕ್ಕಾದೇವಿ ಜಾತ್ರೆ ಜನೇವರಿ 31ರಿಂದ 06ರ ರವರೆಗೆ ಭಾರತ ಹುಣ್ಣಿಮೆಯ ಪ್ರಯುಕ್ತ ನಡೆದ ಜಾತ್ರೆಯ ಕಾಲಕ್ಕೆ ಮಹಾರಾಷ್ಟ್ರ ಗೋವಾ, ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಸುಮಾರು 8 ಲಕ್ಷಕ್ಕೂ ಹೆಚ್ಚು ಜನ ಭಕ್ತಾದಿಗಳು ಆಗಮಿಸಿದ್ದು, ಜಾತ್ರಾ ಸಮಯದಲ್ಲಿ ವ್ಯವಸ್ಥಿತವಾಗಿ ವಾಹನ ನಿಲುಗಡೆ, ಸುಗಮ ಸಂಚಾರ, ಭಕ್ತಾದಿಗಳಿಗೆ ಸಹಾಯ ಮತ್ತು ಸಹಕಾರವನ್ನು ನೀಡಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಬಂದೋಬಸ್ತ್ ಕರ್ತವ್ಯವನ್ನು ನಿರ್ವಹಿಸಿರುವ ಹಿನ್ನೆಲೆಯಲ್ಲಿ ಅಥಣಿ ಡಿವೈಎಸ್‌ಪಿ ಪ್ರಶಾಂತ್ ಮುನ್ನೊಳ್ಳಿ, ಹಾರೂಗೇರಿ ಸಿಪಿಐ ರತನಕುಮಾರ ಜೀರಗ್ಯಾಳ, ಕುಡಚಿ ಪಿಎಸ್‌ಐ ಪ್ರೀತಮ್ ನಾಯಿಕ ಹಾಗೂ ಸಿಬ್ಬಂದಿಗಳ ಕಾರ್ಯದಕ್ಷತೆಗೆ ಮೆಚ್ಚಿ ಅವರನ್ನು ಬೆಳಗಾವಿ ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ.ರಾಮರಾಜನ ಪ್ರಶಂಸನಾ ಪತ್ರ ಮೂಲಕ ಅಭಿನಂದಿಸಿ, ತುಂಬು ಹೃದಯದಿಂದ ಶ್ಲಾಘನೆ ವ್ಯಕ್ತಪಡಿಸಿದ್ದಾರೆ.



ಅರ್ಜಿ ಆಹ್ವಾನ

ಬೆಳಗಾವಿ: ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಮೇಲುಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದಲ್ಲಿ ಖಾಲಿ ಇರುವ ನೋಡಲ್ ಅಧಿಕಾರಿ, ಸಾಮಾಜಿಕ ಕಾರ್ಯಕರ್ತರು, ಕೃತಕಾಂಗ ಜೋಡಣೆ (ಪಿಓ) ಅಭಿಯಂತರರು, ಕ್ಲಿನಿಕಲ್ ಸೈಕಾಲೋಜಿಸ್ಟ, ಸ್ಪೀಚ್‌ಥೆರಪಿಸ್ಟ ಆಡಿಯೋಲಾಜಿಸ್ಟ, ಫಿಜಿಯೋ ಥೆರಪಿಸ್ಟ, ಆಕ್ಯುಪೇಶನಲ್ ಥೆರಪಿಸ್ಟ, ಅಕೌಂಟೆಂಟ್ ಕಂ ಕ್ಲರ್ಕ, ಕಂಸ್ಟೋರ್ ಕಿಪರ್, ಕೃತಕಾಂಗ ತಾಂತ್ರಿಕ, ಕಂಪ್ಯೂಟರ್ ಆಪರೇಟರ್, ಲೆದರ್ ವರ್ಕರ್, ಶ್ಯೂ ಮೇಕರ್, ಮೋಬಿಲಿಟಿ ಇನ್ಸ್ಟ್ರಕ್ಟರ್, ಇಯರ್ಮೋಲ್ಡ ಟೆಕ್ನೀಶಿಯನ್, ಕಚೇರಿ ಸೇವಕ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಶೈಕ್ಷಣಿಕ ಮತ್ತು ಅನುಭವದ ದಾಖಲಾತಿಗಳೊಂದಿಗೆ ಕೈಬರಹದ ಅರ್ಜಿಯನ್ನು ಗೌರವ ಕಾರ್ಯದರ್ಶಿಗಳು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ, ಜಿಲ್ಲಾ ಆಸ್ಪತ್ರೆ ಆವರಣ ಬೆಳಗಾವಿ, ಇವರಿಗೆ ಮಾ.3 ರ ಒಳಗಾಗಿ ಬೆಳಿಗ್ಗೆ 9 ರಿಂದ ಸಂಜೆ 4 ರ ವರೆಗೆ ಕಚೇರಿ ವೇಳೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ ಜಿಲ್ಲಾ ಆಸ್ಪತ್ರೆ ಆವರಣ, ಬೆಳಗಾವಿ ಇಲ್ಲಿಗೆ ಸಂಪರ್ಕಿಸಬಹುದಾಗಿದೆ ಎಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಗೌರವ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ನಾಳೆ ಜನಸ್ಪಂದನಾ ಸಭೆ

ಭಟ್ಕಳ: ತಾಲೂಕಿನ ಕಟಗಾರಕೊಪ್ಪ ಗ್ರಾಪಂ ಸಭಾಭವನದಲ್ಲಿ ಫೆ. 24ರಂದು ಬೆಳಗ್ಗೆ 10.30 ಗಂಟೆಗೆ ಜನಸ್ಪಂದನಾ ಸಭೆ ಆಯೋಜಿಸಲಾಗಿದೆ. ಸಭೆಯಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿರಲಿದ್ದು, ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದು ಎಂದು ತಹಶೀಲ್ದಾರ್ ನಾಗೇಂದ್ರ ಕೋಳಶೆಟ್ಟಿ ತಿಳಿಸಿದ್ದಾರೆ.

ಮೌಲ್ಯ ಶಿಕ್ಷಣ ಸ್ಪರ್ಧೆ: ವಂಶಿಕಾ ಪ್ರಥಮ



ದಾಂಡೇಲಿ : ಇಸ್ಕಾನ್ ಸಂಸ್ಥೆಯ ಆಶ್ರಯದಡಿ ನಡೆದ ಜಿಲ್ಲಾ ಮಟ್ಟದ ಮೌಲ್ಯ ಶಿಕ್ಷಣ ಸ್ಪರ್ಧೆಯಲ್ಲಿ ದಾಂಡೇಲಿಯ ಸ್ಟೆಂಟ್ ಮೈಕಲ್ ಕಾನ್ವೆಂಟ್ ಆಂಗ್ಲ ಮಾಧ್ಯಮ ಶಾಲೆಯ 6ನೇ ತರಗತಿಯ ವಿದ್ಯಾರ್ಥಿನಿ ವಂಶಿಕಾ ಚೇತನ್ ಶರ್ಮಾ ಇವಳು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ಪ್ರತಿಭಾನ್ವಿತ ವಿದ್ಯಾರ್ಥಿನಿಯಾಗಿರುವ ವಂಶಿಕಾ ಚೇತನ್ ಶರ್ಮಾ ಇವಳು ವೆಸ್ಟ್ ಕೋಸ್ಟ್ ಕಾಗದ ಕಾರ್ಖಾನೆಯ ಔದ್ಯೋಗಿಕ ಆರೋಗ್ಯ ಕೇಂದ್ರದಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಚೇತನ್ ಶರ್ಮಾ ಹಾಗೂ ರಾಜಶ್ರೀ ದಂಪತಿಗಳ ಸುಪುತ್ರಿಯಾಗಿದ್ದಾಳೆ. ಈಕೆಯ ಸಾಧನೆಗೆ ಶಾಲೆಯ ಮುಖ್ಯೋಪಾಧ್ಯಾಯಿನಿ ಸಿಸ್ಟರ್ ಕ್ಲಾರೇಟ್ ಹಾಗೂ ಶಿಕ್ಷಕ ವೃಂದದವರು ನಗರದ ಗಣ್ಯರು ಅಭಿನಂದಿಸಿದ್ದಾರೆ.

ನೀರು ಹಾವಿನ ಮೊಟ್ಟೆ ರಕ್ಷಣೆ



ಮುಂಡಗೋಡ: ಪಟ್ಟಣದ ಕಂಬಾರಗಟ್ಟಿ ಪ್ಲಾಟ್‌ನಲ್ಲಿ ಕಾಣಿಸಿಕೊಂಡ ದೊಡ್ಡ ಗಾತ್ರದ ನೀರು ಹಾವು ಹಾಗೂ ನೀರು ಹಾವಿನ ಮೊಟ್ಟೆ (ಸುಮಾರು 35 ರಿಂದ 40)ಗಳನ್ನು ಗಸ್ತು ಅರಣ್ಯ ಪಾಲಕ ಉರಗ ರಕ್ಷಕ ಮುತ್ತುರಾಜ ಹಳ್ಳಿ ರಕ್ಷಿಸಿದ್ದಾರೆ. ಶಿವಪ್ಪ ದುರ್ಗಪ್ಪ ಮಾದರ ಅವರು ಮನೆಯ ಪಾಯ ತೆಗೆಯುತ್ತಿದ್ದಾಗ ಹಾವು ಮತ್ತು ಮೊಟ್ಟೆಗಳು ಕಂಡು ಬಂದಿವೆ. ಮಾಹಿತಿ ಪಡೆದ ಉಪವಲಯ ಅಧಿಕಾರಿ ಅಜ್ಜಪ್ಪ ಮುತ್ತುರಾಜ ಅವರಿಗೆ ತಿಳಿಸಿದ್ದಾರೆ. ನಂತರ ಬಂದ ಅವರು ಹಾವನ್ನು ಹಾಗೂ ಮೊಟ್ಟೆಗಳನ್ನು ರಕ್ಷಿಸಿದ್ದು ಹಾವನ್ನು ಅದರ ಸೂಕ್ತ ಆವಾಸ ಸ್ಥಾನಕ್ಕೆ ಬಿಟ್ಟಿದ್ದಾರೆ. ಕಾರ್ಯಾಚರಣೆಯಲ್ಲಿ ಪ್ರಾಣಿ ಪ್ರಿಯ ನಾಗರಾಜ ಗುಬ್ಬಕ್ಕನವರ ಹಾಗೂ ಸಾರ್ವಜನಿಕರು ಇದ್ದರು.

ಆಶಿತ ಯುನಿವರ್ಸಿಟಿ ಬ್ಲ್ಯೂ ಆಗಿ ಆಯ್ಕೆ



ಭಟ್ಕಳ : ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವು ಆಯೋಜಿಸಿದ ವಿಶ್ವವಿದ್ಯಾಲಯ ಮಟ್ಟದ ಗುಡ್ಡಗಾಡು ಓಟ (ಕ್ರಾಸ್ ಕಂಟ್ರಿ) ದಲ್ಲಿ ಗುರು ಸುಧೀಂದ್ರ ಕಾಲೇಜಿನ ವಿದ್ಯಾರ್ಥಿನಿ ಆಶಿತಾ ನಾಯ್ಕ ಅವರು ಯುನಿವರ್ಸಿಟಿ ಬ್ಲೂ ಆಗಿ ಆಯ್ಕೆಯಾಗಿದ್ದಾಳೆ. ಈಕೆ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಜರಗುವ ಅಂತರವಿಶ್ವವಿದ್ಯಾಲಯ-ದಕ್ಷಿಣ ಭಾರತ ವಲಯವನ್ನು ಪ್ರತಿನಿಧಿಸಲಿದ್ದಾರೆ. ಈಕೆ ಭಟ್ಕಳದ ಭಾರತಿ ನಾಯ್ಕ ಹಾಗೂ ವೆಂಕಟೇಶ ನಾಯ್ಕ ರವರ ಪುತ್ರಿಯಾಗಿದ್ದು, ಈಕೆಯ ಸಾಧನೆಗೆ ಭಟ್ಕಳ ಎಜ್ಯುಕೇಶನ್ ಟ್ರಸ್ಟ ಆಡಳಿತ ಮಂಡಳಿ, ಪ್ರಾಂಶುಪಾಲರು, ಶಿಕ್ಷಕರು, ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

ಗಂಜಿಮಾರಿಯಮ್ಮ ದೇವಿ ಉತ್ಸವ ಸಂಪನ್ನ

ಭಟ್ಕಳ: ಇಲ್ಲಿನ ಹರಿಜನಕೇರಿಯ ಅಂಜುಮಾನ್ ಕಾಲೇಜ್ ರೋಡ್‌ನಲ್ಲಿರುವ ಗಂಜಿಮಾರಿಯಮ್ಮ ಸಪರಿವಾರ ದೇವಸ್ಥಾನದಲ್ಲಿ ಉತ್ಸವವು ವಿಜೃಂಭಣೆಯಿಂದ ನೆರವೇರಿತು. ಉತ್ಸವದ ಅಂಗವಾಗಿ ಸ್ವಸ್ತಿ ವಾಚನೆ, 25 ಕಲಶ ಆಧಿವಾಸ ಹೋಮ, ಅಭಿಷೇಕ, ಲಲಿತಾ ಸಹಸ್ರನಾಮಾರ್ಚನೆ, ಮಹಾಪೂಜೆ ಹಾಗೂ ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಿತು. ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಉತ್ಸವದ ಅಂಗವಾಗಿ ದೇವರ ಬೆಳ್ಳಿ ಕವಚ ಮೆರವಣಿಗೆ ನಾಗಯಕ್ಷಿ ದೇವಸ್ಥಾನದಿಂದ ಆರಂಭವಾಗಿ ಹಳೆ ಬಸ್ ನಿಲ್ದಾಣ, ಸಂಸುದ್ದೀನ್ ಸರ್ಕಲ್ ಹಾಗೂ ತಾಲೂಕು ಆಡಳಿತ ಸೌಧಾ ಮಾರ್ಗವಾಗಿ ಗಂಜಿಮಾರಿಯಮ್ಮ ದೇವಸ್ಥಾನಕ್ಕೆ ತಲುಪಿತು. ಮೆರವಣಿಗೆಯಲ್ಲಿ ವಿವಿಧ ಟ್ಯಾಬ್ಲೋಗಳು, ಮಹಿಳೆಯರ ಭಜನೆ-ನೃತ್ಯ, ಚಂಡೆ ವಾದ್ಯಗಳ ಘೋಷ ಹಾಗೂ ನೂರಾರು ಭಕ್ತರ ಉಪಸ್ಥಿತಿ ಉತ್ಸವಕ್ಕೆ ಮತ್ತಷ್ಟು ಮೆರುಗು ನೀಡಿತು.



ಅಳ್ನಾವರ: ಭಾರತೀಯ ಅಂಚೆ ಇಲಾಖೆ ವತಿಯಿಂದ ತಮ್ಮ ಸಿಬ್ಬಂದಿ, ಕುಟುಂಬದವರಿಗೆ ಈಚೆಗೆ ಮೈಸೂರಿನಲ್ಲಿ ಹಮ್ಮಿಕೊಂಡ 2025-26 ರ ಸಾಲಿನ ರಾಷ್ಟ್ರೀಯ 38ನೇ ಸಾಂಸ್ಕೃತಿಕ ಮೇಳದ ಕಿರಿಯರ ವಿಭಾಗದ ಜಾನಪದ ಸಂಗೀತದಲ್ಲಿ ಅಳ್ನಾವರದ ನಿವಾಸಿ ಶಂಕರಯ್ಯ ದೇಗಾಂವಿಮಠ ಅವರ ಮೊಮ್ಮಗಳಾದ ಬಾಲ ಕಲಾವಿದೆ ಶಾಂಭವಿ ದೇಗಾವಿಮಠ ಪ್ರಥಮ (ತಬಲಾ ಸಾಥ್ ಪ್ರಣವ) ಸ್ಥಾನ ಹಾಗೂ ಲಘು ಶಾಸ್ತ್ರೀಯ ಸಂಗೀತದಲ್ಲಿ ತೃತೀಯ ಬಹುಮಾನವನ್ನು ಪಡದಿದ್ದು, ಸಂಗೀತ ದಿಗ್ಗಜ ಪಂಡಿತ ಎಂ.ವೆಂಕಟೇಶಕುಮಾರ ಅವರಿಂದ ಪ್ರಶಸ್ತಿ ಸ್ವೀಕರಿಸಿದ ಚಿತ್ರ.

ಕಲೆ ಉಳಿಸಿ ಬೆಳೆಸಿ: ದಾಸನಕೊಪ್ಪ

ಮುಂಡಗೋಡ: ಜಿಲ್ಲೆಯಲ್ಲಿ ನಮ್ಮ ತಾಲೂಕು ವೈವಿಧ್ಯಮಯವಾಗಿದೆ ಎಲ್ಲ ಜಾತಿಯ ಜನರು ಇದ್ದಾರೆ ಎಲ್ಲರೂ ಸೌಹಾರ್ದತೆಯಿಂದ ಬದುಕುತ್ತಿದ್ದೇವೆ ನಮ್ಮ ನಾಡಿನ ಸಂಸ್ಕೃತಿಯನ್ನು ಬಿಂಬಿಸುವ ಮೂಲಕ ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಬುಡಕಟ್ಟು ಸಮುದಾಯದವರ ಪಾತ್ರ ಬಹು ಮುಖ್ಯವಾಗಿದೆ ಎಂದು ತಾಪಂ ಇಒ ಟಿ.ವೈ.ದಾಸನಕೊಪ್ಪ ಹೇಳಿದರು. ಪಟ್ಟಣದ ಲೊಯೋಲ ವಿಕಾಸ ಕೇಂದ್ರದಲ್ಲಿ ಬುಡಕಟ್ಟು ಮತ್ತು ತಳಸಮುದಾಯಗಳ ಒಕ್ಕೂಟ ಹಾಗೂ ಲೊಯೋಲ ವಿಕಾಸ ಕೇಂದ್ರದ ಆಶ್ರಯದಲ್ಲಿ ಜರುಗಿದ ಸಾಂಸ್ಕೃತಿಕ ಕಲಾಮೇಳವನ್ನು ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಹಬ್ಬದ ವಾತಾವರಣ ನಿರ್ಮಾಣವಾಗಿದೆ. ಎಲ್ಲಾ ಜಾತಿಗಳನ್ನು ಪ್ರತಿನಿಧಿಸುವ ವಿನೂತನ ಕಾರ್ಯಕ್ರಮ. ಹಲವಾರು ಸಮುದಾಯದ ವೇಷಭೂಷಣಗಳು ಕಾಣ ಬರುತ್ತಿವೆ. ಬುಡಕಟ್ಟು ಮತ್ತು ತಳಸಮುದಾಯದವರಿಗೆ ಅಭಿವೃದ್ಧಿ ಯೋಜನೆಗಳನ್ನು ತಲುಪಿಸುವ ಪ್ರಯತ್ನ ಮಾಡಲಾಗುವುದು ಎಂದರು.ಫಾ.ಅನಿಲ ಡಿಸೋಜಾ ಪ್ರಾಸ್ತಾವಿಕ ಮಾತನಾಡಿದರು. ಜಂಪಾ ಲಾಮಾ ಮಾತನಾಡಿದರು. ಬೀರು ಕಾತ್ರಟ್, ಜನವೇದಿಕೆ ನಾಯಕರು, ಬಸವಂತಪ್ಪ ಪೂಜಾರ, ನವೀನ ಸಿದ್ದಿ, ಫಾ.ಅಲ್ವಿನ್ ಡಿಸೋಜಾ, ಡಾ.ಸಿ.ಗ್ಲ್ಯಾಡೀಸ್ ಮಿನೇಜಸ್, ಫಾ.ಅನಿಲ ಡಿಸೋಜಾ, ಜನ್ನಾಬಾಯಿ ಕೊಕರೆ, ತನ್ವೀರ್ ಮಿರ್ಜಾನಕರ, ಸರೋಜಾ ಚವ್ಹಾಣ, ಸುರೇಶ ಲಮಾಣಿ, ಅಶೋಕ ದೈವಜ್ಞ, ಸಿ. ರಿಟಾ ಕಾಸ್ಟ್, ಮಂಜುನಾಥ ಹಿರೇಮಠ, ಫಾ.ಜೊಯಿಸ್, ವಿಷ್ಣು ಪಿಲ್ಲೋಜಿ, ಸುನೀಲ ಸಿದ್ದಿ, ಸುನೀಲ ಸಳಕೆ ಇದ್ದರು. ಅಂಜನಾ ತಹಶೀಲ್ದಾರ ಸ್ವಾಗತಿಸಿದರು. ಗುಲ್ಜಾರ್ ಸಂಗೂರು ನಿರೂಪಿಸಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮ ಗಮನ ಸೆಳೆದವು.



ಮುಂಡಗೋಡ: ಪಟ್ಟಣದ ಲೊಯೋಲ ವಿಕಾಸ ಕೇಂದ್ರದಲ್ಲಿ ಬುಡಕಟ್ಟು ಮತ್ತು ತಳಸಮುದಾಯಗಳ ಒಕ್ಕೂಟ ಹಾಗೂ ಲೊಯೋಲ ವಿಕಾಸ ಕೇಂದ್ರದ ಆಶ್ರಯದಲ್ಲಿ ಜರುಗಿದ ಸಾಂಸ್ಕೃತಿಕ ಕಲಾಮೇಳವನ್ನು ಡೊಳ್ಳು ಬಾರಿಸುವ ಮೂಲಕ ತಾಪಂ ಇಒ ಟಿ.ವೈ.ದಾಸನಕೊಪ್ಪ ಉದ್ಘಾಟಿಸಿದರು.

ಮಕ್ಕಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ಮಾನವೀಯ ಮೌಲ್ಯ ಅಗತ್ಯ: ಶ್ರೀಗಳು

ಅಥಣಿ: ಟಿವಿ, ಮೊಬೈಲ್ ಮಕ್ಕಳ ಆರೋಗ್ಯ ಮತ್ತು ವಿದ್ಯಾಭ್ಯಾಸದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಮಕ್ಕಳನ್ನು ಇವುಗಳ ದಾಸರಾಗದಂತೆ ನೋಡಿಕೊಂಡು ಅವರಿಗೆ ಗುಣಮಟ್ಟದ ಶಿಕ್ಷಣದ ಜತೆಗೆ ಮಾನವೀಯ ಮೌಲ್ಯಗಳನ್ನು, ದೇಶಭಕ್ತಿಯನ್ನು ಕಲಿಸಿಕೊಡುವುದು ಇಂದು ಅಗತ್ಯವಾಗಿದೆ ಎಂದು ಶೆಟ್ಟರಮಠದ ಮರಳಸಿದ್ಧ ಸ್ವಾಮೀಜಿ ಹೇಳಿದರು.

ಪಟ್ಟಣದ ಕನಕ ನಗರದ ಶ್ರೀ ಶಾರದಾ ಮಾತಾ ಆಂಗ್ಲ ಮಾಧ್ಯಮ ಪ್ರೌಢಶಾಲೆ ಹಾಗೂ ನವೋದಯ ಹಿರಿಯ ಪ್ರಾಥಮಿಕ ಶಾಲೆಯ 15ನೇ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಮಕ್ಕಳ ಸಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿ, ತಂತ್ರಜ್ಞಾನ ಬೆಳದಂತೆ ಜಗತ್ತು ವೇಗವಾಗಿ ಬೆಳೆಯುತ್ತಿದೆ. ಅದಕ್ಕೆ ತಕ್ಕಂತೆ ಶಿಕ್ಷಣ ಇಂದಿನ ಅಗತ್ಯವಾಗಿದ್ದು, ಪಾಲಕರು ಕೂಡ ಮಕ್ಕಳು ಮನೆಯಲ್ಲಿದ್ದಾಗ ಇವುಗಳ ಬಳಕೆಯನ್ನ ನಿಷೇಧಿಸಿ ಮಕ್ಕಳೊಂದಿಗೆ ಬೆರತು ವಿದ್ಯಾ ಬುದ್ಧಿ ಕಲಿಸಬೇಕು ಎಂದರು.

ಪುರಸಭೆಯ ಅಧ್ಯಕ್ಷೆ ಶಿವಲೀಲಾ ಬುಟಾಳಿ, ಆದರ್ಶ ಶಿಕ್ಷಕ ಅಣ್ಣಪ್ಪ ಸನದಿ, ಸಂಸ್ಥೆಯ ಅಧ್ಯಕ್ಷ ಮುತ್ತಪ್ಪ ಬಡಿಗೇರ, ಕಾರ್ಯದರ್ಶಿ ವಿದ್ಯಾವತಿ ಎಂ ಬಡಿಗೇರ ಮಾತನಾಡಿದರು.



ಈ ವೇಳೆ ಕಳೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ, ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಲೆಕ್ಕಪರಿಶೋಧಕ ಶ್ರೀನಿವಾಸ್ ಸಾವಡಕರ, ಚೇತನ ಸಬಸ್ಸವರ ಅವರನ್ನು ಸನ್ಮಾನಿಸಲಾಯಿತು.

2024-25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡ ರಾಜಶಾ ಭರತೇಶ ರೆಂಟಿಗೆ ಶಾಲೆಯಿಂದ ವಿಶೇಷ ಗೌರವ ಪ್ರತಿಭಾ ಪುರಸ್ಕಾರ ಹಾಗೂ ಯುವ ಮುಖಂಡ ಚಿದಾನಂದ ಸವದಿ ತಮ್ಮ ಅಜ್ಜ ಸಂಗಪ್ಪ ಸವದಿ ಅವರ ಸ್ಮರಣಾರ್ಥ 25 ಸಾವಿರ ರೂ.ಗಳ ಪ್ರೋತ್ಸಾಹಧನ ಚೆಕ್ ವಿತರಿಸಲಾಯಿತು.

ಈ ವೇಳೆ ಸಂಸ್ಥೆಯ ಆಡಳಿತ ಅಧಿಕಾರಿ ಬಿ.ಎಸ್ .ನಿಕ್ಕಮ, ಮುಖ್ಯೋಪಾಧ್ಯಾಯ ಬಿ.ಐ. ಮೋದಿ, ಸುಧಾ ಕುಂಬಾರ, ಶಿಕ್ಷಕರಾದ ನಾಗರತ್ನ ಹರಿಕಾಂತ, ಎಸ್.ಕೆ. ಸನದಿ, ಶಿವಶಂಕರ ಬಡಿಗೇರ, ವಿಶ್ವಕರ್ಮ ಸಮಾಜದ ಅಧ್ಯಕ್ಷ ಚನ್ನಪ್ಪ ಬಡಿಗೇರ ಇದ್ದರು. ಎಂ. ಎ. ಬಡಿಗೇರ ಸ್ವಾಗತಿಸಿ, ಜ್ಯೋತಿ ಹೂಟಿ ನಿರೂಪಿಸಿ, ಪ್ರಿಯಾಂಕಾ ಕೋಳಿ ವಂದಿಸಿದರು.

ಮಕ್ಕಳಿಗೆ ದೈಹಿಕ ಶಿಕ್ಷಣ ಅವಶ್ಯಕ: ಮಹೇಶ ಕಟ್ಟಿಮನಿ

ಚಿಕ್ಕೋಡಿ: ಮೊಬೈಲ್ ಬಳಕೆಯಿಂದ ಶಿಕ್ಷಣದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಹಾಗಾಗಿ ಮಕ್ಕಳಿಗೆ ದೈಹಿಕ ಶಿಕ್ಷಣ ಅವಶ್ಯಕವಾಗಿದೆ. ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ತೊಡಗಿಕೊಳ್ಳ ಬೇಕೆಂದು ಪ್ರೌಢಶಾಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಮಹೇಶ ಕಟ್ಟಿಮನಿ ಹೇಳಿದರು.

ತಾಲೂಕಿನ ನಣದಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ 2025-26ನೇ ಸಾಲಿನ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿ, ಆರೋಗ್ಯಯುತವಾದ ಶರೀರದಲ್ಲಿ ಆರೋಗ್ಯಯುತ ಮನಸ್ಸು ಇರುತ್ತದೆ ಎಂಬುವುದಕ್ಕೆ ಕ್ರೀಡೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಮಾನಸಿಕ, ದೈಹಿಕವಾಗಿಯೂ ಸದೃಢರಾಗಿರುತ್ತಾರೆ ಎಂಬುವುದೇ ನಿದರ್ಶನವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಸುರೇಶ ಮಸ್ತೆ ಮಾತನಾಡಿ, ನಣದಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಕ್ರೀಡಾ ಕ್ಷೇತ್ರದಲ್ಲಿ ತಾಲೂಕು, ಜಿಲ್ಲೆ ಹಾಗೂ ರಾಜ್ಯಮಟ್ಟದವರೆಗೆ ಆಯ್ಕೆಯಾಗಿ ಕೀರ್ತಿಯನ್ನು ತಂದಿದ್ದಾರೆ. ಇದರ ಶ್ರೇಯಸ್ಸು ಶಾಲೆಯ ದೈಹಿಕ ಶಿಕ್ಷಕ ಎನ್.ಜಿ. ಪಾಟೀಲ ಅವರಿಗೆ ಸಲ್ಲುತ್ತದೆ ಎಂದು ಹೆಮ್ಮೆಪಟ್ಟರು. ಕಾರ್ಯಕ್ರಮದಲ್ಲಿ ಗ್ರಾಪಂ ಮಾಜಿ ಉಪಾಧ್ಯಕ್ಷ ಪದ್ಮಣ್ಣ ಪೂಜಾರಿ, ಸದಸ್ಯೆ ಸೋನಾಲಿ ಕೊಂಕಣಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚಿಕ್ಕೋಡಿ ತಾಲೂಕು ಅಧ್ಯಕ್ಷ ಎನ್ ಜಿ ಪಾಟೀಲ, ಎಸ್‌ಡಿಎಂಸಿ ಉಪಾಧ್ಯಕ್ಷೆ ಲಕ್ಷ್ಮೀ, ಮುಖ್ಯ ಶಿಕ್ಷಕ ಕೆ ಎನ್ ಖೋತ, ಅಮೃತಾ ಮುಂತಾದವರಿದ್ದರು.



ರೈಲ್ವೆ ಸೌಲಭ್ಯ ಒದಗಿಸಲು ಮನವಿ

ಗೋಕಾಕ: ಪ್ರತಿ ವರ್ಷ ಯುಗಾದಿ ಹಬ್ಬದ ಪ್ರಯುಕ್ತ ಆಂಧ್ರ ಪ್ರದೇಶದ ಪ್ರಸಿದ್ಧ ಪವಿತ್ರ ಕ್ಷೇತ್ರವಾದ ಶ್ರೀಶೈಲ್ ಮಲ್ಲಿಕಾರ್ಜುನ ದರ್ಶನಕ್ಕೆ ಬೆಳಗಾವಿ ಜಿಲ್ಲೆಯ ವಿವಿಧ ಭಾಗಗಳಿಂದ ಸಾವಿರಾರು ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡುತ್ತಾರೆ. ಆದರೆ ನೇರ ರೈಲ್ವೆ ಸೌಲಭ್ಯ ಇಲ್ಲದ ಕಾರಣ ಭಕ್ತರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ ಎಂದು ಸಮಾಜ ಸೇವಕ ಉಮೇಶ ನಂದಗಾಂವ ತಿಳಿಸಿದ್ದಾರೆ.

ಪತ್ರಿಕಾ ಪ್ರಟಕಣೆಯಲ್ಲಿ ತಿಳಿಸಿರುವ ಅವರು, ಯುಗಾದಿ ಹಬ್ಬದ ಸಮಯದಲ್ಲಿ ವಿಶೇಷ ರೈಲ್ವೆ ವ್ಯವಸ್ಥೆ ಕಲ್ಪಿಸಿದರೆ ಭಕ್ತರಿಗೆ ಅನುಕೂಲವಾಗುವುದರ ಜೊತೆಗೆ ಸುರಕ್ಷಿತ ಹಾಗೂ ಸುಲಭ ಪ್ರಯಾಣ ಸಾಧ್ಯವಾಗುತ್ತದೆ. ವಿಶೇಷವಾಗಿ ಹಿರಿಯ ನಾಗರಿಕರು, ಮಹಿಳೆಯರು ಮತ್ತು ಕುಟುಂಬ ಸಮೇತ ಪ್ರಯಾಣಿಸುವವರಿಗೆ ಇದು ಬಹಳ ಸಹಾಯಕವಾಗಲಿದೆ. ಬೆಳಗಾವಿ ಹಾಗೂ ಚಿಕ್ಕೋಡಿ ಸಂಸದರು ಮತ್ತು ರಾಜ್ಯ ಸಭಾ ಸದಸ್ಯರು ರೈಲ್ವೆ ಇಲಾಖೆ ಈ ಮನವಿಗೆ ಸ್ಪಂದಿಸಬೇಕು ಎಂದು ಮನವಿ ಮಾಡಿದರು.

ಸ್ಮಶಾನ ಭೂಮಿ ಅತಿಕ್ರಮಣ ಖಂಡಿಸಿ ಪ್ರತಿಭಟನೆ

ಬೆಳಗಾವಿ: ಜಿಲ್ಲೆಯ ಖಾನಾಪುರ ಪಟ್ಟಣದ ಶಾಹೂನಗರದಲ್ಲಿರುವ ಡೋಂಬಾರ ಸಮಾಜದ ಪೂರ್ವಜರ ಸ್ಮಶಾನ ಭೂಮಿಯನ್ನು ಅತಿಕ್ರಮಣ ಮಾಡುತ್ತಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಬೃಹತ್ ಪ್ರತಿಭಟನೆ ನಡೆಸಿದರು.

ಶುಕ್ರವಾರ ಡೋಂಬಾರ ಸಮಾಜದ ಪೂರ್ವಜರ ಸ್ಮಶಾನ ಭೂಮಿಯನ್ನು ಅತಿಕ್ರಮಣ ಮಾಡುತ್ತಿರುವವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ನಗರದ ಡಾ. ಬಿ ಆರ್ ಅಂಬೇಡ್ಕರ್ ಉಧ್ಯಾನವನದಿಂದ ಆರಂಭವಾದ ಪ್ರತಿಭಟನಾ ರ‍್ಯಾಲಿ ಚನ್ನಮ್ಮ ವೃತ್ತದಲ್ಲಿ ಪ್ರತಿಭಟಿಸಿ ಜಿಲ್ಲಾಧಿಕಾರಿಗಳ ಕಚೇರಿಗೆ ಆಗಮಿಸಿ ಪ್ರತಿಭಟನೆಯ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಖಾನಾಪುರ ಪಟ್ಟಣದ ಸರ್ವೆ ನಂಬರ್ 93/ಎ 1 ರಲ್ಲಿರುವ ಈ ಜಾಗದಲ್ಲಿ ಸುಮಾರು 300 ವರ್ಷಗಳಿಂದ ಅಂತ್ಯಸಂಸ್ಕಾರ ನೆರವೇರಿಸಲಾಗುತ್ತಿತ್ತು. ಆದರೆ, ಈಗ ಮುಚಿಹೋಗಿರುವ ಕಂಪನಿಯ ಹೆಸರಿನಲ್ಲಿ ಸಮಾಧಿಗಳ ಮೇಲೆಯೇ ಅಕ್ರಮವಾಗಿ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಅತಿಕ್ರಮಣದಾರರು ಮರಗಳನ್ನು ಕಡಿದು ಸ್ಮಶಾನದ ಜಾಗವನ್ನು ಕಬಳಿಸುತ್ತಿದ್ದಾರೆ ಎಂದು ಅಸಮಾಧಾನ ಹೊರ ಹಾಕಿದರು.

ಈ ವಿಚಾರದ ಬಗ್ಗೆ ಸ್ಥಳೀಯ ಪಪಂ ಮತ್ತು ತಹಶೀಲ್ದಾರರಿಗೆ ಹತ್ತಾರು ಬಾರಿ ದೂರಿನ ಮೂಲಕ ಮನವಿ ಮಾಡಿದ್ದು, ಯಾವುದೇ ಪ್ರಯೋಜನವಾಗಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಶೋಷಿತ ಸಮುದಾಯಕ್ಕೆ ಸಂವಿಧಾನಬದ್ಧವಾಗಿ ಸಿಗಬೇಕಾದ ಗೌರವಯುತ ಅಂತ್ಯಸಂಸ್ಕಾರದ ಹಕ್ಕು ಉಲ್ಲಂಘನೆಯಾಗುತ್ತಿದೆ ಎಂದು ಆಕ್ರೋಶ ಹೊರ ಹಾಕಿದರು.

ಖಾನಾಪುರದ ಡೋಂಬಾರಾ ಮಾಳ ಶಾಹೂನಗರದಲ್ಲಿ ಯಾವುದೇ ಅನುಮತಿಯಿಲ್ಲದೇ, ವಸತಿಗೆ ಬಂದು ಎಲ್ಲವನ್ನು ತೆರವುಗೊಳಿಸಲಾಗಿದೆ. ಮರಗಳನ್ನು ಕಡಿಯಲಾಗಿದೆ. ಇದರಿಂದಾಗಿ ಬಡ ಜನರು ತೊಂದರೆಗಿಡಾಗಿದ್ದಾರೆ. ತಹಶೀಲ್ದಾರರಾಗಲಿ ಪೊಲೀಸರಾಗಲಿ ಪಂಚಾಯಿತಿ ಅಧಿಕಾರಿಗಳಾಗಲಿ ಯಾರೂ ಕೂಡ ಬಂದು ಪರಿಶೀಲಿಸಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು 70 ವರ್ಷ ಕಳೆದರೂ ದಲಿತರಿಗೆ ಅನ್ಯಾಯವಾಗುತ್ತಿದೆ ಎಂದರು.

ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಪ್ರಕರಣ ಇತ್ಯರ್ಥಗೊಳಿಸದಿದ್ದರೇ, ಅಧಿಕಾರಿಗಳ ಮನೆ ಮುಂದೆ ಪ್ರತಿಭಟಿಸಬೇಕಾಗುತ್ತದೆ. ಜಿಲ್ಲಾಡಳಿತದ ಕಚೇರಿ ಎದುರು ಶವ ತರುವಂತಹ ಪರಿಸ್ಥಿತಿ ಎದುರಿಸಬೇಕಾಗುತ್ತದೆ ಎಂದರು. ಜಿಲ್ಲಾ ಸಂಘಟನಾ ಸಂಚಾಲಕರು ರಾಜಶೇಖರ ಹಿಂಡಲಗಿ, ಎಸ್‌ಸಿ, ಎಸ್‌ಟಿ ದೌರ್ಜನ್ಯ ಕಮಿಟಿ ಸದಸ್ಯ ಮಲ್ಲೇಶ ಚೌಗಲೆ, ದುರಗಪ್ಪಾ ದಂಡಿನ್ನವರ್, ವಿಠಲ್ ಸಗರಮನ್ನವರ, ಸೇರಿದಂತೆ ಕಾರ್ಯಕರ್ತರು ಇದ್ದರು.



ಅಥ್ಲೆಟಿಕ್ ಕ್ರೀಡಾಕೂಟ ಆಯೋಜನೆ

ಬೆಳಗಾವಿ: ಕೆಎಲ್‌ಇ ಕಾಲೇಜ್ ಆಫ್ ಫಾರ್ಮಸಿ, ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್ ಬೆಳಗಾವಿ, ಸಂಸ್ಥೆಯ ನೇತೃತ್ವದಲ್ಲಿ ನೆಹರು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ವಾರ್ಷಿಕ ಅಥ್ಲೆಟಿಕ್ ಕ್ರೀಡಾಕೂಟಕ್ಕೆ ಸುಚಿತ್ರಾ ಬ್ಯಾನರ್ಜಿ ಕುರುಂಡ್ಕರ, ಧ್ವಜಾರೋಹಣದ ಮೂಲಕ ಕ್ರಿಡಾಕೂಟಕ್ಕೆ ಚಾಲನೆ ನೀಡಿದರು.

ಕ್ರಿಡಾ ಕೂಟಕ್ಕೆ ಮುಖ್ಯ ಅತಿಥಿ ಡಾ. ಸುಚೇತಾ ಬ್ಯಾನರ್ಜಿ ಕುರುಂದಕರ, ಮಾತನಾಡಿದ ಅವರು, ಆರೋಗ್ಯಕರ ಜೀವನಶೈಲಿಯನ್ನು ಕಾಪಾಡಿಕೊಳ್ಳುವಲ್ಲಿ ಕ್ರೀಡೆ ಮತ್ತು ದೈಹಿಕ ಚಟುವಟಿಕೆಯು ಮಹತ್ವದಾಗಿದೆ. ನಿಯಮಿತ ವ್ಯಾಯಾಮವು ದೇಹವನ್ನು ಸದೃಢವಾಗಿರಿಸುತ್ತದೆ, ಒತ್ತಡವನ್ನು ಕಡಿಮೆ ಮಾಡುತ್ತದೆ. ಮಾನಸಿಕ ಶಕ್ತಿಯನ್ನು ಸುಧಾರಿಸುತ್ತದೆ ಎಂದು ಹೇಳಿದರು.

ಅಥ್ಲೆಟಿಕ್ಸ್ ಮೀಟ್ ಅನ್ನು ಯಶಸ್ವಿಯಾಗಿ ಆಯೋಜಿಸಿದ್ದಕ್ಕಾಗಿ ಮತ್ತು ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹಿಸಿದ್ದಕ್ಕಾಗಿ ಅವರು ಕೆಎಲ್‌ಇ ಕಾಲೇಜ್ ಆಫ್ ಫಾರ್ಮಸಿ ಅನ್ನು ಅಭಿನಂದಿಸಿದರು.

ಸಂಶೋಧನೆ ಮತ್ತು ಕ್ರೀಡೆಗಳು ನಿಕಟ ಸಂಬಂಧ ಹೊಂದಿವೆ ಎಂದು ವಿವರಿಸಿದರು. ಎರಡೂ ಕ್ಷೇತ್ರಗಳಲ್ಲಿ, ಯಶಸ್ಸು ಸುಲಭವಾಗಿ ಬರುವುದಿಲ್ಲ, ಅನೇಕ ವೈಫಲ್ಯಗಳು ಇರಬಹುದು, ಆದರೆ ನಿರಂತರ ಅಭ್ಯಾಸ, ತಾಳ್ಮೆ ಮತ್ತು ಕಠಿಣ ಪರಿಶ್ರಮವು ಸುಧಾರಣೆ ಮತ್ತು ಸಾಧನೆಗೆ ಕಾರಣವಾಗುತ್ತದೆ. ವೈಫಲ್ಯವು ವಿದ್ಯಾರ್ಥಿಗಳನ್ನು ನಿರುತ್ಸಾಹಗೊಳಿಸಬಾರದು ಎಂದು ವಿದ್ಯಾರ್ಥಿಗಳಿಗೆ ಕರೆ ಕೊಟ್ಟರು.



ಈ ಕ್ರೀಡಾಕೂಟದಲ್ಲಿ ಓಟದ ಸ್ಪರ್ಧೆಗಳು 100 ಮೀ, 200 ಮೀ ಮತ್ತು 400 ಮೀ, 800 ಮೀ, 1500 ಮೀ, ರಿಲೇಗಳು, ಶಾಟ್-ಪುಟ್, ವಿದ್ಯಾರ್ಥಿಗಳಿಗೆ ಗೊಲ ಎಸೆತ, ಜಾವೆಲಿನ್ ಎಸೆತ, ಉದ್ದ ಜಿಗಿತ ಮತ್ತು ಟ್ರಿಪಲ್ ಜಂಪ್ ಮತ್ತು ಸಿಬ್ಬಂದಿಗೆ ಟ್ರ್ಯಾಕ್ ಸ್ಪರ್ಧೆಗಳು ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಈ ವೇಳೆ ಕೆಎಲ್‌ಇ ಫಾರ್ಮಸಿ ಕಾಲೇಜಿನ ಡಿ. ಫಾರ್ಮ್, ಬಿ. ಫಾರ್ಮ್, ಎಂ. ಫಾರ್ಮ್ ಮತ್ತು ಫಾರ್ಮ್ ಡಿ ವಿದ್ಯಾರ್ಥಿಗಳು ಕಾಲೇಜು ಶಿಕ್ಷಕರು ಸೇರಿದಂತೆ ಮತ್ತಿತರರು ಇದ್ದರು.

ಕಾಯಕ ಗ್ರಾಮ ಪ್ರಗತಿ ಪರಿಶೀಲನಾ ಸಭೆ

ಅಡಹಳ್ಳಿ: ಅಡಹಳ್ಳಿ ಗ್ರಾಪಂ ಕಳೆದ 5 ವರ್ಷದಿಂದ ಸರ್ಕಾರದ ಯೋಜನೆ ಸರಿಯಾಗಿ ಬಳಸಿಕೊಳ್ಳದೇ ಇದ್ದುದರಿಂದ ಹಿಂದುಳಿದ ಗ್ರಾಪಂವಾಗಿದೆ. ಆದರೆ ಇನ್ನು ಮುಂದೆ ಹಿಂದುಳಿದ ಗ್ರಾಪಂಗಳಿಗೆ ಜಿಪಂ, ತಾಪಂ ಹಾಗೂ ರಾಜ್ಯಮಟ್ಟದ ಅಧಿಕಾರಿಗಳನ್ನು ಆಯ್ಕೆ ಮಾಡಿಕೊಂಡು ಗ್ರಾಪಂ ಕಾರ್ಯನಿರ್ವಹಣೆ ಮತ್ತು ಸಭೆಗಳ ಆಯೋಜನೆ ಸೇರಿ ಗ್ರಾಮಗಳ ಸಮಗ್ರ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಗ್ರಾಮಸ್ಥರ ಸಮ್ಮುಖದಲ್ಲಿ ಗ್ರಾಮಸಭೆಯನ್ನು ಆಯೋಜಿಸಿ ಗ್ರಾಮದ ಸರ್ವತೋಮುಖ ಅಭಿವೃದ್ಧಿಗಾಗಿ ಕೇಂದ್ರ, ರಾಜ್ಯ ಸರ್ಕಾರದ ಯೋಜನೆಗಳನ್ನು ರೂಪಿಸಿ ತಾಲೂಕಾ ಅಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಬೇಕು ಎಂದು ಅಭಿವೃದ್ಧಿ ಅಧಿಕಾರಿ ಸಿದ್ದಪ್ಪ ತುಂಗಳಗೆ ಸೂಚನೆ ನೀಡಿದರು.

ಅಡಹಳ್ಳಿ ಗ್ರಾಪಂ ಕಚೇರಿಯಲ್ಲಿ ಹಮ್ಮಿಕೊಂಡ ಕಾಯಕ ಗ್ರಾಮ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಗ್ರಾಮಸ್ಥರ ಅಹವಾಲುಗಳನ್ನು ಆಲಿಸಿದ ಬೆಳಗಾವಿ ಜಿಪಂ ಯೋಜನಾ ನಿರ್ದೇಶಕ ರವೀಂದ್ರ ಬಂಗಾರೆಪ್ಪನವರ ಮಾತನಾಡಿ, ಅಗತ್ಯ ಯೋಜನೆಗಳನ್ನ ರೂಪಿಸಿ ಸಮಸ್ಯೆಗಳನ್ನು ಬಗೆ ಹರಿಸಿ ಈ ಗ್ರಾಪಂಗೆ ಒಳಪಡುವ ಗ್ರಾಮಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದು ಗ್ರಾಮಸ್ಥರಿಗೆ ಭರವಸೆ ನೀಡಿದರು. ಪಿಡಿಒ ಸಿದ್ದಪ್ಪ ತುಂಗಳ ಅವರು ಗ್ರಾಮಸ್ಥರಿಂದ ಬಂದ ಕೆಲವು ಅರ್ಜಿಗಳನ್ನು ವಿವರಿಸಿದರು. ತಾಪಂ ಇಒ ಶಿವಾನಂದ ಕಲ್ಲಾಪುರ, ಕೃಷಿ ಸಹಾಯಕ ನಿರ್ದೇಶಕ ಹಾಗೂ ಗ್ರಾಪಂ ಆಡಳಿತಾಧಿಕಾರಿ ನಿಂಗಪ್ಪ ಬಿರಾದಾರ, ಸಿಬ್ಬಂದಿಗಳಾದ ಜಗದೀಶ ಸೂರ್ಯವಂಶಿ, ಸಂಜು ನಿಕ್ಕಂ ಸೇರಿದಂತೆ ಗ್ರಾಮಸ್ಥರು ಇದ್ದರು.



ಛತ್ರಪತಿ ಶಿವಾಜಿ ನಾಯಕತ್ವ ಸಮಾಜಕ್ಕೆ ದಾರಿದೀಪ

ಸಂಕೇಶ್ವರ: ಛತ್ರಪತಿ ಶಿವಾಜಿ ಮಹಾರಾಜರ ನಾಯಕತ್ವವು ಇಂದಿನ ಸಮಾಜಕ್ಕೆ ದಾರಿದೀಪವಾಗಿದ್ದು, ಇಂದಿನ ಪೀಳಿಗೆಗೆ ಅವರ ಜೀವನಮೌಲ್ಯಗಳು ಅಗತ್ಯವಾಗಿವೆ ಎಂದು ಮರಾಠಾ ಸಮಾಜ ಮುಖಂಡ ಅಮರ ನಲವಡೆ ಹೇಳಿದರು.

ಪಟ್ಟಣದಲ್ಲಿ ಶಿವಜಯಂತಿ-2026ರ ಅಂಗವಾಗಿ ಛತ್ರಪತಿ ಶಿವಾಜಿ ಮಹಾರಾಜ ಸೇವಾ ಸಂಘ ಹಾಗೂ ಕರ್ನಾಟಕ ಬಾಡಿ ಬಿಲ್ಡರ್ಸ್ ಅಸೋಸಿಯೇಷನ್ ಸಹಯೋಗದಲ್ಲಿ ಆಯೋಜಿಸಲಾದ ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆಯ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಈ ಸ್ಪರ್ಧೆ ಯುವಕರಲ್ಲಿ ದೈಹಿಕ ಕ್ಷಮತೆ ಮತ್ತು ಕ್ರೀಡಾಸ್ಫೂರ್ತಿಯನ್ನು ಉತ್ತೇಜಿಸುವ ಉದ್ದೇಶ ಹೊಂದಿದ್ದರಿಂದ ಪ್ರತಿ ವರ್ಷವೂ ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆಯನ್ನು ಆಯೋಜಿಸಲಾಗುವುದು ಎಂದರು.

ಕೊಲ್ಲಾಪುರ ಹಾಗೂ ಬೆಳಗಾವಿ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಿಗಳು ಭಾಗವಹಿಸಿದ್ದು, ಪ್ರೇಕ್ಷಕರಿಂದ ಅಪಾರ ಬೆಂಬಲ ವ್ಯಕ್ತವಾಗಿತ್ತು.

ಸ್ಪರ್ಧೆಯ ನಿರ್ಣಾಯಕರಾಗಿ ಅಂತರಾಷ್ಟ್ರೀಯ ಖ್ಯಾತಿಯ ಅಜಿತ ಸಿದ್ದನ್ನವರ, ರಾಷ್ಟ್ರೀಯ ಮಟ್ಟದ ನಿರ್ಣಾಯಕರಾದ ರಾಜೇಶ ವದಮ, ಸುನೀಲ ರಾವುತ ಹಾಗೂ ಬಿಡಿಬಿಬಿಎ ಅಧ್ಯಕ್ಷ ಗಂಗಾಧರ ಎಂ., ಕಾರ್ಯದರ್ಶಿ ಹೇಮಂತ ಹವಳ ಮತ್ತು ಜಿಟಿಬಿಬಿಎ ಕಾರ್ಯದರ್ಶಿ ರಮೇಶ ಕಳ್ಳಿಮನಿ ಅವರು ಕಾರ್ಯನಿರ್ವಹಿಸಿದರು.



ಬಹುಮಾನ ವಿತರಣೆ

ಬೆಳಗಾವಿ ಮತ್ತು ಕೊಲ್ಹಾಪುರ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಅಜಿಂಕ್ಯ ರೇಡೇಕರ್ ಪ್ರಥಮ ಸ್ಥಾನ ಪಡೆದು ಛತ್ರಪತಿ ಶ್ರೀ ಟ್ರೋಫಿ ಹಾಗೂ 21,000 ರೂ.ಗಳ ನಗದು ಬಹುಮಾನ ತಮ್ಮದಾಗಿಸಿಕೊಂಡರು. ಪ್ರಶಾಂತ ಕನ್ನುಕರ ರನ್ನರ್ ಅಪ್ ಆಗಿ ಹೊರಹೊಮ್ಮಿ 15,000ರೂ.ಗಳ ನಗದು ಬಹುಮಾನ, ಪಾರಿತೋಷಕ ಪಡೆದುಕೊಂಡರು. ಬೆಸ್ಟ್ ಪೋಜರ್ ವಿಜೇತ ಋಷಿಕೇಶ ವಾಘರೆ ಅವರಿಗೆ 5,000 ರೂ.ಗಳ ನಗದು ಬಹುಮಾನ, ಪಾರಿತೋಷಕ ವಿತರಿಸಲಾಯಿತು. ಸಂಕೇಶ್ವರ ಪಟ್ಟಣ ಮಟ್ಟದ ಟಾಪ್ 10 ಸ್ಪರ್ಧೆಯ ವಿಜೇತರಿಗೆ ಧರ್ಮವೀರ ಶ್ರೀ ಟ್ರೋಫಿ ಸೇರಿದಂತೆ ಸುಮಾರು 8 ವಿಭಾಗಗಳಲ್ಲಿ ನಡೆದ ಸ್ಪರ್ಧೆಯ ವಿಜೇತರಿಗೆ ನಗದು ಬಹುಮಾನ ಹಾಗೂ ಪಾರಿತೋಷಕಗಳನ್ನು ವಿತರಿಸಿ ಪ್ರೋತ್ಸಾಹಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖಂಡರಾದ ಶ್ರೀಕಾಂತ ಹತನೂರಿ, ಸುನೀಲ ಪರ್ವತರಾವ, ಶಿವಾನಂದ ಮುಡಶಿ, ಸಂಜಯ ಶಿರಕೋಳಿ, ಅಜಿತ ಕರಜಗಿ, ಜಯಪ್ರಕಾಶ್ ಕರಜಗಿ, ಅಭಿಜಿತ್ ಕುರಣಕರ, ಪವನ ಪಾಟೀಲ, ಪ್ರಮೋದ್ ಹೊಸಮನಿ, ರಾಜೇಶ ಗಾಯಕವಾಡ, ಬಸವರಾಜ ಬಾಗಲಕೋಟಿ, ಸುಭಾಷ್ ಕಾಸರಕರ, ಚಿದಾನಂದ ಕರದನ್ನವರ, ದೀಲಿಪ್ ಹೊಸಮನಿ, ಮಹೇಶ ಹಟ್ಟಿಹೊಳಿ ಸೇರಿದಂತೆ ಹಲವರು ಇದ್ದರು. ಪುರಸಭೆ ಸದಸ್ಯ ಅವಿನಾಶ ನಲವಡೆ, ಮುಖಂಡ ಜಯಪ್ರಕಾಶ್ ಸಾವಂತ ನಿರೂಪಿಸಿ, ವಂದಿಸಿದರು.

ಸೇನಾ ಭರ್ತಿ ಆರಂಭ

ಬೆಳಗಾವಿ: ಬೆಳಗಾವಿಯ ಸೇನಾ ನೇಮಕಾತಿ ಕಚೇರಿಯಿಂದ ಫೆ.13 ರಿಂದ ಏಪ್ರಿಲ್ 1 ರವರೆಗೆ ಅಗ್ನಿಪಥ್ ನೇಮಕಾತಿ ಆನ್‌ಲೈನ್ ನೋಂದಣಿ ಪ್ರಾರಂಭವಾಗಿದೆ.

ಕರ್ನಾಟಕದ ಬೆಳಗಾವಿ, ಬೀದರ್ ಕಲಬುರ್ಗಿ, ಕೊಪ್ಪಳ, ರಾಯಚೂರು, ಯಾದಗಿರಿ ಜಿಲ್ಲೆಗಳ ಪುರುಷ ಸ್ವಯಂಸೇವಕ ಅಭ್ಯರ್ಥಿಗಳಿಗಾಗಿ ಬೆಂಗಳೂರಿನ ಪ್ರಧಾನ ಕಛೇರಿ ನೇಮಕಾತಿ ವಲಯದ ಆಶ್ರಯದಲ್ಲಿ ಸೇನೆಯಲ್ಲಿ ಅಗ್ನಿವೀರ್ ಜನರಲ್ ಡ್ಯೂಟಿ, ಅಗ್ನಿವೀರ್ ಟೆಕ್ನಿಕಲ್, ಅಗ್ನಿವೀರ್ ಟ್ರೇಡ್ಸ್ಮನ್ 10 ನೇ ತರಗತಿ ಪಾಸ್, ಅಗ್ನಿವೀರ್ ಟ್ರೇಡ್ಸ್ಮನ್ 8 ನೇ ತರಗತಿ ಪಾಸ್, ಅಗ್ನಿವೀರ್ ಕ್ಲರ್ಕ್ , ಸ್ಟೋರ್ ಕೀಪರ್ ಟೆಕ್ನಿಕಲ್ ಹುದ್ದೆಗಳ ದಾಖಲಾತಿಗೆ ನೋಂದಣಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

ಆಸಕ್ತ ಅಭ್ಯರ್ಥಿಗಳು ಭಾರತೀಯ ಸೇನೆಯ ವೆಬ್‌ಸೈಟ್ www.joinindianarmy.nic.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ, ನಿರ್ದಿಷ್ಟ ವರ್ಗಗಳಲ್ಲಿ ದಾಖಲಾತಿಗಾಗಿ ವಯಸ್ಸು (17 ವರ್ಷ 6 ತಿಂಗಳು -22 ವರ್ಷ (ಒಂದು ವರ್ಷ ಹೆಚ್ಚಳ), ಶಿಕ್ಷಣ ಅರ್ಹತೆ ಮತ್ತು ಇತರ ಮಾನದಂಡಗಳ ವಿವರಗಳನ್ನು ಬೆಳಗಾವಿಯ ಸೇನಾ ನೇಮಕಾತಿ ಕಚೇರಿಯು ಫೆ.13ರಂದು ಪ್ರಕಟಿಸಿದ ಅಧಿಸೂಚನೆಯಲ್ಲಿ ನೀಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಕಾರ್ಯಾಗಾರ

ಬೆಳಗಾವಿ: ನಗರದಲ್ಲಿರುವ ಕೆ.ಎಲ್.ಇ. ಸಂಸ್ಥೆಯ ಮಹಾವಿದ್ಯಾಲಯದ ಗಣಿತಶಾಸ್ತ್ರ ವಿಭಾಗದ ವತಿಯಿಂದ ಐಕ್ಯೂಎಸಿ ಅಡಿಯಲ್ಲಿ, ಕನಸು, ಸಿದ್ಧತೆ, ಯಶಸ್ಸು ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ವೃತ್ತಿ ಮಾರ್ಗದರ್ಶನ ಕುರಿತು ಒಂದು ದಿನದ ಕಾರ್ಯಾಗಾರ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಬೆಳಗಾವಿಯ ಗಡಿನಾಡು ತರಬೇತಿ ಕೇಂದ್ರದ ಸಂಸ್ಥಾಪಕ, ಮಾರ್ಗದರ್ಶಕ ಲಕ್ಷ್ಮಣ ಮಲ್ಲಪ್ಪ ಅಷ್ಟಗಿ ಅವರ ನೇತ್ರತ್ವದಲ್ಲಿ, ವಿವಿಧ ಸರಕಾರಿ ಹುದ್ದೆಗಳ ಮಾಹಿತಿಯನ್ನು ನೀಡಿದರು. ಆ ಹುದ್ದೆಗಳಿಗೆ ಸ್ಪರ್ಧಿಸಬೇಕಾದರೆ ಆಯಾ ಹುದ್ದೆಗಳಿಗಿರುವ ಪಠ್ಯಕ್ರಮ, ಸಂಪನ್ಮೂಲ ಸಂಗ್ರಹಣೆ ಮತ್ತು ತಯಾರಿಯ ಕುರಿತು ವಿವರಿಸಿದರು. ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಆವಶ್ಯವಿರುವ ಕಡ್ಡಾಯ ಕನ್ನಡ ವಿಷಯದ ಅಧ್ಯಯನದ ಕುರಿತು ವಿವರಿಸಿದರು. ಗಣಿತದ ಜ್ಞಾನವು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ಹೆಚ್ಚು ಸಹಕಾರಿ ಎಂದು ತಿಳಿಸಿದರು.

ಈ ವೇಳೆ ಪ್ರಾಚಾರ್ಯ ಡಾ. ಜ್ಯೋತಿ ಎಸ್. ಕವಳೇಕರ ಅಧ್ಯಕ್ಷೀಯ ನುಡಿಗಳನ್ನಾಡಿದರು. ಸ್ನೇಹಾ ಮತ್ತು ಸೋನಾಲಿ ಪ್ರಾರ್ಥನಾ ಗೀತೆಯನ್ನು ಹಾಡಿದರು. ಪಲ್ಲವಿ ಕುಲಕರ್ಣಿ ಸ್ವಾಗತಿಸಿದರು. ದಿವ್ಯಾ ಸಾಗರೇಕರ ಅವರು ಅತಿಥಿಗಳನ್ನು ಪರಿಚಯಿಸಿದರು.

ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಗಣಿತ ಮತ್ತು ಸಂಖ್ಯಾಶಾಸ್ತ್ರ ಸಂಘದ ಅಧ್ಯಕ್ಷರಾದ ಡಾ. ವಿಜಯಲಕ್ಷ್ಮೀ ಪಾಟೀಲ, ಐಕ್ಯೂಎಸಿ ಸಂಯೋಜಕ ಡಾ. ವಿನಯಕುಮಾರ ಎಂ., ಕಾಲೇಜಿನ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.



ಕಿರುಸುದ್ದಿ

ಇಂದಿನಿಂದ ಪುಣ್ಯಾರಾಧನೆ

ಬೀಳಗಿ: ತಾಲೂಕಿನ ಗಿರಿಸಾಗರ ಗ್ರಾಮದ ಕಲ್ಯಾಣ ಹಿರೇಮಠದ ಮಹಾತಪಸ್ವಿ ಲಿಂ. ಮುಕ್ತಿನಾಥ ಶಿವಾಚಾರ್ಯ ಸ್ವಾಮೀಜಿ 38ನೇ ಪುಣ್ಯಾರಾಧನೆಯ ಫೆ.23, 24 ರಂದು ಜರುಗಲಿದೆ. ಫೆ.23ರಂದು ರಾತ್ರಿ 9 ಗಂಟೆಯಿಂದ ಅಹೋರಾತ್ರಿ ಶಿವಭಕ್ತರಿಂದ ಶಿವಭಜನೆಗಳು ಜರುಗಲಿವೆ. ಫೆ.24ರಂದು ಬೆಳಗ್ಗೆ 6.30ಕ್ಕೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಮಹಾಪ್ರಸಾದ ಜರಗುವುದು. ಸಂಜೆ 6–30 ಕ್ಕೆ ಸಂಗನಬಸವ ಶಿವಾಚಾರ್ಯ ವಿದ್ಯಾಭಿವೃದ್ಧಿ ಸಂಸ್ಥೆಯ ಮುಕ್ತಿನಾಥ ಶಿವಾಚಾರ್ಯ ಪೂರ್ವ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಮತ್ತು ಜಿ. ಜಿ. ಯಳ್ಳಿಗುತ್ತಿ ಪ್ರೌಢ ಶಾಲೆಯ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ, ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗಿರಿಸಾಗರ ಕಲ್ಯಾಣ ಹಿರೇಮಠದ ಪೀಠಾಧಿಪತಿ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ ಇಂದು

ಬಾದಾಮಿ: ಮತಕ್ಷೇತ್ರದ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರು ಫೆ.23ರಂದು ಸೋಮವಾರ ತಾಲೂಕಿನ ವಿವಿಧ ಗ್ರಾಮದಲ್ಲಿ ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಲಿದ್ದಾರೆ. ಸೋಮವಾರ ಬೆಳಗ್ಗೆ 10 ಗಂಟೆಗೆ ತಾಲೂಕಿನ ಮಲ್ಲಾಪೂರ ಎಸ್.ಎಲ್. ಗ್ರಾಮದಲ್ಲಿ ರೂ.10 ಲಕ್ಷ ವೆಚ್ಚದಲ್ಲಿ ಬೀರಲಿಂಗೇಶ್ವರ ದೇವಸ್ಥಾನದ ಹತ್ತಿರ ಮತ್ತು ರೂ.5 ಲಕ್ಷ ವೆಚ್ಚದಲ್ಲಿ ವೀರಭದ್ರೇಶ್ವರ ದೇವಸ್ಥಾನದ ಹತ್ತಿರ ಸಮುದಾಯ ಭವನದ ಭೂಮಿಪೂಜೆ ನೆರವೇರಿಸುವರು. ನಂತರ 11 ಗಂಟೆಗೆ ಲಖಮಾಪೂರ ಗ್ರಾಮದಲ್ಲಿ ರೂ.14.50 ಲಕ್ಷ ವೆಚ್ಚದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನ ಕೊಠಡಿಯ ಉದ್ಘಾಟನೆ ನೆರವೇರಿಸುವರು. ಸಂಜೆ 4 ಗಂಟೆಗೆ ತಾಲೂಕಿನ ಕಾಕನೂರ ಗ್ರಾಮದಲ್ಲಿ ರೂ.20 ಲಕ್ಷ ವೆಚ್ಚದಲ್ಲಿ ಮುಖ್ಯ ರಸ್ತೆಯಿಂದ ಕಾಕಮ್ಮದೇವಿ ದೇವಸ್ಥಾನ ಮತ್ತು ಸಿದ್ಧಾರೂಢ ಮಠದ ಹತ್ತಿರ ಸಿಸಿ ರಸ್ತೆ ನಿರ್ಮಾಣ ಭೂಮಿಪೂಜೆ ನೆರವೇರಿಸುವರು. ಸಂಜೆ 5 ಗಂಟೆಗೆ ಚಿಮ್ಮನಕಟ್ಟಿ ಗ್ರಾಮದಲ್ಲಿ ರೂ.10 ಲಕ್ಷ ವೆಚ್ಚದಲ್ಲಿ ಮುಖ್ಯ ರಸ್ತೆಯಿಂದ ಮಸೀದಿಯವರೆಗೆ ಸಿಸಿ ರಸ್ತೆ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಲಿದ್ದಾರೆ ಎಂದು ಶಾಸಕರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

ಕಸಾಪ ತಾಲೂಕು ಅಧ್ಯಕ್ಷ ಸ್ಥಾನಕ್ಕೆ ಘಂಟಿ ರಾಜೀನಾಮೆ



ಗುಳೇದಗುಡ್ಡ: ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಡಾ.ಎಸ್.ಎಚ್. ಘಂಟಿಯವರು ತಮ್ಮ ಕಸಾಪ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಅವರು ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿ, ವೈಯಕ್ತಿಕ ಕಾರಣಗಳಿಂದ ಕಸಾಪ ತಾಲೂಕು ಅಧ್ಯಕ್ಷ ಸ್ಥಾನಕ್ಕೆ ಸ್ವ ಇಚ್ಛೆಯಿಂದ ರಾಜೀನಾಮೆ ನೀಡುತ್ತಿದ್ದೇನೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ನಿರ್ಮಾಣ ಹಂತದ ಸ್ಮಶಾನಕ್ಕೆ ತಾಪಂ ಇಒ ಭೇಟಿ



ಕಲಾದಗಿ: ಕಳೆದ ಅನೇಕ ವರ್ಷಗಳಿಂದ ಅವ್ಯವಸ್ಥೆಯ ಆಗರವಾಗಿದ್ದ, ಇತ್ತೀಚಿಗೆ ಸುಸಜ್ಜಿತವಾಗಿ ನಿರ್ಮಾಣಗೊಳ್ಳುತ್ತಿರುವ ಗ್ರಾಮದ ಅಂಕಲಗಿ ರಸ್ತೆಯಲ್ಲಿರುವ ಹಿಂದೂ ಚಿತಾಗಾರ ಸ್ಮಶಾನಕ್ಕೆ ಬಾಗಲಕೋಟೆ ತಾಪಂ ಇಒ ಸುಭಾಷ ಸಂಪಗಾವಿ ಭೇಟಿ ನೀಡಿ ಕಾಮಗಾರಿಯ ಪ್ರಗತಿ ಪರಿಶೀಲಿಸಿದರು. ಸಂಜೆ ಸ್ಥಳಕ್ಕೆ ಆಗಮಿಸಿದ ಅವರು ತಾಲೂಕು ಪಂಚಾಯತ್‌ನ ಅಡಿಯಲ್ಲಿ 5 ಲಕ್ಷ ರೂಗಳ ಅನುದಾನದಲ್ಲಿ ಸುಸಜ್ಜಿತವಾಗಿ ಬಹುತೇಕವಾಗಿ ನಿರ್ಮಾಣಗೊಂಡಿರುವ ಚಿತಾಗಾರ ಸ್ಮಶಾನದ ಕಾಮಗಾರಿಯನ್ನು, ಅದರ ಆವರಣದಲ್ಲಿನ ಕಾಮಗಾರಿಯನ್ನು ಬಹುಹೊತ್ತು ಪರಿಶೀಲಿಸಿ ಮೆಚ್ಚುಗೆ ವ್ಯಕ್ತಮಾಡಿದ ಅವರು ಇನ್ನೊಂದಿಷ್ಟು ಸಲಹೆ ಸೂಚನೆಗಳನ್ನು ಗುತ್ತಿಗೆದಾರರಿಗೆ ನೀಡಿದರು. ಶೀಘ್ರವೇ ಸದರಿ ರುದ್ರಭೂಮಿಯಲ್ಲಿ ನೀರಿನ ವ್ಯವಸ್ಥೆಗಾಗಿ ಸಿಸ್ಟಮ್‌ವೊಂದನ್ನು ನಿರ್ಮಿಸಲು, ಕಾಂಕ್ರೀಟ್ ಕುರ್ಚಿ ಹಾಗೂ ಸಮೀಪದಲ್ಲಿರುವ ಹರಣಶಿಕಾರಿ ಜನಾಂಗದ ರುದ್ರಭೂಮಿಗೆ ಬೆಳಕಿನ ವ್ಯವಸ್ಥೆಗಾಗಿ ಸೋಲಾರ ಹೈಮಾಸ್ಕ್ ದೀಪವೊಂದನ್ನು ಅಳವಡಿಸುವಂತೆ ಸ್ಥಳದಲ್ಲಿದ್ದ ಪಿಡಿಒ ಖಾದರ ಮುಲ್ಲಾ ಅವರಿಗೆ ಸೂಚಿಸಿದರು. ಗುತ್ತಿಗೆದಾರರಾದ ಅರ್ಜುನ ಮಾದರ ಹಾಗೂ ಪರುಶುರಾಮು ಬಂಟನೂರ ಇದ್ದರು.



ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಮೆರವಣಿಗೆ ವೇಳೆ ಕಲ್ಲು ತೂರಾಟದಲ್ಲಿ ಗಾಯಗೊಂಡ ಕಾರ್ಯಕರ್ತ ಪ್ರಕಾಶ ಅರಕೇರಿ ಅವರನ್ನು ಚರಂತಿಮಠ ವಸ್ತ್ರದ ಫೌಂಡೇಶನ್ ಅಧ್ಯಕ್ಷ ಮಲ್ಲಿಕಾರ್ಜುನ ಚರಂತಿಮಠ ಆಸ್ಪತ್ರೆಯಲ್ಲಿ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ಆತ್ಮಸ್ಥೈರ್ಯ ತುಂಬಲಾಯಿತು. ಮುಖಂಡರಾದ ವಿಜಯ ಸುಲಾಖೆ, ಗುರು ಅನಗವಾಡಿ, ಶಿವು ಮೇಲ್ನಾಡ, ಬಸವರಾಜ ಪಾತ್ರೋಟಿ, ಹರೀಶ ರಂಗರೇಜ ಹಾಗೂ ರಾಜು ಮೂಲಿಮನಿ ಇದ್ದರು.

ಸರ್ವಜ್ಞನ ವಚನಗಳು ಇಂದಿಗೂ ಪ್ರಸ್ತುತ

ಬೀಳಗಿ: ಸಂತರು, ಶರಣರು ಹಾಗೂ ಮೇಧಾವಿಗಳನ್ನು ಕೇವಲ ಒಂದು ಜಾತಿಗೆ ಸೀಮಿತಗೊಳಿಸುತ್ತಿರುವುದು ವಿಷಾದನೀಯ. ಆದರೆ ಕವಿ ಸರ್ವಜ್ಞ ತನ್ನ ತ್ರಿಪದಿಗಳ ಮೂಲಕ ಜನಮಾನಸದಲ್ಲಿ ಅಚ್ಚಳಿಯದ ಪ್ರಭಾವ ಬೀರಿದ್ದಾರೆ ಎಂದು ಶಾಸಕ ಜೆ.ಟಿ.ಪಾಟೀಲ ಹೇಳಿದರು. ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದ ಸಭಾಭವನದಲ್ಲಿ ತಾಲೂಕು ಆಡಳಿತ, ತಾಪಂ, ಪಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂತ ಕವಿ ಸರ್ವಜ್ಞ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕರ್ನಾಟಕದಲ್ಲಿ ಸರ್ವಜ್ಞರು, ತಮಿಳುನಾಡಿನಲ್ಲಿ ತಿರುವಳ್ಳುವರ್ ಅವರು ಪ್ರಸಿದ್ಧರು. ಸರ್ವಜ್ಞರು ಸುಮಾರು 7,100 ವಚನಗಳನ್ನು ರಚಿಸುವ ಮೂಲಕ ಸಮಾಜದ ಮೌಢ್ಯ ಹಾಗೂ ಅಂಕುಡೊಂಕುಗಳನ್ನು ತಿದ್ದುವ ಕೆಲಸ ಮಾಡಿದ್ದಾರೆ. ಮನುಷ್ಯನ ಕಣ್ಣು ತೆರೆಸುವ ಶಕ್ತಿ ಅವರ ವಚನಗಳಿಗಿದೆ ಎಂದರು. ಚಿಕ್ಕಾಲಗುಂಡಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಎಸ್.ಕೆ.ಬಂಗಾರಿ ಉಪನ್ಯಾಸ ನೀಡಿ, ಕನ್ನಡ ಭಾಷೆಗೆ ಮತ್ತು ಸಾಹಿತ್ಯಕ್ಕೆ ವಿಶೇಷ ಶಕ್ತಿ ನೀಡಿದವರು ಸರ್ವಜ್ಞರು. ಸಮ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಿದ ಅವರ ತ್ರಿಪದಿಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ತಹಶೀಲ್ದಾರ್ ವಿನೋದ ಹತ್ತಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್.ಆದಾಪುರ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಿವಾಸ ಪಾಟೀಲ, ಡಾ.ಸಂತೋಷಕುಮಾರ ವೈದ್ಯ, ಮಲ್ಲಿಕಾರ್ಜುನ ಹೊಸಮನಿ, ಡಾ.ಜಿ.ಬಿ.ಕುಂಬಾರ, ವಿ.ಎಸ್.ಕುಂಬಾರ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಮಾಜದ ಮುಖಂಡರು ಉಪಸ್ಥಿತರಿದ್ದರು.



ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದ ಸಭಾಭವನದಲ್ಲಿ ತಾಲೂಕು ಆಡಳಿತ, ತಾಪಂ, ಪಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂತ ಕವಿ ಸರ್ವಜ್ಞ ಜಯಂತ್ಯುತ್ಸವ ಕಾರ್ಯಕ್ರಮ ನಡೆಯಿತು. ಶಾಸಕ ಜೆ.ಟಿ.ಪಾಟೀಲ, ಚಿಕ್ಕಾಲಗುಂಡಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಎಸ್.ಕೆ.ಬಂಗಾರಿ, ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್.ಅದಾಪುರ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಿವಾಸ ಪಾಟೀಲ, ಡಾ.ಸಂತೋಷಕುಮಾರ ವೈದ್ಯ, ಮಲ್ಲಿಕಾರ್ಜುನ ಹೊಸಮನಿ, ಡಾ.ಜಿ.ಬಿ.ಕುಂಬಾರ, ವಿ.ಎಸ್.ಕುಂಬಾರ ಉಪಸ್ಥಿತರಿದ್ದರು.

ಧರ್ಮ ಜಾಗೃತಿ ಕಾರ್ಯಕ್ರಮ | ಗುರುಪ್ರಸಾದಗೌಡ ಸಲಹೆ
ಹಿಂದೂ ಧರ್ಮ ರಕ್ಷಣೆಯಲ್ಲಿ ತೊಡಗಿಕೊಳ್ಳಿ

ಮಹಾಲಿಂಗಪುರ: ಮತಾಂತರ, ಲವ್ ಜಿಹಾದ್ ನಂತಹ ಕುಕೃತ್ಯಗಳಿಂದ ಹಿಂದೂ ಧರ್ಮ ತುಂಬಾ ಸಂಕಷ್ಟದಲ್ಲಿದೆ. ಈಗ ಹಿಂದುಗಳು ಎಚ್ಚೆತ್ತುಕೊಳ್ಳದೇ ಧರ್ಮ ರಕ್ಷಣೆಯಲ್ಲಿ ತೊಡಗದೆ ಇದ್ದರೆ ಮುಂದೆ ನಮಗಾಗಿ ಎಲ್ಲಿಯೂ ಜಾಗವಿರುವುದಿಲ್ಲ ನಾವು ಬಂಗಾಳಕೊಲ್ಲಿ ಅಥವಾ ಅರಬ್ಬಿ ಸಮುದ್ರವನ್ನೆ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಇದುವರೆಗೂ ಭಾರತ ಹಿಂದೂ ರಾಷ್ಟ್ರವೆಂದು ಘೋಷಣೆ ಮಾಡದಿರುವುದು ದೊಡ್ಡ ದುರಂತ ಎಂದು ಸನಾತನ ಹಿಂದೂ ಜನಜಾಗೃತಿ ಸಂಸ್ಥೆಯ ಗುರುಪ್ರಸಾದಗೌಡ ಹೇಳಿದರು.

ಸ್ಥಳೀಯ ಸಿದ್ಧಾರೂಢ ಮಠದಲ್ಲಿ ಸನಾತನ ಸಂಸ್ಥೆ ಮತ್ತು ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಜರುಗಿದ ಧರ್ಮ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕ್ರೈಸ್ತ ರಾಷ್ಟ್ರದಲ್ಲಿ ಹೋಗಿ ಕ್ರೈಸ್ತ ಧರ್ಮದ ವಿರುದ್ಧ, ಮುಸ್ಲಿಂ ರಾಷ್ಟ್ರದಲ್ಲಿ ಮುಸ್ಲಿಂ ಧರ್ಮದ ವಿರುದ್ಧ ಮಾತನಾಡಲು ಸಾಧ್ಯವಿಲ್ಲ ಆದರೆ ಭಾರತದಲ್ಲಿ ಹಿಂದೂ ಧರ್ಮದ ವಿರುದ್ಧ ಮತ್ತು ಹಿಂದೂ ದೈವಗಳ ವಿರುದ್ಧ ಮಾತನಾಡುವುದು ಬಹಳ ಸುಲಭ ಇದರ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುವುದಿಲ್ಲ. ಹಿಂದೂಗಳಿಗೆ ಧರ್ಮ ಶಿಕ್ಷಣದ ಕೊರತೆ ಇರುವುದೇ ಇದಕ್ಕೆ ಕಾರಣ ಬಹುಸಂಖ್ಯಾತರಾದ ಹಿಂದೂ ದೇಶ ಭಾರತದಲ್ಲಿ ಹಿಂದೂ ಧರ್ಮ ಸಂಕಷ್ಟದಲ್ಲಿದೆ ಕಾರಣ ಕೇವಲ ಶೇ.ಹತ್ತರಷ್ಟು ಜನ ಧರ್ಮಾಚರಣೆ ಮತ್ತು ರಕ್ಷಣೆಯಲ್ಲಿ ತೊಡಗಿದ್ದರೆ ಶೇ.ಹತ್ತರಷ್ಟು ಜನ ಧರ್ಮ ಹಾಳು ಮಾಡುವವರಿದ್ದಾರೆ. ಆದರೆ ಶೇಕಡ 80ರಷ್ಟು ಹಿಂದುಗಳು ಧರ್ಮದ ಬಗ್ಗೆ ಯಾವುದೇ ಕಾಳಜಿ ಇಲ್ಲದೆ ಸ್ವಾರ್ಥದಲ್ಲಿ ಬದುಕುತ್ತಿದ್ದಾರೆ. ಹೀಗಾದರೆ ಧರ್ಮ, ದೇಶ ಉಳಿಯಲಾರದು, ಧರ್ಮಕ್ಕೆ ಮೊದಲೇ ಆದ್ಯತೆ ನೀಡಿದರೆ ಧರ್ಮ, ದೇಶ ಉಳಿಯುತ್ತದೆ ಎಂದರು.

ರಾಜೇಶ್ವರಿ ಆಸಂಗಿ, ರವಿ ಜವಳಗಿ, ಮಹಾಲಿಂಗಪ್ಪ ಕಂಕಣವಾಡಿ, ಸಪನಾ ಅನಿಗೋಳ, ವಿಜಯಲಕ್ಷ್ಮಿ ಕುಳ್ಳೊಳ್ಳಿ, ಸುವರ್ಣ ಆಸಂಗಿ, ಗೌರಿ ಮಣ್ಣಯ್ಯನವರಮಠ, ಅರ್ಜುನ ಪವಾರ, ಪವನ ಶಿರೋಳ, ರಾಘು ಪವಾರ, ಬಸವರಾಜ ಮುರಾರಿ, ಹನುಮಂತ ಮಾದರ, ಮಹೇಶ ಹುಬ್ಬಳ್ಳಿ, ಪ್ರಜ್ವಲ ಯಾದವಾಡ, ಮಲ್ಲಪ್ಪ ಚಿಚಖಂಡಿ, ಮಹಾಲಿಂಗ ಜಮಖಂಡಿ ಇತರರಿದ್ದರು.



ಧರ್ಮ, ಮೋಕ್ಷ ಸಂಪಾದನೆಗೆ ಗಮನಹರಿಸಿ

ಅಲ್ಪಸಂಖ್ಯಾತರ ಧಾರ್ಮಿಕ ಶಿಕ್ಷಣಕ್ಕೆ ಸಿಗುವ ಸವಲತ್ತುಗಳು ಹಿಂದೂ ಧರ್ಮಕ್ಕೆ ಸಿಗಬೇಕು. ಬರೀ ಅರ್ಥ, ಕಾಮ ಸಂಪಾದನೆಯಲ್ಲಿ ತೊಡಗಿರುವ ಹಿಂದುಗಳು ಧರ್ಮ ಮತ್ತು ಮೋಕ್ಷ ಸಂಪಾದನೆಯತ್ತ ಗಮನಹರಿಸಬೇಕು. ಉತ್ತಮ ಸಮಾಜ ನಿರ್ಮಾಣ, ಹಿಂದೂ ರಾಷ್ಟ್ರ ನಿರ್ಮಾಣಕ್ಕಾಗಿ ಭಗವಂತನ ಉಪಾಸನೆಯಿಂದ ಶಕ್ತಿ ವೃದ್ಧಿಸಿಕೊಳ್ಳಬೇಕು. ಕೃಷ್ಣ ಮಂತ್ರ, ಕುಲದೈವ ಮತ್ತು ಗುರುದೇವ ದತ್ತ ಮಂತ್ರಗಳ ಜಪದಿಂದ ಸಾತ್ವಿಕ ಶಕ್ತಿಯ ಆವಾಹನೆಯಾಗಿ ಧರ್ಮ, ದೇಶ ಉಳಿಸಲು ಸಾಧ್ಯ. ಆದ್ದರಿಂದ ಪ್ರತಿಯೊಬ್ಬ ಹಿಂದೂ ದಿನಕ್ಕೆ ಒಂದೆರಡು ಗಂಟೆಯಾದರೂ ನಾಮ ಜಪದಲ್ಲಿ ತೊಡಗಬೇಕು.

ಗುಣಮಟ್ಟದ ಶಿಕ್ಷಣ ನೀಡುವುದೇ ನಮ್ಮ ಗುರಿ

ಬಾದಾಮಿ: ನಮ್ಮ ತಂದೆಯವರ ಕಾಲದಿಂದಲೂ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಸಂಸ್ಥೆ ಆರಂಭಿಸಲಾಗಿದ್ದು, ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದು ನಮ್ಮ ಗುರಿಯಾಗಿದೆ ಎಂದು ವೀರಶೈವ ಪ್ರಗತಿಶೀಲ ಸಂಘ, ಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಯ ಅಧ್ಯಕ್ಷ, ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ ಹೇಳಿದರು.

ಭಾನುವಾರ ಪಟ್ಟಣದ ವೀರಶೈವ ಪ್ರಗತಿಶೀಲ ಸಂಘದ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಾಲಾ ವಾರ್ಷಿಕೋತ್ಸವ–2026 ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಮಕ್ಕಳ ಶಿಕ್ಷಣದ ಉದ್ದೇಶದಿಂದ ಒಂದರಿಂದ ಪದವಿ ಕಾಲೇಜಿನವರೆಗೆ ಶಾಲೆ, ಕಾಲೇಜು ಪ್ರಾರಂಭಿಸಲಾಗಿದೆ. ಇನ್ನು ಬೇರೆ ಬೇರೆ ವಿಭಾಗಗಳನ್ನು ಪ್ರಾರಂಭಿಸಲಾಗುವುದು. ಗುಣಮಟ್ಟದ ಶಿಕ್ಷಣ ಮಕ್ಕಳಿಗೆ ನೀಡುವಲ್ಲಿ ಶಿಕ್ಷಕರಷ್ಟೇ ಪಾತ್ರ ಪಾಲಕರದ್ದು ಇದೆ. ಇದಕ್ಕೆ ಎಲ್ಲರೂ ಸಹಕರಿಸಬೇಕು. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಉತ್ತಮ ಪ್ರಜೆಗಳನ್ನಾಗಿ ರೂಪಿಸಬೇಕು ಎಂದು ಹೇಳಿದರು.

ಮಾಜಿ ಪುರಸಭೆ ಅಧ್ಯಕ್ಷೆ ಶಾಂತಾದೇವಿ ಪಟ್ಟಣಶೆಟ್ಟಿ, ಸಂಸ್ಥೆಯ ನಿರ್ದೇಶಕ ಕಲ್ಲಪ್ಪ ಪಟ್ಟಣಶೆಟ್ಟಿ ಮಾತನಾಡಿದರು. ಪದವಿ ಕಾಲೇಜಿನ ಪ್ರಾಚಾರ್ಯ ಮಂಜುನಾಥ ಪತ್ತಾರ, ಪ್ರೌಢಶಾಲೆಯ ಮುಖ್ಯಶಿಕ್ಷಕ ರಮೇಶ ಆರಕೇರಿ, ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಪಿ.ಎಚ್.ಆಸೂಟಿ, ಆಂಗ್ಲ ಮಾಧ್ಯಮ ಶಾಲೆಯ ಮುಖ್ಯಶಿಕ್ಷಕ ಎಲ್.ಎಚ್.ಪಾಟೀಲ ಸೇರಿದಂತೆ ಸಹಶಿಕ್ಷಕರು, ಪ್ರಾಧ್ಯಾಪಕರು, ಸಿಬ್ಬಂದಿ, ಮಕ್ಕಳು ಹಾಜರಿದ್ದರು. ನಂತರ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.



ಕಲ್ಲು ತೂರಾಟ ಘಟನೆ ಖಂಡನೀಯ



ಲೋಕಾಪುರ: ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಅಂಗವಾಗಿ ನಡೆದ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟ ಘಟನೆ ಅತ್ಯಂತ ಖಂಡನೀಯ. ಈ ಘಟನೆಯಲ್ಲಿ ಯಾರೇ ಭಾಗಿಯಾಗಿದ್ದರೂ ಅವರು ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿ ಮುಖಂಡ ಲೋಕಣ್ಣ ಕತ್ತಿ ಹೇಳಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡುವ ಅವರು, ಇಂತಹ ಘಟನೆಯಲ್ಲಿ ಯಾರೇ ಭಾಗಿಯಾಗಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳಲೇಬೇಕು. ಜಿಲ್ಲಾಡಳಿತ ಸೂಕ್ತ ಮುಂಜಾಗ್ರತೆ ವಹಿಸಬೇಕು. ಎಲ್ಲ ಜಾತಿ–ಧರ್ಮದವರು ಸಹಬಾಳ್ವೆಯಿಂದ ಬಾಳುವ ಬಾಗಲಕೋಟೆಯಲ್ಲಿ ಇಂತಹ ಘಟನೆ ನಡೆದಿರುವುದು ಖೇದಕರ ಎಂದಿದ್ದಾರೆ. ಇಂತಹ ಘಟನೆಗಳನ್ನು ಯಾರು ರಾಜಕೀಯಕ್ಕೆ ಬಳಸಿಕೊಳ್ಳದೆ ಶಾಂತಿ ಕಾಪಾಡಲು ಸಹಕಾರ ನೀಡಬೇಕು ಎಂದರು.

ಫೆ.28ರಿಂದ ಮನೆಯಲ್ಲಿ ಟಿವಿ, ಮೊಬೈಲ್ ಸ್ಥಗಿತಗೊಳಿಸಿ

ಬಾದಾಮಿ: ಫೆ.28ರಿಂದ ಮಾರ್ಚ್ ತಿಂಗಳಲ್ಲಿ ಒಂದರಿಂದ 12ನೇ ತರಗತಿಯವರೆಗೆ ಪರೀಕ್ಷೆಗಳು ನಡೆಯುತ್ತಿರುವುದರಿಂದ ಪ್ರತಿ ದಿನ ಸಂಜೆ 7ರಿಂದ ರಾತ್ರಿ 10 ಗಂಟೆಯುವರೆಗೆ ಮನೆಯಲ್ಲಿ ಟಿವಿ, ಮೊಬೈಲ್ ಸ್ಥಗಿತಗೊಳಿಸಿ, ಪರೀಕ್ಷೆಯಲ್ಲಿ ತಾಲೂಕಿನ ಫಲಿತಾಂಶ ಹೆಚ್ಚಿಸಲು ಸಹಕರಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ಪೆಟ್ಲೂರ ಪಾಲಕರಲ್ಲಿ ಮನವಿ ಮಾಡಿದ್ದಾರೆ.

ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಗುರಿ ಇರಲಿ

ಬೀಳಗಿ: ವಿದ್ಯಾರ್ಥಿ ಜೀವನದಲ್ಲಿ ನಿರ್ದಿಷ್ಟ ಗುರಿ ಇರಬೇಕು. ನಿರಂತರ ಪರಿಶ್ರಮದಿಂದ ಗುರಿ ತಲುಪಲು ಸಾಧ್ಯ. ಜೀವನದಲ್ಲಿ ಸಾಧನೆ ಮಾಡುವುದು ಮುಖ್ಯವಾಗಿದ್ದು, ಸಾಧನೆ ಮಾಡದಿದ್ದರೆ ಜೀವನಕ್ಕೆ ಅರ್ಥವಿಲ್ಲ ಎಂದು ರಾಮಲಿಂಗೇಶ್ವರ ವಿದ್ಯಾ ವರ್ಧಕ ಸಂಘದ ಅಧ್ಯಕ್ಷ ಚರಂತಿಮಠದ ವೀರಸಂಗಮೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ಕುಂದರಗಿ ಗ್ರಾಮದ ರಾಮಲಿಂಗೇಶ್ವರ ವಿದ್ಯಾ ವರ್ಧಕ ಸಂಘದ ರಾಮಲಿಂಗೇಶ್ವರ ಸ್ವತಂತ್ರ ಪದವಿ ಪೂರ್ವ ಕಾಲೇಜಿನ 2025–26ನೇ ಸಾಲಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಶುಭಕೋರುವ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ರಾಮಲಿಂಗೇಶ್ವರ ವಿದ್ಯಾ ವರ್ಧಕ ಸಂಘದ ಚೇರಮನ್ ಬಸವರಾಜ ಖೋತ ಅಧ್ಯಕ್ಷತೆವಹಿಸಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಸ್ತು, ಸಂಯಮ, ಸಮಯಪ್ರಜ್ಞೆ ಮುಖ್ಯವಾಗಿದೆ. ಯುವ ಸಮೂಹ ದುಶ್ಚಟಗಳಿಗೆ ಬಲಿಯಾಗ ದೇ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಆರೋಗ್ಯವಾಗಿದ್ದರೆ ಮಾತ್ರ ಸಾಧನೆ ಮಾಡಬಹುದು ಎಂದು ಹೇಳಿದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ. ಸಾವಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಮೊಬೈಲ್ ಪ್ರತಿಭೆಯನ್ನು ಹೊಸಕಿ ಹಾಕುತ್ತದೆ. ಆದ್ದರಿಂದ ಮೊಬೈಲ್ ಗೀಳಿನಿಂದ ಹೊರಬಂದು ಪುಸ್ತಕದ ಗೆಳೆತನ ಮಾಡಬೇಕು. ಸಮಯವನ್ನು ನಾವು ಗೌರವಿಸಿದರೆ ಸಮಯ ಖಂಡಿತವಾಗಿಯೂ ನಮ್ಮನ್ನು ಗೌರವಿಸುತ್ತದೆ ಎಂದರು. ದೇಶದ ಸಂಪತ್ತಾಗಿರುವ ಯುವ ಸಮೂಹ ಸಂಸ್ಕಾರ, ಸಂಸ್ಕೃತಿಕೊರತೆಯಿಂದ ದುಶ್ಚಟಗಳಿಗೆ ಬಲಿಬಿದ್ದು ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿರುವರು. ಪಾಲಕರು ಮನೆಯಲ್ಲಿ, ಶಿಕ್ಷಕರು ತರಗತಿ ಕೊಠಡಿಯಲ್ಲಿ ಸಂಸ್ಕಾರ, ಸಂಸ್ಕೃತಿ, ದೇಶಭಕ್ತಿ ಕುರಿತು ಅರಿವು ಮೂಡಿಸಬೇಕೆಂದು ಹೇಳಿದರು.

ರಾಮಲಿಂಗೇಶ್ವರ ವಿದ್ಯಾವರ್ಧಕ ಸಂಘದ ನಿರ್ದೇಶಕ ಡಾ.ಎ.ಐ.ಅಕ್ಕಿ ಮಾತನಾಡಿ, ವಿದ್ಯಾರ್ಥಿಗಳಿಗೆ ರ್‍ಯಾಂಕ್ ಪಡೆಯುವ ಆಸೆ, ಆಕಾಂಕ್ಷೆ, ಮಹಾತ್ವಾಕಾಂಕ್ಷೆ ಇರಬೇಕು. ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದಾಗ ಉತ್ತಮ ಫಲಿತಾಂಶ ಬಂದು, ಪ್ರತಿಫಲ ದೊರೆಯುತ್ತದೆ ಎಂದರು.

ಪ್ರಭಾರ ಪ್ರಾಚಾರ್ಯ ಕೆ.ಪಿ.ರಾಜಮನಿ ಮಾತನಾಡಿದರು. ರಾಮಲಿಂಗೇಶ್ವರ ವಿದ್ಯಾ ವರ್ಧಕ ಸಂಘದ ನಿರ್ದೇಶಕ ಜಿ.ಎಂ.ಕಟಗಿ, ಆರ್.ಎಚ್.ಗಾಜಪ್ಪನವರ, ಬಿ.ವೈ.ಗೌಡ್ರ, ಉಪನ್ಯಾಸಕರಾದ ಎನ್.ಟಿ.ರಾಠೋಡ, ಪ್ರಶಾಂತ ಚೋಳನ್ನವರ, ಎಂ.ಎ.ನದಾಫ, ಟಿ.ಎಂ. ಬೆಂಗಳೂರು, ಎಂ.ವೈ.ತಳವಾರ, ಬಿ.ಕೆ. ತಳಗೇರಿ ಉಪಸ್ಥಿತರಿದ್ದರು.



ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಲಿ: ಶಾಸಕ ಕಾಶಪ್ಪನವರ

ಹುನಗುಂದ: ಶಿಕ್ಷಣ ಎನ್ನುವುದು ನಿಂತ ನೀರಾಗಬಾರದು ಅದು ಸದಾ ಹರಿಯುತ್ತಿರುವ ನೀರಾಗಬೇಕು. ಎನ್ನುವ ದೂರದೃಷ್ಟಿಯಿಂದ 11 ವರ್ಷದ ಹಿಂದೆ ಆರಂಭವಾದ ಈ ಶಾಲೆ ಇಂದು ಸ್ವಂತ ಕಟ್ಟಡವನ್ನು ಹೊಂದಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ ಎಂದು ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿದರು.



ತಾಲೂಕಿನ ಧನ್ನೂರ ಗ್ರಾಮದ ಧನೇಶ್ವರ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಧನ್ನೇಶ್ವರ ಸಂಭ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಲಿಕೆಯ ಪ್ರಾರಂಭ ಹಂತವೇ ಪೂರ್ವ ಪ್ರಾಥಮಿಕ ಶಾಲೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು ಎನ್ನುವ ಉದ್ದೇಶದಿಂದ ಸ್ವಂತ ಹಣದಲ್ಲಿ ಶಾಲೆ ಕಟ್ಟಿ ಇವತ್ತು ಉತ್ತಮ ಶಿಕ್ಷಣ ನೀಡುತ್ತಿದ್ದು, ಇಲ್ಲಿನ ಶಿಕ್ಷಕರು ಕೂಡಾ ಮಕ್ಕಳ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ ಎಂದರು.

ಚಿತ್ತರಗಿಯ ಗುರುಮಹಾಂತ ಶ್ರೀಗಳು ಸಾನ್ನಿಧ್ಯ ವಹಿಸಿ ಮಾತನಾಡಿ, ಮನುಷ್ಯ ಪ್ರಬುದ್ಧ ಜ್ಞಾನವನ್ನು ಹೊಂದಿ ಗಣತಿಯಿಂದ ಬದುಕಲು ಶಿಕ್ಷಣ ಬಹಳ ಮುಖ್ಯ. ಮಕ್ಕಳಿಗಾಗಿ ಆಸ್ತಿ ಮಾಡದೇ ಮಕ್ಕಳನ್ನೇ ಒಂದು ಆಸ್ತಿಯನ್ನಾಗಿ ಮಾಡಿ. ಸಾಲ ಮಾಡಿಯಾದರೂ ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ನೀಡಿ ಎಂದು ಪಾಲಕರಿಗೆ ಕಿವಿಮಾತು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಅಶೋಕ ಪಟ್ಟಣಶೆಟ್ಟಿ, ಪಂಚಾಕ್ಷರಯ್ಯ ಹಿರೇಮಠ, ಅರವಿಂದ ಕಟ್ಟಿಮನಿ, ಸಕ್ರಪ್ಪ ಹೂಗಾರ, ಈರಸಂಗಪ್ಪ ಅಂಗಡಿ, ಬಸವರಾಜ ಬೇವೂರ, ಬಸಯ್ಯ ಹಿರೇಮಠ,ವಾಯ್. ಎಚ್. ಹಿರೇಮಠ, ಸಂಗಮೇಶ ಬಂಡರಗಲ್ಲ, ಎಂ.ಎಸ್ ಪಾಟೀಲ, ಪಿಡಿಒ ಮಹಾಂತೇಶಕೋಟಿ,ವಸಂತ ಮೇಲಿನಮನಿ ಸೇರಿದಂತೆ ಅನೇಕರು ಇದ್ದರು.ಮುಖ್ಯೋಪಾಧ್ಯಾಯನಿ ವಿದ್ಯಾ ಪಟ್ಟಣಶೆಟ್ಟಿ ಶಾಲೆ ವಾರ್ಷಿಕ ವರದಿ ವಾಚಿಸಿದರು. ಪಿಡಿಒ ಗಿರಮಲ್ಲಪ್ಪ ಶಿರಗುಂಪಿ ಹಾಗೂ ಬಸವರಾಜ ಕಮ್ಮಾರ ಕಾರ್ಯಕ್ರಮ ನಿರೂಪಿಸಿದರು.

ನಾಟಕಗಳಿಂದ ನಮ್ಮ ಸಂಸ್ಕೃತಿ ಅನಾವರಣ: ಗುರುಸಿದ್ಧ ಶ್ರೀಗಳು

ಗುಳೇದಗುಡ್ಡ: ಶರಣಸಂಸ್ಕೃತಿಯನ್ನು ಪ್ರತಿಬಿಂಬಿಸುವ ಶಿವಸಂಚಾರ ನಾಟಕಗಳು ವಚನ ಸಾಹಿತ್ಯ ಆಧರಿಸಿ ಪ್ರದರ್ಶನಗೊಳ್ಳುತ್ತಿವೆ. ವಚನ, ಪರಂಪರೆ, ಕಲೆ, ಸಂಸ್ಕೃತಿಯನ್ನು ಅನಾವರಣಗೊಳಿಸುವ ಮೂಲಕ ಆದರ್ಶ ಸಮಾಜ ನಿರ್ಮಾಣದಲ್ಲಿ ನಾಟಕಗಳ ಪಾತ್ರ ಅಪಾರವಾಗಿದೆ ಎಂದು ಗುರುಸಿದ್ಧ ಪಟ್ಟದಾರ್ಯ ಸ್ವಾಮೀಜಿ ಹೇಳಿದರು.

ಸಮೀಪದ ಕೋಟೆಕಲ್ ಗ್ರಾಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಸಂಯುಕ್ತವಾಗಿ ಹಮ್ಮಿಕೊಂಡಿದ್ದ ಮೂರು ದಿನಗಳ ನಾಟಕೋತ್ಸವ ಉದ್ಘಾಟಿಸಿ ಮಾತನಾಡಿದರು.



ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ನಾಟಕೋತ್ಸವ ಉದ್ಘಾಟಿಸಿ, ಹೊಸ ತಲೆಮಾರಿನ ನಾಟಕಗಳ ಪ್ರದರ್ಶನಕ್ಕೆ ಸಾಣೆಹಳ್ಳಿ ಶಿವಸಂಚಾರ ನಾಟಕ ತಂಡ ಸಮಾಜದಲ್ಲಿನ ಓರೆ, ಕೋರೆಗಳನ್ನು ತಿದ್ದುವ ಬಹುದೊಡ್ಡ ಕಾರ್ಯ ಮಾಡುತ್ತಿವೆ. ಇಂತಹ ಕಲೆ, ಸಂಸ್ಕೃತಿ, ಸಾಹಿತ್ಯದ ಬೆಳವಣಿಗೆಯ ಕಾರ್ಯಕ್ಕೆ ಮುಖಂಡ ಹನುಮಂತ ಮಾವಿಮರದ ಅವರ ಕೊಡುಗೆ ದೊಡ್ಡದು. ನಾಟಕದಲ್ಲಿನ ಉತ್ತಮ ಅಂಶಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ನಾಟಕ ಪ್ರದರ್ಶನಕ್ಕೆ ಸಾರ್ಥಕತೆ ಬರುತ್ತದೆ ಎಂದರು.

ಶ್ರೀ ಹೊಳೆ ಹುಚ್ಚೇಶ್ವರ ಸ್ವಾಮೀಜಿ, ಕಾಶಿನಾಥ ಸ್ವಾಮೀಜಿ, ಡಾ.ನೀಲಕಂಠ ಶಿವಾಚಾರ್ಯ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ಜೆಡಿಎಸ್ ಪಕ್ಷದ ಜಿಲ್ಲಾಧ್ಯಕ್ಷ ಹನುಮಂತ ಮಾವಿನ ಮರದ, ಪಿಕೆಪಿಎಸ್ ಸದಸ್ಯ ಸಂಗಪ್ಪ ಹಡಪದ, ಸಂತೋಷ ತಿಪ್ಪಾ, ಈರಣ್ಣ ಶೇಖಾ, ಸಿ.ಎಂ.ಜೋಶಿ, ಎಂ.ಪಿ.ಮಾಗಿ, ಪಿಡಿಒ ಆರತಿ ಕ್ಷತ್ರಿ, ಮಹೇಶ್ ಬಿಜಾಪುರ, ಸಂಗಮೇಶ ಚಿಕ್ಕಾಡಿ, ಎಚ್. ಎಸ್.ಘಂಟಿ ಇತರರು ಇದ್ದರು.

ಏ.20ರೊಳಗೆ ಪೋಡಿ ಮುಕ್ತ ತಾಲೂಕಾಗಲಿ: ಜೆಟಿಪಾ

ಬೀಳಗಿ: ರೈತರ ಜಮೀನುಗಳಿಗೆ ಸಂಬಂಧಿಸಿದ ದಶಕಗಳ ಕಾಲದಿಂದ ಪೋಡಿ ಆಗದೇ ಉಳಿದಿರುವ ಪಹಣಿಗಳನ್ನು ಪ್ರತ್ಯೇಕ ಪಹಣಿ ಮಾಡುವ ಮೂಲಕ ಗ್ರಾಮ ಮಟ್ಟದಲ್ಲೇ ಭೂ ಸಮಸ್ಯೆಗಳಿಗೆ ಇತಿಶ್ರೀ ಹಾಡುವ ಪೋಡಿ ಮುಕ್ತ ಗ್ರಾಮ ಅಭಿಯಾನಕ್ಕೆ ತಾಲೂಕಿನಲ್ಲಿ ವೇಗ ನೀಡಲಾಗಿದೆ ಎಂದು ಶಾಸಕ ಜೆ.ಟಿ.ಪಾಟೀಲ ತಿಳಿಸಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಪೋಡಿ ಮುಕ್ತ ಗ್ರಾಮ ಅಭಿಯಾನದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ರೈತರ ಜಮೀನುಗಳ ಪಹಣಿ ತಿದ್ದುಪಡಿ ಹಾಗೂ ಪೋಡಿ ಕಾರ್ಯವನ್ನು ಗ್ರಾಮ ಮಟ್ಟದಲ್ಲೇ ಪೂರ್ಣಗೊಳಿಸಿ, ಪ್ರತ್ಯೇಕ ಪಹಣಿ ವಿತರಿಸುವುದರಿಂದ ಅನಗತ್ಯ ಭೂ ವಿವಾದಗಳು ಕಡಿಮೆಯಾಗಲಿವೆ. ರೈತರ ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಬಗೆಹರಿಸಲು ಕಂದಾಯ ಇಲಾಖೆ ಸನ್ನದ್ಧವಾಗಿದೆ ಎಂದರು.

ದಶಕಗಳಿಂದ ಬಾಕಿ ಉಳಿದಿರುವ ಪೋಡಿ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಅಧಿಕಾರಿಗಳಿಗೆ ಸೂಚಿಸಿದ ಶಾಸಕರು, ಸರ್ವೆ ಇಲಾಖೆ ಮತ್ತು ಗ್ರಾಮ ಆಡಳಿತ ಅಧಿಕಾರಿಗಳು ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ ರೈತರಿಗೆ ಉಚಿತವಾಗಿ ಪೋಡಿ ಮಾಡಿ ಪಹಣಿ ಮಾಡಿ ಕೊಡಲಿದ್ದಾರೆ. ಏಪ್ರಿಲ್ 15 ರಿಂದ 20 ರೊಳಗಾಗಿ ಇಡೀ ಬೀಳಗಿ ತಾಲೂಕನ್ನು ಪೋಡಿ ಮುಕ್ತ ಎಂದು ಘೋಷಿಸುವ ಮಹತ್ವಾಕಾಂಕ್ಷಿ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.



ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ಮಾತನಾಡಿ, ಶಾಸಕರು ಕೊಟ್ಟ ಗಡುವಿನೊಳಗೆ ಪೋಡಿ ಮುಕ್ತ ತಾಲೂಕು ಮಾಡಿ ಕೊಡುವ ಭರವಸೆ ನೀಡಿದರು.


ತಹಶೀಲ್ದಾರ ವಿನೋದ ಹತ್ತಳ್ಳಿ, ಭೂದಾಖಲೆಗಳ ಸಹಾಯಕ ನಿರ್ದೇಶಕ ರವಿಶಂಕರ ಕೆ, ತಪಾಸಕರಾದ ದಾನಪ್ಪ ತಳವಾರ, ಪಿ. ವೈ. ಹಳ್ಳಿ, ಶಿರಸ್ತೆದಾರ ಸೌದಾಗರ, ಕಂದಾಯ ನಿರೀಕ್ಷಕರಾದ ಮಂಜುನಾಥ ಧರಿಗೊಂಡ, ವಿಠ್ಠಲ ಕೂಗಟಿ ಹಾಗೂ ಭೂಮಾಪನ ಇಲಾಖೆಯ ಸಿಬ್ಬಂದಿ ಹಾಗೂ ಗ್ರಾಮ ಆಡಳಿತಾಧಿಕಾರಿಗಳು ಉಪಸ್ಥಿತರಿದ್ದರು.

ಮೂಢನಂಬಿಕೆ ವಿರುದ್ಧ ಹೋರಾಡಿದ ಸೇವಾಲಾಲ್

ಬಾದಾಮಿ: ಸಂತ ಸೇವಾಲಾಲ್ ಮಹಾರಾಜರು ಓರ್ವ ಸಂಗೀತಗಾರ, ಧೈರ್ಯಶಾಲಿ ಯೋಧ, ಮೂಢನಂಬಿಕೆವಿರುದ್ಧ ಹೋರಾಡಿದ ವಿವೇಚನಾಶೀಲ ಮಹಾನ್ ವ್ಯಕ್ತಿ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಪಿಕಾರ್ಡ ಬ್ಯಾಂಕ್ ಆವರಣದಲ್ಲಿ ತಾಲೂಕು ಬಂಜಾರಾ ಸೇವಾ ಸಂಘದ ಸಹಯೋಗದಲ್ಲಿ ಸಂತ ಸೇವಾಲಾಲ ಮಹಾರಾಜರ 289 ನೇ ಜಯಂತ್ಯೋತ್ಸವ–2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಬಂಜಾರಾ ಸಮುದಾಯದ ಜನರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ಮಂಜೂರಿ ಮಾಡಲಾಗುವುದು ಎಂದು ಹೇಳಿದರು.

ಅನವಾಲದ ಪೂರ್ಣಾನಂದ ಆಶ್ರಮದ ಕೈಲಾಸನಂದನಾಥ ಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸುವರು. ನೀಲಾನಗರದ ಬಂಜಾರಾ ಶಕ್ತಿಪೀಠದ ಪೀಠಾಧಿಪತಿ ಕುಮಾರ ಮಹಾರಾಜರು ಜ್ಯೋತಿ ಬೆಳಗಿಸುವರು. ವೇದಿಕೆಯ ಮೇಲೆ ಮಾಜಿ ಜಿ.ಪಂ.ಅಧ್ಯಕ್ಷ ಹೂವಪ್ಪ ರಾಠೋಡ, ಹನುಮಂತ ರಾಠೋಡ, ಮನೋಹರ ರಾಠೋಡ ನಗಾರಿಗೆ ಚಾಲನೆ ನೀಡಿದರು. ಎ.ಆರ್.ನಾಯಕ, ಹೇಮಂತ ದೊಡಮನಿ ವಿಶೇಷ ಉಪನ್ಯಾಸ ನೀಡಿದರು. ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ,ಮಹಾಂತೇಶ ಮಮದಾಪೂರ, ಮಹೇಶ ಹೊಸಗೌಡ್ರ, ಡಾ.ಎಂ.ಜಿ.ಕಿತ್ತಲಿ, ತಹಶೀಲದಾರ ಎಸ್. ಎಫ್.ಬೊಮ್ಮನ್ನವರ, ತಾ.ಪಂ.ಇಒ ಸತೀಶ ಮಾಕೊಂಡ, ಮನೋಹರ ರಾಠೋಡ, ಮೋಹನ ಚವ್ಹಾಣ ಸೇರಿದಂತೆ ಗಣ್ಯರು ಹಾಜರಿದ್ದರು.



ಶಿಕ್ಷಕರಿಂದ ಉತ್ತಮ ಸಮಾಜ ನಿರ್ಮಾಣ: ಬೇವೂರ

ಕಲಾದಗಿ: ಸರ್ಕಾರಿ ಶಾಲೆಗಳಲ್ಲಿ ಕಲಿತ ಮಕ್ಕಳಿಗೆ ತಾವು ಕಲಿತ ಶಾಲೆ ಹಾಗೂ ಗುರುಗಳ ಬಗ್ಗೆ ಗೌರವವಿರಲಿ. ಇಲ್ಲಿ ಕಲಿತ ಮಕ್ಕಳು ದೇಶದ ಇತಿಹಾಸ ಬದಲಿಸುವ ಶಕ್ತಿ ಉಳ್ಳವರಾಗಿದ್ದು, ಅಂತ ಮಕ್ಕಳಿಗೆ ಶಿಕ್ಷಣ ನೀಡಿ ಸಮಾಜ ನಿರ್ಮಿಸುವ ಶಕ್ತಿ ಶಿಕ್ಷಕರಿಂದ ಮಾತ್ರ ಸಾಧ್ಯವಿದೆ ಎಂದು ಬಾಗಲಕೋಟೆ ಬಿಟಿಡಿಎ ಸರ್ಕಾರಿ ಮಾದರಿ ಪ್ರಾಥಮಿಕ ನಂ–16 ಶಾಲೆಯ ಹಿರಿಯ ಮುಖ್ಯ ಶಿಕ್ಷಕ ಶರಣಪ್ಪ ಬೇವೂರ ಹೇಳಿದರು.

ಗ್ರಾಮದ ಸರ್ಕಾರಿ ಕನ್ನಡ ಗಂಡು ಮಕ್ಕಳ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ, ಪ್ರತಿಭಾ ಪುರಸ್ಕಾರ ಹಾಗೂ 7ನೇ ತರಗತಿ ಮಕ್ಕಳ ಬೀಳ್ಕೊಡುವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ನಾವು ಹೊಂದುವ ಗುರಿಯ ಸ್ಪಷ್ಟತೆ ವಿದ್ಯಾರ್ಥಿಗಳಿಗಿರಬೇಕು. ತಂದೆ–ತಾಯಿ ಹಾಗೂ ಗುರುಗಳು ಮಕ್ಕಳಿಗೆ ಸದಾ ಆದರ್ಶ ಪ್ರಾಯರಾಗಿರಬೇಕು ಎಂದು ಹೇಳಿದರು.



ಕೃಷಿ ವಿಜ್ಞಾನಿ ಡಾ.ಸಿದ್ದಪ್ಪ ಅಂಗಡಿ ಮಾತನಾಡಿ, ಮಕ್ಕಳು ಶೈಕ್ಷಣಿಕವಾಗಿ ಬೆಳೆಯಬೇಕಾದರೆ ಪುಸ್ತಕಗಳ ಸ್ನೇಹಿತರಾಗಬೇಕು. ಅವರಿಗೆ ಉತ್ತಮ ಪುಸ್ತಕ ಕಾಣಿಕೆಯಾಗಿ ನೀಡಬೇಕು. ಪುಸ್ತಕ ಓದುವುದರಿಂದ ಸಿಗುವ ಆನಂದ ಜಗತ್ತಿನಲ್ಲಿ ಎಲ್ಲಿಯೂ ಸಿಗುವುದಿಲ್ಲ, ಒಳ್ಳೆಯ ಜ್ಞಾನ ಉಳ್ಳವರ ವಿಚಾರಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು ಎಂದು ಹೇಳಿದರು.

ಶಾಲಾ ಮುಖ್ಯ ಶಿಕ್ಷಕ ಸಿ.ಎಲ್. ಹೂಗಾರ, ಶಿಕ್ಷಕ ಸುನೀಲ ಬಾಗೇವಾಡಿ ಮಾತನಾಡಿದರು. ಎಸ್ಡಿಎಂಸಿ ಅಧ್ಯಕ್ಷ ಸುಭಾಸ ದುರ್ವೆ, ಗ್ರಾಪಂ ನಿಕಟಪೂರ್ವ ಅಧ್ಯಕ್ಷೆ ಖಾತುನಬೀ ರೋಣ, ಉಪಾದ್ಯಕ್ಷ ಫಕೀರಪ್ಪ ಮಾದರ, ಎಸ್ಡಿಎಂಸಿ ಉಪಾದ್ಯಕ್ಷೆ ಲಕ್ಷ್ಮೀಬಾಯಿ ಮಾದರ, ಕ್ಷೇತ್ರ ಸಮನ್ವಯಾಧಿಕಾರಿ ಸಿ.ವೈ. ಸಂಗಮ್, ಮುಖಂಡರಾದ ದಯಾನಂದ ವಾಘ, ಸಂಗಪ್ಪ ಛಬ್ಬಿ, ನಾರಾಯಣ ಬೋಜಗಾರ, ಮಲ್ಲಪ್ಪ ಜಮಖಂಡಿ, ಈಶ್ವರ ಪಾಟೀಲ, ವೈ. ಎಚ್.ವಗ್ಗ್ಯಾನವರ, ಶೀಧರ ಮಾದರ ಬಸಪ್ಪ ಪಾಣಿಶೆಟ್ಟಿ, ಶಾಲಾ ಎಸ್ಡಿಎಂಸಿ ಸದಸ್ಯರು, ಸಿಆರ್‌ಪಿ ವ್ಯಾಪ್ತಿಯ ಎಲ್ಲ ಶಾಲೆಗಳ ಶಿಕ್ಷಕ ಬಳಗ, ಪಾಲಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ಕಿರುಸುದ್ದಿ

ಗ್ಯಾರಂಟಿಯಿಂದ ಅಭಿವೃದ್ಧಿಗೆ ಹಿನ್ನಡೆ: ಜಿಗಜಿಣಗಿ

ವಿಜಯಪುರ: ಚುನಾವಣೆ ಪೂರ್ವ ಉಚಿತ ಕೊಡುಗಡೆ ಘೋಷಿಸುವ ರಾಜಕೀಯ ಪಕ್ಷಗಳ ನಡೆಗೆ ಸುಪ್ರೀಂಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ರಾಜ್ಯ ಕಾಂಗ್ರೆಸ್ ಸರ್ಕಾರ ಸಹ ಇದರಿಂದ ಬುದ್ಧಿ ಕಲಿತು ಗ್ಯಾರಂಟಿಯೇತರ ಅಭಿವೃದ್ಧಿಗಳ ಕಡೆಗೆ ಗಮನ ಹರಿಸಬೇಕು ಎಂದು ಸಂಸದ ರಮೇಶ ಜಿಗಜಿಣಗಿ ಆಗ್ರಹಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ದೇಶದ ವಿವಿಧ ರಾಜ್ಯಗಳಲ್ಲಿ ಕಾಂಗ್ರೆಸ್ ಮತ್ತು ಪ್ರಾದೇಶಿಕ ಪಕ್ಷಗಳು ಅಧಿಕಾರದ ಲಾಲಸೆಗಾಗಿ ಉಚಿತ ಕೊಡುಗೆ ಘೋಷಿಸುತ್ತಿವೆ. ಇದರಿಂದಾಗಿ ಸಮಗ್ರ ಅಭಿವೃದ್ಧಿಗೆ ಹಿನ್ನಡೆಯಾಗುತ್ತಿದೆ. ಸರ್ಕಾರ ಉಚಿತ ಕೊಡುಗೆಗಳನ್ನೂ ನೀಡಲಾಗದೇ ಅಭಿವೃದ್ಧಿಗೂ ಆದ್ಯತೆ ಕಲ್ಪಿಸಲಾಗದೇ ಪರಿತಪಿಸುತ್ತಿವೆ. ಜನ ಉಚಿತ ಯೋಜನೆಗಳಿಂದಾಗಿ ಸಂತುಷ್ಟರಾಗಿಲ್ಲ, ಮಾತ್ರವಲ್ಲ, ಜನ ದುಡಿಯುವ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಪರಾವಲಂಬಿಗಳಾಗುತ್ತಿದ್ದಾರೆ. ದುಡಿಯುವ ವರ್ಗಕ್ಕೂ ಈ ಯೋಜನೆ ನ್ಯಾಯ ಒದಗಿಸುತ್ತಿಲ್ಲ, ಹೀಗಾಗಿ ಆರ್ಥಿಕತೆ ಕುಂಠಿತಗೊಳ್ಳುತ್ತಿದೆ. ಉಚಿತ ಯೋಜನೆಗಳ ಹೆಸರಲ್ಲಿ ದಲಿತರ ಹಣವನ್ನೂ ನುಂಗಿ ನೀರು ಕುಡಿದಿದ್ದು, ಯಾವುದೇ ನಿಗಮ- ಮಂಡಳಿಗೆ ಅನುದಾನ ಮೀಸಲಿಡದೇ ಅನ್ಯಾಯವೆಸಗಿದೆ. ಕೇವಲ ದಲಿತರು ಮಾತ್ರವಲ್ಲ, ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತಿತರ ಸಮುದಾಯಗಳ ನಿಗಮ ಮಂಡಳಿಗೆ ಮೀಸಲಿಟ್ಟ ಅನುದಾನವನ್ನೇ ಬಳಸಲಾಗಿಲ್ಲ ಎಂದು ಟೀಕಿಸಿದ್ದಾರೆ.

ರಾಣಿ ಚನ್ನಮ್ಮ ವಿವಿ ಅಭಿವೃದ್ಧಿ ಸಮಿತಿ ರಚನೆ

ವಿಜಯಪುರ: ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿಜಯಪುರ ಸ್ನಾತಕೋತ್ತರ ಕೇಂದ್ರದ ಅಭಿವೃದ್ಧಿ ಸಮಿತಿ ರಚಿಸಲಾಗಿದೆ ಎಂದು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕುಲಸಚಿವರು ಹೇಳಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಸಮಿತಿಯ ಅಧ್ಯಕ್ಷರಾಗಿದ್ದು, ವಿಜಯಪುರ ನಗರ ಶಾಸಕರು, ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆಡಳಿತ ಕುಲ ಸಚಿವರು, ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರು, ಬೆಳಗಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳು, ರಫಿ ಭಂಡಾರಿ, ಲಕ್ಷ್ಮಣ ಬಡಿಗೇರ ಸದಸ್ಯರಾಗಿದ್ದಾರೆ. ವಿಜಯಪುರ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರು- ಸಂಯೋಜಕರು ಸಹ ಕಾರ್ಯದರ್ಶಿಗಳನ್ನೊಗೊಂಡ ಸಮಿತಿ ರಚಿಸಲಾಗಿದೆ ಎಂದು ತಿಳಿಸಿದ್ದಾರೆ.

ರೈಲ್ವೆ ಡಿಕ್ಕಿ: ಜೋಡಿ ಮಂಗಗಳ ಸಾವು

ಇಂಡಿ: ತಾಲೂಕಿನ ಹೊಸ ಪಡನೂರು ರೈಲ್ವೆ ನಿಲ್ದಾಣ ಬಳಿ ರೈಲ್ವೆ ಹಳಿ ದಾಟುತ್ತಿದ್ದ ಜೋಡಿ ಮಂಗಗಳಿಗೆ ರೈಲ್ವೆ ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡ ಜೋಡಿ ಮಂಗಗಳು ಸ್ಥಳದಲ್ಲೇ ಸಾವನಪ್ಪಿದ ಘಟನೆ ನಡೆದಿದೆ. ಶನಿವಾರ ಬೆಳಗ್ಗೆ 7 ಗಂಟೆಯ ಸುಮಾರಿಗೆ ಬಸವ ಎಕ್ಸ್‌ಪ್ರೆಸ್ ರೈಲ್ವೆಯು ಸೋಲ್ಲಾಪುರದಿಂದ ವಿಜಯಪುರದತ್ತ ವೇಗವಾಗಿ ಸಂಚಾರಿಸುತ್ತಾ ಮಾರ್ಗ ಮದ್ಯದ ಪಡನೂರ ರೈಲ್ವೆ ನಿಲ್ದಾಣದ ಬಳಿ ಒಂದು ಗಂಡು, ಒಂದು ಹೆಣ್ಣು ಮಂಗ ಜೊತೆಯಾಗಿ ನಿರ್ಭಯದಿಂದ ಹಳಿ ದಾಟುತ್ತಿದ್ದ ವೇಳೆ ಡಿಕ್ಕಿ ಹೊಡೆದ ಪರಿಣಾಮ ಈ ಮಂಗಗಳ ಮುಖಕ್ಕೆ ಪೆಟ್ಟಾಗಿ ಪ್ರಾಣ ಬಿಟ್ಟಿವೆ. ಬಳಿಕ ಗ್ರಾಮಸ್ಥರು ಹನುಮನ ವಾರದಂದು ಅಗಲಿದ ಮಂಗಗಳಿಗೆ ಅಲಂಕರಿಸಿ ಗ್ರಾಮದಲ್ಲಿ ಮೆರವಣಿಗೆ ನಡೆಸಿ ಹನುಮನ ಮಂದಿರದ ಆವರದಲ್ಲಿ ಹಿಂದು ಸಂಪ್ರದಾಯದಂತೆ ಅಂತ್ಯಕ್ರಿಯೆ ನೇರವೇರಿಸಿ ಮಾನವೀಯತೆ ಮೆರೆದರು.

ಅಪಘಾತ: ಇಬ್ಬರು ಸಾವು

ಕೊಲ್ಹಾರ: ರಾಷ್ಟ್ರೀಯ ಹೆದ್ದಾರಿ 52ರಲ್ಲಿ ಅಪರಿಚಿತ ವಾಹನ ಡಿಕ್ಕಿಯಾಗಿ ಆಟೋದಲ್ಲಿದ್ದ ಇಬ್ಬರು ಮಹಿಳಾ ಕೂಲಿ ಕಾರ್ಮಿಕರು ಸಾವನ್ನಪ್ಪಿರುವ ಧಾರುಣ ಘಟನೆ ಶನಿವಾರ ರಾತ್ರಿ ಕೊಲ್ಹಾರ ಯುಕೆಪಿ ಕ್ರಾಸ್ ಸಮೀಪ ಕೊರೆಮ್ಮದೇವಿ ದೇವಸ್ಥಾನ ಹತ್ತಿರ ನಡೆದಿದೆ. ಯುಕೆಪಿ ಕ್ರಾಸ್‌ದಿಂದ ರಾಷ್ಟ್ರೀಯ ಹೆದ್ದಾರಿ 52ರ ಮಾರ್ಗವಾಗಿ ಬೀಳಗಿ ಕಡೆಗೆ ಹೊರಟ್ಟಿದ ಆಟೋಗೆ ಹಿಂಬದಿಯಿಂದ ಅಪರಿಚಿತ ವಾಹನ ಡಿಕ್ಕಿಯಾದ ಪರಿಣಾಮ ಆಟೋದಲ್ಲಿದ್ದ ಅನ್ನಪೂರ್ಣಾ ನೇವಣಿ(39) ವರ್ಷ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಪಾರವ್ವ ಮಹಾಂತಪ್ಪ ಅನ್ನೆಪ್ಪನವರ (65) ಆಸ್ಪತ್ರೆಯಲ್ಲಿ ಚಿಕಿತ್ಸೆ ಮೃತಪಟ್ಟಿದ್ದಾರೆ. ಮೃತರು ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಮುತ್ತಲದಿನ್ನಿ ಆರ್.ಸಿ ಗ್ರಾಮದವರು ಎಂದು ತಿಳಿದು ಬಂದಿದೆ. ಆಟೋದಲ್ಲಿದ್ದ ಇನ್ನುಳಿದ ಹಲವರಿಗೆ ಗಂಭೀರ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂಬ ಮಾಹಿತಿ ತಿಳಿದು ಬಂದಿದೆ. ಇವರೆಲ್ಲ ರೈತರ ಜಮೀನಿನಲ್ಲಿ ಕೂಲಿ ಕೆಲಸ ಮುಗಿಸಿಕೊಂಡು ತಮ್ಮ ಊರಿನ ಕಡೆಗೆ ಹೊರಟ್ಟಿದ್ದಾಗ ಈ ದುರ್ಘಟನೆ ಸಂಭವಿಸಿದೆ. ಸ್ಥಳಕ್ಕೆ ಕೊಲ್ಹಾರ ಪಿಎಸ್ಐ ಅಶೋಕ ನಾಯಕ ಹಾಗೂ ಪೊಲೀಸ್ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು.



ವಿಜಯಪುರ: ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ, ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರ ಮಾತೋಶ್ರೀ ಗಂಗಾಬಾಯಿ ಸಿದ್ಧರಾಮಪ್ಪ ಪಾಟೀಲ(84) ನಿಧನದ ಹಿನ್ನೆಲೆ ವಿವಿಧ ಗಣ್ಯಮಾನ್ಯರು ಅಂತಿಮ ದರ್ಶನ ಪಡೆದರು.

ಆರೋಗ್ಯಕ್ಕೆ ಉತ್ತಮ ದಿನಚರಿ ಮುಖ್ಯ

ಸಿಂದಗಿ: ಆರೋಗ್ಯವಂತರಾಗಿ ಬಾಳಲು ಸರಿಯಾದ ಆಹಾರ ಕ್ರಮ, ಉತ್ತಮ ದಿನಚರಿ ಹಾಗೂ ಒಳ್ಳೆಯ ಹವ್ಯಾಸ ಮೈಗೂಡಿಸಿಕೊಳ್ಳಿ ಎಂದು ಆಲಮೇಲ ಪಾಟೀಲ್ ನರ್ಸಿಂಗ್ ಹೋಂ ಸ್ತ್ರೀರೋಗ, ಪ್ರಸೂತಿ ತಜ್ಞೆ ಡಾ.ಶಾರದಾ ಪಾಟೀಲ ಹೇಳಿದರು. ನಗರದ ರಾಂಪುರ ರಸ್ತೆಯಲ್ಲಿರುವ ಸಮರ್ಥ ವಿದ್ಯಾವಿಕಾಸ ವಿವಿದೋದ್ದೇಶಗಳ ಸಂಸ್ಥೆಯ ಪ್ರೇರಣಾ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಸಹಯೋಗದಲ್ಲಿ ಹಮ್ಮಿಕೊಂಡ ಆಹಾರ ಮೇಳಕ್ಕೆ ಚಾಲನೆ ಮಾತನಾಡಿದ ಅವರು, ಆರೋಗ್ಯ ಕಾಪಾಡಿಕೊಳ್ಳಲು ಉತ್ತಮ ಜೀವನ ಕ್ರಮ ಅಗತ್ಯ. ಒಳ್ಳೆಯ ಆಹಾರ ನಮ್ಮ ಆರೋಗ್ಯ ಸುಧಾರಿಸಿ ರೋಗ ನಿರೋಧಕ ಶಕ್ತಿಯನ್ನು ಸುಧಾರಿಸುತ್ತದೆ. ಅತಿಯಾದ ಉಪ್ಪು ಮಿಶ್ರಿತ ಆಹಾರ ಪದಾರ್ಥಗಳು ಆರೋಗ್ಯಕ್ಕೆ ಮಾರಕ. ಪ್ರತಿ ಆಹಾರ ಪೊಟ್ಟಣದ ಮಾಹಿತಿಯಲ್ಲಿ ಬಳಸಿದ ಅಂಶಗಳ ಬಗ್ಗೆ ಕೊಬ್ಬಿನ ಅಂಶ, ಸಕ್ಕರೆ ಅಂಶಗಳನ್ನು ಗಮನಿಸುವುದು ಮುಖ್ಯ. ಎಡಬಿಡದೆ ತಿನ್ನುವ ಆಹಾರ ಪದಾರ್ಥ ಜೀರ್ಣಕ್ರಿಯೆಗೆ ಮಾರಕ. ಇಂದಿನಿಂದ ಆರೋಗ್ಯವಂತರಾಗಿ ಬಾಳಲು ಸರಿಯಾದ ಆಹಾರ ಕ್ರಮ, ಉತ್ತಮ ದಿನಚರಿ, ಹಾಗೂ ಒಳ್ಳೆಯ ಹವ್ಯಾಸವನ್ನು ಮೈಗೂಡಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಸಂಸ್ಥೆಯ ಅಧ್ಯಕ್ಷ ಆರ್.ಡಿ.ಕುಲಕರ್ಣಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಲ್ಲಮ್ಮ ಬಿರಾದಾರ, ಸಂಸ್ಥೆಯ ನಿರ್ದೇಶಕ ಪಿ.ಡಿ.ಕುಲಕರ್ಣಿ, ಮುಖ್ಯಗುರುಮಾತೆ ಎಸ್.ಆಯ್.ಅಸ್ಕಿ, ಕವಿತಾ ಪೂಜಾರ, ವಿದ್ಯಾರ್ಥಿಗಳಾದ ಮಾಹಿನ್ ಅತ್ತಾರ, ಯಶಸ್ವಿನಿ ರಾಠೋಡ ನಿರ್ವಹಿಸಿದರು. ಸಿಬ್ಬಂದಿ, ಪಾಲಕರು ಇದ್ದರು.



ನಗರದ ರಾಂಪುರ ರಸ್ತೆಯಲ್ಲಿರುವ ಸಮರ್ಥ ವಿದ್ಯಾವಿಕಾಸ ವಿವಿದೋದ್ದೇಶಗಳ ಸಂಸ್ಥೆಯ ಪ್ರೇರಣಾ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಸಹಯೋಗದಲ್ಲಿ ಹಮ್ಮಿಕೊಂಡ ಆಹಾರ ಮೇಳಕ್ಕೆ ಆಲಮೇಲ ಪಾಟೀಲ್ ನರ್ಸಿಂಗ್ ಹೋಂ ಸ್ತ್ರೀರೋಗ, ಪ್ರಸೂತಿ ತಜ್ಞೆ ಡಾ.ಶಾರದಾ ಪಾಟೀಲ ಚಾಲನೆ ನೀಡಿದರು. ಸಂಸ್ಥೆಯ ಅಧ್ಯಕ್ಷ ಆರ್.ಡಿ.ಕುಲಕರ್ಣಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಲ್ಲಮ್ಮ ಬಿರಾದಾರ, ಸಂಸ್ಥೆಯ ನಿರ್ದೇಶಕ ಪಿ.ಡಿ.ಕುಲಕರ್ಣಿ, ಮುಖ್ಯಗುರುಮಾತೆ ಎಸ್.ಆಯ್.ಅಸ್ಕಿ, ಕವಿತಾ ಪೂಜಾರ ಇದ್ದರು.

ಗ್ಯಾರಂಟಿ ಪ್ರಗತಿ ಪರಿಶೀಲನಾ ಸಭೆ | ಶಾಸಕ ನಾಡಗೌಡ ಹೇಳಿಕೆ

ಬಡವರ ಅಭಿವೃದ್ಧಿಗೆ ಗ್ಯಾರಂಟಿಗಳು ವರದಾನ

ವಿಜಯಪುರ: ಬಡವರು ಮತ್ತು ಹಿಂದುಳಿದ ವರ್ಗದ ಜನರ ಜೀವನ ಮಟ್ಟ ಸುಧಾರಿಸಲು ರಾಜ್ಯ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳು ಫಲಪ್ರದವಾಗಿದ್ದು, ಎಲ್ಲ ವರ್ಗದವರಿಗೆ ಆರ್ಥಿಕ ಸಬಲತೆ ತಂದುಕೊಟ್ಟಿವೆ ಎಂದು ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ ನಿಯಮಿತದ ಅಧ್ಯಕ್ಷರೂ ಆದ ಶಾಸಕ ಅಪ್ಪಾಜಿ ಸಿ.ಎಸ್.ನಾಡಗೌಡ ಹೇಳಿದರು.



ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ ಇವರ ಸಹಯೋಗದಲ್ಲಿ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕುರಿತು ಕಾರ್ಯಗಾರ ಹಾಗೂ ಪ್ರಗತಿ ಪರಿಶೀಲನಾ ಸಭೆಯ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರ ನೀಡುತ್ತಿರುವ 10 ಕೆಜಿ ಉಚಿತ ಅಕ್ಕಿಯಿಂದ ಬಡವರಿಗೆ, ಹಿಂದುಳಿದವರ ಜೀವನ ನಿರ್ವಹಣೆಯೊಂದಿಗೆ ವಿವಿಧ ಗ್ಯಾರಂಟಿ ಯೋಜನೆಯ ಹಣದಿಂದ ನೆಮ್ಮದಿಯ ಬದುಕು ಕಂಡುಕೊಂಡು ಸಂತೋಷದ ಜೀವನ ನಡೆಸುತ್ತಿರುವುದು ನಮ್ಮ ಸರ್ಕಾರ ನುಡಿದಂತೆ ನಡೆದಿದೆ ಎಂದು ಹೇಳಿದರು. ನಮ್ಮ ಸರ್ಕಾರದ ಜಾರಿಗೆ ತಂದಿರುವ ಯೋಜನೆಗಳಿಂದ ಜನರ ಜೀವನ ಮಟ್ಟ ಸುಧಾರಣೆಯಾಗಿ ಆರ್ಥಿಕವಾಗಿ ಬೆಳವಣಿಗೆ ಹೊಂದಲು ಸಾಧ್ಯವಾಗಿದೆ. ಮಹಿಳೆಯರು ಉಚಿತವಾಗಿ ರಾಜ್ಯಾದ್ಯಂತ ಬಸ್ಸಿನಲ್ಲಿ ಉಚಿತ ಪ್ರಯಾಣದ ಸೌಲಭ್ಯ ಜಾರಿಗೊಂಡಿರುವ ಶಕ್ತಿ ಯೋಜನೆಯು ರಾಜ್ಯದ ಹಲವಾರು ಕುಟುಂಬಗಳಿಗೆ ಆರ್ಥಿಕನೆಮ್ಮದಿನೀಡಿದ್ದು, ಇದರಿಂದಮಹಿಳೆಯರಿಗೆ ದೈನಂದಿನ ವರದಾನವಾಗಿ ಪರಿಣಮಿಸಿದೆ ಎಂದು ಹೇಳಿದರು.

ರಾಜ್ಯದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ ರೇವಣ್ಣ ಮಾತನಾಡಿ, ಗೃಹ ಜ್ಯೋತಿ ಯೋಜನೆಯಡಿ 200 ಯುನಿಟ್‌ವರೆಗೆ ಉಚಿತ ವಿದ್ಯುತ್ ವಿದ್ಯುತ್ ಒದಗಿಸಿರುವುದರಿಂದ ಎಲ್ಲ ವರ್ಗದವರಿಗೆ ಅನುಕೂಲವಾಗಿದೆ. ಗೃಹಲಕ್ಷ್ಮಿ ಯೋಜನೆಯಡಿ ಮನೆಯ ಯಜಮಾನಿ ಮಹಿಳೆಗೆ ದೊರೆಯುತ್ತಿರುವ ಹಣದಿಂದ ಮನೆಗಳಲ್ಲಿ ಸಂತೋಷ ಮತ್ತು ಆರ್ಥಿಕ ಭದ್ರತೆ ವಾತಾವರಣ ನಿರ್ಮಾಣವಾಗಿದೆ ಎಂದು ಅಭಿಪ್ರಾಯಪಟ್ಟರು.ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆ ನಿರುದ್ಯೋಗಿ ಯುವಕರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗಿದೆ ಎಂದರು.

ರಾಜ್ಯದಲ್ಲಿ ಅನುಷ್ಠಾನ ತಂದ ಪಂಚಾಗ್ಯಾರಂಟಿ ಯೋಜನೆಗಳು 98 ಪ್ರತಿಶತ ಕಾರ್ಯರೂಪಕ್ಕೆ ಬಂದಿದ್ದು ಈ ಮನೆ ಮನೆಗಳಲ್ಲಿ ಹಾಗೂ ಪ್ರತಿಯೊಬ್ಬರಿಗೂ ಈ ಯೋಜನೆಗಳ ಮಾಹಿತಿ ತಲುಪುವಂತಾಗಬೇಕು ಎಂದು ಹೇಳಿದರು.

ನಮ್ಮ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ ಹಾಗೂ ಯಶಸ್ವಿಯಾಗಿ ಇಲ್ಲಿಯವರೆಗೆ ಶೇ.98 ಅನುಷ್ಠಾನಗೊಂಡಿವೆ. ಇವೆಲ್ಲ ಅಭಿವೃದ್ಧಿಯ ಸಂಕೇತವಾಗಿವೆ. ಜನರ ಬದುಕನ್ನು ಹಸನಗೊಳಿಸಲು ನಮ್ಮ ಉದ್ದೇಶವಾಗಿದೆ. ನಾವು ಎಂದೆಂದೂ ರೈತರು, ಯುವಕರು ಹಾಗೂ ಮಹಿಳೆಯರ ಪರವಾಗಿದ್ದೇವೆ ಇದರಿಂದ ಅಭಿವೃದ್ಧಿ ಪರ್ವ ಕಂಡಿದೆ. ಪಂಚ ಗ್ಯಾರಂಟಿಗಳಿಂದ ಉಳಿತಾಯವಾಗುತ್ತಿರುವ ಹಣ ವಿವಿಧ ಬಗೆಯ ವಸ್ತುಗಳನ್ನು ಕೊಳ್ಳುವವರ ಸಂಖ್ಯೆ ಹೆಚ್ಚಾಗಿದ್ದು, ತೆರಿಗೆ ಕೂಡ ವೃದ್ಧಿಯಾಗಿ ಆದಾಯವೂ ಹೆಚ್ಚಾಗಿದೆ. ಯೋಜನೆಗಳು ಕಟ್ಟಕಡೆಯ ವ್ಯಕ್ತಿಗೂ ತಲುಪುವಂತಾಗಬೇಕು ಎಂದರು.

ಕರ್ನಾಟಕ ಬಾಲ ವಿಕಾಸ ಅಕಾಡೆಮಿಯ ಅಧ್ಯಕ್ಷರಾದ ಸಂಗಮೇಶ ಬಬಲೇಶ್ವರ, ಕರ್ನಾಟಕ ರಾಜ್ಯಲಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಬಿ.ಎಸ್.ಕವಲಗಿ, ಶಾಸಕರಾದ ಅಶೋಕ ಮನಗೂಳಿ, ಸುನೀಲಗೌಡಪಾಟೀಲ,ನಗರಾಭಿವೃದ್ಧಿಪ್ರಾಧಿಕಾರದ ಅಧ್ಯಕ್ಷ ಡಾ.ಗಂಗಾಧರ ಸಂಬಣ್ಣಿ, ಮಹಾನಗರ ಪಾಲಿಕೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಶಬ್ಬೀರ ಅಹ್ಮದ ಜಾಗೀರದಾರ, ಜಿಲ್ಲಾಧಿಕಾರಿ ಡಾ.ಆನಂದ.ಕೆ ಇದ್ದರು.

ಮಲಕಪ್ಪ ಮಾಸ್ತರ ಸಾಹಿತ್ಯ ಸೇವೆ ಅನನ್ಯ

ಮುದ್ದೇಬಿಹಾಳ: ತಾಲೂಕಿನ ಮಲಕಪ್ಪ ಮಾಸ್ತರ ಅಮರಗೋಳ ಎಂದು ಪರಿಚಿತರಾಗಿದ್ದ ಮಲಿಕ್ ಸಾಬ್ ನದಾಫ್ ಅವರ ಒಂಬತ್ತನೇ ಪುಣ್ಯಸ್ಮರಣೆ, ಶಿಕ್ಷಕ ರತ್ನ ಪ್ರಶಸ್ತಿ ಪ್ರಧಾನ ಸಮಾರಂಭ ಹಾಗೂ ಸನ್ಮಾನ ಕಾರ್ಯಕ್ರಮ ಭಾನುವಾರ ಅಮರಗೋಳ ಗ್ರಾಮದ ನಾಗಲಿಂಗೇಶ್ವರ ದೇವಸ್ಥಾನದಲ್ಲಿ ನಡೆಯಿತು.

ಸಾಹಿತಿ ಅಶೋಕ ಮಣಿ ಮಾತನಾಡಿ, ಭಾಮಿನಿ ಷಟ್ಪದಿಯಲ್ಲಿ ಹಲವಾರು ಗ್ರಂಥಗಳನ್ನು ಬರೆದಿರುವ ಧರ್ಮ ನಿರಪೇಕ್ಷತೆ ಹಾಗೂ ಆಚರಣೆಯ ಸ್ವಾತಂತ್ರ್ಯವನ್ನು ಹೊಂದಿದ್ದ ಮಲಕಸಾಬ್ ಅವರು ಸರ್ವ ಧರ್ಮಗಳನ್ನು ಪಾಲಿಸುತ್ತಿದ್ದರು. ತ್ರಿಪದಿಯಲ್ಲಿ ತಮ್ಮ ಸ್ವಂತ ಜೀವನ ಚರಿತ್ರೆ, ನಿರುಪಾದೇಶ್ವರ ಪುರಾಣ ಹಳೆಗನ್ನಡ ಸಾಹಿತ್ಯ ಪ್ರಕಾರದಲ್ಲಿ ಗ್ರಂಥಗಳನ್ನು ಬರೆದಿರುವ ಅವರು ನಿಜವಾದ ಮಾನವತವಾದಿ. ಮುಂದಿನ ವರ್ಷ ಅವರ ಹತ್ತನೇ ವರ್ಷದ ಜಯಂತ್ಯುತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ತೀರ್ಮಾನಿಸಲಾಗಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಮಾತನಾಡಿದ ಲಾಲಹುಸೇನ್ ಕಂದಗಲ್ ಅವರು, ಅಲ್ಪಸಂಖ್ಯಾತರಾದರೂ ಮಲಕಸಾಬ ಅವರ ಸಾಹಿತ್ಯ ಕೃಷಿ ಹಾಗೂ ದೃಷ್ಟಿಕೋನ ಬಹಳ ವಿಶಾಲವಾಗಿತ್ತು. ಹಲವಾರು ಗ್ರಂಥಗಳನ್ನು ಬರೆದು ಕನ್ನಡ ಸಾಹಿತ್ಯ ಪ್ರಚಾರ ಮಾಡಿ, ಎಲೆ ಮರೆಯ ಕಾಯಿಯಂತೆ ಜೀವಿಸಿದ ಅವರನ್ನು ಸಮಾಜ ಗುರುತಿಸಿದ್ದು ತಡವಾಗಿ ಎಂದು ವಿಷಾದ ವ್ಯಕ್ತಪಡಿಸಿದರು.

ಮುರ್ತಜಾಬೇಗಂ ಕೊಡಗಲಿ ಅವರಿಗೆ ಸಾಹಿತ್ಯ ರತ್ನ ಪ್ರಶಸ್ತಿಯನ್ನು ಕೊಡಲಾಯಿತು. ವಿನೋದ ಹಿರೇಮಠ. ಮಹಾದೇವಯ್ಯ ಹಿರೇಮಠ. ಉಪನ್ಯಾಸಕ ಲಾಲ್‌ಹುಸೇನ್ ಕಂದಗಲ್, ಹಿರಿಯ ಸಾಹಿತಿ ಬಿ.ಎಂ.ಹಿರೇಮಠ. ಕಾಶಿಮಬೀ ನದಾಫ್, ಶರಣ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಿಷತ್ತು ಜಿಲ್ಲಾಧ್ಯಕ್ಷ ರೆಹಮಾನ್ ಸಾಬ್ ಬಿದರಕುಂದಿ, ಅಶೋಕ ಮಣಿ, ಡಾ ಪ್ರಕಾಶ್ ನರಗುಂದ ಮಾತನಾಡಿದರು. ಭಾವೈಕ್ಯ ಸಾಹಿತ್ಯ ವೇದಿಕೆ ಮತ್ತು ಸಿಂಪಿ ಲಿಂಗಣ್ಣ ಸಾಹಿತ್ಯ ವೇದಿಕೆ ಸೇರಿದಂತೆ ಜನಪದ ಸಾಹಿತ್ಯ ಪರಿಷತ್ತು ಮುಂತಾದ ಸಂಘಟನೆಗಳು ಭಾಗವಹಿಸಿದ್ದರು. ಸಂಗಮೇಶ ಶಿವಡಗಿ ಸಂಗೀತ ಸೇವೆ ಮಾಡಿದರು.



ಕಾಂಗ್ರೆಸ್ ಸರ್ಕಾರದಲ್ಲಿ ಕಮಿಷನ್ ಹೆಚ್ಚಳ: ಆರೋಪ

ವಿಜಯಪುರ: ಈ ಹಿಂದಿನ ಸರ್ಕಾರಗಳಲ್ಲೂ ಕಮಿಷನ್ ಇತ್ತು. ಈಗಲೂ ಕಮಿಷನ್ ಇದೆ. ಕಮಿಷನ್ ಇಲ್ಲ ಎಂದು ಹೇಳಲು ಸಾಧ್ಯವಿಲ್ಲ, ದುರಂತ ಎಂದರೆ ಹಳೆಯ ಸರ್ಕಾರಕ್ಕಿಂತ ಈಗಿನ ಸರ್ಕಾರದಲ್ಲಿ ಕಮಿಷನ್ ಜಾಸ್ತಿಯೇ ಇದೆ ಎಂದು ಕರ್ನಾಟಕ ಸ್ಟೇಟ್ ಕಾಂಟ್ರಾಕ್ಟರ್ಸ್ ಅಸೋಸಿಯೇಷನ್ ರಾಜ್ಯಾಧ್ಯಕ್ಷ ಆರ್.ಮಂಜುನಾಥ ಗಂಭೀರ ಆರೋಪ ಮಾಡಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕಮಿಷನ್ ದಂಧೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಆಗುವುದಿಲ್ಲ, ಬದಲಾಗಿ ಅದನ್ನು ನಿಯಂತ್ರಣ ಮಾಡಬೇಕಿದೆ. ಇವರು ಮೂರು ವರ್ಷಗಳ ಹಳೆ ಬಿಲ್‌ಗಳಿಗೂ ಕೆಲವು ಇಲಾಖೆಗಳಲ್ಲಿ ಈಗಲೂ ಕಮಿಷನ್ ತೆಗೆದುಕೊಳ್ಳುತ್ತಿದ್ದಾರೆ ಎಂದು ದೂರಿದರು. ಇನ್ನು ರಾಜ್ಯ ಕಾಂಗ್ರೆಸ್ ಸರ್ಕಾರದ ಬಳಿಯಲ್ಲಿ ದುಡ್ಡಿಲ್ಲ, ಅವರ ಬಳಿ ಹಣವಿದ್ದಿದ್ದರೆ ಅವರು ಇಷ್ಟೊತ್ತಿಗೆ ಗುತ್ತಿಗೆದಾರರ ಬಿಲ್ ಪಾವತಿ ಮಾಡುತ್ತಿದ್ದರು. ರಾಜ್ಯ ಸರ್ಕಾರದಲ್ಲಿ ಹಣ ಇಲ್ಲದಿರುವುದಿಂದಲೇ ಗುತ್ತಿಗೆದಾರರ ಬಿಲ್ ಬಾಕಿ ಉಳಿಸಿಕೊಂಡಿರಬೇಕು ಎಂದು ಸಂಶಯ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಕಳೆದ ಮೂರು ವರ್ಷಗಳಿಂದ ಗುತ್ತಿಗೆದಾರರಿಗೆ ನೀಡಬೇಕಾದ 38 ಸಾವಿರ ಕೋಟಿ ರೂ. ಬಿಲ್ ಬಾಕಿ ಉಳಿಸಿಕೊಂಡಿದೆ, ಈ ಹಿನ್ನೆಲೆಯಲ್ಲಿ ಎಲ್ಲ ಗುತ್ತಿಗೆದಾರರು ಬೃಹತ್ ಹೋರಾಟಕ್ಕೆ ಅಣಿಯಾಗಲಿದ್ದು, ಮಾ.6 ರಂದು ಕೆಲಸ ಸ್ಥಗಿತಗೊಳಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಬೃಹತ್ ಹೋರಾಟ ನಡೆಸಲಾಗುವುದು ಎಂದರು.

ರಾಜ್ಯದ ಎಲ್ಲ ಜಿಲ್ಲೆಗಳಿಂದ ಸುಮಾರು 30ಸಾವಿರ ಗುತ್ತಿಗೆದಾರರು ಭಾಗಿಯಾಗಲಿದ್ದು, ಅಂದು ಒಂದು ದಿನದ ಕೆಲಸ ಸ್ಥಗಿತಗೊಳಿಸಿ ಹೋರಾಟ ಮಾಡಲಾಗುವುದು. ಆಗಲು ಸಹ ಸಿಎಂ ಹಾಗೂ ಸರ್ಕಾರ ಗುತ್ತಿಗೆದಾರರ ಬೇಡಿಕೆಗೆ ಸ್ಪಂದಿಸದಿದ್ದರೆ ನಂತರ ಏಪ್ರಿಲ್ ನಿಂದ ರಾಜ್ಯಾದ್ಯಂತ ಕಾಮಗಾರಿಗಳನ್ನು ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿಯ ಹೋರಾಟ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ವಿಜಯಪುರ ಜಿಲ್ಲೆಯೊಂದರಲ್ಲೇ ವಿವಿಧ ಇಲಾಖೆಗಳಲ್ಲಿ ಸೇರಿ ಒಟ್ಟು 2364 ಕೋಟಿ ರೂ. ಬಾಕಿಯಿದೆ. ಈ ಬಗ್ಗೆ ಸಂಬಂಧಿತ ಸಚಿವರಿಗೆ ಹಾಗೂ ಮುಖ್ಯಮಂತ್ರಿಗಳಿಗೆ ಸಾಕಷ್ಟು ಬಾರಿ ಮನವಿ ಮಾಡಿದರೂ ಸರ್ಕಾರ ಮಾತ್ರ ಸ್ಪಂದಿಸುತ್ತಿಲ್ಲ ಎಂದರು.

ಗುತ್ತಿಗೆದಾರರಾದ ಸಿ.ಆರ್. ರೂಡಗಿ, ಎಸ್.ಐ. ದೋಣೂರಮಠ, ಅರುಣ ಮಠ, ಸಿದ್ದು ಬಿರಾದಾರ, ಎಲ್.ಡಿ. ಮಡಗೊಂಡ, ಐ.ಎಂ. ಪಟ್ಟಣಶೆಟ್ಟಿ, ಜಗದೀಶ, ಅಲ್ಲಮಪ್ರಭು ಮಲ್ಲಿಕಾರ್ಜುನಮಠ, ರೇವಣಸಿದ್ದಪ್ಪ ನೋಟಗಾರ, ಎ.ಎಸ್.ಪಾಟೀಲ ಇದ್ದರು.



ಫೆ.25ರಂದು ಆಳ್ವಾಸ್ ನುಡಿಸಿರಿ ವೈಭವ

ವಿಜಯಪುರ: ಶ್ರೀಮಂತ ಸಾಂಸ್ಕೃತಿಕ ವೈಭವಕ್ಕೆ ಸಾಕ್ಷಿಯಾಗುವ ಮೂಡಬಿದಿರೆಯ ಆಳ್ವಾಸ್ ನುಡಿಸಿರಿಯ ವೈಭವವನ್ನು ಜಿಲ್ಲೆಯ ಜನತೆಗೂ ಉಣ ಬಡಿಸುವ ನಿಟ್ಟಿನಲ್ಲಿ ವಿಜಯಪುರದಲ್ಲಿ ಆಳ್ವಾಸ್ ಸಾಂಸ್ಕೃತಿಕ ವೈಭವ ಫೆ.25ರಂದು ಸಂಜೆ 5.45 ಕ್ಕೆ ದರಬಾರ ಹೈಸ್ಕೂಲ್ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಆಳ್ವಾಸ್ ನುಡಿಸಿರಿ ವಿರಾಸತ್ ವಿಜಯಪುರ ಘಟಕದ ಅಧ್ಯಕ್ಷ ಡಾ.ಕೆ.ಬಿ.ನಾಗೂರ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಆಳ್ವಾಸ್ ನುಡಿಸಿರಿ ವಿಶ್ವದಲ್ಲಿಯೇ ಸಾಂಸ್ಕೃತಿಕ ಸಿರಿ ವೈಭವಕ್ಕೆ ಪ್ರಸಿದ್ಧಿ ಪಡೆದಿದೆ, ಹೀಗಾಗಿ ಈ ವೈಭವವನ್ನು ವಿಜಯಪುರ ಜನತೆಗೂ ಆಸ್ವಾದಿಸುವ ಅವಕಾಶ ಕಲ್ಪಿಸುವ ದೃಷ್ಟಿಯಿಂದ ಈ ಪ್ರಯತ್ನವನ್ನು ಮಾಡಲಾಗುತ್ತಿದ್ದು, ಜಿಲ್ಲೆಯ ಎಲ್ಲ ಸ್ವಾಮೀಜಿಗಳ ಮಾರ್ಗದರ್ಶನ ಹಾಗೂ ಅನುಗ್ರಹದಿಂದ ಈ ವಿಶೇಷ ಕಾರ್ಯಕ್ರಮ ಸಂಘಟಿಸಲಾಗುತ್ತಿದ್ದು, ಆಳ್ವಾಸ್ ಎಜ್ಯುಕೇಷನಲ್ ಫೌಂಡೇಷನ್ ಅಧ್ಯಕ್ಷ ಡಾ.ಮೋಹನ್ ಆಳ್ವಾ ಅವರು ಅಧ್ಯಕ್ಷತೆ ವಹಿಸಲಿದ್ದು ಹಲವಾರು ಹರ-ಗುರು- ಚರ ಮೂರ್ತಿಗಳು ಪಾವನ ಸಾನ್ನಿಧ್ಯ ವಹಿಸಲಿದ್ದಾರೆ ಎಂದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾಪನದ 500 ಕ್ಕೂ ಹೆಚ್ಚು ವಿದ್ಯಾರ್ಥಿ ಕಲಾವಿದರು ಯೋಗ ದೀಪಿಕಾ, ಶಾಸ್ತ್ರೀಯ ನೃತ್ಯ - ಅಷ್ಟಲಕ್ಷ್ಮೀ, ಬಡಗುತಿಟ್ಟು ಯಕ್ಷಗಾನ ಶಂಕರಾರ್ಧ ಶರೀರಿನೀ, ಗುಜರಾತಿನ ದಾಂಡಿಯಾ, ಮಣಿಪುರಿ ಸ್ಟಿಕ್ ಡ್ಯಾನ್ಸ್, ಸಾಹಸಮಯ ಮಲ್ಲಗಂಬ, ಸೃಜನಾತ್ಮಕ ನೃತ್ಯ, ಕಥಕ್ ಸೇರಿ ಇತರೆ ಸಾಂಸ್ಕೃತಿಕ ಕಲಾ ವೈಭವದ ಕಲೆಯನ್ನು ಕಲಾವಿದರು ವಿಜಯಪುರದ ಜನತೆಗೆ ಉಣಬಡಿಸಲಿದ್ದಾರೆ ಎಂದರು.



ಈ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆಗಳನ್ನು ಭರದಿಂಧ ಕೈಗೊಳ್ಳಲಾಗಿದ್ದು, 6 ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗಿದ್ದು, ಈ ಕಾರ್ಯಕ್ರಮಕ್ಕೆ ಪ್ರವೇಶ ಸಂಪೂರ್ಣ ಉಚಿತವಾಗಿದೆ, ಡಾ.ನಾಗೂರ ಗ್ರುಪ್ ಎಜ್ಯುಕೇಷನ್, ಚಾಣಕ್ಯ ಕೆರಿಯರ್ ಅಕ್ಯಾಡೆಮಿ, ಲೋಣಿ ಗ್ರುಪ್ ಆಫ್ ಎಜ್ಯುಕೇಷನ್, ದರಬಾರ ಶಿಕ್ಷಣ ಸಂಸ್ಥೆಗಳ ಸಮೂಹ ಮೊದಲಾದ ಸಂಘ- ಸಂಸ್ಥೆಗಳು ಈ ಕಾರ್ಯಕ್ರಮಕ್ಕೆ ಸಹಯೋಗ ನೀಡಿವೆ ಎಂದರು.

ಪಾಲಿಕೆ ಸದಸ್ಯ ರಾಜಶೇಖರ ಮಗಿಮಠ, ವಿಡಿಎ ಮಾಜಿ ಅಧ್ಯಕ್ಷ ಚಂದ್ರಕಾಂತ ಶೆಟ್ಟಿ, ಚಾಣಕ್ಯ ಕೆರಿಯರ್ ಅಕ್ಯಾಡೆಮಿ ಸಂಸ್ಥಾಪಕ ಎನ್.ಎಂ. ಬಿರಾದಾರ, ಲೋಣಿ ಗ್ರುಪ್ ಎಜ್ಯುಕೇಷನ್ ಸೊಸೈಟಿ ಅಧ್ಯಕ್ಷ ಸುರೇಶ ಲೋಣಿ, ದರಬಾರ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ರಾಜೇಶ ದರಬಾರ ಇದ್ದರು.

ಶಿಕ್ಷಕರ ಚುನಾವಣೆ: ಎಸ್.ಎಸ್.ಪಾಟೀಲ ಬಣಕ್ಕೆ ಭರ್ಜರಿ ಗೆಲುವು

ಚಡಚಣ: ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ಸಹಕಾರಿ ಪತ್ತಿನ ಸಂಘದ ಆಡಳಿತ ಮಂಡಳಿ ನಿರ್ದೇಶಕರ 2026-31ನೇ ಸಾಲಿನ ಚುನಾವಣೆಯು ಫೆ.22ರಂದು ಭಾನುವಾರ ನಡೆಯಿತು.

1995ರಿಂದ ಸತತವಾಗಿ ಗೆಲುವು ಸಾಧಿಸಿದ ಎಸ್.ಎಸ್.ಪಾಟೀಲ ಬಣವು 2026-31ನೇ ಸಾಲಿಗೆ ನಡೆದ ಚುನಾವಣೆಯಲ್ಲಿ 7ನೇ ಬಾರಿಯೂ ಕೂಡ ಭರ್ಜರಿ ಗೆಲುವು ಸಾಧಿಸಿ ಈ ಭಾಗದಲ್ಲಿ ತನ್ನ ಪಾರುಪತ್ಯ ಮೆರೆದಿದೆ. ಒಟ್ಟು 13 ಸ್ಥಾನಗಳಿದ್ದು, ಅದರಲ್ಲಿ ಮಹಿಳಾ ಮೀಸಲು 2 ಸ್ಥಾನಗಳಿಗೆ ಸುನೀತಾ ಕುಲಕರ್ಣಿ (ಮಹಿಳೆ) ಗಿರಿಜಾಬಾಯಿ ಮುಜಗೊಂಡ (ಮಹಿಳೆ), ಹಿಂದುಳಿದ ವರ್ಗ ಅ ಸ್ಥಾನಕ್ಕೆ ಮಾಳಪ್ಪ ಕಾಟೆ, ಹಿಂದುಳಿದ ವರ್ಗ ಬ ಸ್ಥಾನಕ್ಕೆ ಪ್ರಶಾಂತ ಕುರ್ಲೆ, ಪರಿಶಿಷ್ಟ ಜಾತಿ ಸ್ಥಾನಕ್ಕೆ ಸತೀಶ ಬಗಲಿ ಹಾಗೂ ಪರಿಶಿಷ್ಟ ಪಂಗಡ ಸ್ಥಾನಕ್ಕೆ ಬಸಣ್ಣ ಪೂಜಾರಿ ಅವರು ಅವಿರೋಧ ಆಯ್ಕೆಯಾಗಿದ್ದಾರೆ.

ಒಟ್ಟು 9 ಅಭ್ಯರ್ಥಿಗಳು ಕಣದಲ್ಲಿದ್ದು, ಎಸ್.ಎಸ್.ಪಾಟೀಲ ಅವರ ಬಣದ 7 ಅಭ್ಯರ್ಥಿಗಳಾದ ಇರಫಾನಅಲಿ ಶೇರಅಲಿ ಮಕಾನದಾರ 456,



ಗುರು ಚೇವೂರ 483, ಜಗದೀಶ ಸುರೇಶ ಕರಜಗಿ 466, ಮಲ್ಲಿಕಾರ್ಜುನ ಗುರುಬಾಳ ತೇಲಿ 473, ರಾಜಕುಮಾರ ಶ್ರೀಶೈಲ ಉಮದಿ 463, ಸಂತೋಷ ಶಾಂತಪ್ಪ ಬಿರಾದಾರ 463, ಸಿದಗೊಂಡಪ್ಪಗೌಡ ಚಂದ್ರಕಾಂತ ಪಾಟೀಲ 460 ಮತ ಪಡೆದು ವಿಜಯಶಾಲಿಯಾದರೆ ಪ್ರತಿಸ್ಪರ್ಧಿ ಅಭ್ಯರ್ಥಿಗಳಾದ ಅರುಣ ಶ್ರೀಪತಿ ಬಂಡಗಾರ 72 ಮತ, ಸಿದ್ದಾರಾಮು ದುಂಡಪ್ಪ ಮಾಳಾಬಗಿ 89 ಮತ ಪಡೆದು ಪರಾಭವಗೊಂಡಿದ್ದಾರೆ ಒಟ್ಟು 7 ಮತಗಳು ತಿರಸ್ಕೃತಗೊಂಡಿವೆ ಎಂದು ಚುನಾವಣಾಧಿಕಾರಿ ವಿ.ಪಿ.ನಾಯಕ ತಿಳಿಸಿದ್ದಾರೆ.

ಬೃಹತ್ ಹಿಂದೂ ಸಮ್ಮೇಳನ: ಶೋಭಾಯಾತ್ರೆ



ಬಸವನಬಾಗೇವಾಡಿ: ಪಟ್ಟಣದಲ್ಲಿ ಬೃಹತ್ ಹಿಂದೂ ಸಮ್ಮೇಳನದ ನಿಮಿತ್ತ ಸಂಭ್ರಮದ ಸಾಂಸ್ಕೃತಿಕ ಶೋಭಾಯಾತ್ರೆ ನಡೆಯಿತು. ಬಸವೇಶ್ವರ ದೇವಸ್ಥಾನದಿಂದ ಆರಂಭಗೊಂಡ ಸಾಂಸ್ಕೃತಿಕ ಶೋಭಾಯಾತ್ರೆ ಬಸವೇಶ್ವರ ವೃತ್ತ ಅಗಸಿ ಮಾರ್ಗವಾಗಿ ವಿವಧೆಡೆ ಸಂಚರಿಸಿ ವೀರಭದ್ರೇಶ್ವರ ಉದ್ಯಾನವನ ತಲುಪಿತು.


ಶಿವಪುತ್ರ ಶರಣರು, ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ, ಹಿಂದೂ ಸಮ್ಮೇಳನ ಸಂಚಾಲನ ಸಮಿತಿ ಮಂಡಲ ಅಧ್ಯಕ್ಷ ಚಂದ್ರಕಾಂತ ಪಟ್ಟಣಶೆಟ್ಟಿ(ಅಶ್ವಿನಿ), ಸಮಿತಿಯ ಪ್ರಮುಖರಾದ ಎಸ್.ಎ.ದೇಗಿನಾಳ, ಶಿವಪುತ್ರ ಕೆಂಭಾವಿ, ಕೃಷ್ಣಾ ಬಡಿಗೇರ, ದಯಾನಂದ ಸಾರವಾಡ, ವಿವೇಕಾನಂದ ಕಲ್ಯಾಣಶೆಟ್ಟಿ, ಡಾ.ಬಸವರಾಜ ಚವ್ಹಾಣ, ರವಿಗೌಡ ಚಿಕ್ಕೊಂಡ, ಸಿದ್ದನಗೌಡ ಪಾಟೀಲ (ಹಂಚಿನಾಳ), ಶ್ರೀಶೈಲ ಶಿರಗುಪ್ಪಿ, ಗುರು ಕುಂಟೋಜಿ, ಶಶಿಕಾಂತ ಸ್ಥಾವರಮಠ, ಮಲ್ಲಿಕಾರ್ಜುನ ದೇವರಮನಿ, ವಿನೂತ ಕಲ್ಲೂರ, ಅಶೋಕ ಹಾರಿವಾಳ, ಮಣಿಕಂಠ ಕಲ್ಲೂರ, ಪಾರೀಶ ಹೊಸಮನಿ, ಸುನೀಲ ದುಂಬಾಳಿ, ಮುತ್ತು ಕಿಣಗಿ, ಕವಿತಾ ದುಂಬಾಳಿ, ಸಾವಿತ್ರಿ ಕಲ್ಯಾಣಶೆಟ್ಟಿ, ಮಹಾದೇವಿ ಬಿರಾದಾರ, ವೈಷ್ಣವಿ ಕುಲಕರ್ಣಿ, ಸ್ವರೂಪರಾಣಿ ಬಿಂಜಲಬಾವಿ, ರೂಪಾ ಜಾಧವ, ತಾರಾ ಮಡಗೊಂಡ, ವಿಜು ತಾಳಿಕೋಟಿ, ರೂಪಾ ಆದಿಗೊಂಡ ಇದ್ದರು.

ತಂಬಾಕು ಜಾಹೀರಾತು ಕಿತ್ತೆಸೆದ ಕರವೇ

ದೇವರಹಿಪ್ಪರಗಿ: ಗುಟ್ಕಾ ಜಾಹೀರಾತುಗಳ ವಿರುದ್ಧ ಕರವೇ ಸಂಘಟನೆ ಸಿಡಿದೆದ್ದಿದ್ದಾರೆ. ಕಲ್ಯಾಣ ಕರ್ನಾಟಕ, ಕೆಎಸ್‌ಆರ್‌ಟಿಸಿ ಬಸ್‌ಗಳ ಮೇಲೆ ಹಾಕಿದ್ದ ಗುಟ್ಕಾ ಜಾಹೀರಾತುಗಳ ಪೋಸ್ಟರನ್ನು ಕರ್ನಾಟಕ ರಕ್ಷಣಾ ವೇದಿಕೆ(ಪ್ರವೀಣ ಶೆಟ್ಟಿ) ಸಂಘಟನೆಯ ತಾಲೂಕು ಅಧ್ಯಕ್ಷ ರಹೀಮಾನ್ ಕನಕಲ್ ಅವರ ನೇತೃತ್ವದಲ್ಲಿ ಕಾರ್ಯಕರ್ತರು ಕಿತ್ತೆಸೆಯುತ್ತಿದ್ದಾರೆ. ಬಸ್ಸಳ ಮೇಲೆ ಅಂಟಿಸಿದ್ದ ತಂಬಾಕು ಜಾಹೀರಾತುಗಳನ್ನ ತೆಗೆದು ಅವುಗಳಿಗೆ ಬೆಂಕಿ ಹಚ್ಚಿ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಟ್ಟಣದಲ್ಲಿ ಶನಿವಾರದಂದು ವೀರ ಗಣಾಚಾರಿ ಮಡಿವಾಳ ಮಾಚಿದೇವರ ಬಸ್ ನಿಲ್ದಾಣದಲ್ಲಿ ತಂಬಾಕು ಉತ್ಪನ್ನಗಳ ಜಾಹಿರಾತುಗಳನ್ನು ಹರಿದು ಹಾಕಿದ್ದಾರೆ. ವಿಮಲ್, ಆರ್‌ಎಂಡಿ ಸೇರಿ ತಂಬಾಕು ಉತ್ಪನ್ನಗಳ ಜಾಹಿರಾತು ಪೋಸ್ಟರ್‌ಗಳನ್ನ ಸಾರಿಗೆ ಬಸ್ಸಳ ಮೇಲೆ ಅಂಟಿಸಿರೋದನ್ನ ತೆರವು ಮಾಡಬೇಕು. ಇಲ್ಲದಿದ್ದರೆ ಕಂಡ ಕಂಡಲ್ಲಿ ಬಸ್ಸಳನ್ನ ನಿಲ್ಲಿಸಿ ಜಾಹಿರಾತುಗಳಿಗೆ ಮಸಿ ಬಳಿಯುತ್ತೇವೆ ಅಂತ ಎಚ್ಚರಿಕೆ ನೀಡಿದ್ದಾರೆ ಸಮಾಜದ ಸ್ವಾಸ್ಥ್ಯ ಕಾಪಾಡಿ ಕಾಟಾಚಾರಕ್ಕೆ ಆದೇಶ ಹೊರಡಿಸಿದರೆ ನಡಿಯಲ್ಲ ಕಾರ್ಯರೂಪಕ್ಕೆ ತರಬೇಕು ಎಂದು ಹೇಳಿದರು.

ತಾಲೂಕು ಉಪಾಧ್ಯಕ್ಷರಾದ ನಾಗೇಶ ಕಮತಗಿ, ಮುಖಂಡರುಗಳಾದ ಸಂತೋಷ ರಾಠೋಡ, ಅಶೋಕ ಗೊಲ್ಲರ, ಹಸನಸಾಬ ಬಾಗವಾನ, ದಿಲೀಪ ದೊಡ್ಡಮನಿ ಸೇರಿದಂತೆ ಹಲವಾರು ಕಾರ್ಯಕರ್ತರು ಉಪಸ್ಥಿತರಿದ್ದರು.



ಮಕ್ಕಳನ್ನೆ ಆಸ್ತಿ ಮಾಡಿಕೊಳ್ಳಿ: ಕಾಪಸೆ



ಝುಳಕಿ: ಮಕ್ಕಳಿಗಾಗಿ ಆಸ್ತಿ ಮಾಡುವುದುಕ್ಕಿಂತ ನಿಮ್ಮ ಮಕಕಳನ್ನೆ ಆಸ್ತಿ ಮಾಡಿಕೊಳ್ಳಿ ಎಂದು ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಘವೇಂದ್ರ ಸಾಹುಕಾರ ಕಾಪಸೆ ಎಂದು ಹೇಳಿದರು. ಸ್ಥಳೀಯ ಬ್ರಿಲಿಯಂಟ್ ಪ್ರಾಥಮಿಕ ಶಾಲೆಯ ಆವರಣದಲ್ಲಿ ನಡೆದ ಅಕ್ಷರ ಲೋಕದ ನಕ್ಷತ್ರಗಳ ಸಮಾರಂಭದಲ್ಲಿ ಉಧ್ಘಾಟಿಸಿ ಮಾತನಾಡಿದ ಅವರು, ನಿಮ್ಮ ಮಕ್ಕಳು ಒಳ್ಳೆಯ ಸಂಸ್ಕೃತಿ ಜೊತೆ ಶಿಕ್ಷಣ ನೀಡಿ ಮಕ್ಕಳ ಕೈಯಲ್ಲಿ ಮೊಬೈಲ್ ಕೊಟ್ಟು ಅವರ ಜೀವನ ಹಾಳ ಮಾಡಬೇಡಿ. ನೀಮ್ಮ ಮಕ್ಕಳ ಜೀವನ ನೀಮ್ಮ ಕೈಯಲ್ಲಿ ಇದೆ ಶಾಲೆಯ ಜೀವಂತ ದೇವಾಲಯ ಮಕ್ಕಳೆ ದೇವರು ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಿ ಶಿಕ್ಷಣ ಜೊತೆ ಒಳ್ಳೆಯ ಸಂಸ್ಕಾರ ನೀಡಿ ಎಂದು ಹೇಳಿದರು. ಗ್ರಾಪಂ ಮಾಜಿ ಅಧ್ಯಕ್ಷ ಸಣ್ಣಪ್ಪ ತಳವಾರ ಮಾತನಾಡಿದರು. ಅನ್ನಧಾನಿ ಭಾರತಿ ಅಪ್ಪಣ್ಣ ಮಹಾಸ್ವಾಮಿಗಳು, ದಿವ್ಯ ಸಾನಿಧ್ಯ ವಹಿಸಿದರು. ಷಡಕ್ಷರ ಮಹಾಸ್ವಾಮಿಗಳು, ಯುವ ಉಮೇದಿದ್ದಾರ ವಿನೋದ ಶರಶ್ಯಾಡ, ಅಧ್ಯಕ್ಷ ಸಿದ್ದರ್ಥ ಬ. ವಾಘಮೋರೆ, ಸಂತೋಷ ಗೌಡ ಪಾಟೀಲ, ಶಂಕರಗೌಡ ಬಿರಾದಾರ, ಸುನೀಲ ಹೂಗಾರ ಹಾಗೂ ಮಕ್ಕಳು, ಪಾಲಕರು ಉಪಸ್ಥಿತರಿದ್ದರು.

ಎಕ್ಸಲೆಂಟ್‌ನ 95 ವಿದ್ಯಾರ್ಥಿಗಳು ಆಯ್ಕೆ

ವಿಜಯಪುರ: ಪ್ರತಿ ವರ್ಷ ಹೆಚ್ಚು ಫಲಿತಾಂಶ ನೀಡುವುದರೊಂದಿಗೆ ರಾಜ್ಯದ ಜನರ ನಿರೀಕ್ಷೆ ನಿಜ ಮಾಡುವ ಮೂಲಕ ಫಲಿತಾಂಶದ ನಾಗಲೋಟ ಮುಂದುವರಿಸಿದ ಎಕ್ಸಲೆಂಟ್ ಸಂಸ್ಥೆ ಅತ್ಯುತ್ತಮ ತರಬೇತಿ ನೀಡುವ ಮೂಲಕ ಕಿತ್ತೂರು ಸೈನಿಕ ಶಾಲೆಗೆ 95 ವಿದ್ಯಾರ್ಥಿನಿಯರು ಆಯ್ಕೆಯಾಗುವಂತೆ ಮಾಡಿ ಮತ್ತೊಮ್ಮೆ ಸಂಸ್ಥೆಯ ಗುಣಮಟ್ಟ ಸಾಬೀತು ಮಾಡಿದೆ ಎಂದು ಎಕ್ಸಲೆಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಕೌಲಗಿ ಹೇಳಿದರು. ಇತ್ತೀಚೆಗೆ ಜರುಗಿದ 2026ನೇ ಸಾಲಿನ ಕಿತ್ತೂರು ಸೈನಿಕ ಶಾಲೆಯ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳ ಕುರಿತು ಸಂತಸ ಹಂಚಿಕೊಂಡ ಅವರು, ಗುಣಮಟ್ಟದ ಶಿಕ್ಷಣ ಹಾಗೂ ತರಬೇತಿ ಹೊಂದಿದ ನುರಿತ ಶಿಕ್ಷಕ ಬಳಗ ನಿರಂತರ ಶ್ರಮ ಹಾಕಿ ಕಲಿಸುವ ಮೂಲಕ ಉತ್ತಮ ಫಲಿತಾಂಶ ನೀಡುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಆಯ್ಕೆಯಾದ ಮಕ್ಕಳಿಗೂ ಹಾಗೂ ಅವರಿಗೆ ತರಬೇತಿ ನೀಡಿದ ಬೋಧಕ ವರ್ಗಕ್ಕೂ ಅಭಿನಂದನೆ ಸಲ್ಲಿಸಿದರು. ಸಿಂಚನಾ ಪಡಶೆಟ್ಟಿ, ಸುಕೃತಾ ಮಂಕಣಿ, ಸಂಸ್ಕೃತಿ ಬಾಬಾನಗರ, ಸನ್ನಿಧಿಎಚ್ಚರಸ್ವಾಮಿಮಠ, ಸ್ಫೂರ್ತಿ ಮಸಳಿ, ಬೃಂದಾಪೂಜಾರಿ, ಡಿ.ಭಕ್ತಿ, ಶ್ರಾವಣಿ ಮಸೂತಿ, ಅಪೂರ್ವಾ ರಾಠೋಡ, ಸಿಂಚನಾ ಪಾಟೀಲ, ಶ್ರೀನಿಧಿ ಝುಳಕಿ, ಕೃಪಾನಿಧಿ ವೈದ್ಯಾ, ವೇದಾದಂಡಣ್ಣವರ, ವಚನಾ ಬಿರಾದಾರ, ರಶ್ಮೀ ಕಗ್ಗೋಡ, ಸಮನ್ವಿಕರಿಗಾರ, ಆದ್ಯಾ ಚೌಗಲೆ, ಶ್ರಾವಣಿ ಮುಂದಿನಮನಿ, ಸುಶ್ಮಿತಾ ಕರಿಹೊಳಿ, ಸಮಂತಾ ಹುಲಸಾಡ ಸೇರಿದಂತೆ 95 ವಿದ್ಯಾರ್ಥಿನಿಯರು ಉತ್ತಮ ಅಂಕಗಳನ್ನು ಪಡೆದು ಅತ್ಯುತ್ತಮ ಸಾಧನೆಗೈದಿದ್ದಾರೆ. ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.



ಕಿರುಸುದ್ದಿ

ಶ್ರೀಚನ್ನಬಸವೇಶ್ವರ ಮಹಾರಥೋತ್ಸವ

ಕುಷ್ಟಗಿ: ಸಮೀಪದ ನಿಡಶೇಸಿ ಗ್ರಾಮದ ಆರಾಧ್ಯ ದೈವ ಶ್ರೀಚನ್ನಬಸೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಭಾನುವಾರ ಸಂಜೆ ಮಹಾರಥೋತ್ಸವ ಅದ್ಧೂರಿಯಾಗಿ ಜರುಗಿತು. ಮಹಾರಥೋತ್ಸವ ಸಾಗುತ್ತಿದ್ದಂತೆ ಭಕ್ತರು ಹೂ, ಬಾಳೆ ಹಣ್ಣು, ಉತ್ತತ್ತಿ, ಮಂಡಳ ಸಮರ್ಪಿಸಿ ಭಕ್ತಿ ಪಾರಕಷ್ಠೆ ಮೆರೆದರು.

ಚನ್ನಬಸವ ಶಿವಾಚಾರ್ಯ ಮಹಾಸ್ವಾಮಿಗಳ, ಮದ್ದಾನೇಶ್ವರ ಮಠದ ಕರಿಬಸವ ಶಿವಚಾರ್ಯ ಮಹಾಸ್ವಾಮಿಗಳು, ಅಭಿನವ ಕರಿಬಸವ ಶಿವಚಾರ್ಯ ಸ್ವಾಮೀಜಿ, ಚಂದ್ರಶೇಖರ ದೇವರು ಸೇರಿದಂತೆ ಇನ್ನಿತರ ಶ್ರೀಗಳು ಸಾನಿಧ್ಯ ವಹಿಸಿದ್ದರು.

ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ್ ಪ್ರಗತಿಪರ ರೈತ ಡಾ.ದೇವೇಂದ್ರಪ್ಪ ಬಳೂಟಗಿ, ಯುವ ಮುಖಂಡ ದೊಡ್ಡಬಸನಗೌಡ ಪಾಟೀಲ ಬಯ್ಯಾಪುರು, ಮಹಾಂತಯ್ಯ ಆರಳೇಲೆಮಠ ಸೇರಿದಂತೆ ಇನ್ನಿತರ ಗಣ್ಯರು ಹಾಗೂ ಗ್ರಾಮದ ಗುರು, ಹಿರಿಯರು ಮತ್ತು ವಣಗೇರಿ, ತಳವಗೇರಾ, ಕೊರಡಕೇರಾ, ಮದಲಗಟ್ಟಿ, ಬ್ಯಾಲಿಹಾಳ, ಬೆಂಚಮಟ್ಟಿ, ಕುಷ್ಟಗಿ, ಚಳಗೇರಿ, ಶಾಖಾಪುರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಎಲ್ಲ ಕ್ರೀಡಾಪಟುಗಳು ಪ್ರೀತಿ-ವಿಶ್ವಾಸದಿಂದ ಕ್ರೀಡೆಯಲ್ಲಿ ಪಾಲ್ಗೊಳ್ಳಲಿ



ಯಲಬುರ್ಗಾ: ಪಟ್ಟಣದ ಮುಧೋಳ ರಸ್ತೆಯ ಶ್ರೀಸಿದ್ದರಾಮೇಶ್ವರ ನಗರ 11ನೇ ವಾರ್ಡ್‌ನಲ್ಲಿ ಸಿದ್ದರಾಮೇಶ್ವರ ನಗರ ಕ್ರಿಕೆಟ್ ಪ್ರೀಮಿಯರ್ ಲೀಗ್ ಸೀಸನ್-05-2026 ಉದ್ಘಾಟನಾ ಪಂದ್ಯ ಭಾನುವಾರ ಜರುಗಿತು. ಬಳಿಕ ಕ್ರೀಡಾಪಟು ಕಲ್ಲೇಶ ಕರಮುಡಿ ಮಾತನಾಡಿ, ಎಲ್ಲ ಆಟಗಾರರು ಸೋಲು-ಗೆಲುವು ಲೆಕ್ಕಿಸದೆ ಪ್ರೀತಿ-ವಿಶ್ವಾಸ ಸಹೋದರತ್ವದಿಂದ ಕ್ರೀಡೆಯಲ್ಲಿ ಪಾಲ್ಗೊಂಡು ಉತ್ತಮ ಪ್ರದರ್ಶನ ನೀಡಬೇಕು ಎಂದರು.

ವಿಎಸ್‌ಎಸ್‌ಎನ್ ಸೊಸೈಟಿಯ ಅಧ್ಯಕ್ಷ ದೊಡ್ಡಯ್ಯ ಗುರುವಿನ್ ಕಾರ್ಯಕ್ರಮಕ್ಕೆ ಚಾಲನೆ ನಿಡಿ ಮಾತನಾಡಿ, ಕ್ರೀಡಾಪಟುಗಳು ಕ್ರಿಕೆಟ್ ಆಟಕ್ಕೆ ಹೆಚ್ಚು ಒತ್ತು ನೀಡುತ್ತಿದ್ದಾರೆ ಆದರಂತೆ ವಿದ್ಯಾಭ್ಯಾಸದ ಕಡೆಗೊ ಹೆಚ್ಚು ಗಮನಹರಿಸುವ ಮೂಲಕ ಹೆಚ್ಚು ಅಂಕಗಳನ್ನು ಪಡೆದುಕೊಂಡು ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಹೇಳಿದರು.

ಸ್ಥಳೀಯ ನಿವಾಸಿ ಈರಪ್ಪ ಹೊಸಳ್ಳಿ ಅಧ್ಯಕ್ಷತೆ ವಹಿಸಿದ್ದರು. ಶರಣಪ್ಪ ಉಳ್ಳಾಗಡ್ಡಿ, ಈರಪ್ಪ ಕಲಕಬಂಡಿ, ಹನುಮಂತ ವಾಲ್ಮೀಕಿ,ಕಲ್ಲಪ್ಪ ಕಮ್ಮಾರ, ಬಾಬು ತೆಂಗಿನಕಾಯಿ, ಶಂಕರ್ ಬಣಕಾರ,ಮುದ್ದಿಬಸಪ್ಪ ಬಳಿಗಾರ, ದೀಪು ರಾಯಬಾಗಿ, ದೊಡ್ಡೇಶ ಚಂಡೂರ್, ಮಂಜು ಹಡಪದ, ಪ್ರವೀಣ್ ಅರಿಕೇರಿ, ಪಾಷಾ ಗುಳಗುಳಿ, ಮಾಂತೇಶ್ ಗಿಂಡಿ, ರಮೇಶ್, ಸಿದ್ದು ಹೊಸಳ್ಳಿ ಮತ್ತಿತರರು ಇದ್ದರು.

ಇಂದಿನ ಜಾಗೃತಿ ಸಮಾವೇಶದಲ್ಲಿ ಪಾಲ್ಗೊಳ್ಳಿ

ಯಲಬುರ್ಗಾ: ಸ್ಥಳೀಯ ಸಂಸ್ಥಾನ ಹಿರೇಮಠದ ಸಿದ್ದರಾಮೇಶ್ವರ ಭಕ್ತರು ಪಟ್ಟಣದ ಬಯಲು ರಂಗಮಂದಿರದಲ್ಲಿ ಫೆ.23ರಂದು ಸಂಜೆ 6ಗಂಟೆಗೆ ಭಕ್ತರ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದ್ದು ಶ್ರೀಮಠದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಪಟ್ಟಣದ ಮುಖಂಡ ದಾನನಗೌಡ ತೊಂಡಿಹಾಳ ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಕಳೆದ ಒಂದು ವರ್ಷದಿಂದ ಸ್ವಾಮೀಜಿಗಳ ಹಾಗೂ ಭಕ್ತರ ನಡುವೆ ಶ್ರೀಮಠದ ಆಸ್ತಿ ವಿಚಾರಕ್ಕೆ ಸಂಬಂಧಪಟ್ಟಂತೆ ವಾದ-ವಿವಾದ ನಡೆದಿದ್ದು ಇದರ ನಿವಾರಣೆಗಾಗಿ ಈ ಭಕ್ತರ ಜಾಗೃತಿ ಸಮಾವೇಶ ಆಯೋಜಿಸಲಾಗಿದ್ದು ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಬರಲಿದ್ದಾರೆ ಎಲ್ಲರೂ ಸೇರಿ ಶಾಂತಿಯುತವಾಗಿ ಸಮಾವೇಶ ನಡೆಸೋಣ ಎಂದರು.

ನ್ಯಾಯವಾದಿ ಅಕ್ಕಮಹಾದೇವಿ ಮಾಲಿಪಾಟೀಲ ಹಾಗೂ ನಿವೃತ್ತ ಪ್ರಾಂಶುಪಾಲ ಶರಣಪ್ಪ ಬೇಲೇರಿ ಮಾತನಡಿ ಈ ಸಮಾವೇಶ ಯಾರ ವಿರುದ್ಧವೂ ಅಲ್ಲ ಯಾರ ಪರವೂ ಅಲ್ಲ ಭಕ್ತರಿಗೆ ಸತ್ಯಾಸತ್ಯತೆ ಗೊತ್ತಾಗಲಿ ಎನ್ನುವ ಉದ್ದೇಶದಿಂದ ಈ ಸಮಾವೇಶ ನಡೆಯಲಿದೆ ಎಂದು ಹೇಳಿದರು. ಈ ವೇಳೆಯಲ್ಲಿ ಶರಣಪ್ಪ ಕೊಡಗಲಿ, ಮಲ್ಲಿಕಾರ್ಜುನ ಸಂಕನೂರ ಮತ್ತಿತರರು ಇದ್ದರು.



ಕುಷ್ಟಗಿ: ಸಮೀಪದ ನಿಡಶೇಸಿ ಗ್ರಾಮದ ಆರಾಧ್ಯ ದೈವ ಶ್ರೀಚನ್ನಬಸೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಭಾನುವಾರ ಸಂಜೆ ಮಹಾರಥೋತ್ಸವ ಅದ್ದೂರಿಯಾಗಿ ಜರುಗಿತು.

ಅಂಜನಾದ್ರಿ: ಜೈ ಹನುಮಾನ್-2ಗೆ ಮುಹೂರ್ತ

ಕೊಪ್ಪಳ: ಗಂಗಾವತಿ ತಾಲೂಕಿನ ಪೌರಾಣಿಕ ಪ್ರಸಿದ್ಧ ಅಂಜನಾದ್ರಿ ಬೆಟ್ಟದಲ್ಲಿ ಕಾಂತಾರ ಖ್ಯಾತಿಯ ನಾಯಕ ನಟ ರಿಷಬ್ ಶೆಟ್ಟಿ ಅಭಿನಯದ ಜೈ ಹನುಮಾನ್-2 ಚಲನಚಿತ್ರದ ಚಿತ್ರೀಕರಣಕ್ಕೆ ಭಾನುವಾರ ಚಾಲನೆ ನೀಡಲಾಯಿತು. ಹೈದ್ರಾಬಾದ್‌ನ ಮೈತ್ರಿ ಮೂವೀ ಮೇಕರ್ಸ್ ನಿರ್ಮಾಣದ ಜೈ ಹುನಮಾನ್-2 ಚಿತ್ರವನ್ನು ಪ್ರಶಾಂತ್ ವರ್ಮ ನಿರ್ದೇಶಿಸುತ್ತಿದ್ದಾರೆ. ಚಿತ್ರದ ಮುಹೂರ್ತ ಭಾನುವಾರ ಅಂಜನಾದ್ರಿ ಬೆಟ್ಟ ನೆರವೇರಿತು. ಕಾಂತಾರ ಯಶಸ್ಸಿನ ಹುಮ್ಮಸ್ಸಿನಲ್ಲಿನ ರಿಷಬ್ ಶೆಟ್ಟಿ ಜೈ ಹನುಮಾನ್-2 ಚಿತ್ರದ ಮೂಲಕ ಮತ್ತೆ ಬಣ್ಣ ಹಚ್ಚಲು ಸಜ್ಜಾಗಿದ್ದಾರೆ. ಕಳೆದ 2024ರಲ್ಲಿ ತೆರೆ ಕಂಡಿದ್ದ ಹನುಮಾನ ಚಿತ್ರ ಭರ್ಜರಿ ಹಿಟ್ ಆಯಿತು. ಎರಡು ವರ್ಷದ ಬಳಿಕ ಜೈ ಹನುಮಾನ್-2 ಚಿತ್ರದ ಮುಹೂರ್ತ ನೆರವೇರಿದೆ. ಇದೇ ವರ್ಷ ಈ ಚಿತ್ರ ತೆರೆಗೆ ಬರಲಿದೆ ಎನ್ನಲಾಗುತ್ತಿದೆ. ಈ ಚಿತ್ರದಲ್ಲಿ ರಿಷಬ್ ಶೆಟ್ಟಿ ನಟಿಸುತ್ತಿರುವ ಹಿನ್ನೆಲೆ ಅಂಜನಾದ್ರಿ ಬೆಟ್ಟದಲ್ಲಿ ಮುಹೂರ್ತ ನೆರವೇರಿಸಲಾಗಿದೆ.

ನಟ ರಿಷಬ್ ಶೆಟ್ಟಿ, ನನ್ನ ಸಲಹೆ ಹಿನ್ನೆಲೆ ಆಂಜನೇಯನ ಜನ್ಮ ಸ್ಥಳದಲ್ಲೇ ಜೈ ಹನುಮಾನ್-2 ಪ್ಯಾನ್ ಇಂಡಿಯಾ ಚಿತ್ರಕ್ಕೆ ಮುಹೂರ್ತ ನೆರವೇರಿದೆ ಎಂದರು.

ಪೂಜೆಗೂ ಮೊದಲು ಚಿತ್ರತಂಡ ಅಂಜನಾದ್ರಿ ಬೆಟ್ಟ ಏರಿ ಆಂಜನೇಯನ ದರ್ಶನ ಪಡೆದುಕೊಂಡರು. ಬಳಿಕ ಇಡೀ ಚಿತ್ರ ತಂಡ ಮುಹೂರ್ತದ ಪೂಜೆಯಲ್ಲಿ ಭಾಗಿಯಾಗಿತ್ತು. ಅಂಜನಾದ್ರಿ ಬೆಟ್ಟದ ಮೇಲೆ ಬರುತ್ತಿದ್ದಂತೆಯೇ ರಿಷಬ್ ಶೆಟ್ಟಿ ಕಂಡ ಅಭಿಮಾನಿಗಳು ತಮ್ಮ ನೆಚ್ಚಿನ ನಾಯಕ ನಟನನ್ನು ನೋಡಿ ಸಂಭ್ರಮಿಸಿದರು.



ಕೊಪ್ಪಳ: ಗಂಗಾವತಿ ತಾಲೂಕಿನ ಪೌರಾಣಿಕ ಪ್ರಸಿದ್ಧ ಅಂಜನಾದ್ರಿ ಬೆಟ್ಟದಲ್ಲಿ ಕಾಂತಾರ ಖ್ಯಾತಿಯ ನಾಯಕ ನಟ ರಿಷಬ್ ಶೆಟ್ಟಿ ಅಭಿನಯದ ಜೈ ಹನುಮಾನ್-2 ಚಲನಚಿತ್ರದ ಚಿತ್ರೀಕರಣಕ್ಕೆ ಭಾನುವಾರ ಚಾಲನೆ ನೀಡಲಾಯಿತು.

1.50 ಲಕ್ಷ ಹೂವುಗಳಲ್ಲಿ ಅರಳಿದ ಸಂವಿಧಾನದ ಪೀಠಿಕೆಯ ಪ್ರತಿಕೃತಿ

ಗಮನ ಸೆಳೆದ 'ಹೂವಿನ ಲೋಕ'

ರಾಚಪ್ಪಾ ಜಂಬಗಿ


ಕಲಬುರಗಿ: ಬಣ್ಣ ಬಣ್ಣದ ಹೂಗಳ ಕಲರವ, ಅಪರೂಪದ ಸಸ್ಯಗಳ ಸಮಾಗಮದಿಂದ ಕಲಬುರಗಿ ನಗರದ ಶ್ರೀಶರಣಬಸವೇಶ್ವರ ಕೆರೆಯ ಉದ್ಯಾನವನವೂ ಭಾನುವಾರ ಅಕ್ಷರಶಃ ಹೂವಿನ ಲೋಕವಾಗಿ ಮಾರ್ಪಟ್ಟು, ಬಿಸಿಲು ನಾಡಿನ ಪರಿಸರ ಪ್ರೇಮಿಗಳ ಹೃದಯಕ್ಕೆ ಹೂವಿನ ಸುಗಂಧಧಾರೆ ಎರೆದಿದ್ದಲ್ಲದೇ, ಮೇಳಕ್ಕೆ ಆಗಮಿಸಿದವರ ಹೃದಯ ಗೆಲ್ಲುವ ಮೂಲಕ ಪ್ರಕೃತಿಯ ಮನಮೋಹಕ ಲೋಕಕ್ಕೆ ಕೊಂಡೊಯ್ಯಿತು.

ಜಿಲ್ಲಾಡಳಿತ, ಜಿಪಂ, ಶ್ರೀಶರಣಬಸವೇಶ್ವರ ಕೆರೆ ನಿರ್ವಹಣಾ ಪ್ರಾಧಿಕಾರ ಹಾಗೂ ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಫೆ.22, 23 ಎರಡು ದಿನ ನಡೆಯುವ ಫಲಪುಷ್ಪ ಪ್ರದರ್ಶನ ಮತ್ತು ಮಾರಾಟ ಮೇಳವೂ ಬಿಸಿಲು ನಾಡಿನ ಮಂದಿಗೆ ಪರಿಸರ ಪ್ರೇಮಿಯಾಗಲು ಆಹ್ವಾನಿಸಿದ್ದಲ್ಲದೇ, ಬಗೆ ಬಗೆಯ ಹೂವುಗಳು, ಸಸ್ಯಗಳು, ತರಕಾರಿ ಹಾಗೂ ಹಣ್ಣುಗಳ ಕುರಿತಾದ ಚಿಂತನೆಗೆ ದಾರಿ ಮಾಡಿಕೊಟ್ಟಿತು.

ದಿಗಂತ ವಿಶೇಷ

1.50 ಲಕ್ಷ ಹೂವುಗಳಲ್ಲಿ ಸಂವಿಧಾನದ ಪೀಠಿಕೆ ಪ್ರತಿಕೃತಿ: ವಿವಿಧ ತಳಿಯ ಹೂಗಳಾದ ಚೆಂಡು ಹೂ, ಸೇವಂತಿಗೆ, ಚೈನಾ ಆಸ್ಟರ್, ಆಸ್ಪರಾಗಸ್ ಸೇರಿದಂತೆ ಸುಮಾರು 1.50 ಲಕ್ಷ ಹೂಗಳಲ್ಲಿ ಅರಳಿದ ಭಾರತದ ಸಂವಿಧಾನದ ಪೀಠಿಕೆಯ ಪ್ರತಿಕೃತಿ, ಮೇಳದ ಆಕರ್ಷಣೆಯ ಕೇಂದ್ರವಾಗಿದ್ದು, ಜೈಶ್ರೀಕೃಷ್ಣ ಇವೆಂಟ್ಸ್ ಹೂ ನಿರ್ಮಾಣ ವಿನ್ಯಾಸಕ ಕೆ.ಜಗದೀಶ್ ಅವರ ಕೈಯಲ್ಲಿ ಅರಳಿಸಿ,ಮೇಳಕ್ಕೆ ಬಂದ ಸಭೀಕರನ್ನು ತನ್ನತ್ತ ಕೈಬೀಸಿ ಕರೆಯುವಂತೆ ಮಾಡಿತು.

ಕಲ್ಲಂಗಡಿಯಲ್ಲಿ ಸುಂದರ ಕಲಾಕೃತಿಗಳು: ಭಾರತದ ಸಂವಿಧಾನದ ಪೀಠಿಕೆಯ ಪ್ರತಿಕೃತಿ ಸುತ್ತಮುತ್ತಲೂ ಕಲ್ಲಂಗಡಿ,ಸೌತೆಕಾಯಿ,ಗಜರಿ, ಸೂರೆಕಾಯಿ, ಕ್ಯಾಪ್ಸಿಕಮ್ ಇತರೆ ತರಕಾರಿ ಹಣ್ಣು ಬಳಸಿಕೊಂಡು ಕಲಬುರಗಿಯ ಪ್ರಸಿದ್ಧ ತಾಣಗಳಾದ ಶ್ರೀಶರಣಬಸವೇಶ್ವರ ದೇವಸ್ಥಾನ, ಖಾಜಾ ಬಂದೇ ನವಾಜ್ ದರ್ಗಾ, ಕಲಬುರಗಿ ಕೋಟೆ,ಬುದ್ಧ ವಿಹಾರ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಮಹಾತ್ಮಾ ಗಾಂಧಿ, ಚಂದ್ರಶೇಖರ ಆಜಾದ್, ಸಂಗೊಳ್ಳಿ ರಾಯಣ್ಣ, ಸುಭಾಷ ಚಂದ್ರ ಬೋಸ್ ಹೀಗೆ ಹಲವು ಸ್ವಾತಂತ್ರ್ಯ ಹೋರಾಟಗಾರರ,ಮಹಾಪುರಷರ ಕಲಾಕೃತಿಗಳು ವಿವಿಧ ಹಣ್ಣುತರಕಾರಿಗಳಲ್ಲಿ ಕೆತ್ತಿದ್ದು ಸಭೀಕರ ಗಮನ ಸೆಳೆಯಿತು. ಸ್ಥಳೀಯ ನಿವಾಸಿ ಇಂಪಾ ರವಿ, ಕಲಬುರಗಿಯಲ್ಲಿ ಆಲಂಕಾರಿಕ ಸಸ್ಯಗಳು, ವಿವಿಧ ಹಣ್ಣಿನ ತಳಿಗಳು ಮೇಲಾಗಿ ಎಲ್ಲಾ ತರಹದ ದ್ರಾಕ್ಷಿ, ಮಶ್ರೂಮ್ ಕೂಡ ಬೆಳೆಯಬಹುದು ಎಂಬುದಕ್ಕೆ ಇಂದಿನ ಫಲಪುಷ್ಪ ಪ್ರದರ್ಶನ ಸಾಕ್ಷಿ. ಎರಡು ದಿನಗಳ ಈ ಮೇಳ ರೈತರಿಗೆ, ಪ್ರಕೃತಿ ಪ್ರೇಯರಿಗೆ ಅನುಕೂಲವಾಗಲಿದೆ ಎಂದರು.



> ಪುಷ್ಪಗಳಲ್ಲಿ ಭಾರತದ ಸಂವಿಧಾನದ ಪೀಠಿಕೆ, ಹಣ್ಣುಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕೆತ್ತನೆ ಮೇಳಕ್ಕೆ ಕಳೆ ತಂದಿದೆ. ಎರಡು ದಿನಗಳ ಕಾಲ ನಡೆಯುವ ಈ ಮೇಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು, ಮಕ್ಕಳು ಬಂದು ನೋಡಬೇಕು. ಪ್ರವೇಶ ಉಚಿತವಾಗಿರಲಿದೆ.
>
> ■ ಫೌಜಿಯಾ ತರನ್ನುಮ್, ಡಿಸಿ

> ಕ್ಯಾಲಿಫೋರ್ನಿಯಾದ ಕ್ವಿನ್ ಚೆರ್ರಿ,ಮುದಿನಾ,ತಾಳೆ ಬೆಳೆ, ಪೈನಾಪಲ್,ಅಣಬೆ,ಬಾಳೆ ಪಪ್ಪಾಯ ಹೀಗೆ 500ಕ್ಕೂ ಅಧಿಕ ಬೆಳೆಗಳ ಪ್ರದರ್ಶಿಕೆ ಈ ಮೇಳದಲ್ಲಿ ಮಾಡಲಾಗಿದೆ. ಎರಡು ದಿನ ನಡೆಯುವ ಈ ಮೇಳವೂ ರೈತರಿಗೆ ಸಾಕಷ್ಟು ಮಾಹಿತಿ ಒದಗಿಸಲಿದೆ.
>
> ■ ಸಂತೋಷ ಇನಾಂದಾರ್, ಜಂಟಿ ನಿರ್ದೇಶಕ, ತೋಟಗಾರಿಕೆ ಇಲಾಖೆ

ಸರ್ಕಾರಿ ಸೌಲಭ್ಯ ಪಡೆಯಲು ಪತ್ರಕರ್ತರು ಒಂದಾಗಿ: ವೆಂಕಟ್ ಸಿಂಗ್

ಕೊಪ್ಪಳ: ಸರ್ಕಾರಿ ಸೌಲಭ್ಯ ಪಡೆಯಲು ಪತ್ರಕರ್ತರು ಒಂದಾಗಬೇಕು ಎಂದು ಮಾಹಿತಿ ಹಕ್ಕು ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತ ವೆಂಕಟ್ ಸಿಂಗ್ ಹೇಳಿದರು.

ನಗರದ ಮೀಡಿಯಾ ಕ್ಲಬ್ ನಲ್ಲಿ ನಡೆದ ರಾಜ್ಯ ಮಾಹಿತಿ ಆಯೋಗದ ಆಯುಕ್ತರಿಗೆ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಸರ್ಕಾರ ಐದು ಜನ ಪತ್ರಕರ್ತರನ್ನು ಮಾಹಿತಿ ಆಯುಕ್ತರನ್ನಾಗಿ ಮಾಡಿರುವುದು ದೇಶದಲ್ಲಿಯೇ ದಾಖಲೆ. ಜನಸ್ನೇಹಿ ಕಾಯ್ದೆಯ ಆಶಯ ಈಡೇರಲಿದೆ ಎಂದು ಪತ್ರಕರ್ತರನ್ನು ಆಯುಕ್ತ ಆಯ್ಕೆ ಮಾಡಿದ್ದಾರೆ. 38 ವರ್ಷ ಪತ್ರಕರ್ತನಾಗಿ ಕೆಲಸ ಮಾಡಿದ್ದ ನಮಗೆ, ಸರ್ಕಾರಿ ಸೌಲಭ್ಯ ಕೊಡಿಸುವಲ್ಲಿ ಲೋಪ ಆದಾಗ, ಸರಿಪಡಿಸುವುದು ಪತ್ರಕರ್ತರ ಜವಾಬ್ದಾರಿಯಾಗಿದ್ದು, ಇದೇ ಉದ್ದೇಶ ಹೊಂದಿದ ಮಾಹಿತಿ ಆಯೋಗಕ್ಕೆ ಕಲಬುರ್ಗಿ ಪೀಠಕ್ಕೆ ನೇಮಕ ಮಾಡಿದ್ದಾರೆ. ಈ ಭಾಗದ ವ್ಯಾಜ್ಯ ಬಗೆಹರಿಸುತ್ತಿದ್ದೇವೆ. ಈ ಶ್ರೇಯಸ್ಸು ಪತ್ರಕರ್ತನಾಗಿದ್ದಕ್ಕೆ ಸಿಕ್ಕಿದೆ. ಸರ್ಕಾರಿ ಸೌಲಭ್ಯ ಪಡೆಯಲು ಪತ್ರಕರ್ತರು ಒಂದಾಗಬೇಕು ಎಂದರು.

ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತ ಬದ್ರುದ್ದೀನ್ ಮಾತನಾಡಿ, ಮಾಧ್ಯಮದಲ್ಲಿ ಕೆಲಸ ಮಾಡಿದ ಅನುಭವ, ವೃತ್ತಿಯಲ್ಲಿ ಗೌರವ ಉಳಿಸಿಕೊಂಡವರನ್ನು ಆಯ್ಕೆ ಮಾಡಿದ್ದಕ್ಕೆ ಅವಕಾಶ ಇದೆ. ಹಾಗಾಗಿ ನಮ್ಮನ್ನು ನೇಮಿಸಿದ್ದಾರೆ. ವೃತ್ತಿ, ವೃತ್ತಿಭಾಂಧವರಿಂದ ಅವಕಾಶ ಸಿಕ್ಕಿದೆ. ಮಾಧ್ಯಮ ಸಮಿತಿಯಲ್ಲಿ, ಅಕ್ರಾಡೇಷನ್ ಸಮಿತಿಯಲ್ಲಿ ಕೆಲಸ ಮಾಡಿದ್ದಕ್ಕೆ ಪತ್ರಕರ್ತರ ಸ್ಥಿತಿಗತಿ ಗೊತ್ತಿದೆ. ಅನ್ನ ಕೊಟ್ಟ ವೃತ್ತಿ. ಬದುಕು ಕಟ್ಟಿಕೊಟ್ಟಿದೆ. ಶ್ರದ್ಧೆ, ತಾಳ್ಮೆಯಿಂದ ಇರಬೇಕು ಎಂದರು.

ಬೆಂಗಳೂರು ಪೀಠದ ರಾಜ್ಯ ಮಾಹಿತಿ ಆಯುಕ್ತ ಡಾ.ಹರೀಶಕುಮಾರ ಮಾತನಾಡಿದರು. ಮೀಡಿಯಾ ಕ್ಲಬ್ ಪ್ರಧಾನ ಕಾರ್ಯದರ್ಶಿ ದತ್ತು ಕಮ್ಮಾರ, ಉಪಾಧ್ಯಕ್ಷ ಮುಕ್ಕಣ್ಣ ಕತ್ತಿ, ಖಜಾಂಚಿ ಅನಿಲ ಬಾಚನಹಳ್ಳಿ, ಹಿರಿಯ ಪತ್ರಕರ್ತ ಸೋಮರಡ್ಡಿ ಅಳವಂಡಿ, ದೊಡ್ಡೇಶ ಎಲಿಗಾರ, ರವೀಂದ್ರ ವಿ.ಕೆ., ವಿಠ್ಠಲ್ ದುತ್ತರಗಿ, ವೀರಯ್ಯ ಹಿರೇಮಠ್, ರಮೇಶ್ ಗಾಣದಾಳ ಇದ್ದರು.



ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ

ಯಲಬುರ್ಗಾ: ತಾಲೂಕು ಪುಟಗಮರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗೆ ಶಾಲೆಯ ಇಕೋ ಕ್ಲಬ್ ಕಾರ್ಯಕ್ರಮದ ಅಡಿಯಲ್ಲಿ ಶಾಲೆಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಶಾಲೆಯ ವಿದ್ಯಾರ್ಥಿಗಳನ್ನು ವಿವಿಧ ಜಾತಿಯ ಗಿಡ ಮರಗಳ ಬಗ್ಗೆ ಮಾಹಿತಿ ನೀಡಲಾಯಿತು.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪುಟಗಮರಿ ಶಾಲೆಯಲ್ಲಿನ ಸಾಲುಮರದ ತಿಮ್ಮಕ್ಕ ಇಕ್ಕೋ ಕ್ಲಬ್ ತಂಡ ವತಿಯಿಂದ ಇಂದು ಪರಿಸರ ಸಂರಕ್ಷಣೆ ಮತ್ತು ಪರಿಸರ ಮಾಲಿನ್ಯ ತಡೆಯುವಿಕೆ ಹಾಗೂ ಇಂದಿನ ದಿನಗಳಲ್ಲಿ ಪ್ಲಾಸ್ಟಿಕ್ ಅನ್ನು ನಿಯಂತ್ರಣ ಮಾಡುವುದು ಹೇಗೆ? ಪ್ಲಾಸ್ಟಿಕ್‌ನಿಂದ ಪರಿಸರಕ್ಕೆ ಆಗುವ ಹಾನಿಗಳು, ಪ್ಲಾಸ್ಟಿಕ್ ಬಳಕೆಯನ್ನು ಹೇಗೆ ತಡೆಗಟ್ಟಬಹುದು ಎಂಬುದರ ಕುರಿತು ವಿಶೇಷ ಉಪನ್ಯಾಸ ರಮೇಶ್ ಆವೂಜಿ ಉಪನ್ಯಾಸ ನೀಡಿದರು. ಉಪನ್ಯಾಸಕರಾಗಿ ಆಗಮಿಸಿದವರು ರಮೇಶ್ ಆವೋಜಿ ವಿದ್ಯಾರ್ಥಿಗಳಿಗೆ ಸವಿಸ್ತಾರವಾಗಿ ಮಾಹಿತಿಯನ್ನು ನೀಡಿ ಅವರಲ್ಲಿ ಪರಿಸರದ ಕಾಳಜಿ ಕುರಿತು ಒಲವು ಮತ್ತು ಆಸಕ್ತಿಯನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದರು.

ನಂತರ ಚಂದ್ರಕುಮಾರ್ ಮುಖ್ಯ ಗುರುಗಳು ಮಾತನಾಡಿ, ಸಾಲುಮರದ ತಿಮ್ಮಕ್ಕ ಗಿಡಗಳನ್ನು ತಮ್ಮ ಮಕ್ಕಳಂತೆ ಬೆಳೆಸಿದ ತಾಯಿ ಇಂದಿಗೆ ನಾವು ಅವರನ್ನು ನಾವು ನೆನೆಪಿಸುತ್ತೇವೆ ಎಂದರು.

ನಂತರ ಶಿಕ್ಷಕ ಮಂಜುನಾಥ್ ಎಸ್ ತಳವಾರ್ ಮಾತನಾಡಿ, ಪರಿಸರ ಇಂದಿನ ದಿನಮಾನಗಳಲ್ಲಿ ಪರಿಸರ ಬಹಳ ಮುಖ್ಯ ಪ್ರತಿಯೊಬ್ಬರು ನಮಗೆ ಉಸಿರಾಡಲು ಗಾಳಿ, ನೀರು, ಬೆಳಕು ದಿನ ನಿತ್ಯ ಜೀವನದ ಅವಿ ಭಾಜ್ಯ ಅಂಗ. ಪರಿಸರವನ್ನು ಸಂರಕ್ಷಣೆ ಮಾಡಬೇಕು ಇದರ ಜೊತೆಗೆ ಹೆಚ್ಚು ಹೆಚ್ಚು ಗಿಡ ಮರಗಳನ್ನು ನೆಡಬೇಕು. ನಮ್ಮ ಸುತ್ತ ಮುತ್ತಲಿನ ವಾತವರಣವನ್ನು ಸ್ವಚ್ಛತೆ ಕಾಪಾಡಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು. ಕಾವೇರಿ, ಕುಮಾರಿ ಕಾವ್ಯ ಹಾಗೂ ಅತಿಥಿ ಶಿಕ್ಷಕರಾದ ಕುಮಾರ್ ಮಂಜುನಾಥ್ ತಳವಾರ್, ಲೀಲಾವತಿ, ಕಂಪ್ಯೂಟರ್ ನಿರ್ವಾಹಕರಾದ ಕುಮಾರಿ ಬಾಳಮ್ಮ ಮಾಲಿಪಾಟೀಲ್, ಶಿವನಗೌಡ ಮಾಲಿಪಾಟೀಲ ಅಡಿಗೆ ಸಹಾಯಕರಾದ ಶಿವಮೊಗ್ಗಮ್ಮ ಪೊಲೀಸ್ ಪಾಟೀಲ, ಮತ್ತು ಹಂಪಮ್ಮ ಬನ್ನಿಗೋಳ ವಿಶೇಷ ಉಪನ್ಯಾಸಕರನ್ನು ಸನ್ಮಾನಿಸುವುದರ ಮೂಲಕ ಅವರಿಗೆ ಗೌರವವನ್ನು ಸಲ್ಲಿಸಿದರು.



ಶಾಲಾ ಮಟ್ಟದ ಕಲಿಕಾ ಪ್ರದರ್ಶನ ಯಶಸ್ವಿ

ಅಫಜಲಪುರ: ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಹಾಗೂ ಅಜೀಂ ಪ್ರೇಮ್‌ಜಿ ಪ್ರತಿಷ್ಠಾನ ಜಿಲ್ಲಾ ಸಂಸ್ಥೆಯ ಸಹಭಾಗಿತ್ವದಲ್ಲಿ 2025-2026ನೇ ಸಾಲಿನ ಶಾಲಾ ಮಟ್ಟದ ಕಲಿಕಾ ಪ್ರದರ್ಶನ ಕಾರ್ಯಕ್ರಮವು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಂಕಲಗಾ ಗ್ರಾಮದಲ್ಲಿ ಯಶಸ್ವಿಯಾಗಿ ಜರುಗಿತು.

ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟವನ್ನು ಪ್ರತಿಬಿಂಬಿಸುವ ವಿವಿಧ ವಿಷಯಾಧಾರಿತ ಪ್ರದರ್ಶನಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಆಟ-ಪಾಠ ಚಟುವಟಿಕೆಗಳು ಹಾಗೂ ಸೃಜನಾತ್ಮಕ ಕೃತಿಗಳು ಗಮನ ಸೆಳೆದವು.

ವಿದ್ಯಾರ್ಥಿಗಳ ಪ್ರತಿಭೆ ಮತ್ತು ಆತ್ಮವಿಶ್ವಾಸ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯೋಪಾಧ್ಯಾಯ ಗಾಂಧಿ ದಪ್ಪೆದಾರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬಂಕಲಗಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಸಾವಿತ್ರಿ ಮೆತ್ರಿ, ಬಿಆರ್‌ಪಿ ಭೀಮರಾಯ ದೊಡ್ಡಮನಿ ವಲಯ ಸಂಪನ್ಮೂಲ ವ್ಯಕ್ತಿ ಮಹೇಶ್ ಉಪ್ಪಿನ್ ಹಾಗೂ ಸಂಪನ್ಮೂಲ ವ್ಯಕ್ತಿ ಶಿವಕುಮಾರ್ ಭಾಗವಹಿಸಿದರು.

ಸಹಶಿಕ್ಷಕಿ ರೋಹಿಣಿ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಮಹೇಶ್ ಸ್ವಾಗತಿಸಿದರು. ಸಿಬ್ಬಂದಿಗಳಾದ ಶಿವಾನಂದ ಹತ್ತಿ, ನಾಗಮ್ಮ ಸೋಲೆಕರ್, ಅನ್ನಪೂರ್ಣ ಪಾಟೀಲ, ರಮಾ ರಜಪೂತ್, ರೇಷ್ಮಾ ಗೋಪಗೊಂಡ, ಸಿದ್ದಮ್ಮ ಆಕಾಶಮಠ ಸೇರಿದಂತೆ ಊರಿನ ಪಾಲಕರು, ಪೋಷಕರು, ಹಿರಿಯರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಶಾಲೆಯ ಸಮಗ್ರ ಅಭಿವೃದ್ಧಿಗೆ ಇಂತಹ ಕಲಿಕಾ ಪ್ರದರ್ಶನಗಳು ಪ್ರೇರಣೆ ನೀಡುತ್ತವೆ ಎಂಬ ಅಭಿಪ್ರಾಯ ವ್ಯಕ್ತವಾಯಿತು.



ಶಿವಾಜಿ ದೇಶ ಪ್ರೇಮ ಮಾದರಿ: ಕೆಂಗೇರಿ

ಕುಷ್ಟಗಿ: ಶಿವಾಜಿ ಮಹಾರಾಜರ ತತ್ವಾದರ್ಶಗಳು ದೇಶ ಪ್ರೇಮ ನಮಗೆಲ್ಲ ಮಾದರಿಯಾಗಿದೆ ಎಂದು ಉಪ ತಹಶೀಲ್ದಾರ್ ರಜನಿಕಾಂತ್ ಕೆಂಗೇರಿ ಹೇಳಿದರು.

ಅವರು ತಾಲೂಕು ಆಡಳಿತದಿಂದ ಇಂದು ತಹಶೀಲ್ದಾರರ ಸಭಾಂಗಣದಲ್ಲಿ ಏರ್ಪಡಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ 399ನೇ ಜಯಂತಿ ಆಚರಣೆ ಹಿನ್ನೆಲೆಯಲ್ಲಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಹಿಂದು ರಾಷ್ಟ್ರ ನಿರ್ಮಾಣದ ಕನಸು ಕಂಡಿದ್ದ ಶಿವಾಜಿ ಮಹಾರಾಜರ ಸಾಹಸ ಗಾದೆ ಇನ್ನೂ ಹೆಚ್ಚಾಗಿ ತಿಳಿದುಕೊಳ್ಳಲು ಇಂತಹ ಜಯಂತಿಗಳ ಆಚರಣೆಗಳು ನಮಗೆ ಪೂರಕವಾಗುತ್ತವೆ ಎಂದು ನುಡಿದರು.

ಮುಖ್ಯ ಅತಿಥಿ ಯಾಗಿ ಉಪಸ್ಥಿತರಿದ್ದ ಎಸ್‌ಎಸ್ ಕೆ ಸಮಾಜದ ಅಧ್ಯಕ್ಷ ರವಿಂದ್ರ ಬಾಕಳೆ ಮಾತನಾಡಿ, ಶಿವಾಜಿ ಮಹಾರಾಜರ ಜಯಂತಿ ರಾಜ್ಯ ಸರಕಾರವು ನಿಂತು ಮಾಡುತ್ತಿರುವದು ಸಂತಸ ತಂದಿದೆ ಎಂದರು.

ಹಿಂದೂ ಸಂಘಟನೆಯ ವೀರೇಶ ಬಂಗಾರ ಶೆಟ್ಟರ್ ಮಾತನಾಡಿದರು. ಮಹೇಶ ಹಡಪದ ಉಪನ್ಯಾಸ ನೀಡಿದರು.

ಮರಾಠ ಸಮಾಜದ ಸಾಧಕ ಧರ್ಮಣ್ಣ ಚೋಪಡೆ, ಗ್ರಾಪಂ ಅಧ್ಯಕ್ಷ ಮಲ್ಲೋಜಿ ರಾವ ಕಾಳೆ, ಭಾರತ ಸರ್ಕಾರದ ರಕ್ಷಣಾ ಇಲಾಖೆಯ ಪ್ರಧಾನ ನಾವಿಕ ಏರ್ ಎಂಜಿನಿಯರ್ ಭುವನೇಶ್ವರ, ರವಿಂದ್ರ ಬಾಕಳೆ ಅವರನ್ನು ಗೌರವಿಸಿ ಸನ್ಮಾನಿಸಿದರು.

ಮುಖಂಡರಾದ ಎಸ್.ಎನ್.ಘೋರ್ಪಡೆ, ರಮೇಶ ಕಾಪ್ಸೆ, ಡಾ.ರವಿಕುಮಾರ್ ದಾನಿ, ಎ.ವೈ.ಲೋಕರೆ, ಹಿಂದು ಮಹಾಮಂಡಲದ ಬಸನಗೌಡಾ ಪಾಟೀಲ್ ಮಹಾಂತೇಶ ಆರೇರ್, ಶ್ರೀನಿವಾಸ ಬಾಕಳೆ, ಶಿವಾಜಿ ಸಿಂಗ್ರಿ,ಕೇಶವ ಕಾಟವಾ,ರಾಜಣಸಾ ಕಾಟವಾ, ಆನಂದ ರಾಯಬಾಗಿ, ಡಾ.ನಾಗರಾಜ ರಾಜೋಳಿ ಇತರರಿದ್ದರು.



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಚಿವ ಭೂಮಿಪೂಜೆ

ಕನಕಗಿರಿ: ಕ್ಷೇತ್ರದ ಎಲ್ಲೆಡೆ ಜನರು ರಸ್ತೆ, ರಸ್ತೆ ಎಂದು ಕೇಳುತ್ತಿದ್ದಾರೆ. ಈ ಹಿಂದಿನ ಶಾಸಕರು ರಸ್ತೆ ಅಭಿವೃದ್ಧಿ ಮಾಡದಿರುವುದೇ ಇದಕ್ಕೆ ಕಾರಣ. ಇದರಿಂದ ರಸ್ತೆ ನಿರ್ಮಾಣಕ್ಕೆ ಅತೀ ಹೆಚ್ಚು ಅನುದಾನ ತರಲಾಗುತ್ತಿದೆ ಎಂದು ಸಚಿವ ಶಿವರಾಜ ತಂಗಡಗಿ ಹೇಳಿದರು.

ತಾಲೂಕಿನ ಬಸರಿಹಾಳ ಗ್ರಾಮದಲ್ಲಿ ನಾಗಲಾಪುರ-ಬಸರಿಹಾಳ ರಸ್ತೆ ಸುಧಾರಣೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಭಾನುವಾರ ಮಾತನಾಡಿದರು.

ಈ ಹಿಂದೆ ಶಾಸಕನಾಗಿದ್ದ ಮನುಷ್ಯ ಐದು ವರ್ಷದಲ್ಲಿ ಒಂದೇ ಒಂದು ರಸ್ತೆ ನಿರ್ಮಾಣಕ್ಕೆ ಅನುದಾನ ತಂದಿಲ್ಲ, ಇದರಿಂದ ಈಗ ನನಗೆ ರಸ್ತೆ ನಿರ್ಮಾಣವೇ ಹೆಚ್ಚಿನ ಹೊರೆಯಾಗಿದೆ. ಕನಕಗಿರಿಯಿಂದ ಯತ್ನಟ್ಟಿ ರಸ್ತೆಗೆ 38 ಕೋಟಿ ರೂ. ವ್ಯಯ ಮಾಡಿ ರಸ್ತೆ ನಿರ್ಮಿಸಲಾಗುತ್ತಿದೆ. ಇದೀಗ 6.5 ಕೋಟಿ ವೆಚ್ಚದಲ್ಲಿ 6.3 ಕಿಮೀ. ಬಸರಿಹಾಳ-ನಾಗಲಾಪುರ ರಸ್ತೆ ಸುಧಾರಣೆ ಮಾಡಲಾಗುತ್ತಿದೆ. ಜೊತೆಗೆ 7.5 ಕೋಟಿ ರೂ. ವೆಚ್ಚದಲ್ಲಿ ಕನಕಗಿರಿ-ಚಿಕ್ಕತಾಂಡಾಕ್ಕೆ ಸಂಪರ್ಕಿಸುವ 5.8 ಕಿಮೀ. ರಸ್ತೆ ಸುಧಾರಣೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ 35 ಕೋಟಿ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಭೂಮಿಪೂಜೆ ಮಾಡಲಾಗುವುದು. ಕನಕಗಿರಿಯಿಂದ ದೇವಲಾಪುರ ರಸ್ತೆಗೆ 20 ಕೋಟಿ ರೂ. ಮೀಸಲಿರಿಸಲಾಗಿದೆ ಎಂದು ತಿಳಿಸಿದರು.

ಬಸರಿಹಾಳ ಗ್ರಾಮದಲ್ಲಿ ವಸತಿ ಶಾಲೆ ಆರಂಭಿಸಬೇಕು. ಪ್ರೌಢ ಶಾಲೆ ಮೇಲ್ದರ್ಜೆಗೇರ ಏರಿಸಬೇಕು. ಶಾಲೆಗೆ ಶಿಕ್ಷಕರ ಕೊರತೆ ಇದ್ದು, ಶಿಕ್ಷಕರನ್ನು ಒದಗಿಸಬೇಕು. 2 ಕೋಟಿ ರೂ. ವೆಚ್ಚದಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಿಸಬೇಕು ಎಂದು ಗ್ರಾಮಸ್ಥರು ಸಚಿವರಿಗೆ ಮನವಿ ಮಾಡಿದರು.

ಪ್ರೌಢ ಶಾಲೆ ಆರಂಭಕ್ಕೆ ಕ್ರಮ ಕೈಗೊಳ್ಳಲಾಗುವುದು. ಶೀಘ್ರವೇ ಶಿಕ್ಷಕರನ್ನು ಒದಗಿಸಲಾಗುವುದು ಎಂದು ಭರವಸೆ ನೀಡಿದರು. ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಸಿದ್ದಪ್ಪ ನಿರ್ಲೂಟಿ, ಪ್ರಚಾರ ಸಮಿತಿ ಅಧ್ಯಕ್ಷ ರಮೇಶ ನಾಯಕ, ನಗರ ಘಟಕದ ಅಧ್ಯಕ್ಷ ರವಿ ಪಾಟೀಲ, ಪಪಂ ಉಪಾಧ್ಯಕ್ಷ ಕಂಠಿರಂಗಪ್ಪ ನಾಯಕ, ಪಪಂ ಸದಸ್ಯರಾದ ಸಂಗಪ್ಪ ಸಜ್ಜನ, ಶರಣೇಗೌಡ, ಅನಿಲ್‌ಕುಮಾರ ಬಿಜ್ಜಳ, ರಾಜಾಸಾಬ್ ನಂದಾಪುರ, ಪ್ರಮುಖರಾದ ನಾಗಪ್ಪ ಹುಗ್ಗಿ, ವಕ್ತಾರ ಶರಣಪ್ಪ ಭತ್ತದ, ಜಿಪಂ ಮಾಜಿ ಸದಸ್ಯ ವೀರೇಶ ಸಮಗಂಡಿ, ಪ್ರಮುಖರಾದ ನಾಗಪ್ಪ ಚಿಂಚಲಿ, ಪಪಂ ಆಶ್ರಯ ಸಮಿತಿ ಸದಸ್ಯ ಕನಕಪ್ಪ ಮ್ಯಾಗಡೆ ಇದ್ದರು.



ಕೇಂದ್ರದ ಯೋಜನೆಗೆ ಸಾಲ ನೀಡದಿದ್ದರೆ ಕ್ರಮ

ರಾಯಚೂರು: ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳಿಗೆ ಬ್ಯಾಂಕ್‌ಗಳು ಸಾಲಸೌಲಭ್ಯಗಳನ್ನು ನೀಡದಿದ್ದರೆ ಅಂತಹ ಬ್ಯಾಂಕುಗಳು ಈ ಜಿಲ್ಲೆಯಲ್ಲಿ ವಹಿವಾಟು ಮಾಡುವುದಕ್ಕೆ ಅರ್ಹವಲ್ಲ ಎಂದು ಸಂಸದ ಜಿ.ಕುಮಾರ ನಾಯಕ ಲೀಡ್ ಬ್ಯಾಂಕ್ ವ್ಯವಸ್ಥಾಪಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಶನಿವಾರ ಜಿಪಂ ಸಭಾಂಗಣದಲ್ಲಿ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ, ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಪ್ರಮುಖವಾಗಿ ಕೈಗಾರಿಕೆಗಳ ಅಭಿವೃದ್ಧಿಗೆ ಆದ್ಯತೆಯನ್ನು ನೀಡಬೇಕೆಂಬ ಉದ್ದೇಶವಿದೆ. ಆದರೆ ಫಲಾನುಭವಿಯ ಹಿಂದಿನ ಸಿವಿಲ್ ಸ್ಕೋರ್ ಸರಿ ಇಲ್ಲದಿದ್ದನ್ನು ಗಮನಿಸಿ ಬಹುತೇಕ ಫಲಾನುಭವಿಗಳಿಗೆ ಎಲ್ಲ ಬ್ಯಾಂಕುಗಳು ಸಾಲಸೌಲಭ್ಯವನ್ನು ನೀಡುವುದಕ್ಕೆ ಮುಂದಾಗುತ್ತಿಲ್ಲ, ಇದರಿಂದ ಕೇಂದ್ರ ಸರ್ಕಾದ ಯೋಜನೆಗಳು ಯಶಸ್ವಿಯಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕೇಂದ್ರ ಯೋಜನೆಗಳ ಜಾರಿಗೆ ಯಾರದೇ ಖಾತರಿ ಬೇಕಾಗಿಲ್ಲ, ಇದಕ್ಕೆ ಕೇಂದ್ರ ಸರ್ಕಾರವೇ ಖಾತರಿಯಾಗಿದೆ. ಹೀಗಿರುವಾಗ ಬಡವರು ಸಣ್ಣ ಮತ್ತು ದೊಡ್ಡ ಕೈಗಾರಿಕೆಯನ್ನು ಆರಂಭಿಸುವುದಕ್ಕೆ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಯಾವುದೇ ಬ್ಯಾಂಕುಗಳು ಅವರ ಅರ್ಜಿಗೆ ಸ್ಪಂದನೆ ನೀಡಿ ಸಾಲ ಮಂಜೂರ ಮಾಡದಿದ್ದರೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಾದರೂ ಹೇಗೆ. ಆ ಯೋಜನೆಗಳನ್ನು ಜಾರಿಗೆ ತಂದರೂ ಪ್ರಯೋಜನವಿಲ್ಲದಂತಾಗುತ್ತದೆ. ಒಂದು ವೇಳೆ ಬ್ಯಾಂಕುಗಳು ಸಾಲವನ್ನು ನೀಡದಿದ್ದರೆ ಅಂತಹ ಬ್ಯಾಂಕುಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪ್ರಸಕ್ತ ಜಿಲ್ಲೆಯಲ್ಲಿ ಕೈಗೊಳ್ಳಲಾಗುತ್ತಿರುವ ರಾಷ್ಟ್ರೀಯ ಹೆದ್ದಾರಿಗೆ ಸಮಾನಾಂತರವಾಗಿ ಸರ್ವೀಸ್ ರಸ್ತೆ ನಿರ್ಮಾಣ ಮಾಡದೇ ಇರುವುದರಿಂದ ರೈತರು ಹೊಲ ಮನೆಗೆ ಹೋಗಿ ಬರುವುದು ಬಹಳ ಸಮಸ್ಯೆ ಆಗುತ್ತಿದೆ ಎಂದು ಶಾಸಕ ಬಸನಗೌಡ ದದ್ದಲ ಪ್ರಸ್ತಾಪಿಸಿದರು. ಇದಕ್ಕೆ ಉತ್ತರಿಸಿದ ಜಿಲ್ಲಾಧಿಕಾರಿ ನಿತೀಶ, ಸರ್ವೀಸ್ ರಸ್ತೆ ನಿರ್ಮಾಣಕ್ಕೆ ಬೇಕಾದ ಭೂಸ್ವಾಧೀನ ಮಾಡಿಕೊಂಡಿಲ್ಲ, ಈ ಕುರಿತು ರಾಜ್ಯ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದರು.

ಪ್ರಸಕ್ತ ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯ ಹೆಚ್ಚುತ್ತಿದ್ದರೂ ಹೈನುಗಾರಿಕೆ ಅತ್ಯಲ್ಪವಾಗಿದೆ. ರೈತರು ಹೆಚ್ಚೆಚ್ಚು ಹೈನುಗಾರಿಕೆಯಲ್ಲಿ ತೊಡಗಿಕೊಳ್ಳುವುದಕ್ಕೆ ಮುಂದಾಗಬೇಕು. ಇದರಿಂದ ಕೃಷಿ ಉತ್ಪನ್ನಗಳೊಂದಿಗೆ ಹೈನುಗಾರಿಕೆಯ ಆದಾಯವೂ ಬರುತ್ತದೆ ಇದರೊಂದಿಗೆ ಕೃಷಿ ಭೂಮಿಗೆ ಕೊಟ್ಟಿಗೆ ಗೊಬ್ಬರವೂ ಬರುತ್ತದೆ ಎಂದರು.

ಸಚಿವ ಎನ್.ಎಸ್.ಭೋಸರಾಜು, ಶಾಸಕಿ ಕರೆಮ್ಮ ನಾಯಕ, ಡಿಸಿ ನಿತೀಶ.ಕೆ., ಜಿಪಂ ಸಿಇಒ ಈಶ್ವರ ಕಾಂದೂ, ಎಸ್ಪಿ ಅರುಣಾಂಗ್ಶು ಗಿರಿ ಇದ್ದರು.



ಕಿರುಸುದ್ದಿ

ಎಮ್ಮಿಗನೂರಿನ ವಿರೂಪಾಕ್ಷ ಕೆ.ಗೆ ಪಿಎಚ್‌ಡಿ

◆**ಕುರುಗೋಡು:** ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಂಶೋಧನಾ ವಿದ್ಯಾರ್ಥಿ ವಿರುಪಾಕ್ಷ ಕೆ. ಅವರು ಡಾ.ಎಚ್.ಡಿ.ಪ್ರಶಾಂತ್



ಅವರ ಮಾರ್ಗದರ್ಶನದಲ್ಲಿ 'ಆಹಾರ, ಹಸಿವು ಮತ್ತು ಬಡತನದ ಸಾಮಾಜಿಕ ಆಯಾಮಗಳು-ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ' ಎಂಬ ವಿಷಯದ ಕುರಿತು ಅಧ್ಯಯನ ಮಾಡಿದ್ದಾರೆ. ಅವರು ಮಂಡಿಸಿದ ಮಹಾಪ್ರಬಂಧಕ್ಕೆ ಕನ್ನಡ ವಿಶ್ವವಿದ್ಯಾಲಯ, ಹಂಪಿಯು ಡಾಕ್ಟರೇಟ್ (ಪಿಎಚ್‌ಡಿ) ಪದವಿ ಘೋಷಿಸಿದೆ. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಫೆ.24ರಂದು ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುವ 34ನೇ ನುಡಿಹಬ್ಬ/ ಘಟಿಕೋತ್ಸವದಲ್ಲಿ ವಿರುಪಾಕ್ಷ ಕೆ. ಅವರಿಗೆ ಪಿಎಚ್‌ಡಿ ಪ್ರದಾನ ಮಾಡಲಿದ್ದಾರೆ. ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲೂಕಿನ ಎಮ್ಮಿಗನೂರಿನವರಾದ ವಿರುಪಾಕ್ಷ ಅವರು ಪ್ರಸ್ತುತ ಗಂಗಾವತಿ ತಾಲೂಕಿನ ಶ್ರೀರಾಮನಗರ (ದೇಸೆಕ್ಯಾಂಪ್)ನಲ್ಲಿ ಸಿಎನ್‌ಆರ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಮಾಜಶಾಸ್ತ್ರ ವಿಷಯದ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಎಸೆಸೆಲ್ಸಿ ವಿದ್ಯಾರ್ಥಿನಿಯರಿಗೆ ಬೀಳ್ಕೊಡುಗೆ



◆**ಹೂವಿನಹಡಗಲಿ:** ಪಟ್ಟಣದ ಸೊಪ್ಪಿನ ಕಾಳಮ್ಮ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಶಾರದಾ ಪೂಜಾ ಹಾಗೂ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿಯರ ಬೀಳ್ಕೊಡುಗೆ ಸಮಾರಂಭ ಕಾರ್ಯಕ್ರಮ ಅದ್ಧೂರಿಯಿಂದ ಜರುಗಿತು.

ಕರ್ನಾಟಕ ಜಾನಪದ ಪರಿಷತ್ತಿನ ಜಿಲ್ಲಾಧ್ಯಕ್ಷ ಕೆಸಿ ಪರಶುರಾಮ ಮಾತನಾಡಿ, ಮಕ್ಕಳು ವರ್ಷಪೂರ್ತಿ ಓದಿ ಪರೀಕ್ಷೆಗೆ ಸಿದ್ಧತೆಗೊಂಡಿರುತ್ತಾರೆ. ಮುಂಬರುವ ಪರೀಕ್ಷೆಗಳಲ್ಲಿ ಅತ್ಯುತ್ತಮ ಅಂಕಗಳನ್ನ ಗಳಿಸಿ ಇಡೀ ತಾಲೂಕಿಗೆ ನಿಮ್ಮ ತಂದೆ ತಾಯಿಗಳಿಗೆ ಗ್ರಾಮಕ್ಕೆ ಶಾಲೆಗೆ ಕೀರ್ತಿ ತರುವಂತಹ ಪ್ರತಿಭೆಗಳ ಹೊಮ್ಮಬೇಕು. ಇಂತಹ ಸನ್ನಿವೇಶದಲ್ಲಿ ಮಕ್ಕಳ ಶೈಕ್ಷಣಿಕ ಶಿಕ್ಷಣದ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸುವಂತಹ ಜಾನಪದ ಸೊಗಡಿನ ಗೀತೆಗಳನ್ನು ಮಕ್ಕಳಿಗೆ ತಿಳಿಸಬೇಕು ಎಂದು ಹೇಳಿದರು. ಹತ್ತನೇ ತರಗತಿ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಶಿಕ್ಷಕರು ಮಕ್ಕಳಿಗೆ ನಿಮ್ಮ ಮುಂದಿನ ಭವಿಷ್ಯದ ಗುರಿಯನ್ನು ಸಾಧಿಸಿ ಎಂದು ಮಾತನಾಡಿದರು. ಸಂಕ್ಷಿಪ್ತವಾಗಿ ಸಾಂಸ್ಕೃತಿಕ ಮನೋರಂಜನೆ ಕಾರ್ಯಕ್ರಮಗಳು ಜರುಗಿದವು. ಶಾಲೆಯ ಮುಖ್ಯ ಶಿಕ್ಷಕ, ಸಹ ಶಿಕ್ಷಕ ಸಿಬ್ಬಂದಿ ಮತ್ತು ಅಡುಗೆ ಸಿಬ್ಬಂದಿ ಇತರರಿದ್ದರು. ಜನಪದ ಗೀತೆ ಗಾಯನ ಕಾರ್ಯಕ್ರಮವು ಕೆ.ಸಿ.ಪರಶುರಾಮ್ ಅಂಗೂರ್ ಮತ್ತು ತಂಡದವರಿಂದ ಮನಸೂರೆಗೊಂಡಿತು.



ಕರೂರು: ಗಾದಿಲಿಂಗಪ್ಪ ತಾತನವರ ಜಾತ್ರೆ ಪ್ರಯುಕ್ತ ಭಾನುವಾರ ಬೆಳಗ್ಗೆಯಿಂದ ಸಂಜೆ ವರೆಗೆ 11ನೇ ವರ್ಷದ ಅನ್ನದಾಸೋಹ ಕಾರ್ಯಕ್ರಮ ಉತ್ತನೂರು ಗ್ರಾಮಸ್ಥರು ಅಚ್ಚುಕಟ್ಟಾಗಿ ನೆರವೇರಿಸಿದರು. ಈ ವೇಳೆ ಗ್ರಾಪಂ ಕಾರ್ಯದರ್ಶಿ ಕೆ.ಶಿವಮೂರ್ತಿ, ಉತ್ತರೇಶ ನಾಗರಾಜ, ಮರಿಯಪ್ಪ ಗಾದಿಲಿಂಗಪ್ಪ ಜಡೆಪ್ಪ ಮತ್ತಿತರರಿದ್ದರು.

ರಶ್ಮಿ ಅಂಗಡಿ ನಿಧನ

◆**ಸುರಪುರ:** ಕೆ.ತಳ್ಳಳ್ಳಿ ಗ್ರಾಮದ ಪ್ರಥಮ ದರ್ಜೆ ಗುತ್ತಿಗೆದಾರ ಶಿವಾನಂದ ಎಸ್.ಅಂಗಡಿ ಅವರ



ಧರ್ಮಪತ್ನಿ ರಶ್ಮಿ ಅಂಗಡಿ (42) ತೀವ್ರ ಹೃದಯಾಘಾತದಿಂದ ಕಲಬುರಗಿ ನಗರದ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಮೃತರು ಪತಿ, ಸುಪುತ್ರ, ಸುಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸುರಪುರ ತಾಲೂಕಿನ ಕುರುಬನ ತಳ್ಳಳ್ಳಿ ಗ್ರಾಮದ ಸ್ವಂತ ಜಮೀನಿನಲ್ಲಿ ಮಧ್ಯಾಹ್ನ 2:30ಕ್ಕೆ ವೀರಶೈವ ಧರ್ಮದ ವಿಧಿ ವಿಧಾನದಂತೆ ನೆರವೇರಲಿದೆ.



ಹುಣಸಗಿ: ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರು ಪೀಠದ ಜಗದ್ಗುರು ಪ್ರಸನ್ನಾನಂದ ಪುರಿ ಸ್ವಾಮೀಜಿ ಅವರ ಆರೋಗ್ಯದಲ್ಲಿ ಏರುಪೇರು ಆಗಿ ಆಸ್ಪತ್ರೆಯಲ್ಲಿದ್ದಾರೆ. ಈ ಹಿನ್ನೆಲೆ ತಾಲೂಕು ವಾಲ್ಮೀಕಿ ನಾಯಕ ಸಂಘದ ವತಿಯಿಂದ ಹಾಗೂ ಎಸ್ಸಿ, ಎಸ್ಟಿ ನೌಕರರ ಸಂಘದಿಂದ ಯುಕೆಪಿ ಕ್ಯಾಂಪಿನ ನೀಲಕಂಠೇಶ್ವರ ದೇವಸ್ಥಾನದಲ್ಲಿ ಶ್ರೀಗಳು ಬೇಗ ಗುಣಮುಖರಾಗಲಿ ಎಂದು ವಿಶೇಷ ಪೂಜೆ ಸಲ್ಲಿಸಲಾಯಿತು.

ಪ್ರಸನ್ನಾನಂದ ಶ್ರೀಗಳ ಆರೋಗ್ಯ ಚೇತರಿಕೆಗೆ ಪೂಜೆ

◆**ಹುಣಸಗಿ:** ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರು ಪೀಠದ ಜಗದ್ಗುರು ಪ್ರಸನ್ನಾನಂದ ಪುರಿ ಸ್ವಾಮೀಜಿ ಅವರ ಆರೋಗ್ಯದಲ್ಲಿ ಏರುಪೇರು ಆಗಿ ಆಸ್ಪತ್ರೆಯಲ್ಲಿದ್ದಾರೆ. ಈ ಹಿನ್ನೆಲೆ ತಾಲೂಕು ವಾಲ್ಮೀಕಿ ನಾಯಕ ಸಂಘದ ವತಿಯಿಂದ ಹಾಗೂ ಎಸ್ಸಿ, ಎಸ್ಟಿ ನೌಕರರ ಸಂಘದಿಂದ ಯುಕೆಪಿ ಕ್ಯಾಂಪಿನ ನೀಲಕಂಠೇಶ್ವರ ದೇವಸ್ಥಾನದಲ್ಲಿ ಶ್ರೀಗಳು ಬೇಗ ಗುಣಮುಖರಾಗಲಿ ಎಂದು ವಿಶೇಷ ಪೂಜೆ ಸಲ್ಲಿಸಲಾಯಿತು.

ನಂತರ ಸಮಾಜದ ಮುಖಂಡ ಗುರುನಾಥ ಹುಲಕಲ್ ಮಾತನಾಡಿ, ಸಮಾಜಕ್ಕೆ ಶ್ರೀಗಳ ಕೊಡುಗೆ ಅಪಾರವಿದೆ. ರಾಜ್ಯಾದ್ಯಂತ ಮಿಂಚಿನ ಸಂಚಾರ ಮಾಡಿ ಸಮಾಜಕ್ಕಾಗಿ ಹಗಲಿರುಳು ಶ್ರಮಿಸುತ್ತಿರುವ, ಎಸ್ಸಿ, ಎಸ್ಟಿ ಮೀಸಲಾತಿ ಏರಿಕೆಯಲ್ಲಿ 370 ಕಿಮೀ. ರಾಜನಹಳ್ಳಿಯಿಂದ ರಾಜಧಾನಿಯವರೆಗೆ ಪಾದಯಾತ್ರೆ ಮಾಡಿ, ನಂತರ 287 ದಿನಗಳ ವರೆಗೆ ಗಾಳಿ ಮಳೆ ಬಿಸಿಲು ಎನ್ನದೆ ಧರಣಿ ಸತ್ಯಾಗ್ರಹ ಮಾಡುವುದರ ಮೂಲಕ ಮೀಸಲಾತಿಯನ್ನು ಏರಿಸಿದ ಮಹಾ ತಪಸ್ವಿ ಎಂದು ಹೇಳಿದರು.

ಗುರು ಹುಲಕಲ್, ದೇವೇಂದ್ರಪ್ಪ ಬಳಿಚಕ್ರ, ಬಸನಗೌಡ ಪಾಟೀಲ್, ದುರಗೇಶಗೌಡ, ಗದ್ದೆಪ್ಪ ಗೆದ್ದಲಮರಿ, ಸಂಗಮೇಶ ವಜ್ಜಲ್, ಹಣಮಗೌಡ ಮಕಾಶಿ, ಭೀಮಣ್ಣ ವಾಲ್ಮೀಕಿ, ಭೀಮನಗೌಡ ಬೈಲಾಪುರ, ಕಾಂತೇಶ ಹಲಗಿಮನಿ, ವಿಠ್ಠಲ ಚೌವ್ಹಾಣ, ನಂದಣ್ಣ ದೋರಿ, ಬಸವರಾಜ ಕಾಮನಟಗಿ, ಆನಂದ ಬಾರಿಗಿಡದ, ಮಹೇಶ ಸ್ಥಾವರಮಠ, ನೀಲಕಂಠ ವಲಿ, ಮಲ್ಲಯ್ಯ ಗಣಾಚಾರಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ವಿಜಯನಗರ: ಹೊಸಪೇಟೆ ಹೊರ ವಲಯದ ರಾಷ್ಟ್ರೀಯ ಹೆದ್ದಾರಿ- 50ರ ಬಳಿ ಇರುವ ಕಣಿವೆ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಭಾನುವಾರ ಗುಗ್ಗಳ ಜಾತ್ರೆ ನಿಮಿತ್ತ ವಿಶೇಷ ಪೂಜೆ ನೆರವೇರಿಸಲಾಯಿತು. ದೇವಸ್ಥಾನದ ಅರ್ಚಕ ಮೃತ್ಯುಂಜಯ ಸ್ವಾಮಿ ಅವರ ನೇತೃತ್ವದಲ್ಲಿ ಸೂರ್ಯೋದಯಕ್ಕೂ ಮುನ್ನವ ವೀರಭದ್ರೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಪೂಜೆ ಸಲ್ಲಿಸಲಾಯಿತು. ನಂತರ ತುಂಗಭದ್ರಾ ಜಲಾಶಯಕ್ಕೆ ವೀರಗಾಸೆ ಕಲಾವಿದರ ತಂಡದೊಂದಿಗೆ ತೆರಳಿ ಗಂಗಾಪೂಜೆ ನೆರವೇರಿಸಲಾಯಿತು.

ವಾತ್ಸಲ್ಯ ಮನೆ ಹಸ್ತಾಂತರ ಕಾರ್ಯಕ್ರಮ | ರೋಹಿತಾಕ್ಷ ಅಭಿಮತ

ಮುಪ್ಪಿನಲ್ಲಿ ವಾತ್ಸಲ್ಯ ಮನೆ ಆಸರೆ

◆**ಬಳ್ಳಾರಿ:** ಇಳಿ ವಯಸ್ಸಿನಲ್ಲಿ ಸೂರಿಲ್ಲದ ನಿರಾಶ್ರಿತ ಹಾಗೂ ನಿರ್ಗತಿಕರಿಗೆ 'ವಾತ್ಸಲ್ಯ ಮನೆ' ನಿರ್ಮಿಸಿಕೊಡುವ ಮೂಲಕ, ಸಮಾಜದಲ್ಲಿ ಇತರರಂತೆ ಬದುಕು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸುತ್ತಿರುವ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯ ಅತ್ಯಂತ ಶ್ಲಾಘನೀಯ ಎಂದು ಗ್ರಾಮಾಭಿವೃದ್ಧಿ ಯೋಜನೆಯ ಬಳ್ಳಾರಿ ಜಿಲ್ಲಾ ನಿರ್ದೇಶಕ ರೋಹಿತಾಕ್ಷ ಹೇಳಿದರು.

ತಾಲೂಕಿನ ಮೋಕಾ ವಲಯದ ನಿವಾಸಿ ಶೇಕಮ್ಮ ಅವರಿಗೆ ವಾತ್ಸಲ್ಯ ಮನೆ' ಹಸ್ತಾಂತರಿಸಿ ಭಾನುವಾರ ಮಾತನಾಡಿದರು.

ಮೋಕಾ ವಲಯದ ನಿವಾಸಿ ಶೇಕಮ್ಮ ಅವರು, ಪ್ರತಿತಿಂಗಳು 1 ಸಾವಿರ ರೂ. ಮಾಸಾಶನ ಪಡೆಯುವ ಸದಸ್ಯರಾಗಿದ್ದಾರೆ. ಅವರಿಗೆ ವಾಸಿಸಲು ಸೂಕ್ತ ಮನೆಯಾಗಲಿ ಅಥವಾ ಇವರ ಆರೈಕೆ ಮಾಡಲು ಸಂಬಂಧಿಕರಾಗಲಿ ಇಲ್ಲ. ಇಂತಹ ಅಸಹಾಯಕ ಸ್ಥಿತಿಯಲ್ಲಿರುವವರಿಗೆ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ರೂ. 1.40 ಲಕ್ಷ ರೂ. ಮೊತ್ತದ ಅನುದಾನದಲ್ಲಿ, ಮಾತೃಶ್ರೀ ಡಾ.ಹೇಮಾವತಿ ವಿ.ಹೆಗ್ಗಡೆ ಅಮ್ಮನವರ ಮಾರ್ಗದರ್ಶನದಲ್ಲಿ ನಿರ್ಮಾಣಗೊಂಡ 'ವಾತ್ಸಲ್ಯ ಮನೆ'ಯನ್ನು ಹಸ್ತಾಂತರಿಸಲಾಗಿದೆ ಎಂದರು.



> **ಧರ್ಮದ ನೆಲೆಬೀಡಾದ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ನೂರಾರು ವರ್ಷಗಳ ಇತಿಹಾಸವಿದ್ದು, ಶ್ರೀಕ್ಷೇತ್ರದಲ್ಲಿ ಪ್ರತಿದಿನ ಭಕ್ತರಿಗೆ ಚತುರ್ದಾನಗಳಾದ ಅನ್ನದಾನ, ವಿದ್ಯಾದಾನ, ಔಷಧದಾನ ಹಾಗೂ ಅಭಯದಾನ ನಡೆಯುತ್ತಿದೆ. ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಹಾಗೂ ಡಾ.ಹೇಮಾವತಿ ವಿ.ಹೆಗ್ಗಡೆಯವರು ಜನಸಾಮಾನ್ಯರ ಬದುಕನ್ನು ಹಸನಗೊಳಿಸುವ ಸಾಮಾಜಿಕ ಕಳಕಳಿಯುಳ್ಳವರಾಗಿದ್ದಾರೆ.**
> ■ **ರೂಪಾಶ್ರೀ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ಜಿಲ್ಲಾ ಉಪಾಧ್ಯಕ್ಷೆ**

ಬಳ್ಳಾರಿ-1 ತಾಲೂಕಿನ ಕ್ಷೇತ್ರ ಯೋಜನಾಧಿಕಾರಿ ಬಸವರಾಜ ಕೆ., ಮೋಕಾ ಗ್ರಾಪಂ ಅಧ್ಯಕ್ಷೆ ಪಕ್ಕಿರಮ್ಮ ವೆಂಕಟೇಶ, ಕರ್ನಾಟಕ ರಕ್ಷಣಾ ಪ್ರಧಾನ ಕಾರ್ಯದರ್ಶಿ ಉಮಾಮಹೇಶ್ವರಿ, ಗ್ರಾಮದ ಮುಖಂಡ ಮಲ್ಲಿಕಾರ್ಜುನ, ಮೋಕಾ ವಲಯದ ಮೇಲ್ವಿಚಾರಕ ಜಡಿಮೂರ್ತಿ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಆಶಾ ಪ್ರಮುಖರಾದ ಗಂಗಾಧರ, ಕೇದಾರನಾಥ್, ರಾಜು, ಮಾಲತಿ, ಶಿವಮ್ಮ, ಚಾಮುಂಡೇಶ್ವರಿ, ಪೂಜಾ, ಈರಮ್ಮ, ಭಾರತಿ, ಅಂಬ್ರಮ್ಮ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮೂಲ ಸೌಕರ್ಯದಿಂದ ನಿವಾಸಿಗಳು ವಂಚಿತ

▸**ಬಿ.ಎಂ.ಶಿವಾನಂದಯ್ಯ**

◆**ಗಾದಿಗನೂರು:** ಹೊಸಪೇಟೆ ತಾಲೂಕಿನ ಗಾದಿಗನೂರು ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಕೆಲಸಗಳು ಹಾದಿ ತಪ್ಪಿದ್ದು, ಗಾದಿಗನೂರು ನಿವಾಸಿಗಳು ಮೂಲ ಸೌಕರ್ಯವಿಲ್ಲದೆ ವಂಚಿತರಾಗಿದ್ದಾರೆ.

ಭಾರತ ಹಳ್ಳಿಗಳ ನಾಡು ಎಂಬ ಮಾತು ಕೇವಲ ಘೋಷಣೆಗೆ ಸೀಮಿತವಾಗಿದೆಯೇ? ಸ್ವಾತಂತ್ರ್ಯ ಬಂದು ಏಳು ದಶಕಗಳು ಕಳೆದರೂ ಹಳ್ಳಿಗಳ ಸ್ಥಿತಿ ಮಾತ್ರ ಸುಧಾರಿಸಿಲ್ಲ ಎಂಬುದಕ್ಕೆ ಗಾದಿಗನೂರು ಗ್ರಾಮ ಸಾಕ್ಷಿಯಾಗಿದೆ.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ 'ಜಲ ಜೀವನ ಮಿಷನ್(ಜೆಜೆಎಂ) ಯೋಜನೆ ಅಡಿಯಲ್ಲಿ ಗ್ರಾಮದ ಅಂದಾಜು 450 ಮನೆಗೂ ನಳದಸಂಪರ್ಕ ಕಲ್ಪಿಸಲಾಗಿದೆ. ಆದರೆ, ಪೈಪ್‌ಗಳಿವೆಯೇ ವಿನಃ ನೀರಿಲ್ಲ, ನಳಗಳು ಹೆಸರಿಗೆ ಮಾತ್ರ ಇವೆ. ಈವರೆಗೆ ಒಂದೇ ಒಂದು ಹನಿ ನೀರು ಬಂದಿಲ್ಲ. ಕುಡಿಯುವ ನೀರಿಗಾಗಿ ಅಲೆಯಬೇಕಾದ ದುಃಸ್ಥಿತಿ ಎದುರಾಗಿದೆ' ಎಂದು ಗ್ರಾಮಸ್ಥರು ಆಕ್ರೋಶ ಹೊರಹಾಕಿದರು.

ಗ್ರಾಮದ ಚರಂಡಿಗಳಲ್ಲಿ ಹೂಳು ತುಂಬಿ ಹೋಗಿದ್ದು, ನೈರ್ಮಲ್ಯದ ಸ್ಥಿತಿ ಅಧೋಗತಿಗೆ ತಲುಪಿದೆ. ಚರಂಡಿ ನೀರು ಸರಾಗವಾಗಿ ಹರಿಯದೆ ರಸ್ತೆಯಲ್ಲಿ ಸಂಗ್ರಹವಾಗುತ್ತಿದ್ದು, ಸಾಂಕ್ರಾಮಿಕ ರೋಗಗಳ ಭೀತಿ ಎದುರಾಗಿದೆ. ನಿರ್ವಹಣೆ ಮಾಡಬೇಕಾದ ಪಂಚಾಯಿತಿ ಅಧಿಕಾರಿಗಳು ಸಾರ್ವಜನಿಕರ ದೂರುಗಳಿಗೆ ಕಿವಿಗೊಡದೆ ನಿದ್ರಾವಸ್ಥೆಯಲ್ಲಿದ್ದಾರೆ' ಎಂಬುದು ಸ್ಥಳೀಯರ ನೇರ ಆರೋಪವಾಗಿದೆ.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ



> **ಜಲ ಜೀವನ್ ಮಿಷನ್ ಕಾಮಗಾರಿಯೂ ಪ್ರಗತಿಯಲ್ಲಿದೆ. ಮುಂದಿನ ದಿನಗಳಲ್ಲಿ ಸಮಸ್ಯೆಯನ್ನು ಪರಿಹರಿಸುತ್ತೇವೆ**
> ■ **ಕುರಹಟ್ಟಿ ಪೂರ್ಣತೇಜ, ಗ್ರಾಪಂ ಪಿಡಿಒ**

ದಿಗಂತ ವಿಶೇಷ

ಕೂಡಲೇ ಗ್ರಾಮಕ್ಕೆ ಭೇಟಿ ನೀಡಿ, ಇಲ್ಲಿನ ಸಮಸ್ಯೆಗಳನ್ನು ಬಗೆಹರಿಸುವರೇ ಎಂದು ಕಾದು ನೋಡಬೇಕಿದೆ.

ಅಭಿವೃದ್ಧಿ ಕಾರ್ಯಗಳು ಸರಿಯಾಗಿ ನಿರ್ವಹಣೆಯಾಗದಿದ್ದರೆ, ಗ್ರಾಮದ ನಿವಾಸಿಗಳ ಜೀವನಮಟ್ಟ ಕುಸಿದು ಸಾಮಾಜಿಕ-ಆರ್ಥಿಕ ಅಸಮಾನತೆ ಹೆಚ್ಚುತ್ತದೆ. ಸರ್ಕಾರಿ ಅಧಿಕಾರಿಗಳು ಮತ್ತು ಸ್ಥಳೀಯ ಆಡಳಿತವು ಈ ಸಮಸ್ಯೆಯನ್ನು ಕೂಡಲೇ ಗಮನಿಸಿ, ಪಾರದರ್ಶಕವಾಗಿ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಿ, ನಿವಾಸಿಗಳ ಅಗತ್ಯಗಳನ್ನು ಪೂರೈಸುವ ಮೂಲಕ ನ್ಯಾಯಯುತ ಅಭಿವೃದ್ಧಿಯನ್ನು ಖಾತ್ರಿಪಡಿಸಬೇಕು. ಅಷ್ಟು ಮಾತ್ರವಲ್ಲದೆ, ಗ್ರಾಮೀಣ ಭಾಗದ ಜನರು ಮುಂದಿನ ದಿನಗಳಲ್ಲಿ ಮೂಲ ಹಕ್ಕುಗಳಿಂದ ವಂಚಿತರಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ.

ನಂದಿಪುರದಲ್ಲಿ ನಾಳೆ ನುಗ್ಗೆ ಬೆಳೆಗಾರರ ಕಾರ್ಯಾಗಾರ



◆**ಹಗರಿಬೊಮ್ಮನಹಳ್ಳಿ:** ತಾಲೂಕಿನ ರೈತರಿಗೆ ಉಪಯುಕ್ತವಾಗುವನಿಟ್ಟಿನಲ್ಲಿ ಫೆ.24 ರಂದು ನುಗ್ಗೆ ಬೆಳೆಕಾರ್ಯಾಗಾರವನ್ನು ನಂದಿಪುರ ಮಠದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀಕ್ಷೇತ್ರ ನಂದಿಪುರದ ಡಾ.ಮಹೇಶ್ವರ ಸ್ವಾಮೀಜಿ ತಿಳಿಸಿದರು. ನಂದಿಪುರದಲ್ಲಿ ಮಠದ ವತಿಯಿಂದ ಕೃಷಿಕರಿಗೆ ನುಗ್ಗೆ ಬೆಳೆ ಮತ್ತು ಮೌಲ್ಯವರ್ಧನೆ ಕುರಿತ ಮಾಹಿತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ನುಗ್ಗೆ ಬೆಳೆಯಲ್ಲಿಯೇ ಭವಿಷ್ಯ ರೂಪಿಸಿಕೊಂಡಿರುವ ಕೊಪ್ಪಳದ ಬಸಯ್ಯ ಹಿರೇಮಠ ಭಾಗವಹಿಸಿ ಮಾಹಿತಿ ಹಂಚಿಕೊಳ್ಳಲಿದ್ದಾರೆ. ಕಾರಣ ಕೃಷಿಕರು ಮತ್ತು ಕೃಷಿ ಆಸಕ್ತರು ನುಗ್ಗೆ ಬೆಳೆಗಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಾಗಾರವನ್ನು ಸದುಪಯೋಗ ಪಡೆದುಕೊಳ್ಳಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಸರ್ಕಾರಿ ಶಾಲೆ ಅಭಿವೃದ್ಧಿಗೊಳಿಸಿ: ಶ್ರೀಗಳು

◆**ಹೂವಿನಹಡಗಲಿ:** ಶಾಲೆ ಶಿಕ್ಷಣ ಸಂಸ್ಕೃತಿ, ಸಂಸ್ಕಾರವನ್ನು ಪ್ರತಿಯೊಬ್ಬ ಪಾಲಕರು ಬೆಳೆಸಿಕೊಂಡು ಮಕ್ಕಳ ಅಭಿವೃದ್ಧಿಗಾಗಿ ಇಂತಹ ಸರ್ಕಾರಿ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸಿ ಶಾಲೆ ಅಭಿವೃದ್ಧಿಗೊಳಿಸಬೇಕು ಅಂದಾಗ ಮಕ್ಕಳ ಜೀವನ ಪಾವನ ಆಗಲು ಸಾಧ್ಯ ಎಂದು ಹೊಳಲು ವಿರಕ್ತಮಠದ ಚನ್ನಬಸವ ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ತಾಲೂಕಿನ ಕಾಂತೇಬೆನ್ನೂರು ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮಾಜದಲ್ಲಿ ಹೆಣ್ಣು ಕೊಡುವವರಿದ್ದಾರೆ, ಹೊನ್ನು ಕೊಡುವವರಿದ್ದಾರೆ, ಮಣ್ಣು ಕೊಡುವವರಿದ್ದಾರೆ, ಆದರೆ ಶಿಕ್ಷಣ ಕೊಡುವವರು ಯಾರಂದರೆ ಶಿಕ್ಷಕರು ಮಾತ್ರ.

ಜೀ ಕನ್ನಡ ವಾಹಿನಿಯ ಕಿರುತೆರೆ ನಟಿ ಮಾಲತಿಶ್ರೀ ಮೈಸೂರು ಮಾತನಾಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಹೊನ್ನೂರಸಾಬ್ ಅಂಗಡಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ರಾಷ್ಟ್ರೀಯ ಮಾನವ ಹಕ್ಕುಗಳ ರಕ್ಷಣೆ ಮತ್ತು ಭ್ರಷ್ಟಾಚಾರ ನಿಯಂತ್ರಣ ಮಂಡಳಿಯ ಮಾಧ್ಯಮ ವಿಭಾಗದ ರಾಷ್ಟ್ರೀಯ ಹೆಚ್ಚುವರಿ ನಿರ್ದೇಶಕ ಡಿ.ಪರಶುರಾಮಪ್ಪ ಹಾಗೂ ಕಾನಿಪ ಧ್ವನಿತಾಲೂಕು ಅಧ್ಯಕ್ಷ ವೀರೇಶ್ ಕಲ್ಮಠ ಅವರನ್ನು ಸನ್ಮಾನಿಸಿದರು. ಶಾಲಾ ದಾನಿಗಳು ಹಾಗೂ ವಿದ್ಯಾರ್ಥಿಗಳು, ಶಿಕ್ಷಕರನ್ನು, ಗಣ್ಯಮಾನ್ಯರನ್ನು, ವಿವಿಧ ರಂಗಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಿದರು.

ಶಿಕ್ಷಕ ಟಿ.ದುರುಗಪ್ಪ, ಕ.ರಾ.ಪ್ರಾ. ಶಾ. ಸಂಘದ ಅಧ್ಯಕ್ಷ ವಿ.ಬಿ. ಜಗದೀಶ್, ವಕೀಲರಾದ ಎಸ್.ಬಸವರಾಜ, ಮೈಲಮ್ಮ ದೇವಿ ಆರಾಧಕ ಮಂಜುನಾಥ, ಶಿಕ್ಷಕ ಬಸವರಾಜ, ಪುಟ್ಟಪ್ಪ, ಹಾವನೂರು ನೀಲಪ್ಪ, ನಿವೃತ್ತ ಶಿಕ್ಷಕ ಜಿ.ರಾಜನಗೌಡ್ರ, ಪಿ.ಎನ್.ನೆಗಳೂರುಮಠ, ಮಾಜಿ ಎಸ್‌ಡಿಎಂಸಿ ಅಧ್ಯಕ್ಷರು, ಪದಾಧಿಕಾರಿಗಳು, ಗ್ರಾಪಂ ಮಾಜಿ ಅಧ್ಯಕ್ಷರು ಹಾಗೂ ಸದಸ್ಯರು, ಸಿಆರ್‌ಪಿ, ಬಿಆರ್‌ಪಿ ಮತ್ತಿತರರಿದ್ದರು.

ಶಾಲೆಯ ಮುಖ್ಯ ಶಿಕ್ಷಕ ಎಸ್.ಪ್ರಕಾಶ್ ಅವರು ಸ್ವಾಗತಿಸಿದರು. ವಿದ್ಯಾರ್ಥಿನಿಯರು ಪ್ರಾರ್ಥಿಸಿದರೆ, ಸಹ ಶಿಕ್ಷಕಿ ಕು.ಸಲೀಮಾ ಎಂ. ಅವರು ವಾರ್ಷಿಕ ವರದಿ ವಾಚಿಸಿದರು. ಶಿಕ್ಷಕರಾದ ಎನ್.ಮಂಜುನಾಥ್, ಕೊಟ್ರೇಶ್ ಜವಳಿ ಅವರು ನಿರೂಪಿಸಿದರು.



ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಚಾಲನೆ

◆**ಕುರುಗೋಡು:** ಕಂಪ್ಲಿ ಕ್ಷೇತ್ರದಲ್ಲಿ ಎಮ್ಮಿಗನೂರು ದೊಡ್ಡ ಗ್ರಾಮವಾಗಿದ್ದು ಪಟ್ಟಣಪಂಚಾಯಿತಿ ಅರ್ಹತೆ ಹೊಂದಿದ್ದು, ಮುಂದಿನ ದಿನದಲ್ಲಿ ಪಪಂ ಮಾಡುವುದಾಗಿ ಸರ್ಕಾರ ಅಧಿಕಾರಿಗಳ ಗಮನಕ್ಕೆ ತಂದು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಕಂಪ್ಲಿ ಶಾಸಕ ಜೆ.ಎನ್.ಗಣೇಶ ಭರವಸೆ ನೀಡಿದರು.

ಸಮೀಪದ ಎಮ್ಮಿಗನೂರು ಗ್ರಾಮದಲ್ಲಿ ಭಾನುವಾರ ಸಂತೆ ಮಾರ್ಕೆಟ್ ಆವರಣದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಅಭಿವೃದ್ಧಿ ಕಾಮಗಾರಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ



2025-26ನೇ ಸಾಲಿನ ಕೆಕೆಆರ್‌ಡಿಬಿ ಬಡ್ಡಿ ಅನುದಾನ 90 ಲಕ್ಷಗಳ ಮೊತ್ತ ಯೋಜನೆ ಭೂಮಿಪೂಜೆ ಚಾಲನೆ ನೀಡಿ ಮಾತನಾಡಿದರು.

ಈ ಸಂತೆ ಮಾರುಕಟ್ಟೆ ಬಹುದಿನಗಳ ಬೇಡಿಕೆಯಾಗಿದ್ದು, ಎಮ್ಮಿಗನೂರು ಗ್ರಾಮ ಪಪಂ ಮೇಲುದರ್ಜೆಗೆ ಎರಡು ಸಲ ಕೈತಪ್ಪಿದ್ದು, ಮುಂದಿನಲ್ಲಿ ಪರಿಪೂರ್ಣ ಲಕ್ಷಣ ಹೊಂದಿದೆ. ಜನ ಆಶೆಯಂತೆ ಗ್ರಾಮದ 132 ರಾಜ್ಯ ಹೆದ್ದಾರಿ ಅಂದಾಜು 7 ಕೋಟಿ ವೆಚ್ಚದ ರಸ್ತೆಯ ಅಗಲೀಕರಣ ಕಾಮಗಾರಿ ಭರದಿಂದ ಸಾಗಿದ್ದು, ಕ್ಷೇತ್ರದಲ್ಲಿ ಎಮ್ಮಿಗನೂರು ನನಗೆ ವೈಯಕ್ತಿಕ ವಿಶೇಷವಾಗಿದ್ದು, ಇನ್ನೂ ಹೆಚ್ಚಿನ ಅಭಿವೃದ್ಧಿ ಮಾಡುವುದಾಗಿ ಭರವಸೆ ನೀಡಿ, ಗುತ್ತಿಗೆದಾರರು ಕಾಮಗಾರಿ ಕಳಪೆ ನಿರ್ಮಾಣ ಮಾಡದೇ ಉತ್ತಮವಾಗಿ ನಿರ್ವಹಿಸಲು ಸೂಚಿಸಿದರು.

ಮುಖಂಡರಾದ ಹನುಮಂತರೆಡ್ಡಿ, ಗಾದ್ಲಿ ನಾಗರಡ್ಡಿ, ಎನ್. ಸೂಗೂಪ್ಪ, ಪಿ.ಯಂಕರಡ್ಡಿ, ಎಚ್. ಕೆ.ಗಾದಿಲಿಂಗಪ್ಪ, ಎಳ್ಳಾರ್ತಿ ಅಶ್ವಥ್ ರೆಡ್ಡಿ, ಕೆ.ಗಾದಿಲಿಂಗಪ್ಪ, ನಾಯಕರ ಹಂಪಣ್ಣ, ಯುವ ಮುಖಂಡ ಕನಕಪ್ಪ ಸುಣುಗಾರ, ಗುಡಸಲಿ ಕಾಸೀಸಾಬು, ಜಡೆಪ್ಪ, ಲಕ್ಷ್ಮೀಕಾಂತರೆಡ್ಡಿ, ಎಚ್. ರಾಮಾಂಜಿನಿ, ವಿರೇಶ, ಲಕ್ಷ್ಮೀಕಾಂತ, ಎನ್.ಮುರಳಿ, ಕಾಸೀಮು, ಷಣ್ಮುಖಪ್ಪ ಹಾಗೂ ಗ್ರಾಪಂ ಸದಸ್ಯರು, ಪಕ್ಷದ ಕಾರ್ಯಕರ್ತರು ಇತರರಿದ್ದರು.

ಕೊಟ್ಟೂರೇಶ್ವರ ಸ್ವಾಮಿ ರಥದ ಅವರೋಹಣ ಕಾರ್ಯ ಮುಕ್ತಾಯ

◆**ಕೊಟ್ಟೂರು:** ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ರಥದ ಅವರೋಹಣ ಕಾರ್ಯಕ್ರಮವು ಭಾನುವಾರ ಯಶಸ್ವಿಯಾಗಿ ನೆರವೇರಿತು.

ನಾಡಿನ ಪ್ರಸಿದ್ಧ ಜಾತ್ರೆಗಳಲ್ಲಿ ಒಂದಾದ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವವು ಇದೇ ತಿಂಗಳು 12ನೇ ತಾರೀಕಿನಂದು ಜರುಗಿತ್ತು. ಸುಮಾರು ಎಂಟು ದಿನಗಳ ಕಾಲ ರಥೋತ್ಸವದ ಧಾರ್ಮಿಕ ಕಾರ್ಯಗಳು ಯಶಸ್ವಿಯಾಗಿ ನೆರವೇರಿದ್ದವು. ರಥೋತ್ಸವ ಮುಗಿದು 11ನೇ ದಿನಕ್ಕೆ ರಥವನ್ನು ಅವರೋಹಣ ಮಾಡುವ ಕಾರ್ಯವನ್ನು ಕೈಗೊಳ್ಳಲಾಯಿತು. ಬೆಳಗ್ಗೆ ಧಾರ್ಮಿಕ ಕಾರ್ಯಗಳು ಮುಗಿದ ನಂತರದಲ್ಲಿ ಕೊಟ್ಟೂರಿನ ಕೋಟೆ ಭಾಗದ ಅನೇಕ ಯುವಕರು ರಥವನ್ನು ಬಿಚ್ಚುವ ಕಾರ್ಯವನ್ನು



ಕೈಗೊಂಡರು. ಸುಮಾರು 70 ಅಡಿ ಎತ್ತರದ ರಥವನ್ನು ಸೊಗಸಾಗಿ ನಿರ್ಮಿಸಲು ಸುಮಾರು ಎಂಟು ದಿನಗಳ ಕಾಲ ಸಮಯವನ್ನು ತೆಗೆದುಕೊಂಡಿರುತ್ತಾರೆ. ಆದರೆ, ರಥವನ್ನು ಬಿಚ್ಚುವ ಕಾರ್ಯವು ಒಂದೇ ದಿನದಲ್ಲಿ ಪೂರ್ಣಗೊಳ್ಳುತ್ತದೆ. 70 ಅಡಿ ರಥದ ಮೇಲೆ ಇರುವ ಕಳಸಕ್ಕೆ ಮೊದಲನೆಯದಾಗಿ ಪೂಜೆಯನ್ನು ಸಲ್ಲಿಸಿ ಕಳಸವನ್ನು ಮೊದಲು ಇಳಿಸಲಾಗುತ್ತದೆ. ಅನಂತರ 10 ಅಡಿ ಎತ್ತರದ ಬಿದಿರಿನ ಜಲ್ಲಿಯನ್ನು ಇಳಿಸಲಾಗುತ್ತದೆ. ತದನಂತರದಲ್ಲಿ ನಾಲ್ಕು ಅಂಕಣಗಳನ್ನು ಒಳಗೊಂಡಿರುವ ರಥವನ್ನು ಒಂದೊಂದೇ ಅಂಕಣಗಳನ್ನು ಬಿಚ್ಚುತ್ತಾ ಅವರೋಹಣ ಕಾರ್ಯವನ್ನು ಪರಿಸಮಾಪ್ತಿಗೊಳಿಸಲಾಯಿತು. ಅನಂತರದಲ್ಲಿ ತೇರುಗಡ್ಡೆಗೆ ಬಿಸಿಲಿನಿಂದ ಹಾನಿಯಾಗಬಾರದೆಂದು ಹೊದಿಕೆಯಿಂದ ಮುಚ್ಚಲಾಯಿತು. ರಥದ ತೇರುಗಡ್ಡೆಯನ್ನು ಯುಗಾದಿ ಪಾಡ್ಯದಂದು ಒಳಹಾಕಲಾಗುತ್ತದೆ. ಇಲ್ಲಿಗೆ ಈ ವರ್ಷದ ರಥೋತ್ಸವದ ಧಾರ್ಮಿಕ ಆಚರಣೆಗಳು ಮುಕ್ತಾಯಗೊಂಡವು. ರಥೋತ್ಸವದ ಅವರೋಹಣ ಕಾರ್ಯಕ್ರಮದಲ್ಲಿ ಅನೇಕ ಹಿರಿಯರು, ಯುವಕರು, ಆಯಗಾರ ಬಳಗದವರು ಉಪಸ್ಥಿತರಿದ್ದರು.

ಸಂಭ್ರಮದಿಂದ ನಡೆದ ವಿಶ್ವಾರಾಧ್ಯರ ರಥೋತ್ಸವ

◆**ಯಾದಗಿರಿ:** ಕಲ್ಯಾಣ ಕರ್ನಾಟಕದ ಸುಕ್ಷೇತ್ರ ಅಬ್ಬೆತುಮಕೂರಿನ ಸಿದ್ಧಿ ಪುರುಷ ಶ್ರೀವಿಶ್ವಾರಾಧ್ಯರ ರಥೋತ್ಸವ ಲಕ್ಷಾಂತರ ಭಕ್ತರ ಜಯಘೋಷದ ಮಧ್ಯೆ ಸಡಗರ ಸಂಭ್ರಮದಿಂದ ಭಾನುವಾರ ಸಂಜೆ ಜರುಗಿತು.

ಶಿವರಾತ್ರಿ ಕಳೆದು ಬಿಸಿಲುಗಾಲ ಆರಂಭವಾದ ಹಿನ್ನೆಲೆಯಲ್ಲಿ ನೆತ್ತಿ ಸುಡುವ ಬಿಸಿಲಿನಲ್ಲಿಯೂ ಭಕ್ತ ಸಮೂಹ ತಂಡೋಪತಂಡವಾಗಿ ಅಬ್ಬೆತುಮಕೂರಿನೆಡೆಗೆ ಧಾವಿಸಿ ಬರುತ್ತಿದ್ದರು. ಬಸ್ಸು, ಕಾರು, ಜೀಪು ಮತ್ತು ಆಟೋಗಳಲ್ಲಿ ಬರುವವರು ಒಂದೆಡೆಯಾದರೆ, ಶಹಾಪೂರ, ಸುರಪೂರ, ಗುರುಮಠಕಲ್, ಸೇಡಂ, ಚಿತ್ತಾಪೂರ, ಕಲಬುರಗಿ ಸೇರಿದಂತೆ ಸುತ್ತಮುತ್ತಲಿನ ಅನೇಕ ಹಳ್ಳಿಗಳ ಅಸಂಖ್ಯಾತ ಭಕ್ತರು ಪಾದಯಾತ್ರೆಯ ಮೂಲಕ ಅಬ್ಬೆತುಮಕೂರಿಗೆ ಧಾವಿಸಿ ಬರುತ್ತಿದ್ದರು.

ಇಳಿಹೊತ್ತು. ಸೂರ್ಯ ಮುಳುಗುವ ಸಂದರ್ಭದಲ್ಲಿ ಸುಕ್ಷೇತ್ರದ ಆವರಣದಲ್ಲಿ ಲಕ್ಷಾಂತರ ಭಕ್ತರು ವಿಶ್ವಾರಾಧ್ಯರ ರಥೋತ್ಸವವನ್ನು ಕಣ್ತುಂಬಿಕೊಳ್ಳುವ ಉತ್ಸುಕದಲ್ಲಿದ್ದರು. ಪೀಠಾಧಿಪತಿ ಡಾ.ಗಂಗಾಧರ ಮಹಾಸ್ವಾಮಿಗಳು ಸರಿಯಾಗಿ ಸಂಜೆ 6.15 ಗಂಟೆಗೆ ರಥವನ್ನೇರಿ ಚಾಲನೆ ನೀಡುವುದೇ ತಡ, ಭಕ್ತ ವೃಂದ 'ವಿಶ್ವಾರಾಧ್ಯ ಮಹಾರಾಜ ಕೀ ಜೈ', 'ಗಂಗಾಧರ ಮಹಾರಾಜ ಕೀ ಜೈ' ಎಂಬ ಮುಗಿಲು ಮುಟ್ಟುವ ಜಯಘೋಷ ಮಾಡುತ್ತಾ ರಥವನ್ನು ಎಳೆದು ಸಂಭ್ರಮಿಸಿದರು. ನೆರೆದ ಭಕ್ತ ಸಮೂಹ ಕಾರಿಕಾ, ಉತ್ತುತ್ತಿ, ಬಾಳೆಹಣ್ಣುಗಳನ್ನು ರಥದ ಮೇಲೆ ಎಸೆದು, ಭಕ್ತಿಯಿಂದ ಕೈಜೋಡಿಸಿ, ನಮಿಸಿ, ಇಷ್ಟಾರ್ಥಗಳನ್ನು ಈಡೇರಿಸುವಂತೆ ಆರಾಧ್ಯ



ದೈವದಲ್ಲಿ ಬೇಡಿಕೊಂಡರು.

ಕಲ್ಯಾಣ ಕರ್ನಾಟಕದ ಅತ್ಯಂತ ಪ್ರತಿಷ್ಠಿತ ಆಧ್ಯಾತ್ಮಿಕ ಕೇಂದ್ರ, ಜಾಗೃತ ಸ್ಥಾನವೆಂದು ಖ್ಯಾತವಾದ ಸಿದ್ಧ ಸಂಸ್ಥಾನದ ವಿಶ್ವಾರಾಧ್ಯರ ಜಾತ್ರೆಯೆಂದರೆ ಕರ್ನಾಟಕ ಮಾತ್ರವಲ್ಲ, ನೆರೆಯ ಆಂಧ್ರ, ತೆಲಂಗಾಣ ಮತ್ತು ಮಹಾರಾಷ್ಟ್ರಗಳಿಂದಲೂ ಅಸಂಖ್ಯಾತ ಭಕ್ತರು ಆಗಮಿಸಿ ದರ್ಶನಾಶೀರ್ವಾದ ಪಡೆದು ಕೃತಾರ್ಥರಾಗುತ್ತಾರೆ. ಅಂತೆಯೇ ರಥೋತ್ಸವದಲ್ಲಿ ಲಕ್ಷಾವಧಿ ಭಕ್ತರು ಸೇರಿದಂತೆ ನಾಡಿನ ಹರ-ಗುರು-ಚರಮೂರ್ತಿಗಳು, ರಾಜಕೀಯ ಮುತ್ಸದ್ದಿಗಳು, ಅನುಭಾವಿಗಳು ಪಾಲ್ಗೊಂಡು, ರಥೋತ್ಸವವನ್ನು ಸಾಕ್ಷೀಕರಿಸಿದರು.

ಗವಿಶ್ರೀಗಳು ಭಾಗಿ

ಕೊಪ್ಪಳದ ಗವಿಸಿದ್ದೇಶ್ವರ ಮಹಾಸಂಸ್ಥಾನ ಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ, ಬೆಂಗಳೂರಿನ ವಿಭೂತಿಪೂರ ಸಂಸ್ಥಾನ ಮಠದ ಡಾ.ಮಹಾಂತಲಿಂಗ ಶಿವಾಚಾರ್ಯರು, ಡಾ.ಶಿವಾನಂದ ಮಹಾಸ್ವಾಮಿಗಳು ಸೊನ್ನ, ಮುನೀಂದ್ರ ಸ್ವಾಮಿಜಿ ಹಲಕರ್ಟಿ, ಶಾಂತಮಲ್ಲಿಕಾರ್ಜುನ ಸ್ವಾಮಿಜಿ ಹೆಡಗಿಮುದ್ರಾ, ಸೂಗೂರೇಶ್ವರ ಸ್ವಾಮೀಜಿ ಶಹಾಪೂರ, ಮಳಖೇಡದ ಕಾರ್ತಿಕೇಶ್ವರ ಶಿವಾಚಾರ್ಯರು, ಶಿವಮೂರ್ತಿ ಸ್ವಾಮೀಜಿ ದೇವಾಪೂರ, ಹೊನ್ನಕೀರಣಗಿಯ ಚಂದ್ರಗುಂಡ ಶಿವಾಚಾರ್ಯರು, ಕುಕನೂರಿನ ಚನ್ನಮಲ್ಲ ಶಿವಾಚಾರ್ಯರು, ಗುಡುಗುಂಟಿಯ ಅಭಿನವ ಗಜದಂಡ ಶಿವಾಚಾರ್ಯರು, ಗೋಲಪಲ್ಲಿಯ ವರದಾನೇಶ್ವರ ಸ್ವಾಮಿಗಳು ಮುಂತಾದ ಪೂಜ್ಯರು ಪಾಲ್ಗೊಂಡರು.

ಬಾಕಿ ಹಣ ಪಾವತಿಗೆ ಆಗ್ರಹಿಸಿ ಮಾ.6ಕ್ಕೆ ಪ್ರತಿಭಟನೆ

◆**ವಿಜಯನಗರ:** ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ನಿರ್ವಹಿಸಿರುವ ನಾನಾ ಕಾಮಗಾರಿಗಳಿಗೆ ಸಂಬಂಧಿಸಿ 37 ಸಾವಿರ ಕೋಟಿ ರೂ. ರಾಜ್ಯ ಸರ್ಕಾರ ಬಾಕಿ ಉಳಿಸಿಕೊಂಡಿದೆ. ಮುಖ್ಯಮಂತ್ರಿ ಹಾದಿಯಾಗಿ ಈ ಬಗ್ಗೆ ಯಾರೊಬ್ಬರೂ ಸ್ಪಂದಿಸದಿರುವುದನ್ನು ಖಂಡಿಸಿ ಮಾ.6ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದಾಗಿ ರಾಜ್ಯ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಆರ್. ಮಂಜುನಾಥ ತಿಳಿಸಿದರು.

ಹೊಸಪೇಟೆಯ ಪತ್ರಿಕಾ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಕಿ ಬಿಲ್ ಬಿಡುಗಡೆ ಸಂಬಂಧಿಸಿ ಹಲವು ಬಾರಿ ಮುಖ್ಯಮಂತ್ರಿ ಹಾಗೂ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದರೂ ಸ್ಪಂದಿಸುತ್ತಿಲ್ಲ. ಸಭೆ ನಡೆಸುವುದಾಗಿ ಹೇಳಿದ್ದ ಸಿಎಂ ಸಿದ್ದರಾಮಯ್ಯ ಕೊನೆ ಗಳಿಗೆಯಲ್ಲಿ ಮುಂದೂಡಿದರು. ಈಗಲೂ ಕಾಲ ಮಿಂಚಿಲ್ಲ, ಸಭೆ ಕರೆದು ಚರ್ಚಿಸಿದರೆ, ಸಮಸ್ಯೆಗೆ ಶೇ.75 ರಷ್ಟು ಪರಿಹಾರ ಸಿಗುತ್ತದೆ. ಪ್ರತಿ ಬಾರಿ ಬಾಕಿ ಬಿಲ್ ಕೇಳಿದರೆ, ಅದು ಹಿಂದಿನ ಸರ್ಕಾರದ್ದು ಎಂಬ ಸಬೂಬು



ಹೇಳುವ ಮೂಲಕ ಸಿಎಂ ಜಾಣ ನಡೆ ಪ್ರದರ್ಶಿಸುತ್ತಿದ್ದಾರೆ. ಗುತ್ತಿಗೆದಾರು ವಿಷ ಕುಡಿಯುವ ಪರಿಸ್ಥಿತಿಗೆ ಸಿಲುಕಿಸಿದ್ದಾರೆ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಲೋಕೋಪಯೋಗಿ ಮತ್ತು ಬಿಬಿಎಂಪಿ ಹೊರತಾಗಿ ಎಲ್ಲ ಇಲಾಖೆಗಳಲ್ಲಿ ಹಣ ಬಿಡುಗಡೆಯ ಪ್ರಕ್ರಿಯೆ ಸಂಪೂರ್ಣ ಸ್ಥಗಿತಗೊಂಡಿದೆ. ಸಿಎಂ ಸಿದ್ದರಾಮಯ್ಯ ಅವರು ವಿರೋಧ ಪಕ್ಷದ ನಾಯಕರಿದ್ದಾಗ ಗುತ್ತಿಗೆದಾರರ ನೋವಿಗೆ ಸ್ಪಂದಿಸಿದ್ದರು. ಆದರೆ, ಅವರು ಅಧಿಕಾರಕ್ಕೆ ಬಂದ ಬಳಿಕ ನಮ್ಮನ್ನು ಕಡೆಗಣಿಸುತ್ತಿದ್ದಾರೆ. ನಮ್ಮ ಸಂಘದ ಹಿಂದಿನ ಅಧ್ಯಕ್ಷ ಕೆಂಪಣ್ಣ ಅವರು ಬಿಜೆಪಿ ಸರ್ಕಾರದ ವಿರುದ್ಧ ಮಾಡಿದ್ದ ಪರ್ಸೆಂಟೇಜ್ ಆರೋಪ ಹಾಗೂ ಹೋರಾಟವೂ ಇಂದು ಕಾಂಗ್ರೆಸ್ ಅಧಿಕಾರಕ್ಕೆ ಬರಲು ಕಾರಣ ಎಂಬುದನ್ನು ಅವರು ಮರೆಯಬಾರದು. ಆದರೆ, ಬಿಜೆಪಿ ಸರ್ಕಾರದ ಪರ್ಸೆಂಟೇಜ್‌ಗಿಂತ ಹಾಲಿ ಸರ್ಕಾರದಲ್ಲಿ ತುಸು ಹೆಚ್ಚೇ ಇದೆ ಎಂದು ಆರೋಪಿಸಿದರು.

ಫೆಬ್ರವರಿ ತಿಂಗಳ ಅಂತ್ಯದೊಳಗೆ ಮುಖ್ಯಮಂತ್ರಿಗಳು ಅಧಿಕೃತ ಸಭೆ ಕರೆದು ಸಮಸ್ಯೆ ಬಗೆಹರಿಸಬೇಕು. ಇಲ್ಲವೇ, ಮಾರ್ಚ್ 6 ರಂದು ಫ್ರೀಡಂ ಪಾರ್ಕ್ ಎದುರು ಪ್ರತಿಭಟನಾ ಧರಣಿ ನಡೆಸಲಾಗುವುದು. ರಾಜ್ಯದ 31 ಜಿಲ್ಲೆಗಳಿಂದ 25-30 ಸಾವಿರ ಗುತ್ತಿಗೆದಾರರು ಸೇರುವ ನಿರೀಕ್ಷೆಯಿದೆ ಎಂದರು.

ಸಂಘದ ಪದಾಧಿಕಾರಿಗಳಾದ ನಾಗಪ್ಪ, ರಾಜಶೇಖರ ಪಾಟೀಲ್, ಜಗದೀಶ್, ಕಿಚಡಿ ಶ್ರೀನಿವಾಸ್, ಕೇಶವ ರೆಡ್ಡಿ, ನಾಗರಾಜ, ಮಹೇಶ್ ಹಲಗೇರಿ, ಉಮಾಕಾಂತ್, ದೇವಿಪ್ರಸಾದ್ ಇದ್ದರು.